JJ50

(B) 025243

ಸುವರ್ಣ ಕರ್ನಾಟಕ - ೨೦೦೬

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ಹನ್ನೆರಡನೇ ವಿಧಾನಸಭೆಯ ಎರಡನೆಯ ಅಧಿವೇಶನ

SECOND SESSION OF THE TWELFTH LEGISLATIVE ASSEMBLY

ಸಂಪುಟ – ೧ (ಕ್ರಮಾಂಕ ೩) ಭಾಗ–೨

Volume - 1 (No. 3) Part-II

(೨೫ನೇ ಜನವರಿ ೨೦೦೫)

(25th January 2005)



ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

(B) 025243

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹನ್ನೆರಡನೇ ವಿಧಾನಸಭೆಯ ಎರಡನೆಯ ಅಧಿವೇಶನ
SECOND SESSION OF THE TWELFTH LEGISLATIVE ASSEMBLY

ಸಂಪುಟ -- ೧ (ಕ್ರಮಾಂಕ ೩) ಭಾಗ--೨
Volume - 1 (No. 3) Part-II

(೨೫ನೇ ಜನವರಿ ೨೦೦೫)

(25th January 2005)

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

138-1

ಕರ್ನಾಟಕ ವಿಧಾನಸಭೆ
ಹನ್ನೆರಡನೇ ವಿಧಾನಸಭೆ
(ಎರಡನೇ ಅಧಿವೇಶನ)

ಅಧ್ಯಕ್ಷರು
ಶ್ರೀ ಕೃಷ್ಣ

ಕಾರ್ಯದರ್ಶಿ
ಶ್ರೀ ಟಿ. ರಾಜಣ್ಣ

ಕರ್ನಾಟಕ ವಿಧಾನಸಭೆ

ವಿಷಯಾನುಕ್ರಮಣಿಕೆ

ಸಂಪುಟ – 1 (ಕ್ರಮಾಂಕ 3) ಭಾಗ–2

(25ನೇ ಜನವರಿ 2005)

ಮಂಗಳವಾರ, ದಿನಾಂಕ 25ನೇ ಜನವರಿ 2005

ಪುಟ ಸಂಖ್ಯೆ

1. ಅಧ್ಯಕ್ಷರ ಅಪ್ಪಣೆ ಮೇರೆಗೆ: 555–557

ವಿಷಯ: ಬಿಜಾಪುರ ಬಾಗಲಕೋಟೆ ಜಿಲ್ಲೆಗಳ ಸಮಗ್ರ ನೀರಾವರಿ ಯೋಜನೆ ಅನುಷ್ಠಾನ ಕುರಿತು.

– ಶ್ರೀ ಗೋವಿಂದ ಎಂ. ಕಾರಜೋಳ

– ಶ್ರೀ ಹೆಚ್.ಕೆ. ಪಾಟೀಲ್

(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

2. ಪ್ರಶ್ನೋತ್ತರಗಳು: 557–603

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

1. ಶ್ರೀ ಪ್ರಕಾಶ್ ಖಂಡ್ರೆ
2. ಶ್ರೀ ಡಿ.ಆರ್. ಪಾಟೀಲ್
3. ಶ್ರೀ ಎಸ್. ಅಂಗಾರ
4. ಶ್ರೀ ವಿ. ಸೋಮಣ್ಣ
5. ಶ್ರೀ ಪಿ.ಸಿ. ಮೋಹನ್
6. ಶ್ರೀ ಕೆ. ಗೋಪಾಲಪೂಜಾರಿ
7. ಶ್ರೀ ಜೆ. ನರಸಿಂಹಸ್ವಾಮಿ
8. ಶ್ರೀ ಬಿ.ಸಿ. ಪಾಟೀಲ್
9. ಶ್ರೀ ಗೋವಿಂದ ಮುಕಟಪ್ಪ ಕಾರಜೋಳ
10. ಶ್ರೀ ಹೆಚ್. ಆಂಜನೇಯ
11. ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ

ಆ) ಲಿಖಿತ ಮೂಲಕ ಉತ್ತರಿಸಲಾದ ಪ್ರಶ್ನೆ ಹಾಗೂ ಉತ್ತರಗಳು (ಅನುಬಂಧ–I)

ಪುಟ ಸಂಖ್ಯೆ

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು: 603--643

ಅ) ಬೆನ್ನಿಹಿನ್ ಕಾರ್ಯಕ್ರಮದ ಕುರಿತು.

– ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)

– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

– ಶ್ರೀ ಹೆಚ್.ಕೆ. ಪಾಟೀಲ್

(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

– ಶ್ರೀ ಜೆ.ಸಿ. ಮಾಧುಸ್ವಾಮಿ

– ಶ್ರೀ ಪಾಟಾಳ್ ನಾಗರಾಜ್

– ಶ್ರೀ ಜಿ.ವಿ. ಶ್ರೀರಾಮರೆಡ್ಡಿ

– ಶ್ರೀ ಎಸ್. ರಾಜೇಂದ್ರನ್

– ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ

ಆ) ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವ ಬಗ್ಗೆ.

– ಶ್ರೀ ಜೆ.ಸಿ. ಮಾಧುಸ್ವಾಮಿ

– ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)

ಇ) ಹಾನಗಲ್ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ
ಕಾಡಾನೆಗಳ ಹಾವಳಿಯಿಂದ ಆಗಿರುವ ಅನಾಹುತದ ಬಗ್ಗೆ.

– ಶ್ರೀ ಸಿ.ಎಂ. ಉದಾಸಿ

– ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ

– ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ

(ಅರಣ್ಯ ಸಚಿವರು)

ಈ) ಕ್ಯಾಸನೂರು ಕಾಡಿನ ಖಾಯಿಲೆ ಅಥವಾ ಮಂಗನ ಖಾಯಿಲೆಗೆ
ಔಷಧಿ ಒದಗಿಸುವ ಬಗ್ಗೆ.

– ಶ್ರೀ ಸಿ.ಟಿ. ರವಿ

– ಶ್ರೀ ಡಿ.ಎನ್. ಜೀವರಾಜ್

– ಶ್ರೀ ಹೆಚ್.ಕೆ. ಪಾಟೀಲ್

(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಉ) ಬೆಳ್ತಂಗಡಿ ವಿಧಾನಸಭಾ ಕ್ಷೇತ್ರದಲ್ಲಿ ಸಹಕಾರಿ ಸಾಲದ
ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ.

– ಶ್ರೀ ಕೆ. ಪ್ರಭಾಕರ ಬಂಗೇರಾ

ಪುಟ ಸಂಖ್ಯೆ

– ಶ್ರೀ ಹೆಚ್.ಕೆ. ಪಾಟೀಲ್

(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

(ಊ) ಜಿಲ್ಲಾ ನ್ಯಾಯಾಲಯಗಳಲ್ಲಿ ಹಾಗೂ ಗ್ರಾಪಕರ ವೇದಿಕೆಗಳಲ್ಲಿ "ಸಿ" ವರ್ಗದ ನೌಕರಿ ಸಂದರ್ಶನಕ್ಕಾಗಿ ಸಾವಿರಾರು ಅಭ್ಯರ್ಥಿಗಳನ್ನು ಕರೆಯುತ್ತಿರುವ ಬಗ್ಗೆ.

– ಶ್ರೀ ಡಿ.ಆರ್. ಪಾಟೀಲ್

– ಶ್ರೀ ಹೆಚ್.ಕೆ. ಪಾಟೀಲ್

(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

4. ವರದಿಯನ್ನೊಪ್ಪಿಸುವುದು: 643

ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿಯ 2004–05ನೇ ಸಾಲಿನ ಮೊದಲನೇ ವರದಿ.

5. ಶಾಸನ ರಚನೆ: 644–645

ವಿಧೇಯಕಗಳ ಮಂಡನೆ:

1) ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2004.

– ಶ್ರೀ ಹೆಚ್.ಕೆ. ಪಾಟೀಲ್

(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

(ಮಂಡಿಸಲಾಯಿತು)– (ಅನುಬಂಧ–2)

2) ಭೂಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕ, 2004.

– ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

– (ಮಂಡಿಸಲಾಯಿತು)– (ಅನುಬಂಧ–3)

3) ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2005

– ಶ್ರೀ ಎಸ್.ಆರ್. ಮೋರೆ

(ಪೌರಾಡಳಿತ, ಕರ್ನಾಟಕ ನಗರ ಮೂಲ ಸೌಕರ್ಯ ಮತ್ತು ಹಣಕಾಸು ನಿಗಮ ಸಚಿವರು)

– (ಮಂಡಿಸಲಾಯಿತು)– (ಅನುಬಂಧ–4)

ಪುಟ ಸಂಖ್ಯೆ

6. ಅಧ್ಯಕ್ಷರ ಅಪ್ಪಣೆ ಮೇರೆಗೆ: 645-842

ಅ) ಗಣ ರಾಜ್ಯೋತ್ಸವದ ದಿನ ತಾಲ್ಲೂಕು ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಸಮಾರಂಭ ನಡೆಸುವ ಬಗ್ಗೆ.

– ಶ್ರೀ ಬಿ.ಎಸ್. ಯಡಿಯೂರಪ್ಪ
(ವಿರೋಧ ಪಕ್ಷದ ನಾಯಕರು)

– ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸುವ ಬಗ್ಗೆ.

– ಶ್ರೀ ಅರಗ ಜ್ಞಾನೇಂದ್ರ

– ಶ್ರೀ ಹೆಚ್.ಕೆ. ಪಾಟೀಲ್
(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅನುಬಂಧ – I, II, III & IV. 842-1207

* * * * *

ಕರ್ನಾಟಕ ವಿಧಾನಸಭೆ

ಮಂಗಳವಾರ 25ನೇ ಜನವರಿ 2005 ರಂದು

ಸದನವು ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 18 ನಿಮಿಷಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣ ರವರು)

ಅಧ್ಯಕ್ಷ ಪೀಠವನ್ನು ಅಲಂಕರಿಸಿದರು

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಸಮಗ್ರ ನೀರಾವರಿ ಯೋಜನೆ ಅನುಷ್ಠಾನ ಕುರಿತು.

ಶ್ರೀ ಗೋವಿಂದ ಎಂ. ಕಾರಜೋಳ : ಸನ್ಮಾನ್ಯ ಸ್ಪೀಕರ್, ಅಖಂಡ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳು ಸಮಗ್ರ ನೀರಾವರಿ ಯೋಜನೆಯ ವ್ಯಾಪ್ತಿಗೊಳಪಡಬೇಕೆಂದು ಆಗ್ರಹಿಸಿ ಆ ಜಿಲ್ಲೆಗಳ ರೈತರೆಲ್ಲರೂ ಸೇರಿಕೊಂಡು ಪಾದಯಾತ್ರೆ ಪ್ರಾರಂಭಿಸಿದ್ದಾರೆ.

ಅಧ್ಯಕ್ಷರು : ತಾವು ಏನೇ ಮಾತನಾಡಬೇಕಾದರೂ ಪ್ರಶ್ನೋತ್ತರವಾದ ಬಳಿಕವೇ ಪ್ರಸ್ತಾಪಿಸಬೇಕು. ಈ ಸದನದ ನಿಯಮಾವಳಿ ರೀತ್ಯ ತಾವು ನಡೆದುಕೊಳ್ಳಬೇಕು. ಸದನ ಪ್ರಾರಂಭವಾದ ತಕ್ಷಣ ಈ ರೀತಿ ಮಾತನಾಡಿದರೆ ಹೇಗೆ?

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಈ ಬಗ್ಗೆ ನಿನ್ನೆಯೇ ತಮ್ಮಲ್ಲಿ ಮನವಿ ಮಾಡಿದ್ದೇನೆ.

ಅಧ್ಯಕ್ಷರು : ನಿಯಮಾವಳಿ ರೀತ್ಯ ಸದನ ನಡೆಯಬೇಕಾಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ : ಆ ಭಾಗದ ಜಿಲ್ಲೆಗಳು ಸಮಗ್ರ ನೀರಾವರಿ ಯೋಜನೆಯ ವ್ಯಾಪ್ತಿಗೊಳಪಡಬೇಕೆಂದು ರೈತರೆಲ್ಲರೂ ಸೇರಿಕೊಂಡು ಒತ್ತಾಯಿಸುವ ಮೂಲಕ ಪಾದಯಾತ್ರೆ ಕೈಗೊಳ್ಳುತ್ತಿದ್ದಾರೆ. ಅವರ ತೊಂದರೆಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇಪ್ಪೊತ್ತು ರೈತರು ರೊಚ್ಚಿಗೆದ್ದರೆ ಏನಾದರೂ ಅನಾಹುತವಾಗುವ ಸಂಭವವಿದೆ. ಆದಕಾರಣ, ಇದರ ಬಗ್ಗೆ ಮಾತನಾಡಲು ನನಗೆ ಸ್ವಲ್ಪ ಅವಕಾಶ ಕಲ್ಪಿಸಿಕೊಡಬೇಕು.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯ ಮಹತ್ವದ್ದಲ್ಲವೆಂದು ಹೇಳುವುದಿಲ್ಲ. ನಿಯಮಾವಳಿ ರೀತ್ಯ ನಡೆದುಕೊಂಡು, ನಾವೂ ನೀವೂ ಕುಳಿತು ವಿಷಯವನ್ನು ಚರ್ಚಿಸಿ ಏನಾದರೂ ಪರಿಹಾರ ಕಂಡುಕೊಂಡರೆ ಅದು ಸದುಪಯೋಗವಾಗುತ್ತದೆ. ಇಲ್ಲವೇ ನಿಯಮಾವಳಿಗೆ ವ್ಯತಿರಿಕ್ತವಾಗಿ ನಡೆದುಕೊಂಡು ವಿಷಯ ಪ್ರಸ್ತಾಪಿಸಿದರೆ ಸುಮ್ಮನೆ ಕುಳಿತುಕೊಳ್ಳುವಂತಾಗುತ್ತದಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಮಾನ್ಯ ಸದಸ್ಯರಾದ ಗೋವಿಂದ ಕಾರಜೋಳರವರು ತುರ್ತಾಗಿ ಈ ವಿಷಯವನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದ ಉದ್ದೇಶವೇನೆಂದರೆ, ಆ ಭಾಗದ ಜಿಲ್ಲೆಗಳಲ್ಲಿ ಸಮಗ್ರ ನೀರಾವರಿ ಯೋಜನೆ ಅನುಷ್ಠಾನ ಕುರಿತಂತೆ ರೈತರಿಂದ ಅಷ್ಟು ದೊಡ್ಡ ಹೋರಾಟ ನಡೆಯುತ್ತಿರಬೇಕಾದರೆ, ಆ ಬಗ್ಗೆ ಸರ್ಕಾರ ಏನಾದರೂ

ಉತ್ತರ ಕೊಡಬೇಕಾಗಿತ್ತು. ಅಲ್ಲಿ ಸತ್ಯಾಗ್ರಹ ಮಾಡುತ್ತಿರುವವರನ್ನು ಕಂಡು ಭೇಟಿ ಮಾಡಬೇಕಾಗಿತ್ತು. ತಾವು ಯಾರಾದರೂ ಅಲ್ಲಿಗೆ ಹೋದಿರಾ? ಅವರುಗಳನ್ನು ಭೇಟಿ ಮಾಡಿದಿರಾ? ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ಪ್ರಯತ್ನ ಮಾಡಿದಿರಾ?

ಶ್ರೀ ಹೆಚ್.ಕೆ. ಪಾಟೀಲ್ : ಅದನ್ನು ನಿಯಮಾವಳಿ ಪ್ರಕಾರ ಅನುಸರಿಸಲಾಗುತ್ತದೆ. ಸಂಬಂಧಪಟ್ಟ ಸಚಿವರು ಅದಕ್ಕೆ ಉತ್ತರಿಸುತ್ತಾರೆ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾತನಾಡಲು ಅನುಮತಿ ಕೊಟ್ಟಿದ್ದೀರಾ? ಪ್ರಶ್ನೋತ್ತರ ಇರುವಾಗ ಪ್ರತಿ ದಿವಸವೂ ಈ ರೀತಿ ಪ್ರಸ್ತಾಪಿಸುವುದು ಸರಿಯಲ್ಲ.

ಅಧ್ಯಕ್ಷರು : ಮಾನ್ಯ ಕಾರಜೋಳರವರೆ, ತಾವು ಈಗ ಪ್ರಸ್ತಾಪಿಸಿರುವ ವಿಷಯವನ್ನು ಸರ್ಕಾರ ಗಮನಿಸಿದೆ. ಮಾನ್ಯ ಮುಖ್ಯಮಂತ್ರಿಗಳು ಈಗ ಬಂದಿರುವುದರಿಂದ ಅದರ ಬಗ್ಗೆ ಸೂಕ್ತವಾಗಿ ಉತ್ತರಿಸುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಗೋವಿಂದ ಎಂ. ಕಾರಜೋಳ : ಅದೇ ಆಗಿರುವುದು ಅನಾಹುತ! ಮಾನ್ಯ ಮುಖ್ಯಮಂತ್ರಿಗಳು ಕೃಷ್ಣಾ ಕೊಳ್ಳದಿಂದ ಬಂದಿರುವವರಾಗಿದ್ದು, ನೇರವಾಗಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್...

ಅಧ್ಯಕ್ಷರು : ತಾವು ಈಗಾಗಲೇ ಈ ವಿಷಯವಾಗಿ ಸರ್ಕಾರದ ಗಮನ ಸೆಳೆದಿರುವುದರಿಂದ ಅವರು ಸೂಕ್ತವಾಗಿ ಉತ್ತರ ಕೊಡುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ : ಈ ಕುರಿತು "ನಾನು ಅಲ್ಲಿಗೆ ಹೋಗಿ ರೈತರನ್ನು ಸಮಾಧಾನ ಮಾಡುತ್ತೇನೆ. ನೀವು ಪಾದಯಾತ್ರೆ, ಧರಣಿ ಮಾಡಬೇಡಿ, ಆಲಮಟ್ಟಿ ಹಿನ್ನೀರಿನಲ್ಲಿ ಅಲೊಕೇಷನ್ ಆಗಿರುವ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇನೆ" ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗಿತ್ತು.

ಅಧ್ಯಕ್ಷರು : ಈಗ ಆಯಿತಲ್ಲಾ ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಅದರ ಬಗ್ಗೆ ಒಂದು ಪ್ರಸ್ತಾವ ಕಳುಹಿಸಿದ್ದೇನೆ. ಅಲ್ಲಿ ರೈತರಿಂದ ಪಾದಯಾತ್ರೆ ನಡೆಯುತ್ತಿದೆ, ಹೋರಾಟ ಜರುಗುತ್ತಿದೆ. ಆ ಕುರಿತಂತೆ ಚರ್ಚಿಸಲು ಅವರಿಗೆ ಅವಕಾಶ ನೀಡಿದ ಬಳಿಕ ನನಗೂ ಸ್ವಲ್ಪ ಅವಕಾಶ ಕಲ್ಪಿಸಿಕೊಡಬೇಕು. ಆ ವಿಷಯದ ಬಗ್ಗೆ ಮಾತನಾಡಬೇಕಾಗಿದೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಜಗದೀಶ್ ಶೆಟ್ಟರ್‌ರವರ ಮತ್ತು ಮಾನ್ಯ ಕಾರಜೋಳರವರ ನೀರಾವರಿ ಬಗೆಗಿನ ಕಳಕಳಿಯ ಬಗ್ಗೆ ನಾವು ಯಾರೂ ಪ್ರಶ್ನೆ ಮಾಡಿಲ್ಲ. ಆದರೆ ಮುಖ್ಯಮಂತ್ರಿಗಳು ಹೇಳಬೇಕಾಗಿತ್ತು ಎಂದು ಹೇಳಿದರಲ್ಲಾ ಮುಖ್ಯಮಂತ್ರಿಗಳು ಹೋಗಿ ಯೋಜನಾ ಗಾತ್ರದಲ್ಲಿ ನೀರಾವರಿಗೆ ಎಷ್ಟು ದೊಡ್ಡ ಮೊತ್ತವನ್ನು ತೆಗೆದುಕೊಂಡು ಬಂದರು ಎಂಬುದು ತಮಗೇ ಗೊತ್ತಿದೆ. ಆದ್ದರಿಂದ ತಾವೇ ಪಾದಯಾತ್ರೆ ಬೇಡ ಮತ್ತೊಂದು ಅವಕಾಶದಲ್ಲಿ ಏನಾದರೂ ನೋಡುವಿರಂತೆ, ಇದೊಂದು ಒಳ್ಳೆಯ ಕೆಲಸ ನಡೆದಿದೆಯೆಂದು ಹೇಳಬೇಕಾಗಿತ್ತು ಎಂದು ನಾವು ಭಾವಿಸುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಹಿಂದಿನ ನೀರಾವರಿ ಸಚಿವರೂ ಹಾಗೂ ಇಂದಿನ ಕಾನೂನು ಸಚಿವರಾದ ಮಾನ್ಯ ಹೆಚ್.ಕೆ. ಪಾಟೀಲ್‌ರವರಲ್ಲಿ ನಾನು ಒಂದು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ಇದೇನಿದು? ತಾವು ಇದರ ಬಗ್ಗೆ ಮೆನ್‌ಷನ್ ಮಾತ್ರ ಮಾಡುತ್ತೇನೆಂದು ಹೇಳಿದಿರಿ, ಅದರಂತೆ ಸರ್ಕಾರದ ಗಮನ ಸೆಳೆದಿದ್ದೀರಿ, ಅದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ ಕುಳಿತುಕೊಳ್ಳಿ. ಈ ರೀತಿಯಾದರೆ ಸದನ ನಡೆಸಲು ಸಾಧ್ಯವಾಗುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಸದನದ ಕಲಾಪಕ್ಕೆ ಅಡ್ಡಿ ಮಾಡಬೇಕು ಎಂಬ ಉದ್ದೇಶ ನಮಗೆ ಇಲ್ಲ.

ಅಧ್ಯಕ್ಷರು : ಇದು ಕಲಾಪಕ್ಕೆ ಅಡ್ಡಿ ಮಾಡಿದಂತೆಯೇ. ತಾವು ಗಮನ ಸೆಳೆಸಿದ್ದೀರಿ, ಆದ್ದರಿಂದ ದಯಮಾಡಿ ಕುಳಿತುಕೊಳ್ಳಬೇಕು. ಅದಕ್ಕೆ ಸರ್ಕಾರ ಸೂಕ್ತವಾದ ಉತ್ತರವನ್ನು ಕೊಡುತ್ತದೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ : ತಾವು ದಯಮಾಡಿ ಇದಕ್ಕೆ ಸಮಯವನ್ನು ನಿಗದಿ ಮಾಡಿ. ಇವತ್ತು 2000 ಇಸವಿ ಮೇ ಒಳಗಾಗಿ 'ಏ' ಸ್ಕೀಮ್‌ನಲ್ಲಿ ಬರಪಕ್ಕ ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗಿತ್ತು. ಆದರೆ ಇದುವರೆಗೆ ಮಾಡಿಕೊಳ್ಳಲು ಆಗಿಲ್ಲ. 6 ಲಕ್ಷದ 22 ಸಾವಿರ ಹೆಕ್ಟರ್ ನೀರಾವರಿಯಾಗಬೇಕಾಗಿತ್ತು. ಇದುವರೆಗೆ ಕೇವಲ 4 ಲಕ್ಷದ 65 ಸಾವಿರ ಹೆಕ್ಟರ್ ಮಾತ್ರ ಆಗಿ ಇನ್ನೂ ಒಂದೂವರೆ ಲಕ್ಷ ಹೆಕ್ಟೇರ್ ಭೂಮಿಯ ನೀರಾವರಿಯಾ ೀಕು. ಯಾರು 173 ಹಳ್ಳಿಗಳನ್ನು ಮುಳುಗಿಸಿಕೊಂಡಿದ್ದಾರೆ, ಯಾರು 3 ಲಕ್ಷ 50 ಸಾವಿರ ಹೆಕ್ಟೇರ್ ಭೂಮಿಯನ್ನು ಕಳೆದುಕೊಂಡಿದ್ದಾರೆ ಅಂಥವರಿಗೆ ಆಗಬೇಕಾದಂಥ ಯೋಜನೆ ಒಂದು ಪರ್‌ಸೆಂಟ್ ಸಹ ಉಪಯೋಗವಾಗಿಲ್ಲ. ಅದರ ಬಗ್ಗೆ ನಿರ್ಲಕ್ಷವಾಗಿದೆ. ಅದರ ಬಗ್ಗೆ ವಿವರವಾಗಿ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಆಯಿತಲ್ಲಾ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ : ತಾವು ಸಮಯ ಕೊಟ್ಟರೆ ಸಾಕು.

ಅಧ್ಯಕ್ಷರು : ಆಗಲಿ.

ಶ್ರೀ ಓಲೇಕಾರ್ ನೆಹರು ಚೆನ್ನಬಸಪ್ಪ : ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆಯಲ್ಲಿ ರೈತರು ಹತ್ತಿ ಬೆಳೆ ನಾಶವಾಗಿರುವ ಬಗ್ಗೆ ಸುಮಾರು ಹದಿನೈದು ದಿವಸಗಳಿಂದ ಹೋರಾಟವನ್ನು ನಡೆಸಿದ್ದಾರೆ.

ಅಧ್ಯಕ್ಷರು : ಇದೇನಿದು? ಈ ರೀತಿ ಎಲ್ಲಾ ನಿಂತುಕೊಂಡು ಮಾತನಾಡಿದರೆ ಈ ಸದನದ ನಿಯಮಾವಳಿಗಳೇನು?

ಶ್ರೀ ಓಲೇಕಾರ್ ನೆಹರು ಚೆನ್ನಬಸಪ್ಪ : ಇದು ಜಠಿಲವಾದಂಥ ಸಮಸ್ಯೆಯಾಗಿದೆ. ದಯವಿಟ್ಟು ಇದನ್ನು ಅತ್ಯಂತ...

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಿ, ಈಗ ಪ್ರಶ್ನೋತ್ತರಗಳು.

2. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು : ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಎಂದು ಮುದ್ರಿತವಾಗಿದೆ. ಒಳಚರಂಡಿ ಯೋಜನೆ ವಿಚಾರ ಪೌರಾಡಳಿತ ಸಚಿವರಿಗೆ ಸಂಬಂಧಪಡುತ್ತದೆ. ಆದ್ದರಿಂದ ಆ ಸಚಿವರು ಬಂದಾಗ ಉತ್ತರ ಕೊಡಿಸೋಣ.

ಶ್ರೀ ಮಾವಿನ ವಿಶ್ವನಾಥ ಕರಬಸಪ್ಪ : ಮಾನ್ಯ ಮುಖ್ಯಮಂತ್ರಿಗಳೇ, ಉತ್ತರ ಕೊಡುವುದಾಗಿ ಹೇಳಿದ್ದಾರೆ. ಅವರ ಸಹಿ ಅಷ್ಟಾಗಿದೆ.

ಅಧ್ಯಕ್ಷರು : ಆ ಖಾತೆಯ ಸಚಿವರು ಬರಬೇಕಲ್ಲಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಟೇಬಲ್ ಮೇಲೆ ಉತ್ತರ ಇದ್ದಾಗ ಇದನ್ನು ಮುಂದಕ್ಕೆ ಹಾಕಲು ಬರುವುದಿಲ್ಲ. ಯಾರಾದರೂ ಎದ್ದು ಹೇಳಬೇಕಾಗುತ್ತದೆ. ನಮಗೆ ರಿಪ್ಲೈ ಬಂದಿದೆಯಲ್ಲಾ?

ಅಧ್ಯಕ್ಷರು : ಸಂಬಂಧಪಟ್ಟ ಸಚಿವರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮಗೆ ರಿಪ್ಲೈ ಬಂದಿದೆ. ಆದ್ದರಿಂದ ಯಾರಾದರೂ, ಒಬ್ಬರು ಹೇಳಬೇಕಾಗುತ್ತದೆ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಯವರು) : ಇದನ್ನು ಕೊನೆಯಲ್ಲಿ ತೆಗೆದುಕೊಳ್ಳೋಣ.

ಅಧ್ಯಕ್ಷರು : ಅನಂತರ ಸಂಬಂಧಪಟ್ಟ ಸಚಿವರನ್ನು ಕರೆಸಿ ಅವರಿಂದಲೇ ಉತ್ತರ ಕೊಡಿಸೋಣ. ಸದಸ್ಯರು ಸಪ್ಲಿಮೆಂಟರೀಸ್ ಕೇಳಬೇಕಾಗುತ್ತದೆ. ಸಮರ್ಪಕವಾಗಿ ಉತ್ತರ ಕೊಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಸಚಿವರನ್ನು ಅವರನ್ನು ಕರೆಸಿ ಉತ್ತರ ಕೊಡಿಸೋಣ.

ಶ್ರೀ ಎನ್. ಧರ್ಮಸಿಂಗ್ : ಕೊನೆಯಲ್ಲಿ ತೆಗೆದುಕೊಳ್ಳೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಟ್ಟಿನಲ್ಲಿ ಇದನ್ನು ಡೆಫರ್ ಮಾಡಬಾರದು.

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ಉತ್ತರ ಬಂದಿರುವುದರಿಂದ ಮುಂದೆ ಹಾಕಲು ಹೋಗಬೇಡಿ, ಅದು ಸರಿಯಲ್ಲ.

ಭಾಲ್ಕಿ ಪಟ್ಟಣದ ಕುಡಿಯುವ ನೀರಿನ ಯೋಜನೆ

18 (415) : ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣದ ಕುಡಿಯುವ ನೀರಿನ ಯೋಜನೆಯ ಕಾಮಗಾರಿ ಈಗ ಯಾವ ಹಂತದಲ್ಲಿದೆ;

2) ಈ ಕಾಮಗಾರಿಗೆ ಇಲ್ಲಿಯವರೆಗೆ ಮಾಡಿದ ವೆಚ್ಚ ಎಷ್ಟು ಮತ್ತು ಬಾಕಿ ಉಳಿದ ಮೊತ್ತ ಎಷ್ಟು;

3) ಈ ಯೋಜನೆಯು ಯಾವಾಗ ಪೂರ್ಣಗೊಳಿಸಬೇಕಾಗಿತ್ತು;

4) ವಿಳಂಬವಾಗಿದ್ದರೆ ಕಾರಣವೇನು;

5) ತ್ವರಿತಗತಿಯಲ್ಲಿ ಮುಗಿಸಲು ಕ್ರಮ ತೆಗೆದುಕೊಳ್ಳಲಾಗುವುದೆ;

6) ಈ ಯೋಜನೆ ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಯವರು)

1) ಭಾಲ್ಕಿ ಪಟ್ಟಣಕ್ಕೆ ಕಾರಂಜಾ ನದಿ ಮೂಲದಿಂದ ಕುಡಿಯುವ ನೀರು ಸರಬರಾಜು ರೂ. 603.20 ಲಕ್ಷ ಅಂದಾಜಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯಾಗಿರುತ್ತದೆ. ಸದರಿ ಯೋಜನೆಯಡಿ ಮೂಲ ಸ್ಥಾವರ ನಿರ್ಮಾಣ, ಕಚ್ಚಾ/ಶುದ್ಧ ನೀರು ಏರು ಕೊಳವೆ ಮಾರ್ಗ

ಅಳವಡಿಸುವುದು, ಪಂಪ್ ಹೌಸ್ ನಿರ್ಮಿಸುವುದು ಮತ್ತು ಎರಡು ಸಂಖ್ಯೆ 10.0 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಿಸುವ ಕಾಮಗಾರಿಗಳನ್ನು ಪ್ಯಾಕೇಜ್ ಟೆಂಡರ್ ಪದ್ಧತಿಯ ಮೇಲೆ ಮೆ: ಜಿ.ವಿ.ಪಿ.ಆರ್. ಇಂಜಿನಿಯರ್ಸ್ ಲಿಮಿಟೆಡ್, ಹೈದರಾಬಾದ್ ಇವರಿಗೆ ವಹಿಸಿಕೊಡಲಾಗಿದೆ. ಚಾಕ್‌ವೆಲ್ ಕಮ್ ಪಂಪ್ ಹೌಸ್ ಕಾಮಗಾರಿಯ ಫೌಂಡೇಷನ್ ಪೂರ್ಣಗೊಳಿಸಿ ಸ್ಟೀನಿಂಗ್ 9.30 ಮೀ. ಎತ್ತರವರೆಗೆ ಪೂರ್ಣಗೊಂಡಿರುತ್ತದೆ. ಎರಡು ಸಂಖ್ಯೆ 10.0 ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ ಕಾಮಗಾರಿಗಳ ಸೈಜಿಂಗ್ ಕೆಲಸಗಳು ಪೂರ್ಣಗೊಂಡಿರುತ್ತದೆ. ಉಳಿದ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಕಾರಂಜಾ ನದಿಗೆ ಅಡ್ಡಲಾಗಿ ನಿರ್ಮಿಸಬೇಕಾದ ಬ್ಯಾರೇಜ್ ಕಾಮಗಾರಿಯ ವಿನ್ಯಾಸ ಮತ್ತು ಅಂದಾಜು ತಾಂತ್ರಿಕ ಪರಿಶೀಲನೆಯಲ್ಲಿದೆ. ಹಾಗೂ 120 ಅಶ್ವಶಕ್ತಿಯ ಡೀಪ್‌ವೆಲ್ ಟರ್ಬೈನ್ ಪಂಪ್‌ಸೆಟ್ ಮತ್ತು 75 ಅಶ್ವಶಕ್ತಿಯ ಸೆಂಟ್ರಿಫ್ಯೂಗಲ್ ಪಂಪ್‌ಸೆಟ್‌ಗಳನ್ನು ಒದಗಿಸಿ ಅಳವಡಿಸುವ ಕಾಮಗಾರಿಯು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

2) ಈ ಯೋಜನೆಯ ಕಾಮಗಾರಿಗಳಿಗೆ ಇಲ್ಲಿಯವರೆಗೆ ರೂ. 35.68 ಲಕ್ಷಗಳು ವೆಚ್ಚವಾಗಿರುತ್ತದೆ ಹಾಗೂ ರೂ. 567.34 ಲಕ್ಷಗಳ ಕಾಮಗಾರಿಗಳು ಕೈಗೊಳ್ಳಬೇಕಾಗಿದೆ.

3) ಮೇ, 2005 ರೊಳಗೆ ಪೂರ್ಣಗೊಳಿಸಬೇಕಾಗಿತ್ತು.

4) ಯೋಜನೆಯಲ್ಲಿನ ಎಂ.ಎಸ್. ಕೊಳವೆಗಳ ಮತ್ತು ರಿ ಇನ್‌ಫೋರ್ಸ್‌ಮೆಂಟ್ ಸ್ಟೀಲ್‌ಗಳ ದರಗಳು ಮಾರುಕಟ್ಟೆಯಲ್ಲಿ ತೀವ್ರವಾಗಿ ಹೆಚ್ಚಾಗಿರುವುದರಿಂದ ಗುತ್ತಿಗೆದಾರರು ಹೆಚ್ಚುವರಿ ದರ ನೀಡಲು ಕೋರಿ ಸದರಿ ಕಾಮಗಾರಿಗಳನ್ನು ಸ್ಥಗಿತಗೊಳಿಸಿರುತ್ತಾರೆ. ಸದರಿ ಗುತ್ತಿಗೆದಾರರು ಎಂ.ಎಸ್. ಕೊಳವೆಗಳ ಮತ್ತು ರಿ ಇನ್‌ಫೋರ್ಸ್‌ಮೆಂಟ್ ಸ್ಟೀಲ್‌ಗಳಿಗೆ ಕೇಳಿರುವ ಹೆಚ್ಚುವರಿ ದರಗಳನ್ನು ಗುತ್ತಿಗೆ ಷರತ್ತಿನ ಪ್ರಕಾರ ಕೊಡಲು ಸಾಧ್ಯವಿರುವುದಿಲ್ಲ. ಆದುದರಿಂದ ಸದರಿ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಪ್ರಾರಂಭಿಸಲು ದಿನಾಂಕ: 13.1.2005 ರಲ್ಲಿ ಅಂತಿಮ ನೋಟೀಸನ್ನು ನೀಡಿ ನೋಟೀಸ್ ತಲುಪಿದ 10 ದಿನಗಳೊಳಗೆ ಕಾಮಗಾರಿಯನ್ನು ಪ್ರಾರಂಭಿಸಲು ತಿಳಿಸಲಾಗಿದೆ. ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸದಿದ್ದಲ್ಲಿ ನಿಯಮಾನುಸಾರ ಕ್ರಮ ತೆಗೆದುಕೊಂಡು ಗುತ್ತಿಗೆಯನ್ನು ರದ್ದುಗೊಳಿಸಿ ಬೇರೆ ಗುತ್ತಿಗೆದಾರರನ್ನು ನೇಮಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

5) ಸದರಿ ಯೋಜನೆಯನ್ನು ತ್ವರಿತಗತಿಯಲ್ಲಿ ಮುಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

6) ಯೋಜನೆಯನ್ನು ಡಿಸೆಂಬರ್ 2005 ರೊಳಗೆ ಪೂರ್ಣಗೊಳಿಸಿ ಚಾಲನೆಗೊಳಿಸಲಾಗುವುದು.

ಶ್ರೀ ಪ್ರಕಾಶ್ ಖಂಡ್ರೆ : ಮಾನ್ಯ ಅಧ್ಯಕ್ಷರೇ, ಭಾಲ್ಕಿ ಪಟ್ಟಣದ ನೀರಿನ ಸಮಸ್ಯೆ ಹದಿನೈದು ಇಪ್ಪತ್ತು ವರ್ಷಗಳಿಂದ ನಡೆಯುತ್ತಿದೆ, ಬರಗಾಲ ಬಂದಾಗಲೆಲ್ಲಾ ಟ್ಯಾಂಕರ್‌ನಿಂದ ನೀರನ್ನು ಒದಗಿಸುವ ವ್ಯವಸ್ಥೆ ನಡೆಯುತ್ತಿದೆ, ಹೋದ ಸಲ ಅಂದಾಜು 6 ಕೋಟಿ ರೂ. ಕೆಲಸವನ್ನು ಕೈಗೊಳ್ಳಲಾಗಿದೆ. ಇದರಲ್ಲಿ ಇದುವರೆಗೆ ಕೇವಲ 35 ಲಕ್ಷ ರೂ. ಮಾತ್ರ ಕೆಲಸ ಮಾಡಿದ್ದಾರೆ, ಟೆಂಡರ್ ಅವಧಿ ಮುಗಿದುಹೋಗಿದೆ. ಈ ಕಾಮಗಾರಿಗೆ ಇನ್ನೂ 567 ಲಕ್ಷ ರೂಪಾಯಿಗೆ ಟೆಂಡರ್ ಕರೆಯಬೇಕೆಂದು ಇದರಲ್ಲಿ ತೋರಿಸಿದ್ದಾರೆ. ಈಗಾಗಲೇ ಎರಡೂವರೆ ಕೋಟಿ ರೂ.ಗೆ ಒಂದು ಟೆಂಡರ್ ಕರೆದಿದ್ದಾರೆ. ಅನಂತರ ಬ್ಯಾರೇಜ್ ಮತ್ತು ಫಿಲ್ಟರ್‌ಬೆಡ್‌ಗೆ ಸೆಕೆಂಡ್ ಟೆಂಡರ್ ಕರೆಯಬೇಕಾಗಿದೆ. ಮೊದಲ

ಟೆಂಡರ್ ಏನು ಕರೆದಿದ್ದರು ಅದರಲ್ಲಿ ಕೇವಲ 35 ಲಕ್ಷ ರೂ. ಮಾತ್ರ ಖರ್ಚು ಮಾಡಿದ್ದಾರೆ. 2 ಕೋಟಿ ರೂ ಗೂ ಮೇಲ್ಪಟ್ಟು ಅದರಲ್ಲಿ ಖರ್ಚಾಗಬೇಕು. ಈ ಕಾಮಗಾರಿಯನ್ನು ಯಾವಾಗ ಪೂರ್ಣ ಮಾಡುತ್ತೀರಿ ಎಂದು ಕೇಳಿದ್ದಕ್ಕೆ 2005ರ ಮೇ ಒಳಗಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಇನ್ನು ಸೆಕೆಂಡ್ ಟೆಂಡರ್‌ರನ್ನೇ ಕರೆದಿಲ್ಲ. ಮೊದಲನೆ ಟೆಂಡರ್‌ನಲ್ಲಿ 35 ಲಕ್ಷ ರೂ. ಮಾತ್ರ ಖರ್ಚು ಮಾಡಿದ್ದಾರೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಈ ಯೋಜನೆ ಪ್ರಾರಂಭವಾಗಿದೆ. ಆದರೆ ಮಧ್ಯದಲ್ಲಿ ಗುತ್ತಿಗೆದಾರರು ಬಿಟ್ಟು ಹೋಗಿದ್ದಾರೆ. ಆದ್ದರಿಂದ ಈಗ contract tender rescind ಮಾಡಿದ್ದೇವೆ. ಇದುವರೆಗೆ 35 ಲಕ್ಷದ 68 ಸಾವಿರ ರೂ. ಖರ್ಚು ಮಾಡಿದ್ದೇವೆ. ಮುಂದೆ ಅದನ್ನು rescind ಮಾಡಿ ಮೇ ಒಳಗೆ ಬರತಕ್ಕ ಹಣವನ್ನು ಖರ್ಚು ಮಾಡುತ್ತೇವೆ. ಕೆಲಸ ಮಾಡುತ್ತಿದ್ದೇವೆ. ಪಟ್ಟಣ ಪ್ರದೇಶದಲ್ಲಿರತಕ್ಕ ನೀರಿನ ತೊಂದರೆ ಏನಿದೆ, ಮೊನ್ನೆ ಕೇಂದ್ರದ ಸಚಿವರಾದಂಥ ಮಾನ್ಯ ಗುಲಾಮ್‌ನಬಿ ಆಜಾದ್ ರವರ ಜೊತೆ ಮಾತನಾಡಿದೆ. ಭಾಲ್ಕಿಗೆ ಸಂಬಂಧಪಟ್ಟಿದ್ದು ಅಲ್ಲ, ಇಡೀ ರಾಜ್ಯದಲ್ಲಿರುವ ಪಟ್ಟಣ ಪ್ರದೇಶದಲ್ಲಿ ಏನು ಇದೇ ರೀತಿ ಎಸ್ಕಲೇಷನ್ ಕಾಸ್ಟ್ ಆಗುತ್ತಿದೆ, ಮತ್ತು ಪ್ರೊಜೆಕ್ಟೆಡ್ ಪಾಪ್ಯುಲೇಷನ್ ಸಹ ತೆಗೆದುಕೊಂಡಿದ್ದೇವೆ. ಪ್ರಥಮವಾಗಿ ಪ್ರಾರಂಭವಾದಮೇಲೆ ಎಷ್ಟು ಜನಸಂಖ್ಯೆ ಇತ್ತು, ಹೆಚ್ಚಿನ ಜನಸಂಖ್ಯೆ ಕೂಡ ಭಾಲ್ಕಿ ಟೌನ್‌ನಲ್ಲಿ ಆಗುತ್ತಿದೆ. ಇವೆಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು rescind ಮಾಡಿದಮೇಲೆ ಮತ್ತೊಂದು ಟೆಂಡರ್ ಕಾಲ್‌ಫಾರ್ ಮಾಡುತ್ತೇವೆ, ಮೇ ಒಳಗಾಗಿ ಆ ಕೆಲಸ ಪೂರ್ಣ ಮಾಡಬೇಕು ಮತ್ತು ನೀರನ್ನು ಕೊಡಬೇಕು ಎಂದು ಸರ್ಕಾರದ ಕಾರ್ಯಕ್ರಮವಿದೆ. ಅದೆಲ್ಲವನ್ನೂ ತಿಳಿದುಕೊಂಡೆ ಅಧಿಕಾರಿಗಳ ಜೊತೆ ಮಾತನಾಡಿ ಉತ್ತರವನ್ನು ಸದನದಲ್ಲಿ ಕೊಡುತ್ತಿದ್ದೇನೆ.

ಶ್ರೀ ಪ್ರಕಾಶ್ ಖಂಡ್ರೆ : ಇದರಲ್ಲಿ ಟೆಂಡರ್ rescind ಮಾಡಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಯವರಿಗೆ ಸಂಬಂಧಪಟ್ಟ ಅಧಿಕಾರಿಗಳು ರಿಪೋರ್ಟ್ ಮಾಡಿದ್ದಾರೆ. ಆದರೆ ಇವತ್ತಿಗೂ ಕೆಲಸ ನಡೆಯುತ್ತಿದೆ. ಬೇಕಾದರೆ ನಾಳೆಯೇ ಕೆಲಸ ನಡೆಯುತ್ತಿರುವ ಬಗ್ಗೆ ಫೋಟೊವನ್ನು ಸಹ ತರುತ್ತೇನೆ. ಈ ರೀತಿ ಸುಳ್ಳು ಮಾಹಿತಿ ಸದನಕ್ಕೆ ಕೊಡುವುದು ಸರಿಯಲ್ಲ. ನಿನ್ನೆ ಸಹ ಒಳಸಂಗ್ರಾಮದಲ್ಲಿ ಪ್ರಧಾನ ಮಂತ್ರಿಗಳ ವಿದ್ಯುತ್ತೀಕರಣ ಯೋಜನೆಯಲ್ಲಿ ಸಂಪರ್ಕ ಕೊಟ್ಟಿದ್ದೇವೆಂದು ಹೇಳಿದ್ದರು. ಆದರೆ ಅಲ್ಲಿ ಇನ್ನೂ ಟ್ರಾನ್ಸ್‌ಫಾರ್ಮರ್‌ನ್ನೇ ಕೂರಿಸಿಲ್ಲ. ಈ ರೀತಿ ಸದನಕ್ಕೆ ಸುಳ್ಳು ಮಾಹಿತಿ ಯಾಕೆ ಬರುತ್ತಿದೆ? ಅದರಲ್ಲೂ ಮುಖ್ಯಮಂತ್ರಿಯವರಿಗೆ ಈ ರೀತಿ ಸುಳ್ಳು ಮಾಹಿತಿ ಕೊಟ್ಟು ಕೆಲಸವನ್ನು rescinding ಮಾಡಿದ್ದೇವೆಂದು ಹೇಳುತ್ತಿದ್ದಾರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಎರಡರದ್ದೂ ಓವರ್ ಹೆಡ್ ಟ್ಯಾಂಕ್‌ನ ಕೆಲಸ ಚಾಲುವಿನಲ್ಲಿದೆ.

ಶ್ರೀ ಧರ್ಮಸಿಂಗ್ : ಪೈಪ್ ಲೈನ್ ಹಾಕತಕ್ಕ ಕೆಲಸ ನಡೆದಿದೆ. ಮೇಜರ್ ವರ್ಕ್ಸ್ ಬಗ್ಗೆ ತೊಂದರೆ ಇದೆ. ಗುತ್ತಿಗೆದಾರರು ಆ ಕೆಲಸವನ್ನು ಮಾಡಲು ಆಗುತ್ತಿಲ್ಲ, ಯಾವ ಆಧಾರದ ಮೇಲೆ ಅದನ್ನು ಎಷ್ಟು ದರಕ್ಕೆ ತೆಗೆದುಕೊಂಡೆನೋ ಅದರಲ್ಲಿ ಮಾಡಲು ಆಗುತ್ತಿಲ್ಲವೆಂದು ಹೋಗಿಬಿಟ್ಟಿದ್ದಾನೆ. ಆದ್ದರಿಂದ ಅದನ್ನು rescind ಮಾಡಿದ್ದೇವೆ, ಮುಂದಿನ ಕೆಲಸಕ್ಕೆ ಟೆಂಡರ್ ಮಾಡಿ ಮೇ ಒಳಗೆ ಕೆಲಸ ಪೂರ್ಣ ಮಾಡುತ್ತೇವೆ. ತಮಗೂ ಇದು ಚೆನ್ನಾಗಿ ಗೊತ್ತಿದೆ, ತಾವು ಶಾಸಕರಿದ್ದೀರಿ, ಮೇಲಿಂದ ಮೇಲೆ ಹೇಳಿ, ಇಲ್ಲಿ ಪ್ರಶ್ನೆ ಕೇಳುವುದನ್ನು ಕೇಳಿದ್ದೀರಿ, ಮತ್ತೆ ಏನಾದರೂ ತೊಂದರೆಯಾದರೆ

ಸಮಕ್ಷಮ ಭೇಟಿಯಾದಾಗ ಅಧಿಕಾರಿಗಳಿಗೆ, ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನ ಎಂ.ಡಿ. ಯವರಿಗೆ ನಿರ್ದೇಶನ ಕೊಡುತ್ತೇನೆ, ಮೇ ಒಳಗಾಗಿ ಕೆಲಸ ಮುಗಿಸಲು ಆದೇಶ ಕೊಡುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಡಿ.ಆರ್. ಪಾಟೀಲರ ಪ್ರಶ್ನೆ.

ಶ್ರೀ ಪ್ರಕಾಶ್ ಖಂಡ್ರೆ : ಸಾರ್, ಈ ಕಾಮಗಾರಿಯ ಬಗ್ಗೆ ಮಾನ್ಯ ಶ್ರೀನಿವಾಸರೆಡ್ಡಿಯವರೂ ಸಹಿತ ಬಹಳಷ್ಟು ಪ್ರಯತ್ನ ಮಾಡಿದ್ದಾರೆ.

ಅಧ್ಯಕ್ಷರು : ಖಂಡ್ರೆಯವರೇ, ಎಷ್ಟು ಸಲ ಪ್ರಶ್ನೆ ಕೇಳುತ್ತೀರಿ? ಒಂದು ಪ್ರಶ್ನೆಗೆ 15 ನಿಮಿಷ ತೆಗೆದುಕೊಂಡರೆ ಹೇಗೆ? ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದ ಉತ್ತರ ಕೊಟ್ಟ ಮೇಲೂ ಮತ್ತೆ ಏನು ಕೇಳುತ್ತೀರಿ?

ಶ್ರೀ ಪ್ರಕಾಶ್ ಖಂಡ್ರೆ : ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದು ಸಮಸ್ಯೆ ಇದೆ, ಆದುದರಿಂದ ಅದರ ಬಗ್ಗೆ ನಾನು ಇಲ್ಲಿ ಕೇಳುತ್ತಿದ್ದೇನೆ. ಇದರಲ್ಲಿ distribution line ಮಾಡಿಲ್ಲ. ಇದನ್ನು ಕಾರ್ಯಗತಗೊಳಿಸಿದರೆ, ಇದರಿಂದ ನೀರು ಸಿಗುವಂತಹ ವ್ಯವಸ್ಥೆ ಇಲ್ಲ. Over head tankಗೆ ನೀರು ಬರುತ್ತದೆ. ಆದರೆ over head tankನಿಂದ distribution line ಆಗಬೇಕಾಗಿದೆ. ಬೀದರ್ ಪ್ಯಾಕೇಜ್‌ನಲ್ಲಿ distribution line ಹಾಕುವುದನ್ನು include ಮಾಡಲಾಗುವುದೆಂದು ಹೇಳಲಾಗಿತ್ತು. ದಯವಿಟ್ಟು ತಾವು ಆ distribution line ಅನ್ನು ಮಾಡಿಸಿ ಕೊಟ್ಟರೆ ನಮಗೆ ಮೇ ತಿಂಗಳಲ್ಲಾದರೂ ನೀರು ಸಿಗಬಹುದಾಗಿದೆ. ಬೇಗ ಅದನ್ನು ಮಾಡಿಸಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಎನ್. ಧರ್ಮಸಿಂಗ್ : ಅವರು ಏನು ಕೇಳಿದ್ದಾರೋ ಅದನ್ನು ಮಾಡಿಸಿಕೊಡಲಿಕ್ಕೆ ನಾನು ಆದೇಶ ಕೊಡುತ್ತೇನೆ.

ಉತ್ತರ ಕರ್ನಾಟಕದ ಪಟ್ಟಣಗಳ ಅಭಿವೃದ್ಧಿ ಯೋಜನೆ

19 (676) : ಶ್ರೀ ಡಿ.ಆರ್. ಪಾಟೀಲ್ (ಗದಗ್) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕ ಪಟ್ಟಣಗಳ ಅಭಿವೃದ್ಧಿಗಾಗಿ ತಯಾರಿಸಿದ ಯೋಜನೆಯ ಅನುಷ್ಠಾನ ಈಗ ಯಾವ ಹಂತದಲ್ಲಿದೆ;

ಆ) ಈ ಯೋಜನೆಯಲ್ಲಿ ಅಳವಡಿಸಲ್ಪಡುವ ನಗರಗಳು ಯಾವುವು;

ಇ) ಯೋಜನೆಗಳ ಅನುಷ್ಠಾನಕ್ಕೆ ಹಣಕಾಸಿನ ಹೊಂದಾಣಿಕೆ ಮಾಡಲಾಗಿದೆಯೇ;

ಈ) ಒಟ್ಟು ಎಲ್ಲಾ ಪಟ್ಟಣಗಳ ಯೋಜನೆ ವೆಚ್ಚ ಎಷ್ಟು;

ಉ) ಈ ಯೋಜನೆಯನ್ನು ಎಷ್ಟು ಕಾಲಾವಕಾಶದಲ್ಲಿ ಪೂರ್ಣಗೊಳಿಸಲಾಗುವುದು;

ಊ) ಯೋಜನೆ ಪೂರ್ಣಗೊಂಡಾಗ ಇದರ ಪ್ರಯೋಜನ ಪಡೆಯುವ ನಗರಗಳ ನಾಗರೀಕರಿಗೆ ಸಿಗುವ ಸೌಲಭ್ಯಗಳು ಬೆಂಗಳೂರಿಗೆ ಹೋಲಿಸಿದಾಗ ಯಾವ ಪ್ರಮಾಣದಲ್ಲಿರುವುವು;

ಋ) ಬೆಂಗಳೂರು ನಾಗರೀಕರಿಗೂ ಇತರೆ ನಗರಗಳಲ್ಲಿ ವಾಸವಾಗಿರುವ ನಾಗರಿಕರಿಗೂ ಮೂಲಭೂತ ಸೌಲಭ್ಯ ಒದಗಿಸುವಲ್ಲಿ ತಾರತಮ್ಯವಿಟ್ಟಿರುವುದು ಏಕೆ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

ಅ) ಯೋಜನಾ ವರದಿಯ ತಯಾರಿಕೆ ಪ್ರಗತಿಯಲ್ಲಿದೆ ಅಂತಿಮ ವರದಿಯ ಕರಡು ಸಿದ್ಧವಾಗಿದ್ದು, ಅಂತಿಮ ವರದಿಯು ಮಾರ್ಚ್ 2005 ರೊಳಗಾಗಿ ಸಿದ್ಧವಾಗಲಿದೆ.

ಆ) ಈ ಯೋಜನೆಯಡಿಯಲ್ಲಿ ಕೆಳಗೆ ನಮೂದಿಸಿರುವ ಪಟ್ಟಣಗಳನ್ನು ಸೇರಿಸಲ್ಪಟ್ಟಿದೆ;

ಬಾದಾಮಿ, ಬೀದರ್, ಬಿಜಾಪುರ, ಬೆಳಗಾಂ, ಬಳ್ಳಾರಿ, ಚಾಮರಾಜನಗರ, ದಾವಣಗೆರೆ, ಗದಗ್ ಬೆಟಗೇರಿ, ಗಂಗಾವತಿ, ಗೋಕಾಕ್, ಗುಲ್ಬರ್ಗಾ, ಹಾವೇರಿ, ಹೊಸಪೇಟೆ, ಹುಬ್ಬಳ್ಳಿ-ಧಾರವಾಡ, ಜಮಖಂಡಿ, ಕೊಪ್ಪಳ, ರಬಕವಿ-ಬನಹಟ್ಟಿ ರಾಯಚೂರು, ರಾಣೆಬೆನ್ನೂರು, ಯಾದಗಿರ್ ಬಸವಕಲ್ಯಾಣ, ಸಿಂಧನೂರು, ಶಹಾಬಾದ್, ನಿಪ್ಪಾಣಿ ಮತ್ತು ಇಳ್ಕಲ್.

ಇ) ಯೋಜನಾ ವರದಿಯು ತಯಾರಾದವರಂತಹ ಹಣಕಾಸಿನ ಹೊಂದಾಣಿಕೆ ಮಾಡಲಾಗುತ್ತದೆ.

ಈ) ಯೋಜನೆಯು ತಯಾರಿಕೆ ಹಂತದಲ್ಲಿರುವುದರಿಂದ ಮತ್ತು ಹಣಕಾಸಿನ ಹೊಂದಾಣಿಕೆ ಆಗದಿರುವುದರಿಂದ ಒಟ್ಟು ಯೋಜನಾ ವೆಚ್ಚವನ್ನು ಅಂತಿಮಗೊಳಿಸುವುದಿಲ್ಲ.

ಉ) ಈ ಯೋಜನೆಯು ಪ್ರಾರಂಭವಾದ ನಂತರ ಸುಮಾರು 6 ವರ್ಷದಲ್ಲಿ ಪೂರ್ಣಗೊಳಿಸುವಂತೆ ಯೋಜಿಸಲಾಗಿದೆ.

ಊ) ಈ ಯೋಜನೆ ಪೂರ್ಣಗೊಂಡನಂತರ ಆಯಾ ನಗರಗಳ ನಾಗರೀಕರಿಗೆ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಮಳೆ ನೀರಿನ ಚರಂಡಿ, ರಸ್ತೆಗಳ ಅಭಿವೃದ್ಧಿ ಇತ್ಯಾದಿಗಳನ್ನು ಉತ್ತಮಗೊಳಿಸುವುದರಿಂದ ನಾಗರೀಕ ಸೌಲಭ್ಯಗಳು ಉತ್ತಮಗೊಳ್ಳುತ್ತವೆ.

ಈ ಎಲ್ಲಾ ಪಟ್ಟಣಗಳು ಬೆಂಗಳೂರಿಗೆ ಹೋಲಿಸಿದಾಗ, ಚಿಕ್ಕದಾಗಿರುವುದರಿಂದ ಸೌಲಭ್ಯಗಳನ್ನು ತಕ್ಕ ರೀತಿಯಲ್ಲಿ ನಿಯೋಜಿಸಲಾಗಿದೆ.

ಋ) ಆಯಾ ನಗರ ಪ್ರದೇಶದ ವಿಸ್ತೀರ್ಣ ಜನಸಂಖ್ಯೆಗನುಗುಣವಾಗಿ ಮೂಲಭೂತ ಸೌಲಭ್ಯವನ್ನು ಯಾವುದೇ ತಾರತಮ್ಯವಿಲ್ಲದೆ ಎಲ್ಲಾ ನಗರಗಳಿಗೂ ಒದಗಿಸುವುದೇ ಸರ್ಕಾರದ ಉದ್ದೇಶವಾಗಿರುತ್ತದೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ ಈ ಉತ್ತರ ಸ್ವಲ್ಪ ಮುಗುಮ್ಮಾಗಿ ಇದೆ. ಉತ್ತರ ಕರ್ನಾಟಕದ ಈ ಎಲ್ಲಾ ಪಟ್ಟಣಗಳಿಗೆ ಕುಡಿಯುವ ನೀರು, ಒಳಚರಂಡಿ, ಮಳೆ ನೀರಿನ ಚರಂಡಿ, ರಸ್ತೆ ಹಾಗೂ ಘನ ತ್ಯಾಜ್ಯ ವಸ್ತುಗಳ ಸಾಗಾಣಿಕೆ ಸಲುವಾಗಿ ಏನೊಂದು ಸೌಲಭ್ಯಗಳನ್ನು ತಾವು ನಿರ್ಮಾಣ ಮಾಡುತ್ತೀರೋ, ಅದನ್ನು ಮಾಡಿದ ಮೇಲೆ, ಬೆಂಗಳೂರಿನ ನಾಗರಿಕರಿಗೆ ಈ ವಿಷಯಗಳ ಬಗ್ಗೆ ಏನೊಂದು ಸೌಲಭ್ಯ ಸಿಗುತ್ತಿದೆಯೋ, ಆ ಮಟ್ಟದಲ್ಲಿ ಸಿಗುವ ಹಾಗೆ ನೀವು ನೋಡಿಕೊಳ್ಳಬೇಕು ಎಂದು ನಾನು ಕೇಳಿದ್ದೇನೆ. ತಾವು ಈ ಬಗ್ಗೆ ಮುಗುಮ್ಮಾಗಿ ಹೇಳುವುದು ಸರಿಯಲ್ಲ. ತಾವು definite ಆಗಿ ಹೇಳಿ. ಬೆಂಗಳೂರು citizens, ಗದಗ citizens, ಹುಬ್ಬಳ್ಳಿ ಧಾರವಾಡ citizens will be treated on par, ಎಂದು ತಾವು ದಯವಿಟ್ಟು commit ಮಾಡಬೇಕು.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ಬೆಂಗಳೂರಿಗೂ ಮತ್ತು ಉತ್ತರ ಕರ್ನಾಟಕದ ನಗರಗಳಿಗೂ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಸರ್ಕಾರ ಯಾವುದೇ ವ್ಯತ್ಯಾಸ ಮಾಡುವುದಿಲ್ಲ. ಎ.ಡಿ.ಬಿ.ಯ 1, 2, 3 ಮತ್ತು 4 ಎಂಬ ಯೋಜನೆಗಳಿವೆ. ಇದರಲ್ಲಿ ಎ.ಡಿ.ಬಿ. 1 ಯೋಜನೆಯ ಕೆಲಸ ಈಗಾಗಲೇ ಮುಗಿದಿದೆ. ಎ.ಡಿ.ಬಿ. 2ರ ಕೆಲಸ ಮುಗಿಯುತ್ತಿದೆ. ಎ.ಡಿ.ಬಿ.

3ನೇ ಯೋಜನೆಯೇ NKUDP. ಈ NKUDP ಯಲ್ಲಿ ಒಂದು ಪಟ್ಟಣಕ್ಕೆ 80–90 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. ಉತ್ತರ ಕರ್ನಾಟಕಕ್ಕೆ ಯಾವ ರೀತಿಯಿಂದಲೂ ನಾವು ಕಡಿಮೆ ಖರ್ಚು ಮಾಡುವುದಿಲ್ಲ. ಎ.ಡಿ.ಬಿ. 1 ಯೋಜನೆಯಲ್ಲಿ ಈಗಾಗಲೇ 600 ಕೋಟಿ ರೂಪಾಯಿಗಳು ಖರ್ಚಾಗಿದೆ. ಅದರಲ್ಲೂ ಕೂಡ ನಾವು ಪ್ರತಿ ಪಟ್ಟಣಕ್ಕೆ 80–90 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೆವು. ಕೊಪ್ಪಳ ಯೋಜನೆಗೆ ಸಹ 900 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಲಿದ್ದೇವೆ. ಇದರಲ್ಲೂ ಕೂಡ ಪಟ್ಟಣಕ್ಕೆ 80–90 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ : ಸಾರ್, ತಾವು ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ ಎಂಬುದು ನನಗೆ important ಅಲ್ಲ. ಬೆಂಗಳೂರು ನಾಗರಿಕರಿಗೆ ಪ್ರತಿ ನಿತ್ಯ ಕುಡಿಯುವ ನೀರು ಎಷ್ಟು ಕೊಡುತ್ತೀರಿ? ಯಾವ ಪ್ರಮಾಣದಲ್ಲಿ ಕೊಡುತ್ತೀರೋ ಅದೇ ಪ್ರಮಾಣದಲ್ಲಿ ಉಳಿದ ನಗರಗಳಲ್ಲಿರುವಂತಹ ನಾಗರಿಕರಿಗೂ ಸಹ ಕೊಡಬೇಕು. ಈ ರೀತಿಯಾಗಬೇಕು. ಬೆಂಗಳೂರಿನಲ್ಲಿ ರೋಡ್‌ಗಳನ್ನು ಯಾವ ರೀತಿ ಮಾಡಿದ್ದೀರೋ, gutter to gutter complete carpeting ಮಾಡಿ dust proof ಮಾಡಿದಂತೆ, ಅದೇ ರೀತಿಯಲ್ಲಿ ಅಲ್ಲಿಯ ನಾಗರಿಕರಿಗೂ ಕೂಡ dust proof road ಆಗುವಂತಾಗಬೇಕು. ಇದನ್ನು ನೀವು ಮಾಡುತ್ತೀರಾ? ಅದು ಎಷ್ಟು ಕೋಟಿ ರೂಪಾಯಿಗಳಾದರೂ ಆಗಲಿ, ಇದಕ್ಕೆ ಬೇಕಾಗುವಷ್ಟು ಪೂರ್ತಿ ಹಣವನ್ನು ಲೆಕ್ಕ ಹಾಕಿ ತಾವು ಸಂಪೂರ್ಣ ಹೊಂದಾಣಿಕೆ ಮಾಡಿಕೊಂಡು ಕೊಡುತ್ತೀರಾ?

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ಅದನ್ನು ನಾವು ಮಾಡುತ್ತೇವೆ. ಬೆಂಗಳೂರಿಗೆ ನಾವೆಷ್ಟು ನೀರನ್ನು ಕೊಡುತ್ತಿದ್ದೇವೋ, NKUDP ನಲ್ಲೂ ಕೂಡ ಅದೇ ಮಟ್ಟದಲ್ಲಿ ನಾವು ನೀರು ಕೊಡಬೇಕೆಂದು ಯೋಜಿಸಿದ್ದೇವೆ. ರೋಡ್‌ಗಳ ಬಗ್ಗೆ ಹೇಳುವುದಾದರೆ, ಇಲ್ಲೂ ಸಹಿತ ನಾವು ಗುಣಮಟ್ಟದ ರೋಡ್‌ಗಳನ್ನು ನಿರ್ಮಾಣ ಮಾಡುತ್ತೇವೆ. ಈ ಮೊದಲು ಸ್ಥಳೀಯ ಸಂಸ್ಥೆಗಳು ಮಾಡಿರುವಂತಾದ್ದು ಗುಣಮಟ್ಟದ ರಸ್ತೆಗಳಾಗಿಲ್ಲ ವೈಜ್ಞಾನಿಕವಾಗಿ ಅಲ್ಲಿಯ density of the vehicle. ಅಲ್ಲಿರತಕ್ಕಂಥ ವಾತಾವರಣ ಎಲ್ಲವನ್ನೂ ನೋಡಿ, ಅಂತರರಾಷ್ಟ್ರೀಯ ಮಟ್ಟದ ಪಟ್ಟಣಗಳಲ್ಲಿ ಯಾವ ರೀತಿಯ standard ಇರುತ್ತದೋ, ಅದೇ ರೀತಿಯಲ್ಲಿ ಇಲ್ಲಿಯೂ ಸಹ ನಾವು ಮಾಡುತ್ತೇವೆ. ಇದು commitment from the government.

ಶ್ರೀ ಹಂಪನಗೌಡ ಬಾದರ್ಲಿ : ನಮ್ಮ ಸಿಂಧನೂರು ಪಟ್ಟಣವೂ ಕೂಡ NKUDP ನಲ್ಲಿ ಸೇರಿದೆ. ಉತ್ತರ ಕರ್ನಾಟಕದಲ್ಲಿ ಇರತಕ್ಕಂಥ 26-27 ಪಟ್ಟಣಗಳಿಗೆ ಈ ಯೋಜನೆಯನ್ನು ಅಳವಡಿಸಿದ್ದೀರಿ. ಬಹಳ ಸಂತೋಷ. ಆದರೆ ಈ ಯೋಜನೆ ಇನ್ನೂ ಪ್ರಾರಂಭದ ಹಂತದಲ್ಲಿದೆ. ಈ ಸಂದರ್ಭದಲ್ಲಿ ಅಲ್ಲಿರತಕ್ಕಂಥ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ, ರಸ್ತೆಗಳು ಸಂಪೂರ್ಣವಾಗಿ ಒಳ್ಳೆಯ ರೀತಿಯಲ್ಲಿ ಆಗುವಂತೆ ಪೂರ್ಣ ಪ್ರಮಾಣದ ಯೋಜನೆಗಳನ್ನು ರೂಪಿಸಿ ಕೈಗೆತ್ತಿಕೊಳ್ಳಬೇಕು. ಮಾನ್ಯ ಪಾಟೀಲರು ಹೇಳಿದ್ದಕ್ಕೆ ನಾನು ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಜನಸಂಖ್ಯೆಯ ಆಧಾರದ ಮೇಲೆ ಕುಡಿಯುವ ನೀರನ್ನು ಒದಗಿಸುವುದನ್ನು ಒಳಗೊಂಡಂತಹ ಒಂದು ಒಳ್ಳೆಯ ಯೋಜನೆಯನ್ನು ಕೈಗೆತ್ತಿಕೊಂಡಿದ್ದೀರಿ. ಅದನ್ನು ನಾವು ಸ್ವಾಗತ

ಮಾಡುತ್ತೇವೆ. ಈ ಯೋಜನೆಯನ್ನು ತೀವ್ರಗತಿಯಲ್ಲಿ ಪ್ರಾರಂಭಿಸಲು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಈ ಉತ್ತರ ಕರ್ನಾಟಕದ ಪಟ್ಟಣಗಳ ಬಗ್ಗೆ ಮಾನ್ಯ ಡಿ.ಆರ್. ಪಾಟೀಲರು ಪ್ರಶ್ನೆ ಕೇಳಿದ್ದಾರೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ 'ಈ ಯೋಜನಾ ವರದಿಯ ತಯಾರಿಕೆ ಪ್ರಗತಿಯಲ್ಲಿದೆ' ಎಂದು ಹೇಳಿದ್ದಾರೆ. ಯಾವಾಗ ಇದನ್ನು complete ಮಾಡುತ್ತೀರಿ? ಯೋಜನೆಯನ್ನು ಎಷ್ಟು ಅವಧಿಯೊಳಗೆ ತಾವು ಅನುಷ್ಠಾನ ಮಾಡುತ್ತೀರಿ? ಈ ಯೋಜನೆಯ ಅನುಷ್ಠಾನದ ಸಲುವಾಗಿ ಎಷ್ಟು ಹಣವನ್ನು ನಿಗದಿ ಮಾಡಿದ್ದೀರಿ? ಉತ್ತರ ಕರ್ನಾಟಕದಲ್ಲಿ ಇರುವಂತಹ ಗದಗ್-ಬೆಟಗೇರಿ, ಗಂಗಾವತಿ, ಗೋಕಾಕ್, ಗುಲ್ಬರ್ಗ, ಹುಬ್ಬಳ್ಳಿ-ಧಾರವಾಡ ಮುಂತಾದ ನಗರಗಳನ್ನು ಉಲ್ಲೇಖಿಸಿ ಅವುಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಈ ದೊಡ್ಡ ದೊಡ್ಡ ಪಟ್ಟಣಗಳೆಲ್ಲಾ ಇವತ್ತು ಒಂದು ದೊಡ್ಡ ಹಳ್ಳಿಗಳು ಅಥವಾ ಸ್ಲಂ ಗಳಾಗಿ ಪರಿವರ್ತಿತವಾಗಿವೆ. ಇವುಗಳ ಮೂಲಭೂತವಾದ ಸೌಲಭ್ಯಗಳನ್ನು ಇಂಪ್ರೂವ್ ಮಾಡುವಂತಹ ಯಾವುದೇ ರೀತಿಯ ಯೋಜನೆ ಇರಲಿಲ್ಲ. ಅದಕ್ಕಾಗಿ ಈ ಯೋಜನೆ ಅನುಷ್ಠಾನಕ್ಕೆ ಆದಷ್ಟು ಬೇಗನೆ ನೀವು ಅವಧಿಯನ್ನು ನಿಗದಿ ಮಾಡಿ implement ಮಾಡಬೇಕಾಗುತ್ತದೆ. ಹಿಂದೆ ನವೆಂಬರ್ ತಿಂಗಳಿನಲ್ಲಿ ಪತ್ರಿಕೆಯೊಂದರಲ್ಲಿ ಒಂದು ಹೇಳಿಕೆ ಪ್ರಕಟವಾಗಿತ್ತು. ಅದೇನೆಂದರೆ,

> "Karnataka Urban Infrastructure Development and Finance Corporation which proposed for Karnataka Urban Water sector improvement project last year, the project proposes to bring round the clock water to Belgaum, Hubli-Dharwad and Gulbarga Cities by plugging leakages."

ಇದೊಂದು ಸ್ಕೀಮ್ ಇತ್ತು ಅದು ಇದರೊಳಗೆ include ಆಗುತ್ತದೋ ಅಥವಾ ಇದೊಂದು independent ಸ್ಕೀಮೋ? ಇದರೊಳಗೆ ನೀರಿ ಸರಬರಾಜು ಯೋಜನೆ ಕೂಡ ಇದೆ ಎಂದು ತಾವು ಹೇಳಿದ್ದೀರಿ. ಹುಬ್ಬಳ್ಳಿ-ಧಾರವಾಡದಂತಹ ಮಹಾನಗರದಲ್ಲಿ ಇವತ್ತು 7-10 ದಿವಸಕ್ಕೊಮ್ಮೆ ನೀರನ್ನು supply ಮಾಡುತ್ತಿದ್ದೀರಿ. 3-5 ದಿವಸಕ್ಕೊಮ್ಮೆ supply ಮಾಡುತ್ತೇವೆ ಎಂದು ಹೇಳಿದ್ದರೂ, ಅಲ್ಲಿ ಆ ರೀತಿ ಆಗಲೇ ಇಲ್ಲ. ಮಾನ್ಯ ಡಿ.ಆರ್. ಪಾಟೀಲರು ಹೇಳಿದ ಪ್ರಕಾರ ಬೆಂಗಳೂರಿನಲ್ಲಿ everyday 6-7 ತಾಸು Regular ನೀರಿನ supply ಇದೆ. ಆದರೆ ಆ ಭಾಗದಲ್ಲಿ ಆ ರೀತಿ ನೀರಿನ supply ಇಲ್ಲವೇ ಇಲ್ಲ.

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನೀವು ಭಾಷಣ ಮಾಡುತ್ತಿದ್ದೀರೋ ಅಥವಾ ಪ್ರಶ್ನೆ ಕೇಳುತ್ತಿದ್ದೀರೋ? ಈ ತರಹ ಆದರೆ ನಾವು ಪ್ರಶ್ನೋತ್ತರ ನಡೆಸುವುದಕ್ಕಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ..... ಇದನ್ನು war-footing ಮೇಲೆ ತೆಗೆದುಕೊಳ್ಳಬೇಕು. ಅದಕ್ಕಾಗಿ ಇದಕ್ಕೊಂದು time bound ಹಾಕಿ. ಇಲ್ಲದಿದ್ದರೆ ಇದು ಸಕಾಲದಲ್ಲಿ ಮುಗಿಯುವುದಿಲ್ಲ. differences start ಆಗಿ ಬಿಡುತ್ತದೆ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕದ ಪಟ್ಟಣಗಳಿಗೆ 1800 ಕೋಟಿ ರೂಪಾಯಿ ಅಂದರೆ 400 ಮಿಲಿಯನ್ ಡಾಲರ್. ಇವತ್ತಿನ ರೂಪಾಯಿಯ ಮೌಲ್ಯದಲ್ಲಿ ಅದು 1800 ಕೋಟಿ ರೂಪಾಯಿಗಳಾಗುತ್ತದೆ. ಈ ಪ್ರಾಜೆಕ್ಟ್ 2005-06 ರಲ್ಲಿ ಅಂದರೆ ಈ financial year ಏಪ್ರಿಲ್ ತಿಂಗಳಿನಲ್ಲಿ ಆರಂಭವಾಗುತ್ತದೆ. ನೀರಿನ ಬಗ್ಗೆ improvement ಮಾಡುವುದರ ಕುರಿತು ಈ ಹಿಂದೆ ಪತ್ರಿಕೆಯಲ್ಲಿ ಬಂದಿರುವುದನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ನಾವು improvement work ಅನ್ನೂ ತೆಗೆದುಕೊಳ್ಳುತ್ತೇವೆ. ಇದು ಸಾಲದು, ಇನ್ನೂ ಸ್ವಲ್ಪ ಹೆಚ್ಚಿಗೆ ನೀರು ಬೇಕು, ಅದಕ್ಕೆ ವ್ಯವಸ್ಥೆ ಮಾಡಬೇಕೆಂದರೆ, ಅದಕ್ಕೂ ಸಹ ಪ್ರಾಜೆಕ್ಟ್‌ನಲ್ಲಿ ಅವಕಾಶ ಮಾಡುತ್ತೇವೆ.

ಶ್ರೀ ಆಲ್ಕೋಡ್ ಹನುಮಂತಪ್ಪ : ಮಾನ್ಯ ಅಧ್ಯಕ್ಷರೇ, ಈ ಯೋಜನೆಯನ್ನು ನಾನು ಸ್ವಾಗತ ಮಾಡುತ್ತೇನೆ. ಪಟ್ಟಣ ಪಂಚಾಯಿತಿಗಳೂ ಕೂಡ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿವೆ. ಕೆಲವು ಪಟ್ಟಣ ಪಂಚಾಯಿತಿಗಳಲ್ಲಿ ಕುಡಿಯಲಿಕ್ಕೆ ನೀರು ಸಹ ಸಿಗಲಾರದಂತಹ ಪರಿಸ್ಥಿತಿ ಇದೆ. ರಸ್ತೆಗಳನ್ನೂ ಸಹ ಕಾಣದಿರುವಂತಹ ಪಟ್ಟಣ ಪಂಚಾಯಿತಿಗಳೂ ಕೂಡ ನಮ್ಮ ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿವೆ. ಒಳಚರಂಡಿ ಕೂಡ ಕಾಣದಿರುವಂತಹ ಪಟ್ಟಣ ಪಂಚಾಯಿತಿಗಳೂ ಸಹ ಇವೆ. ಆ ಕಾರಣದಿಂದ ಈ ಯೋಜನೆಯನ್ನು ಪಟ್ಟಣ ಪಂಚಾಯಿತಿಗಳಿಗೂ ಸಹ ಅನ್ವಯಿಸಬೇಕೆಂದು ಕೋರುತ್ತೇನೆ. ಅನ್ವಯಿಸದಿದ್ದಲ್ಲಿ ಈ ಯೋಜನೆಯನ್ನು ಪಟ್ಟಣ ಪಂಚಾಯಿತಿಗಳಿಗೂ ವಿಸ್ತರಿಸಬೇಕು. ಆ ರೀತಿ ವಿಸ್ತರಿಸದೇ ಇರುವುದಕ್ಕೆ ಕಾರಣಗಳೇನು? ಪಟ್ಟಣಗಳನ್ನಷ್ಟೇ ಏಕೆ ನೀವು ಅಭಿವೃದ್ಧಿ ಪಡಿಸುತ್ತಿದ್ದೀರಿ, ಪಟ್ಟಣ ಪಂಚಾಯಿತಿಗಳನ್ನು ನೀವ್ಯಾಕೆ ಅಭಿವೃದ್ಧಿ ಪಡಿಸುತ್ತಿಲ್ಲ? ಪಟ್ಟಣ ಪಂಚಾಯಿತಿಗಳಲ್ಲೂ ಸಹ ಈ ತರಹದ ಉತ್ತಮ ರೀತಿಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುತ್ತೀರಾ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಎಸ್.ಆರ್, ಮೋರೆ : ಮಾನ್ಯ ಅಧ್ಯಕ್ಷರೇ, ಈ ಪ್ರಾಜೆಕ್ಟ್ ಅನ್ನು ಜಾರಿಗೊಳಿಸಲು ಜನಸಂಖ್ಯೆ ಕನಿಷ್ಟ 50 ಸಾವಿರವಾದರೂ ಇರಬೇಕು ಎಂಬ norms ಅನ್ನು ನಿಗದಿಪಡಿಸಿದ್ದೇವೆ. 50 ಸಾವಿರಕ್ಕಿಂತ ಜನಸಂಖ್ಯೆ ಕಡಿಮೆ ಇರತಕ್ಕ ಪ್ರದೇಶಗಳು ಒಂದು ವೇಳೆ ಏನಾದರೂ ಪ್ರವಾಸಿ ಕೇಂದ್ರಗಳಾಗಿದ್ದರೆ, ಅಲ್ಲಿ ಪ್ರವಾಸಿ ಉದ್ಯಮ ಇದ್ದರೆ, ಅಲ್ಲೂ ಸಹಿತ ಈ ಪ್ರಾಜೆಕ್ಟ್ ಅನ್ನು ಜಾರಿಗೊಳಿಸುತ್ತೇವೆ. ಪಟ್ಟಣ ಪಂಚಾಯಿತಿಗಳಲ್ಲಿ ಅನೇಕ ಪಟ್ಟಣಗಳು 50 ಸಾವಿರ ಜನಸಂಖ್ಯೆಗಿಂತ ಕಡಿಮೆ ಇರುವುದರಿಂದ ಈ ಪ್ರಾಜೆಕ್ಟ್‌ನಲ್ಲಿ ಅವುಗಳು ಬರುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕ ಪಟ್ಟಣಗಳ ಅಭಿವೃದ್ಧಿಗಾಗಿ ಈ ಯೋಜನೆಯನ್ನು ತಯಾರಿಸಲಾಗಿದೆ. ಬಹುಶಃ ಮಾನ್ಯ ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ನೀವು ಇವುಗಳನ್ನು ಉತ್ತರ ಕರ್ನಾಟಕ ಪಟ್ಟಣಗಳೆಂದು ಕರೆಯುತ್ತಿದ್ದೀರಿ ಅನ್ನಿಸುತ್ತದೆ. ತಾವು ಈ ಯೋಜನೆಯಡಿಯಲ್ಲಿ ಚಾಮರಾಜನಗರ, ದಾವಣಗೆರೆ, ಗದಗ-ಬೆಟಗೇರಿ ಮುಂತಾದ ಎಲ್ಲಾ ಪಟ್ಟಣಗಳನ್ನೂ ಸೇರಿಸಿದ್ದೀರಿ. ಆದರೆ ಈ ಪಟ್ಟಣಗಳ ಯೋಜನೆಗಳು ಇನ್ನೂ ತಯಾರಾಗಿಲ್ಲ ಎಂದು ಹೇಳುತ್ತೀರಿ, ಇದಕ್ಕೆ ಹಣ ನಿಗದಿಯಾಗಿಲ್ಲ ಎಂದು ತಾವು ಹೇಳುತ್ತೀರಿ. ನೀವು ಯಾವಾಗ ಹಣವನ್ನು ನಿಗದಿ ಮಾಡುವುದು? ಈ ಯೋಜನೆ ಬರುವುದು ಯಾವಾಗ?

ರಸ್ತೆಗಳಲ್ಲಿ ಇರುವ ಗುಂಡಿಗಳನ್ನು ಮುಚ್ಚಿ ಅದನ್ನು ಉತ್ತಮಗೊಳಿಸುವುದು ಯಾವಾಗ? ನೀರಿನ ವ್ಯವಸ್ಥೆ ಯಾವಾಗ ಮಾಡುತ್ತೀರಿ? ಇನ್ನೂ ಯೋಜನೆ ಬಂದಿಲ್ಲವೆಂದು ಹೇಳುತ್ತೀರಿ.

ಅಂತಿಮವಾಗಿ ನಾನು ತಮ್ಮ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇವೆ. ಡಾ: ನಂಜುಂಡಪ್ಪನವರು ವರದಿಯನ್ನು ಕೊಟ್ಟು ಎಷ್ಟು ವರ್ಷಗಳಾಯಿತು. ಈ ಡಾ: ನಂಜುಂಡಪ್ಪ ವರದಿಯನ್ನು ಸರ್ಕಾರ ಏನು ಮಾಡಿದೆ? ಡಾ: ನಂಜುಂಡಪ್ಪ ವರದಿಯನ್ನು ಕಾರ್ಯಗತ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಕಾಲ ಮಿತಿ ಹಾಕಿದ್ದೀರಾ? ಯಾವ ಯಾವ ರೀತಿ ಮಾಡಬೇಕೆಂದು ತೀರ್ಮಾನ ಮಾಡಿದ್ದೀರಿ ಇದು ಬಹಳ ಪ್ರಮುಖವಾದ ವಿಷಯ. ಡಾ: ನಂಜುಂಡಪ್ಪ ವರದಿ ಕೈ ಬಿಟ್ಟಿದ್ದಾರೆಯೇ? ಇದನ್ನು ಅವರು ಸ್ಪಷ್ಟವಾಗಿ ಹೇಳಬೇಕು.

ಅಧ್ಯಕ್ಷರು : ದಯಮಾಡಿ ಪೌರಾಡಳಿತ ಸಚಿವರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಕೇಳಿ. ಅವರಿಗೆ ಸಂಬಂಧಪಟ್ಟಿದ್ದು ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಡಾ: ನಂಜುಂಡಪ್ಪ ವರದಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಬರುತ್ತದೆ. ಅದಕ್ಕೋಸ್ಕರ ತಮ್ಮ ಗಮನಕ್ಕೆ ತಂದು ಅವರಿಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು : ಅದನ್ನು ಬೇರೆ ಸಮಯದಲ್ಲಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಡಾ: ನಂಜುಂಡಪ್ಪ ವರದಿಯ ಬಗ್ಗೆ ಹೇಳಬೇಕು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) : ಮಾನ್ಯ ಸಭಾಧ್ಯಕ್ಷರೆ, ವಾಟಾಳ್ ನಾಗರಾಜ್‌ರವರು ಯಾವಾಗಲೂ ಉಪ ಪ್ರಶ್ನೆ ಕೇಳುತ್ತಾರೆ. ಆ ಸಂದರ್ಭದಲ್ಲಿ ಪ್ರಶ್ನೆಗೆ ಮಧ್ಯೆ ಪ್ರವೇಶಿಸಿ ಏನೇನೋ ಕೇಳುತ್ತಿದ್ದಾರೆ. ಡಾ: ನಂಜುಂಡಪ್ಪ ವರದಿ ಈಗಾಗಲೇ ಸರ್ಕಾರಕ್ಕೆ ಕೊಟ್ಟಿದ್ದಾರೆ. ಡಾ: ನಂಜುಂಡಪ್ಪ ವರದಿ ಕೊಟ್ಟ ಮೇಲೆ ಇದೇ ನಮ್ಮ ಕರ್ನಾಟಕ ಸರ್ಕಾರ ಏನಿದೆ ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯ ಪ್ರಾರಂಭ ಮಾಡಿದೆ. ಬೀದರ್‌ನಲ್ಲಿ ಪಶು ವಿಶ್ವವಿದ್ಯಾನಿಲಯ ಪ್ರಾರಂಭ ಮಾಡಿದೆ. 9,600 ಕೋಟಿ ರೂಪಾಯಿ ಎಂಟು ವರ್ಷಗಳಲ್ಲಿ ಖರ್ಚು ಮಾಡಬೇಕು. ಪ್ಲ್ಯಾನಿಂಗ್ ಕಮಿಷನ್ ಮುಂದೆ ನಾವು ವಾದ ಮಾಡಿದ್ದೇವೆ. ಡಾ: ನಂಜುಂಡಪ್ಪ ವರದಿ ಪ್ರಕಾರ 9,600 ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿದೆ. ಅದರಲ್ಲಿ ಅರ್ಧ ಭಾಗದಷ್ಟು ನಮಗೆ ಕೊಡಬೇಕು. ಪ್ರತಿ ವರ್ಷ 1,260 ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿದೆ. ಪ್ಲ್ಯಾನಿಂಗ್ ಕಮಿಷನ್‌ನವರು ತಾತ್ವಿಕವಾಗಿ ಒಪ್ಪಿಗೆ ಕೊಟ್ಟಿದ್ದಾರೆ. ಆ ಹಣ ಬರುತ್ತದೆ. ಇದು ಯಾವುದೂ ಕೂಡ ವರದಿ ಮಾತಿನ ಮೇಲೆ ಆಗುವುದಿಲ್ಲ. ಎಷ್ಟೋ ವರದಿ ತಾವು ನೋಡಿದ್ದೀರಿ, ಆದರೆ ಡಾ: ನಂಜುಂಡಪ್ಪ ವರದಿ ಅನುಷ್ಠಾನಕ್ಕೆ ತರುವುದಕ್ಕೆ ಈ ಸರ್ಕಾರ ಪ್ರಯತ್ನ ಮಾಡುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಡಾ: ನಂಜುಂಡಪ್ಪ ವರದಿ ಆಧಾರದ ಮೇಲೆ ಇದನ್ನು ಜಾರಿಗೆ ತರುವುದಕ್ಕೆ 9,600 ಕೋಟಿ ರೂಪಾಯಿ ಬೇಕಾಗುತ್ತದೆ, ಪ್ಲಾನಿಂಗ್ ಕಮಿಷನ್‌ಗೆ ಅರ್ಧ ಕೊಡಿ ಎಂದು ನಾವು ಕೇಳಿದ್ದೇವೆ ಎಂದು ಹೇಳಿದರು, ತುಂಬಾ ಸಂತೋಷ. ಕೇಂದ್ರದಲ್ಲಿ ನಿಮ್ಮದೇ ಸರ್ಕಾರ ಇದೆ, ಅಗತ್ಯ ಇದೆ, ಒತ್ತಾಯ ಮಾಡಿ ತನ್ನಿ. ಆದರೆ ಇವತ್ತು ನಿಮ್ಮ ಕಡೆಯಿಂದ ಕೆಲಸ ಪ್ರಾರಂಭ ಆಗಬೇಕು. ಅದಕ್ಕೋಸ್ಕರ ಪ್ಲಾನಿಂಗ್ ಕಮಿಷನ್

ಅಪ್ರೂವ್ ಮಾಡಿ ಕೊಡುವುದಕ್ಕೆ ಕಾಯದೆಯನ್ನು ತಂದ ತತ್‌ಕ್ಷಣ ಇದನ್ನು ಜಾರಿಗೆ ತಂದು ನಮ್ಮ ಹಣ ಖರ್ಚು ಮಾಡಿ ಕೆಲಸ ಪ್ರಾರಂಭ ಮಾಡಬಹುದು. ಆ ನಂತರ ಅವರು ಕೊಡುತ್ತಾರೆ, ಇವರು ಕೆಲಸ ಪ್ರಾರಂಭ ಮಾಡಲಿ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಇದನ್ನು ಅನುಷ್ಠಾನಕ್ಕೆ ತರತಕ್ಕಂತಹ ರಾಜ್ಯ ಸರ್ಕಾರ ಪ್ರತಿ ವರ್ಷ ಮಾಡತಕ್ಕಂಥದ್ದು ಇದೇ ಹಿಂದಿನ ಬಜೆಟ್‌ನಲ್ಲಿ ನಾವು ಅಳವಡಿಸಿದ್ದೆವು, ಈಗಲೂ ಕೂಡ ಅದಕ್ಕೆ ಕೊಡುವ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ, ಯಾವ ವಿಚಾರ ಎತ್ತಿದ್ದೀರಿ ಅದಕ್ಕೆ ಉತ್ತರ ಕೊಟ್ಟಿದ್ದಾರೆ. ನೀವು ಇನ್ನೂ ಸಮಾಧಾನವಾಗಲಿಲ್ಲ ಎಂದರೆ ಹೇಗೆ? ವಾಟಾಳ್ ನಾಗರಾಜ್‌ರವರಿಗೆ ಸಮಾಧಾನ ಮಾಡುವುದಕ್ಕೆ ಏನಾದರೂ ಮಾಡಬೇಕು?

ಶ್ರೀ ವಾಟಾಳ್ ನಾಗರಾಜ್ : ಚಾಮರಾಜ ನಗರ, ಗದಗ-ಬೆಟಗೇರಿಯನ್ನು ಸೇರಿಸಿದ್ದಾರೆ. ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ; ರಸ್ತೆಗಳು ಸರಿ ಇಲ್ಲ, ವ್ಯವಸ್ಥೆ ಸರಿ ಇಲ್ಲ, ಅಧ್ವಾನವಾಗಿವೆ. ಅಲ್ಲಿ ಕಟ್ಟಡ ಸುಮ್ಮನೆ ಖಾಲಿ ಇದೆ. ಜಿಲ್ಲಾ ಪ್ರದೇಶಮಾಡಿದ್ದಾರೆ, ಇದರಿಂದ ನನಗೆ ಬಹಳ ನೋವಾಗುತ್ತಿವೆ. ನಿಮ್ಮ ಕಾಲ ಮಿತಿಯಲ್ಲಿ ಇವರು ಕೆಲಸ ಮಾಡುತ್ತಾರೆಂದು ಹೇಳಿದರೆ ಸಾಧ್ಯ. ಇಲ್ಲವೆಂದರೆ ನಿಜವಾಗಿಯೂ ನನಗೆ ಬಹಳ ನೋವಾಗುತ್ತದೆ. ಯೋಜನೆ ತಯಾರು ಮಾಡಿದ್ದೇವೆ, ಅನುಕೂಲ ಮಾಡುತ್ತಿದ್ದೇವೆ ಎಂದು ಬರೀ ಗಿಣಿ ಸಾಕುತ್ತಿದ್ದೇವೆ, ನಿಮಗೆ ಏನೂ ಆಹಾರ ಕೊಡುವುದಿಲ್ಲ ಎನ್ನುವ ತರಹ ಇದೆ. ಆದ್ದರಿಂದ ಸ್ಪಷ್ಟವಾದ ತೀರ್ಮಾನವನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ವಿಷಯಾಂತರವಾಗುತ್ತದೆ, ಎಲ್ಲರೂ ಎದ್ದು ನಿಲ್ಲುತ್ತಾರೆ. ಪ್ರಶ್ನೋತ್ತರ ಬೇಕಾಗಿಲ್ಲವಾ? ನಿಗದಿತ ಅವಧಿಯಲ್ಲಿ ಪ್ರಶ್ನೋತ್ತರ ಮುಗಿಯಬಾರದಾ? ಈ ತರಹ ಆದರೆ ಸಭೆ ನಡೆಸುವುದು ಕಷ್ಟವಾಗುತ್ತದೆ. ಮಾನ್ಯ ಡಿ.ಆರ್. ಪಾಟೀಲರೇ, ನಿಮ್ಮ ಪ್ರಶ್ನೆಗೆ ಸಮರ್ಪಕವಾದ ಉತ್ತರ ಹೇಳಿದ್ದಾರೆ. ಆದ್ದರಿಂದ ನಾವು ಮುಂದಕ್ಕೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್ : ನಾನು ಸಭಾತ್ಯಾಗ ಮಾಡುತ್ತೇನೆ. ನಮ್ಮ ಜಿಲ್ಲೆ ಕಡೆಗಣಿಸಿದ್ದಾರೆ. ಇದು ನಮ್ಮ ಯೋಜನೆಗೆ ಸೇರಿದೆ.

ಅಧ್ಯಕ್ಷರು : ದಯಮಾಡಿ ಸಹಕರಿಸಿ ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಧರ್ಮಸಿಂಗ್ : ವಾಟಾಳ್ ನಾಗರಾಜ್‌ರವರ ಚಾಮರಾಜನಗರ ಹಿಂದುಳಿದ ಪ್ರದೇಶ, ಅವರ ಜಿಲ್ಲೆಗೆ ಆದ್ಯತೆ ಕೊಡಬೇಕೆಂಬ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ ಪ್ರತಿಯೊಂದಕ್ಕೆ ನೀವು ವಾಕ್ ಔಟ್ ಮಾಡುವುದು ಸರಿಯಲ್ಲ. ಡಾ: ನಂಜುಂಡಪ್ಪ ವರದಿ ನಿಮಗೆ ಏಕೆ ಬರುತ್ತದೆ? ಎಲ್ಲಿ ರೀಜನಲ್ ಇಂಬ್ಯಾಲೆನ್ಸ್ ಇದೆ ಅಲ್ಲಿ ಮಾಡುತ್ತಾರೆ. ಮೈಸೂರು ಮಹಾರಾಜರು ಪರಂಪರೆ ಎಂದು ಹೇಳಿ ಹೇಳಿ ಪೇಟ ಹಾಕಿಕೊಂಡು ಭಾಷಣ ಮಾಡುತ್ತೀರಿ, ಚಾಮರಾಜನಗರ ಏಕೆ ಹಿಂದುಳಿಯಿತು? ಆ ಪ್ರದೇಶದಲ್ಲಿ ಸಾಕಷ್ಟು ಕೆಲಸ ಆಗಿದೆ. ನಿಮ್ಮ ಕ್ಷೇತ್ರಕ್ಕೆ ಸರ್ಕಾರ ಕುಡಿಯುವ ನೀರನ್ನು ಬೇರೆ ರೀತಿಯಲ್ಲಿ ಒದಗಿಸಿಕೊಡುತ್ತದೆ. ನಿಮ್ಮ ಬೇಡಿಕೆ ಈಡೇರಿಸುತ್ತೇವೆ. ನೀವು ಏಕೆ ವಾಕ್ ಔಟ್ ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಮುಖ್ಯ ಮಂತ್ರಿಗಳು ಚಾಮರಾಜನಗರಕ್ಕೆ ಬರಲಿ, ಇಲ್ಲ ಹಣ ಕೊಡಲಿ ಎರಡರಲ್ಲಿ ಒಂದು ಮಾಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು): ಅಧ್ಯಕ್ಷರೆ, ವಾಟಾಳ್ ನಾಗರಾಜ್‌ರವರು ಎಲ್ಲಾ ಮುಖ್ಯ ಮಂತ್ರಿಗಳಿಗೆ ಆಹ್ವಾನ ಕೊಟ್ಟುಕೊಂಡು ಬಂದಿದ್ದಾರೆ. ಗುಂಡೂರಾವ್ ಕಾಲದಲ್ಲಿ ಆಹ್ವಾನ ಕೊಟ್ಟರು, ಅವರೂ ಹೋಗಲಿಲ್ಲ, ಜೆ.ಹೆಚ್. ಪಟೇಲರ ಕಾಲದಲ್ಲಿ ಆಹ್ವಾನ ಕೊಟ್ಟರು ಅವರೂ ಹೋಗಲಿಲ್ಲ. ವೀರಪ್ಪ ಮೊಯಿಲಿಯವರಿಗೆ ಆಹ್ವಾನ ಕೊಟ್ಟರು ಅವರೂ ಹೋಗಲಿಲ್ಲ. ಈಗ ಇವರಿಗೆ ಆಹ್ವಾನ ಕೊಡುತ್ತಿದ್ದಾರೆ. ಅವರೂ ಹೋಗುವುದಿಲ್ಲ. ಆ ಮಾತು ಬೇರೆ. ಆದರೆ ಆ ಜಾಗದ ಮಹತ್ವ ಏನಿದೆ, ಯಾವ ಮುಖ್ಯ ಮಂತ್ರಿಗಳೂ ಬರುವುದಕ್ಕೆ ತಯಾರಿಲ್ಲ. ಬೇರೆ ಮಂತ್ರಿಗಳು ಕೂಡ ಅಲ್ಲಿಗೆ ಬರುವುದಕ್ಕೆ ಹೆದರುತ್ತಾರೆ. ಅದಕ್ಕಾಗಿ ಏನಾದರೂ ಶನಿ ಇದೆಯಾ ಎಂದು ಯಾವುದಾದರೂ ಕಾಟ ಇದೆಯೇ? ಏನಿದೆ ಎಂದು ಒಂದು ಸಾರಿ ತೋರಿಸಿದರೆ ವ್ಯವಸ್ಥೆ ಮಾಡಬಹುದು.

ಶ್ರೀ ಅರಗ ಜ್ಞಾನೇಂದ್ರ : ಆ ಕ್ಷೇತ್ರದ ವಾಸ್ತು ಸರಿ ಇಲ್ಲವಂತೆ ಸ್ವಲ್ಪ ನೋಡಿ ಬಿಡಿ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ : ಮಾನ್ಯ ಖರ್ಗೆಯವರು ಸಮರ್ಥರಿದ್ದಾರೆ.

ಅಧ್ಯಕ್ಷರು : ಆ ಕ್ಷೇತ್ರದ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೂ ಕೂಡ ಒಂದೂ ಸಮಾರಂಭಕ್ಕೆ ಬರಲಿಲ್ಲ ಎಂದು ನನಗನ್ನಿಸುತ್ತದೆ. ಪರಮ ಪವಿತ್ರವಾದ ಸ್ಥಳ, ಬಹಳ ಜನ ಇರತಕ್ಕಂತಹ ಸ್ಥಳ, ಒಳ್ಳೆಯ ವ್ಯಕ್ತಿ ಆಯ್ಕೆಯಾಗಿರತಕ್ಕಂತಹ ಸ್ಥಳ. ಆ ಸ್ಥಳಕ್ಕೆ ಬರುವುದಿಲ್ಲ ಎಂದರೆ ಹೇಗೆ? ಮಾನ್ಯ ಮುಖ್ಯ ಮಂತ್ರಿಗಳು ಮಂತ್ರಿಗಳಾಗಿದ್ದಾಗ ಅಲ್ಲಿಗೆ ಬಂದಿದ್ದರು. ಭಾರೀ ವೈಭವಯುತವಾಗಿ ಮೆರವಣಿಗೆ ಮಾಡಿದ್ದೇವೆ. ಅಲ್ಲಿಗೆ ಬಂದ ಮೇಲೆ ಅವರು ಮುಖ್ಯ ಮಂತ್ರಿಗಳಾಗಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ವಾಟಾಳ್ ನಾಗರಾಜ್‌ರವರು ಹೇಳಲಿ, ಯಾವುದಾದರೂ ಜಿಲ್ಲೆ ಅನೌನ್ಸ್ ಆದರೆ ಆ ಜಿಲ್ಲೆಗೆ ಹೋಗಿ ಅನೌನ್ಸ್ ಮಾಡುತ್ತಾರೋ, ಇಲ್ಲ ಯಾವುದಾದರೂ ಒಂದು ದೇವಸ್ಥಾನದಲ್ಲಿ ಕೂತು ಅನೌನ್ಸ್ ಮಾಡುತ್ತಾರಾ? ಇಡೀ ಕರ್ನಾಟಕ ರಾಜ್ಯದಲ್ಲಿ ಯಾವುದಾದರೂ ಜಿಲ್ಲೆ ಚಾಮರಾಜ ನಗರ ಜಿಲ್ಲೆ ಎಂದು ಅನೌನ್ಸ್ ಮಾಡಿದರೆ ಅದು ಮಲೆ ಮಹದೇಶ್ವರ ಬೆಟ್ಟದಲ್ಲಿ ಆಯಿತೇ ಹೊರತಾಗಿ ಚಾಮರಾಜ ನಗರಕ್ಕೆ ಹೋಗಿ ಆಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಲೆಮಹಾದೇಶ್ವರ ಬೆಟ್ಟ ಬಹಳ ಪವಿತ್ರವಾದುದು. ಜಿಲ್ಲೆ ಆರಂಭವಾಗುವಾಗ ಅಲ್ಲಿಂದ ಆರಂಭವಾಗಲಿ ಎಂದು ಮಾಡಿದರು ಅಷ್ಟೇ ಹೊರತು, ಬೇರೇನೂ ಇಲ್ಲ. ಮಾನ್ಯ ಖರ್ಗೆಯವರಿಗೆ ಕರೆಯುತ್ತಿದ್ದೇನೆ, ಸಾರಿಗೆ ಇಲಾಖೆಯ ಒಂದು ಕಟ್ಟಡ ತಯಾರಾಗಿದೆ ತಾವು ದಯಮಾಡಿ ಬಂದು ಉದ್ಘಾಟನೆ ಮಾಡಬೇಕೆಂದು ನಾನು ಕರೆಯುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಮಗೆ ಗೊತ್ತಿರುವ ಹಾಗೆ ಡಿವೈಎಸ್‌ಪಿ ಪೋಲಿಸ್ ಆಫೀಸ್ ಉದ್ಘಾಟನೆ ಮಾಡಿ ಬಂದಿದ್ದೇನೆ. ಒಂದು ಕಾನ್‌ಫರೆನ್ಸ್ ಇತ್ತು ಅದಕ್ಕೋಸ್ಕರ ಕೊಳ್ಳೆಗಾಲದಿಂದ ಚಾಮರಾಜನಗರಕ್ಕೆ ಹೋಗಿ ಬಂದಿದ್ದೆ. ನನಗೆ ಏನೂ ಆಗಲಿಲ್ಲ ಎನ್ನುವುದು ಬೇರೆ. ಆದರೆ ನೀವು ಏನು ಎಲ್ಲಾ ಮುಖ್ಯ ಮಂತ್ರಿಗಳಿಗೆ ಅಲ್ಲಿಗೆ ಬನ್ನಿ ಎಂದು ಕರೆಯುತ್ತೀರಿ, ಆ ಎಲ್ಲಾ ಮುಖ್ಯ

ಮಂತ್ರಿಗಳಿಗೆ ನೀವು ಹೇಳಿ ಕೊಟ್ಟಿದ್ದೀರಿ. ನಾನು ಕರೆಯುವುದು ಕರೆಯುತ್ತೇನೆ, ನೀವು ಬರಬೇಡಿ ಎಂದು ಹೇಳಿರುತ್ತೀರಿ. ಅದಕ್ಕೆ ಹಾಗಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಬಂದಿದ್ದರು. ಅವರಿಗೆ ವೈಭವವಾದ ಸಮಾರಂಭ ಮಾಡಿದ್ದೇವೆ. ಅದರ ಬಗ್ಗೆ ತಕ್ಕರಾರು ಇಲ್ಲ. ಯಾರೂ ಹೆದರಬೇಕಾಗಿಲ್ಲ. ಬಹಳ ಪವಿತ್ರವಾದ ಸ್ಥಳ. ಬಿಳಿಗಿರಿ ರಂಗನಾಥ ಸ್ವಾಮಿ ಬೆಟ್ಟ, ಮಹಾದೇಶ್ವರ ಬೆಟ್ಟ, ಚಾಮರಾಜ ದೇವಸ್ಥಾನ ಇಡೀ ಕರ್ನಾಟಕದ ಪವಿತ್ರವಾದ ಸ್ಥಳ. ಇಲ್ಲಿಗೆ ನೀವೆಲ್ಲರೂ ಬರಬೇಕೆಂದು ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಸನ್ಮಾನ್ಯ ಸಚಿವರು ರಾಜ್ಯದ ಎಲ್ಲಾ ನಗರದ ನಾಗರೀಕರಿಗೆ ಬೆಂಗಳೂರು ಮಟ್ಟದ ಸೌಲಭ್ಯ ಕೊಡುತ್ತೇವೆಂದು ಹೇಳಿದ್ದಾರೆ, ಬಹಳ ಸಂತೋಷ. ಆದರೆ ಈ ಪ್ರಾಜೆಕ್ಟ್ ನಾವು ಕನ್‌ಸೀವ್ ಮಾಡಿದಾಗ 18 ಪಟ್ಟಣಕ್ಕೆ ಇತ್ತು, ಆಗ 400 ಮಿಲಿಯನ್ ಡಾಲರ್ ಎಂದು ಹೇಳಿದ್ದಿರಿ. ಈಗ 26 ಪಟ್ಟಣಗಳು ಹೆಚ್ಚಿಗೆ ಆಗಿವೆ. ಅದನ್ನು ಗಮನದಲ್ಲಿ ಇಟ್ಟುಕೊಂಡು ನೀವು ಸದನದ ಮುಂದೆ ಏನು ಭರವಸೆ ಕೊಟ್ಟಿದ್ದೀರಿ. ಆ ಭರವಸೆಯನ್ನು ಗಮನದಲ್ಲಿಟ್ಟುಕೊಂಡು ಬೇಕಾಗುವ ಎಲ್ಲಾ ಹಣಕಾಸು ಅದು ಹೆಚ್ಚಾದರೂ ಹೊಂದಿಸುತ್ತೇವೆ ಎನ್ನುವ ಒಂದು ಭರವಸೆಯನ್ನು ಈ ಸದನಕ್ಕೆ ಕೊಡುತ್ತೀರಾ?

ಶ್ರೀ ಎಸ್.ಆರ್. ಪೋರೆ : ಮಾನ್ಯ ಅಧ್ಯಕ್ಷರೆ, ಪ್ರಾಜೆಕ್ಟ್ ಬಗ್ಗೆ ಹಣಕಾಸು ಕಡಿಮೆ ಮಾಡುವುದಿಲ್ಲ. ಇನ್‌ಫ್ಲೇಷನ್ ಆಗಿ ತೊಂದರೆ ಆದರೂ ಕೂಡ ಪ್ರಾಜೆಕ್ಟ್ ಮಾತ್ರ ಸರಿಯಾಗಿ ತಯಾರು ಮಾಡುತ್ತೇವೆ. ಆ ಪ್ರಕಾರ ನಾವು ಸಂಪೂರ್ಣವಾಗಿ ಮಾಡಿ ಕೊಡುತ್ತೇವೆ. ವಾಟಾಳ್ ನಾಗರಾಜ್‌ರವರು ಹೇಳಿದರು, ಅಲ್ಲಿ ಗುಣಮಟ್ಟ ಸರಿಯಾಗಿಲ್ಲ ಎಂದು, ಚಾಮರಾಜನಗರದ ಕೆಲಸ ಇನ್ನೂ ಪ್ರಾರಂಭವಾಗಿಲ್ಲ, 2005-06ರಲ್ಲಿ ಚಾಮರಾಜನಗರದ ಕೆಲಸ ಪ್ರಾರಂಭ ಮಾಡುತ್ತೇವೆ. ಆದ್ದರಿಂದ ಗುಣಮಟ್ಟದ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಉತ್ತರ ಏನಾಯಿತು ಎಂದರೆ, ಟೌನ್ ಪಂಚಾಯಿತಿಗಳ ಹಣೆಬರಹ ಏನಾಯಿತು ಎಂದರೆ, ಗ್ರಾಮೀಣಾಭಿವೃದ್ಧಿಯಲ್ಲಿ ಸಂಬಂಧ ಇಲ್ಲವೆಂದು ಹೇಳುತ್ತಾರೆ. ಇವರೂ ಸಂಬಂಧ ಇಲ್ಲವೆಂದು ಹೇಳುತ್ತಾರೆ. ಹಾಗಾದರೆ ಟೌನ್ ಪಂಚಾಯಿತಿಗಳು ಏನು ಮಾಡುವುದು? ಅವುಗಳನ್ನು ಕೂಡ ಪಂಚಾಯಿತಿ ಎಂದಾದರೂ ಮಾಡಿ, ಅಥವಾ ಮುನಿಸಿಪಾಲಿಟಿ ಎಂದಾದರೂ ಮಾಡಿ, ಈಗ ಜನಸಂಖ್ಯೆ ಹಿಡಿದು ಟೌನ್ ಪಂಚಾಯಿತಿ ಎಂದು ಮಾಡಿ ಕುಡಿಯುವ ನೀರೂ ಇಲ್ಲ, ರಸ್ತೆಗಳು ಇಲ್ಲ, ಅಭಿವೃದ್ಧಿ ಇಲ್ಲ, ಮಾನ್ಯ ಮಂತ್ರಿಗಳು 50,000 ಕಡಿಮೆ ಇದ್ದರೆ ನಾವು ತೆಗೆದುಕೊಳ್ಳುವುದಿಲ್ಲ ಎಂದು ನೀವು ನೇರವಾಗಿ ಹೇಳಿಬಿಡಿ. ಟೌನ್ ಪಂಚಾಯಿತಿಗಳಿಗೆ ನಾಗರೀಕ ಸೌಲಭ್ಯ ಒದಗಿಸಲು ಏನು ಮಾಡುತ್ತೀರಿ ಎಂಬುದನ್ನು ದಯಮಾಡಿ ಹೇಳಿ.

ಶ್ರೀ ಎಸ್.ಆರ್. ಪೋರೆ : ಮಾನ್ಯ ಅಧ್ಯಕ್ಷರೆ, ಕೆ.ಯು.ಐ.ಡಿ.ಎಫ್.ಸಿ. ಮೂರು ಪಾಕೆಟ್‌ನ್ನು ಮಾಡಿದೆ. ಎ.ಡಿ.ಬಿ. 1, ಎ.ಡಿ.ಬಿ. 2 ಮತ್ತು ಎ.ಡಿ.ಬಿ. 3. ಈ ಮೂರು ಆದ ತಕ್ಷಣ ಸಣ್ಣ ಪಟ್ಟಣಗಳಲ್ಲಿ ನಾಲ್ಕನೇ ಹಂತದಲ್ಲಿ ಕೂಡ ಕೆಲಸವನ್ನು ನಾವು ಆರಂಭ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಯಾವಾಗ ಆರಂಭ ಮಾಡುತ್ತೀರಿ?

ಶ್ರೀ ಎಸ್.ಆರ್. ಮೋರೆ : ಈ ಮೂರೂ ಪಾಕೆಟ್‌ಗಳು ಮುಗಿಯಬೇಕಲ್ಲಾ> ಆ ಮೂರು ಪಾಕೆಟ್‌ಗಳ ಕೆಲಸಗಳು ಮುಗಿದ ನಂತರ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಅದು ಯಾವಾಗ ಮುಗಿಯುತ್ತದೆ ಮತ್ತು ಸಣ್ಣ ಪಟ್ಟಣಗಳಲ್ಲಿ ಕೆಲಸ ಯಾವಾಗ ಆರಂಭ ಮಾಡುತ್ತೀರಿ ಎಂಬ ಬಗ್ಗೆ ಹೇಳಿ.

ಶ್ರೀ ಎಸ್.ಆರ್. ಮೋರೆ : ಅದನ್ನು ಈಗ ಹೇಳುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಈಗ ಹೇಳುವುದಿಲ್ಲ ಎಂದರೆ ಹೇಗೆ? ಐದು ವರ್ಷ ಮುಗಿದ ಮೇಲೆ ಏನ್ಮಾಡೋಣ? ಅದನ್ನೂ ಕೂಡ ತಕ್ಷಣ ತೆಗೆದುಕೊಳ್ಳಬೇಕು. ಏಕೆಂದರೆ ಅಲ್ಲಿ ಬಹಳ ತೊಂದರೆ ಇದೆ.

ಶ್ರೀ ಎಸ್.ಆರ್. ಮೋರೆ : ಪರಿಶೀಲನೆಯನ್ನು ಮಾಡುತ್ತೇವೆ.

ವಸತಿ ಮತ್ತು ಘನ ತ್ಯಾಜ್ಯ ವಸ್ತುಗಳ ವಿಲೇವಾರಿ

20 (628) : **ಶ್ರೀ ಅಂಗಾರ ಎಸ್.** (ಸೂಳ್ಯ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜ್ಯದಲ್ಲಿ ವಸತಿ, ಘನ ತ್ಯಾಜ್ಯ ವಸ್ತುಗಳ ವಿಲೇವಾರಿ ಇನ್ನೂ ಮುಂತಾದ ಸಾರ್ವಜನಿಕ ಉದ್ದೇಶಗಳಿಗಾಗಿ ಖಾಸಗಿ ಜಮೀನನ್ನು ಸರ್ಕಾರ ಖರೀದಿಸುವಾಗ ಎರಡು ರೀತಿಯ ದರಗಳನ್ನು ನಿಗಧಿಗೊಳಿಸುವುದರಿಂದ ಬಡ ರೈತರಿಗೆ ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಸದರಿ ಉದ್ದೇಶಗಳಿಗೆ ಖಾಸಗಿಯವರ ಭೂಮಿಯನ್ನು ಸರ್ಕಾರ ಖರೀದಿಸಿ ಸದುಪಯೋಗಪಡಿಸಿಕೊಳ್ಳುವುವಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

3) ಬಂದಿದ್ದರೆ, ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

1) ನಗರಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಪ್ರತಿದಿನ ಉತ್ಪತ್ತಿಯಾಗುವ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ಕುರಿತಂತೆ ಸರ್ವೋಚ್ಚ ನ್ಯಾಯಾಲಯದ ಆದೇಶದ ರೀತ್ಯಾ ಸರ್ಕಾರಿ ಜಾಗ ಲಭ್ಯವಿಲ್ಲದ ಕಡೆ ಖಾಸಗಿ ಭೂ ಮಾಲೀಕರಿಂದ ಸರ್ಕಾರದ ಆದೇಶ ಸಂಖ್ಯೆ. ನಅಇ 39 ಸಿಎಸ್‌ಎಸ್ 2002, ದಿ: 2.7.2003 ರ ರೀತ್ಯಾ ಮಾರ್ಗಸೂಚಿ ಬೆಲೆ (Guidance value) ಯಲ್ಲಿ ಕೊಳ್ಳಲು ಮತ್ತು ಸ್ಥಳೀಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಕೊಂಡು ಮಾರ್ಗಸೂಚಿ ಬೆಲೆಗಳಿಗಿಂತ ಶೇ. 20 ರಷ್ಟು ಹೆಚ್ಚುವರಿಯನ್ನು ನೀಡಿ ಖರೀದಿಸಲು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ನೀಡಿರುವ ಅಧಿಕಾರದಂತೆ ಖರೀದಿಸಲಾಗುತ್ತಿದ್ದು ಸಾರ್ವಜನಿಕ ಹಿತದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೆ ಖರೀದಿಯನ್ನು ಜಮೀನಿನ ಮಾಲೀಕರೊಂದಿಗೆ ಒಡಂಬಡಿಕೆಯ ಸಹಮತಿಯ ರೀತ್ಯಾ ಕ್ರಮ ವಹಿಸುತ್ತಿರುವುದರಿಂದ ಬಡ ರೈತರಿಗೆ ತೊಂದರೆಯಾಗುವುದಿಲ್ಲ.

2. ಇಲ್ಲ.

3. ಉದ್ಭವಿಸುವುದಿಲ್ಲ.

ಶ್ರೀ ಎಸ್. ಅಂಗಾರ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಮಾನ್ಯ ಸಚಿವರು ನಗರಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಪ್ರತಿದಿನ ಉತ್ಪತ್ತಿಯಾಗುವ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ಕುರಿತಂತೆ ಸರ್ವೋಚ್ಚ ನ್ಯಾಯಾಲಯದ ಆದೇಶದ ರೀತ್ಯಾ ಸರ್ಕಾರಿ ಜಾಗ ಲಭ್ಯವಿಲ್ಲದ ಕಡೆ ಖಾಸಗಿ ಭೂ ಮಾಲೀಕರಿಂದ ಸರ್ಕಾರದ ಆದೇಶದ ಪ್ರಕಾರ, ಮಾರ್ಗಸೂಚಿಯ ಪ್ರಕಾರ ಭೂಮಿಯನ್ನು ಖರೀದಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಸರ್ಕಾರದಲ್ಲಿ ಎರಡು ರೀತಿಯ ಆದೇಶವನ್ನು ಮಾಡಿದ್ದಾರೆ. 1996ರಲ್ಲಿ ಆಶ್ರಯ ಯೋಜನೆಯಡಿಯಲ್ಲಿ ವಸತಿ ನಿವೇಶನ ರಚಿಸುವುದಕ್ಕಾಗಿ ಖಾಸಗಿ ಭೂಮಿಯನ್ನು ತೆಗೆದುಕೊಳ್ಳುವ ಸಮಯದಲ್ಲಿ ಒಂದು ಎಕರೆಗೆ 50 ಸಾವಿರ ರೂಪಾಯಿಗಳು ಎಂದು ಬೆಲೆಯನ್ನು ನಿಗದಿ ಮಾಡಿದ್ದಾರೆ. ಆದರೆ ನಗರಾಭಿವೃದ್ಧಿ ಇಲಾಖೆಯಿಂದ ಈ ಘನ ತ್ಯಾಜ್ಯ ವಸ್ತುಗಳ ವಿಲೇವಾರಿ ಮಾಡುವುದಕ್ಕೆ ಖಾಸಗಿ ಭೂಮಿಯನ್ನು ಖರೀದಿ ಮಾಡುವುದಕ್ಕೆ ಒಂದು ಎಕರೆಗೆ 20 ಸಾವಿರ ರೂ. ಎಂದು ಬೆಲೆಯನ್ನು ನಿಗದಿ ಮಾಡಿದ್ದಾರೆ. ಈ ಬೆಲೆಗೆ ಯಾವುದೇ ಗ್ರಾಮದಲ್ಲಿ ಯಾವುದೇ ರೈತರು ಭೂಮಿಯನ್ನು ಬಿಟ್ಟುಕೊಡುವುದಕ್ಕೆ ಒಪ್ಪುವುದಿಲ್ಲ. ಸಂಬಂಧಪಟ್ಟ ಇಲಾಖೆಯವರು ಈ ಭೂಮಿ ಖರಿ...ಗೆ ಸಂಬಂಧಪಟ್ಟಂತೆ ಕಡತವನ್ನು ತಯಾರು ಮಾಡಿದರೆ ಅದಕ್ಕೆ ಸಂಬಂಧಪಟ್ಟ ಭೂ ಮಾಲೀಕರು ಕೋರ್ಟಿಗೆ ಹೋಗುತ್ತಾರೆ. ಅದಕ್ಕಾಗಿ ಈ ಎರಡೂ ರೀತಿಯ ಆದೇಶಗಳು ಇರುವ ಸಮಯದಲ್ಲಿ ಯಾವ ರೀತಿಯ ಆದೇಶದ ಪ್ರಕಾರ ಅಧಿಕಾರಿಗಳು ಭೂಮಿಯನ್ನು ಖರೀದಿ ಮಾಡುತ್ತಾರೆ? ಆದಷ್ಟು ಬೇಗ ಘನ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ನಮಗೆ ಭೂಮಿಯನ್ನು ಒದಗಿಸಿಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೆ, ಈಗ ನಾವು ತ್ಯಾಜ್ಯ ವಸ್ತುಗಳನ್ನು ಹೊರಗೆ ಹಾಕುವುದಕ್ಕೆ ಭೂಮಿಯನ್ನು ಖರೀದಿ ಮಾಡುವುದಕ್ಕೆ ಸಂಬಂಧಪಟ್ಟಂತೆ ಅಧಿಕಾರಿಗಳಿಗೆ ಸರ್ಕಾರದಿಂದ ಗೈಡೆನ್ಸ್ ವ್ಯಾಲ್ಯೂ ಕಳುಹಿಸಿಕೊಟ್ಟಿದ್ದೇವೆ. ಈ ಗೈಡೆನ್ಸ್ ವ್ಯಾಲ್ಯೂ ಮತ್ತು ಅದಕ್ಕೆ 20 ಪರ್ಸೆಂಟ್ ಹೆಚ್ಚು ಎಂದು ಹೇಳಿದ್ದೇವೆ. ಆದರೆ ಮಾನ್ಯ ಸದಸ್ಯರು ಈ ಗೈಡೆನ್ಸ್ ವ್ಯಾಲ್ಯೂ ಕಡಿಮೆಯಾಗಿದೆಯಾದ ಕಾರಣ ಆಶ್ರಯ ಯೋಜನೆಯಲ್ಲಿ ಭೂಮಿ ಖರೀದಿ ಮಾಡಲು ನಿಗದಿ ಮಾಡಿರುವ ಬೆಲೆಯನ್ನು ನಿಗದಿ ಮಾಡಿ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಬಹಳ ವ್ಯತ್ಯಾಸವಿದೆ. ಆಶ್ರಯ ಸ್ಕೀಂ ಮನೆಗಳು ಪಟ್ಟಣಕ್ಕೆ ಹತ್ತಿರವಾಗಿದ್ದರಿಂದ ಮತ್ತು ಅಲ್ಲಿ ವಾಸ ಮಾಡತಕ್ಕಂಥ ಜನರಿಗೆ ಸಿವಿಕ್ ಫೆಸಿಲಿಸ್‌ಗಳನ್ನೂ ಕೂಡ ಮಾಡಲಾಗಿರುತ್ತದೆ. ಆದುದರಿಂದ ಅಲ್ಲಿ ಆಶ್ರಯ ಜನರಿಗೆ ಸಿವಿಕ್ ಫೆಸಿಲಿಟಿಸ್‌ಗಳನ್ನೂ ಕೂಡ ಮಾಡಲಾಗಿರುತ್ತದೆ. ಆದುದರಿಂದ ಅಲ್ಲಿ ಆಶ್ರಯ ಯೋಜನೆಗೆ ಭೂಮಿಯನ್ನು ನಾವು ಪಟ್ಟಣದಲ್ಲಿರತಕ್ಕಂಥ ಭೂಮಿಯನ್ನೇ ಕೊಳ್ಳಬೇಕಾಗಿರುತ್ತದೆಯಾದ ಕಾರಣ ಅಲ್ಲಿ ನಾವು ಭೂಮಿ ಖರೀದಿಗೆ ಹೆಚ್ಚು ಹಣವನ್ನು ಕೊಡುತ್ತೇವೆ. ಆದರೆ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಪಟ್ಟಣದಿಂದ 15-20 ಕಿ.ಮೀ ದೂರದಲ್ಲಿ ಭೂಮಿ ತೆಗೆದುಕೊಳ್ಳುವುದರಿಂದ ಅಲ್ಲಿ ಭೂಮಿಗೆ ಆಶ್ರಯ ಯೋಜನೆಯಲ್ಲಿ ಭೂಮಿಗೆ ನಿಗದಿ ಮಾಡಿರುವ ಬೆಲೆಯನ್ನು ಕೊಡುವುದಕ್ಕಾಗುವುದಿಲ್ಲ. ಆ ಪ್ರದೇಶದಲ್ಲಿ ಸರ್ಕಾರ ಗೈಡೆನ್ಸ್ ವ್ಯಾಲ್ಯೂ ಏನು ನಿಗದಿ ಮಾಡಿದೆ ಆ ಪ್ರಕಾರ ಬೆಲೆ ಕೊಡುತ್ತೇವೆ. ಒಂದು ವೇಳೆ ರೈತರು ಆ ಬೆಲೆಗೆ ಕೊಡುವುದಕ್ಕೆ ಸಹಕಾರ ಕೊಡದಿದ್ದರೆ ಸರ್ಕಾರ ಅಕ್ವಿಸಿಶನ್ ಮಾಡುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಈಗ ಇಲ್ಲಿ ಮುಖ್ಯಮಂತ್ರಿಗಳೂ ಇದ್ದಾರೆ. ನಾನು ತಮಗೊಂದು ಪತ್ರವನ್ನು ಬರೆದಿದ್ದೆ. ಅದಕ್ಕೆ ತಮ್ಮ ಸೆಕ್ರೆಟರಿಯವರು ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದು ತಕ್ಷಣ ಇದನ್ನು ಸರಿಪಡಿಸಿ ಎಂದು ಹೇಳಿದ್ದಾರೆ. ಇಲ್ಲಿ ಮೂಲ ಪ್ರಶ್ನೆ ಏನು? ಆಶ್ರಯ ಯೋಜನೆ ಇರಬಹುದು ಅಥವಾ ಬೇರೆ ಯಾವುದೇ ಯೋಜನೆ ಇರಬಹುದು, ಇವೊತ್ತು ಬೆಲೆ ಏನು ನಿಗದಿ ಮಾಡಿದ್ದೀರಿ ಮುಖ್ಯಮಂತ್ರಿಗಳೇ, ಆ ರೇಟ್‌ಗೆ ಒಂದು ಎಕರೆ ಜಮೀನೂ ಕೂಡ ಸಿಗುವುದಿಲ್ಲ. ಎಂಟು ವರ್ಷಗಳ ಹಿಂದೆ ಈ ಬೆಲೆಯನ್ನು ನಿಗದಿ ಮಾಡಿರುವುದು. ಇವೊತ್ತು ರಾಜ್ಯದ ಯಾವುದೇ ಪ್ರದೇಶದಲ್ಲಿ ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಬೆಲೆಗೆ ಒಂದು ಎಕರೆ ಭೂಮಿ ಸಿಗುವುದಿಲ್ಲ. ಹಿಂದೆ ಈ ಬೆಲೆ ನಿಗದಿ ಮಾಡಿರುವುದರಿಂದ ನಮ್ಮ ರಾಜ್ಯದಲ್ಲಿ ಒಂದು ಸೈಟ್ ಕೊಡುವುದಕ್ಕೂ ಆಗಿಲ್ಲ. ಕೇವಲ ಕಸಕಡ್ಡಿಯನ್ನು ಹೊರಗೆ ಹಾಕುವಂಥದ್ದಕ್ಕಲ್ಲ, ಕಸ ಎಲ್ಲಿಗೆ ಹಾಕುತ್ತಾರೆ ಸ್ವಾಮಿ, ಯಾವುದಾದರೂ ಒಂದು ನಗರ ಅಥವಾ ಯಾವುದೋ ಒಂದು ಹಳ್ಳಿ ಅಥವಾ ಒಂದು ತಾಲ್ಲೂಕು ಕೇಂದ್ರ ಎಂದಿಟ್ಟುಕೊಳ್ಳಿ. ಒಂದು ಕಿ.ಮೀ, ಎರಡು ಕಿ.ಮೀ. ದೂರದಲ್ಲಿ ಮಾತ್ರ ನಿಮ್ಮ ನಗರಸಭೆಯವರು ಕಸ ಹಾಕಿಬರಬೇಕು. ಇವೊತ್ತು ರಾಜ್ಯದಲ್ಲಿ ಎಲ್ಲಿಯೇ ಆದರೂ ಕೂಡ ಒಂದು ಎಕರೆ 20 ಸಾವಿರ ರೂಪಾಯಿಗೆ ಸಿಗುತ್ತದೆಯೆ ಸ್ವಾಮಿ? ಇಲ್ಲ. ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ, ಒಂದು ಮಿನಿಮಮ್ ಬೆಲೆಯನ್ನು ಈಗ ನಿಗದಿ ಮಾಡಬೇಕು. ಏಕೆಂದರೆ ಎಂಟು ವರ್ಷಗಳ ಹಿಂದೆ ಬೆಲೆ ನಿಗದಿ ಮಾಡಿರುವ ಆಜ್ಞೆ ಈಗ ಇರುವುದು. ಈಗ 20 ಸಾವಿರ ರೂಪಾಯಿಗಳಿಗೆ ಒಂದು ಗುಂಟೆ ಭೂಮಿಯೂ ಸಿಗುವುದಿಲ್ಲವಾದ್ದರಿಂದ ಸೈಟನ್ನು ಕೊಡುವುದಕ್ಕೆ ಆಗುವುದಿಲ್ಲ. ಬೇರೆ ಯಾವುದೇ ಸರ್ಕಾರಿ ಕೆಲಸಕ್ಕೂ ಉಪಯೋಗ ಆಗುವುದಿಲ್ಲ. ನಾನು ಬರೆದ ಪತ್ರಕ್ಕೆ ಮುಖ್ಯಮಂತ್ರಿಗಳ ಕಛೇರಿಯಿಂದ ಪತ್ರ ಹೋದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳು ಮುಂದೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಇವೊತ್ತು ನಾನು ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ ಮಿನಿಮಮ್ ಇವೊತ್ತು ಒಂದು ಎಕರೆಗೆ 50 ಸಾವಿರ ರೂಪಾಯಿಗಳನ್ನಾದರೂ ಗ್ರಾಮೀಣ ಪ್ರದೇಶದಲ್ಲಿ ಬೆಲೆ ನಿಗದಿ ಮಾಡಿ 20 ಪರ್ಸೆಂಟ್ ಹೆಚ್ಚು ಅಲ್ಲ, ಅದಕ್ಕಿಂತಲೂ ಹೆಚ್ಚು ಹಣ ಕೊಟ್ಟು ಭೂಮಿಯನ್ನು ಖರೀದಿ ಮಾಡುವುದಕ್ಕೆ ಅಧಿಕಾರಿಗಳಿಗೆ ನೀವು ಅಧಿಕಾರ ಕೊಡದಿದ್ದರೆ ಇನ್ನು ಹತ್ತು ವರ್ಷವಾದರೂ ಕೂಡ ಆಶ್ರಯ ಯೋಜನೆಯಲ್ಲಿ ನೀವು ಒಂದು ಸೈಟ್‌ನ್ನೂ ಕೊಡುವುದಕ್ಕೆ ಆಗುವುದಿಲ್ಲ. ಇದರ ಜೊತೆಗೆ ಬೇರೆ ವ್ಯವಸ್ಥೆಗಳಿಗೂ ಭೂಮಿ ತಮಗೆ ಸಿಗುವುದಿಲ್ಲ. ಆದುದರಿಂದ ತಾವು ದಯಮಾಡಿ ಈ ಬಗ್ಗೆ ಪರಿಶೀಲನೆ ಮಾಡಿ ಒಂದು ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳೇ ಇದಕ್ಕೆ ಉತ್ತರ ಕೊಟ್ಟರೆ ಹೆಚ್ಚು ಅನುಕೂಲ ಎಂದು ನನಗನ್ನಿಸುತ್ತದೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಎಂಟು ವರ್ಷ, ಹತ್ತು ವರ್ಷಗಳ ಹಿಂದೆ ಬೆಲೆಯನ್ನು ಜಮೀನಿಗೆ ನಿಗದಿ ಮಾಡಿರುವುದು ಏನಿದೆ ಅದರ ಬೆಲೆ ಇಂದು ಹೆಚ್ಚಾಗುತ್ತದೆ. ಮಾರ್ಕೆಟ್ ಬೆಲೆ ದಿನೇ ದಿನೇ ಹೆಚ್ಚಾಗುತ್ತಲೇ ಇದೆ. ಪ್ರೆಸೆಂಟ್ ಮಾರ್ಕೆಟ್ ವ್ಯಾಲ್ಯೂ ಹೆಚ್ಚಾಗುತ್ತಲೇ ಇರುವುದರಿಂದ ಸರ್ಕಾರ ಕೂಡ ಯಾರಿಗೂ ನಿವೇಶನ ಕೊಡುವುದಕ್ಕೆ ಆಗುತ್ತಿಲ್ಲ. ಸೈಟ್‌ನ್ನು ಹಂಚುವುದಕ್ಕೇ ನಮಗೆ

ಸಾಧ್ಯವಾಗುತ್ತಿಲ್ಲ. ಆದುದರಿಂದ ವಿರೋಧ ಪಕ್ಷದ ನಾಯಕರ ಸಲಹೆ ಏನಿದೆ ಆ ಸಲಹೆಯನ್ನು ಸರ್ಕಾರ ಪರಿಶೀಲಿಸಿ ಒಂದು ಆದೇಶವನ್ನು ಹೊರಡಿಸುತ್ತೇವೆ. ಈಗ ಸದ್ಯದ ಪರಿಸ್ಥಿತಿಯಲ್ಲಿ ಅಲ್ಲಿ ಏನು ಮಾರ್ಕೆಟ್ ವ್ಯಾಲ್ಯೂ ಇದೆ ಆ ಪ್ರಕಾರ....

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಸ್ವಲ್ಪ ಈಲ್ಡ್ ಆಗಬೇಕೆಂದು ವಿನಂತಿ. ಸಬ್–ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಏನು ಆಗುತ್ತಿದೆ ಎನ್ನುವುದನ್ನು ಬಹಿರಂಗವಾಗಿಯೇ ತಮಗೆ ಹೇಳುತ್ತೇನೆ. 50–60 ಸಾವಿರ ರೂಪಾಯಿಗೆ ಖರೀದಿ ಮಾಡಿದ್ದರೂ ಅಲ್ಲಿ ಹಳೆಯ ದರ 25 ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿದ್ದು ಇರುತ್ತದೆ. ಆದುದರಿಂದ ಆ ವ್ಯಾಲ್ಯೂ ಮೇಲೆ ಈಗ ಖರೀದಿ ಮಾಡುವುದಕ್ಕೇ ಆಗುವುದೇ ಇಲ್ಲ. ಇದು ತಮಗೂ ಗೊತ್ತಿದೆ. ಅದಕ್ಕೋಸ್ಕರ....

ಶ್ರೀ ಧರ್ಮಸಿಂಗ್ : ಒಟ್ಟಿನಲ್ಲಿ ಯಾರಿಗೂ ತೊಂದರೆ ಆಗದ ರೀತಿಯಲ್ಲಿ ಈ ಬಗ್ಗೆ ಸರ್ಕಾರ ಗಮನಹರಿಸಿ ಬೆಲೆ ನಿಗದಿ ಮಾಡುವಂಥ ಕೆಲಸ ಮಾಡುತ್ತದೆ ಎನ್ನುವ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಎಸ್. ಯೋಗೀಶ್‌ಭಟ್ : ಮಾನ್ಯ ಅಧ್ಯಕ್ಷರೆ, ಘನ ತ್ಯಾಜ್ಯ ವಸ್ತುಗಳು, ಅದರಲ್ಲೂ ಆಸ್ಪತ್ರೆಗಳ hazardous ಮತ್ತು ಇನ್‌ಫೆಕ್ಟೆಡ್ ಘನ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಒಂದು ವರ್ಷದ ಹಿಂದೆಯೇ ಈ ಬಗ್ಗೆ ಇಂಪ್ಲಿಮೆಂಟ್ ಮಾಡಬೇಕಾಗಿತ್ತು. ಆದರೆ ಈಗಲೂ ಅದು ಇಂಪ್ಲಿಮೆಂಟ್ ಆಗುತ್ತಿಲ್ಲ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಶೀಘ್ರ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೆ, ಸುಪ್ರೀಂಕೋರ್ಟ್ ಡಿಸಿಶನ್ ಆದಮೇಲೆ ಅದು ಮ್ಯಾನ್‌ಡೇಟರಿ ಆಗುತ್ತದೆ. ಎಲ್ಲಾ ನಗರಸಭೆಗಳಿಗೂ ನಾವು ಇದನ್ನು ಅನುಸರಿಸಿ ಕೆಲಸವನ್ನು ಮಾಡುತ್ತಿದ್ದೇವೆ. ಆದರೆ ಕೆಲವೊಂದು ಕಡೆಗಳಲ್ಲಿ ಭೂಮಿಯನ್ನು ತೆಗೆದುಕೊಳ್ಳುವುದರಲ್ಲಿ ತೊಂದರೆ ಆಗಿದೆಯಾದ್ದರಿಂದ ಇದನ್ನು ಇಂಪ್ಲಿಮೆಂಟ್ ಮಾಡಲು ತಡವಾಗಿದೆಯೇ ವಿನಃ ಬಾಕಿ ಪಟ್ಟಣಗಳಲ್ಲಿ ಕೆಲಸವನ್ನು ನಾವು ಆರಂಭ ಮಾಡಿದ್ದೇವೆ. ಇನ್ನು ಎರಡು ಮೂರು ತಿಂಗಳುಗಳಲ್ಲಿ ತ್ಯಾಜ್ಯ ವಸ್ತುಗಳನ್ನು ಹೊರಗೆ ಹಾಕುವ ಕಾರ್ಯಕ್ರಮ ಸಂಪೂರ್ಣವಾಗಿ ಮುಗಿಯುತ್ತದೆ.

ಶ್ರೀ ಎಸ್. ಅಂಗಾರ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನನಗೆ ಏಕೆ ತಪ್ಪು ಮಾಹಿತಿ ಕೊಟ್ಟಿದ್ದಾರೋ ಗೊತ್ತಾಗಲಿಲ್ಲ. ನನ್ನ ಸೂಳ್ಯ ತಾಲ್ಲೂಕಿನಲ್ಲಿ ನಗರ ಬಜೆಟ್ ವ್ಯಾಪ್ತಿಯಲ್ಲಿ ಒಳಚರಂಡಿ ಕಾಮಗಾರಿ ಪ್ರಾರಂಭವಾಗಿದೆ. ಶುದ್ಧೀಕರಣ ಘಟಕ ಮಾಡಬೇಕೆಂದರೆ ಸ್ಥಳ ಇಲ್ಲವಾಗಿದೆ. ಇದರ ಜೊತೆಗೆ ಘನ ತ್ಯಾಜ್ಯ ವಸ್ತುಗಳ ವಿಲೇವಾರಿ ಮಾಡುವುದಕ್ಕೂ ಸ್ಥಳ ಇಲ್ಲದಂತಾಗಿದೆ. ಆದರೆ ಅವರು ಈ ಕಾಮಗಾರಿಗಳನ್ನು ಮಾಡಿ ಎಂದು ಹೇಳುತ್ತಾರೆ. ಅದಕ್ಕೇ ನಾನು ಹೇಳಿದ್ದು ಈ ಭೂಮಿ ಖರೀದಿ ಸಂಬಂಧ ಸರ್ಕಾರದ ಎರಡು ರೀತಿಯ ಆದೇಶಗಳು ಇವೆ. 1996 ರಲ್ಲಿ ಕಂದಾಯ ಗ್ರಾಮಗಳು, ಹೋಬಳಿ ಕೇಂದ್ರದ ಸ್ಥಾನಗಳು, ಸಿ.ಎಂ.ಸಿ. ಪಟ್ಟಣ ಅಥವಾ 50 ಸಾವಿರ ಜನಸಂಖ್ಯೆ ಉಳ್ಳ ನಗರಸಭೆ, ಒಂದು ಲಕ್ಷ ಜನಸಂಖ್ಯೆ ಇರುವನಗರಸಭೆ, ಈ ಎಲ್ಲ ಪ್ರದೇಶಗಳಿಗೆ ನಿರ್ದಿಷ್ಟವಾಗಿರತಕ್ಕಂಥ ಭೂಮಿಗೆ ಒಂದು ಎಕರೆಗೆ ಇಷ್ಟು ಬೆಲೆಯನ್ನು ಕೊಡಬಹುದು ಎಂದು ಸರ್ಕಾರ ಆದೇಶ ಮಾಡಿದೆ. ಇದನ್ನು 1996ರಲ್ಲಿ ಮಾಡಿದೆ. ಇನ್ನು 2003ರಲ್ಲಿ ಏನು ಸಬ್–ರಿಜಿಸ್ಟ್ರಾರ್ ವ್ಯಾಲ್ಯುಯೇಶನ್ ಇದೆ ಆ ಪ್ರಕಾರ

ವ್ಯಾಲ್ಯುಯೇಶನ್ ಮಾಡಿ 20 ಪರ್ಸೆಂಟ್ ಜಾಸ್ತಿ ಮಾಡಿದರೆ ಒಂದು ಎಕರೆಗೆ 20 ಸಾವಿರ ಇದ್ದರೆ 20 ಪರ್ಸೆಂಟ್ ಜಾಸ್ತಿ ಮಾಡಿದರೂ ಕೂಡ ಕೇವಲ 24 ಸಾವಿರ ರೂಪಾಯಿಗಳು ಮಾತ್ರ ಆಗುವುದು. ಹಾಗಾದರೆ ಹಿಂದೆ 1996ರಲ್ಲಿ ಯಾವ ಆಧಾರದ ಮೇಲೆ ಭೂಮಿಯ ವ್ಯಾಲ್ಯೂ ನಿಗದಿ ಮಾಡಿದಿರಿ? ಇದರ ಬಗ್ಗೆ ಸ್ಪಷ್ಟವಾಗಿ ಹೇಳಿ. ಇನ್ನು ಸುಪ್ರೀಂಕೋರ್ಟ್ ಆದೇಶವಿದ್ದರೂ ಕೂಡ ಆ ಪ್ರಕಾರ ನಮ್ಮ ಕ್ಷೇತ್ರದಲ್ಲಿ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಅಗತ್ಯವಾದ ಕಾರ್ಯ ಜಾರಿಗೆ ಬರಲೇ ಇಲ್ಲ. ಇದಕ್ಕೂ ಸ್ಪಷ್ಟ ಉತ್ತರವನ್ನು ಕೊಡಬೇಕು.

ಶ್ರೀ ಎಸ್.ಆರ್. ಮೋರೆ : ಭೂಮಿಯನ್ನು ತೆಗೆದುಕೊಳ್ಳುವ ಪ್ರಕ್ರಿಯೆ ನಡೆಯುತ್ತಾ ಇದೆ. ಈಗಾಗಲೇ ರೈತರು ನಮಗೆ ಭೂಮಿಯನ್ನು ಕೊಟ್ಟುಬಿಟ್ಟಿದ್ದರೆ ಇಷ್ಟೊತ್ತಿಗೆ ಆ ಕೆಲಸ ಮುಗಿದುಹೋಗುತ್ತಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಚಿವರೆ, ಒಂದು ಎಕರೆಗೆ 50 ರಿಂದ 60 ಸಾವಿರ ರೂಪಾಯಿಗಳ ಬೆಲೆ ನಿಗದಿ ಮಾಡಿದರೆ ಭೂಮಿಯನ್ನು ಕೊಡುವುದಕ್ಕೆ ರೈತರು ರೆಡಿ ಇದ್ದಾರೆ. ಅದನ್ನು ಬಿಟ್ಟು ನೀವು 20 ಸಾವಿರ ರೂಪಾಯಿಗಳಿಗೆ ರೈತರಿಂದ ತೆಗೆದುಕೊಂಡರೆ ರೈತ ಹಾಳಾಗಿಹೋಗುತ್ತಾನೆ. ರೈತ ಹೇಗೆ ಬದುಕಲು ಸಾಧ್ಯವಾಗುತ್ತದೆ ಹೇಳಿ. ರೈತ 50 ಸಾವಿರ ರೂಪಾಯಿಗಳಿಗೆ ಒಂದು ಎಕರೆ ಜಮೀನನ್ನು ಬಿಟ್ಟುಕೊಡಲು ರೆಡಿ ಇರುವುದರಿಂದ ಆ ಬೆಲೆಗೆ ಸರ್ಕಾರ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಜಮೀನು ಕೂಡ ಇರುವುದರಿಂದ ಈ ಬಗ್ಗೆ ಪರಿಶೀಲನೆಯನ್ನು ಮಾಡಿ ಭೂಮಿಯನ್ನು ಖರೀದಿ ಮಾಡಲು ವ್ಯವಸ್ಥೆಯನ್ನು ಮಾಡಿ.

ಶ್ರೀ ಎಸ್.ಆರ್. ಮೋರೆ : ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಬಸವರಾಜ ಭೀಮಪ್ಪ ಹಿತ್ನಾಳ್.ಕೆ. ಇವರು ಕೇಳಿರುವ ಪ್ರಶ್ನೆಗೆ ಉತ್ತರ ಇನ್ನೂ ಬಂದಿರುವುದಿಲ್ಲವಾದ ಕಾರಣ ಮುಂದಿನ ಪ್ರಶ್ನೆಗೆ ಹೋಗೋಣ.

ಬೆಂಗಳೂರಿನ ರಾಜಾಜಿನಗರದ ಬಳಿ ನಿರ್ಮಿಸುತ್ತಿರುವ ಗ್ರೇಡ್ ಸಪರೇಟರ್ ಕಾಮಗಾರಿಯ ಪ್ರಗತಿ

22 (255) : ಶ್ರೀ ವಿ. ಸೋಮಣ್ಣ. ಎಂ.ಎಲ್.ಎ (ಬಿನ್ನಿಪೇಟೆ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ರಾಜಾಜಿನಗರದ ಬಳಿ ಗ್ರೇಡ್ ಸಪರೇಟರ್ ನಿರ್ಮಾಣದ ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ;

ಆ) ಇದರ ಅಂದಾಜು ವೆಚ್ಚವೆಷ್ಟು ಹಾಗೂ ಇದನ್ನು ಯಾವ ಅವಧಿಯೊಳಗೆ ಪೂರ್ಣಗೊಳಿಸಬೇಕಾಗಿತ್ತು;

ಇ) ಈ ಕಾಮಗಾರಿಯನ್ನು ಯಾರಿಗೆ ಗುತ್ತಿಗೆಗೆ ನೀಡಲಾಗಿದೆ;

ಈ) ಈ ಕಾಮಗಾರಿಗಾಗಿ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು;

ಉ) ಈ ಕಾಮಗಾರಿ ಕೆಲಸ ಮಂದಗತಿಯಲ್ಲಿ ಸಾಗುತ್ತಿರಲು ಕಾರಣಗಳೇನು;

ಊ) ಈ ಕಾಮಗಾರಿ ವಿಳಂಬದಿಂದ ವಾಹನ ಸಂಚಾರ ವ್ಯತ್ಯಯಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು; ಇತ್ತೀಚಿನ ಪ್ರಗತಿಯ ವಿವರಗಳನ್ನು ನೀಡುವುದು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಗುತ್ತಿಗೆ ಕರಾರಿನ ಪ್ರಕಾರ ದಿನಾಂಕ 10.10.2003 ರಿಂದ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

ಆ) ಸಿವಿಲ್ ಕಾಮಗಾರಿ ಮತ್ತು ಭೂಸ್ವಾಧೀನದ ವೆಚ್ಚ ರೂ. 11.84+4.00 = 15.84 ಕೋಟಿಗಳು.
ಕಾಮಗಾರಿಯ ಅವಧಿ 18 ತಿಂಗಳು.
ದಿನಾಂಕ 10.3.2005 ರೊಳಗೆ ಪೂರ್ಣಗೊಳಿಸಬೇಕಾಗಿದೆ.

ಇ) ಮೆ: ಎನ್.ಸಿ.ಸಿ.ಎಲ್–ಎಸ್.ಜೆ.ಆರ್.ಐ.ಪಿ.ಎಲ್ (ಜೆ.ವಿ) ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ.

ಈ) ಭೂಸ್ವಾಧೀನಕ್ಕಾಗಿ ರೂ. 400.00 ಲಕ್ಷಗಳು,
ಕಾಮಗಾರಿಗಾಗಿ ರೂ. 640.00 ಲಕ್ಷಗಳು
ಇಲ್ಲಿಯವರೆಗೆ ಒಟ್ಟು 1040.00 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಉ) ಭೂಸ್ವಾಧೀನ ಪ್ರಕ್ರಿಯೆ, ನೀರಿನ ಕೊಳವೆ, ವಿದ್ಯುಚ್ಛಕ್ತಿ ಕೇಬಲ್ ಇತ್ಯಾದಿಗಳನ್ನು ಸ್ಥಳಾಂತರಿಸಬೇಕಾದ ಕಾರಣ ಕಾಮಗಾರಿಗಳ ಪ್ರಗತಿ ಕುಂಠಿತವಾಗಿದೆ.

ಊ) ವಾಹನ ಸಂಚಾರಕ್ಕೆ ಪರ್ಯಾಯ ವ್ಯವಸ್ಥೆ ಮಾಡಿ ಕೊಡಲಾಗಿದೆ.

ಋ) ಮೆ–2005ರ ಒಳಗಡೆ ಕಾಮಗಾರಿ ಪೂರ್ಣಗೊಳಿಸಲು ಶ್ರಮಿಸಲಾಗುತ್ತದೆ. ಕಾಮಗಾರಿಯ ಪ್ರಗತಿಯ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಅನುಬಂಧ–

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ವಿ.ಸೋಮಣ್ಣ ರವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂ.255– ರಾಜಾಜಿನಗರ ಪ್ರವೇಶ ದ್ವಾರದಲ್ಲಿ ನಡೆಯುತ್ತಿರುವ ಗ್ರೇಡ್ ಸಪರೇಟರ್ ಕಾಮಗಾರಿಯ ಇತ್ತೀಚಿನ ಪ್ರಗತಿಯ ವಿವರಗಳು.

1.	ಗ್ರಾಮ ಮಂದಿರದ ಕಡೆಯ ರ್ಯಾಂಪ್	–	ಶೇ. 90 ರಷ್ಟು ಪೂರ್ಣಗೊಂಡಿದೆ
2.	ಸುಜಾತ ಚಿತ್ರಮಂದಿರದ ಕಡೆ ರ್ಯಾಂಪ್	–	ಶೇ. 40 ರಷ್ಟು ಪೂರ್ಣಗೊಂಡಿದೆ
3.	ಅಂಡರ್ ಪಾಸ್‌ನ ಮೇಲ್ಛಾವಣಿ ಭಾಗ	–	ಶೇ. 45 ರಷ್ಟು ಪೂರ್ಣಗೊಂಡಿದೆ
4.	ಮಳೆ ನೀರು ಚರಂಡಿಗೆ ಸೇತುವೆ ಭಾಗ–1	–	ಶೇ. 50 ರಷ್ಟು ಪೂರ್ಣಗೊಂಡಿದೆ
5.	ಮಳೆ ನೀರು ಚರಂಡಿಗೆ ಸೇತುವೆ ಭಾಗ–2	–	ಶೇ. 40 ರಷ್ಟು ಪೂರ್ಣಗೊಂಡಿದೆ
6.	ರಾಜಾಜಿನಗರ ಲಿಂಕ್ ರಸ್ತೆ ಅಗಲೀಕರಣ	–	ಶೇ. 40 ರಷ್ಟು ಪೂರ್ಣಗೊಂಡಿದೆ

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಇರತಕ್ಕಂಥ ಕಳಕಳಿಯ ಅರಿವೂ ಕೂಡ ನನಗೆ ಇದೆ. ಈಗಾಗಲೇ, ಟರ್ನ್ ಕೀ ಬೇಸಿಸ್‌ನಲ್ಲಿ ರಾಜಾಜಿನಗರ ಗ್ರೇಡ್ ಸಪರೇಟರ್‌ನ್ನು ಪ್ರಾರಂಭ ಮಾಡಿ ಅವರಿಗೆ ವರ್ಕ್ ಆರ್ಡರ್ ಕೊಡುವುದಕ್ಕೆ ಮುಂಚಿತವಾಗಿಯೇ ಅಲ್ಲಿಯ ಎಲ್ಲಾ ಪ್ರಕ್ರಿಯೆಗಳನ್ನು ಅಂದರೆ ಲ್ಯಾಂಡ್ ಅಕ್ವಿಸೆಶನ್ ಮತ್ತು ಎಲ್ಲವನ್ನೂ ಕೂಡ ಮುಗಿಸಿ 18 ತಿಂಗಳುಗಳಲ್ಲಿ ಗ್ರೇಡ್ ಸೆಪರೇಟರ್ ವರ್ಕ್ ಮುಗಿಸುವಂತೆ ಅವರಿಗೆ ಪಹಿಸಿಕೊಟ್ಟೆವು. 18 ತಿಂಗಳುಗಳ ಕಾಲವನ್ನು ಕೊಟ್ಟಾದ ಮೇಲೂ ಕೂಡ ಇನ್ನೂ ಅದು

ಕಂಪ್ಲೀಟ್ ಆಗಿಲ್ಲ. ನನಗೆ ಈಗ ಸನ್ಮಾನ್ಯ ಮುಖ್ಯಮಂತ್ರಿಗಳ ಮುಖೇನ ಅಧಿಕಾರಿಗಳು ಉತ್ತರ ಕೊಡಿಸಿದ್ದಾರೆ. 18 ತಿಂಗಳುಗಳ ಅವಧಿ ಮುಂದಿನ ತಿಂಗಳಿಗೆ ಮುಗಿಯುತ್ತಿದೆ. ಆದರೆ ಅಲ್ಲಿ ಶೇಕಡ 40 ರಷ್ಟೂ ಕಾಮಗಾರಿ ಕಾರ್ಯ ಮುಗಿದಿಲ್ಲ. ವಿಜಯನಗರದ ಕಡೆ, ಮಾಗಡಿ ರಸ್ತೆ ಕಡೆ ಬರತಕ್ಕಂಥ ಎಲ್ಲಾ ವಾಹನಗಳೂ ಕೂಡ ಅದೊಂದೇ ಮಾರ್ಗದಲ್ಲಿ ಹೋಗುತ್ತಿರುವುದರಿಂದ ಯಾವ ರೀತಿ ಅಲ್ಲಿ ಬೆಳಿಗ್ಗೆ ಹೊತ್ತು, ಸಾಯಂಕಾಲದ ಹೊತ್ತು, ಪೀಕ್ ಹವರ್ಸ್‌ನಲ್ಲಿ ಎಷ್ಟೊಂದು ತೊಂದರೆಯಾಗುತ್ತಿದೆಯೆಂದರೆ ವಾಹನಗಳನ್ನು ಅಲ್ಲಿ ಓಡಿಸುವುದೇ ಕಷ್ಟವಾಗಿದೆ. ಈ ಬಗ್ಗೆ ಅನೇಕ ಬಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ ಈ ಕಾಮಗಾರಿ ಕಾರ್ಯ ಆಮೆ ವೇಗದಲ್ಲಿ ನಡೆಯುತ್ತಿದೆ. ಇದು ಟರ್ನ್ ಕೀ ಬೇಸಿಸ್‌ನಲ್ಲಿ ಆಗುತ್ತಿರುವುದರಿಂದ ಅದಕ್ಕೆ ವೇಚ್ಚ ಕಡಿಮೆ ಮಾಡುವುದೇ ಆಗಲಿ, ಹೆಚ್ಚು ಮಾಡುವುದೇ ಆಗಲಿ ಆಗದಿರುವುದರಿಂದ ಗುತ್ತಿಗೆದಾರ ತನ್ನ ಅವಧಿಯಲ್ಲಿಯೇ ಮುಗಿಸಬೇಕಾಗಿರುವುದರಿಂದ ಅದನ್ನು ಆದಷ್ಟು ಬೇಗ ಮುಗಿಸಬೇಕು. ಆದರೆ ಇದು ಮುಗಿಯದಿರುವುದರಿಂದ ಅಲ್ಟರ್‌ನೇಟಿವ್ ಅರೇಂಜ್‌ಮೆಂಟ್ ಕೂಡ ಸರಿಯಾಗಿ ಇಲ್ಲದ ಕಾರಣ ಜನರು ವಾಹನಗಳನ್ನು ಓಡಿಸುವುದಕ್ಕೇ ತೊಳಲಾಡುತ್ತಿದ್ದಾರೆ. ನಾನು ಮಾನ್ಯ ಅಧ್ಯಕ್ಷರ ಮೂಲಕ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ ನನಗೆ ಉತ್ತರದಲ್ಲಿ ಅಲ್ಲಿ ಏನೇನು ಕೆಲಸಗಳಾಗಿವೆ ಎಂದು ಹೇಳಿದ್ದಾರೆ ಅದು ಸತ್ಯಕ್ಕೆ ದೂರವಾದುದಾಗಿದೆ. ಆದಕಾರಣ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತಿದ್ದೇನೆ, ಇದನ್ನು ಯಾರಿಗಾದರೂ ಜವಾಬ್ದಾರಿಯುತ ಮುಖ್ಯ ಅಭಿಯಂತರರನ್ನು ಅಥವಾ ಇನ್ನಿತರ ಅಧಿಕಾರಿಗಳನ್ನು ಆ ಕಾಮಗಾರಿ ಬೇಗ ಮುಗಿಸುವಂತೆ ನಿಗದಿ ಮಾಡಬೇಕು. ಇದನ್ನು ಮಾಡದಿದ್ದರೆ ಇನ್ನೂ ಎರಡು ವರ್ಷವಾದರೂ ಕೂಡ ರಾಜಾಜಿನಗರ ಗ್ರೇಡ್ ಸೆಪರೇಟರ್ ಕಾಮಗಾರಿ ಮುಗಿಯುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ತಕ್ಷಣವೇ ಕೆಲಸ ಪ್ರಾರಂಭ ಮಾಡಿರುವುದನ್ನು ಮುಗಿಸುವುದಕ್ಕೆ ಒಂದು ವೇಳೆಯನ್ನು ನಿಗದಿಪಡಿಸಬೇಕು. ಇದರ ಬಗ್ಗೆ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಆದ್ಯತೆ ಮೇರೆಗೆ ಗಮನಹರಿಸಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಗೆಳೆಯರಾದಂತಹ ವಿ. ಸೋಮಣ್ಣನವರು ರಾಜಾಜಿನಗರದ ಗ್ರೇಡ್ ಸಪರೇಟರ್ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಈಗಾಗಲೇ ನಾನು ನಿನ್ನೆ ಮತ್ತು ಈ ದಿನ ಮಹಾನಗರಪಾಲಿಕೆಯ ಕಮಿಷನರ್ ಜೊತೆ ಮತ್ತು ಇತರ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿದ್ದೇನೆ. ಈ ಒಂದು ಪೂರ್ಣ ಕೆಲಸಕ್ಕೆ ಕಾಮಗಾರಿ ಮತ್ತು ಭೂಸ್ವಾಧೀನ ವೆಚ್ಚ 11.84 ಹಾಗೂ 4.00 ಕೋಟಿ ರೂಪಾಯಿ ಇದೆ. ಈ ಕಾಮಗಾರಿಯನ್ನು ಅವರು ಹೇಳಿದ ಹಾಗೆ 18 ತಿಂಗಳಲ್ಲಿ ಮುಗಿಸಬೇಕಾಗಿತ್ತು. ಈಗ ಏನಾಗಿದೆ ಎಂದರೆ ಅಲ್ಲಿ ಕೆಲವು ಮಿಲ್ಸ್‌ಗಳು ಬರುತ್ತವೆ. ಮಿನರ್ವ ಮಿಲ್ ಹತ್ತಿರ ಜಾಗ ಬೇಕಾಗಿದ್ದು ಅದನ್ನು ಖರೀದಿ ಮಾಡಿದ್ದಾರೆ. ಅದರ ಬಗ್ಗೆ ನಗರಪಾಲಿಕೆಯವರು ಹಾಗೂ ಭೂಮಾಲೀಕರ ಬಗ್ಗೆ ನೆಗೋಷಿಯೇಷನ್ ಮಾಡಿ ಸಾರ್ವಜನಿಕರಿಗೆ ತೊಂದರೆಯಾಗಬಾರದು ಎಂದು ಅಲ್ಲಿ ಕೆಲವು ಚರ್ಚೆ ಮಾಡಿದ್ದಾರೆ. ಅಲ್ಲದೆ ಹೈಕೋರ್ಟ್‌ನ ಫೈನಲ್ ತೀರ್ಮಾನಕ್ಕೆ ಬದ್ಧಗೊಳಿಸಿ ಒಂದು ವರ್ಕಿಂಗ್ ಅರೇಂಜ್‌ಮೆಂಟ್ ಕೂಡ ನಾವು ಮಾಡಿದ್ದೇವೆ. ಅದಕ್ಕೆ ಸ್ವಲ್ಪ ತಡವಾಗಿದೆ. ಈಗ ಬೆಂಗಳೂರು ನಗರದಲ್ಲಿ ಜನಸಂಖ್ಯೆ ದಿನೇದಿನೇ ಬೆಳೆಯುತ್ತಿದೆ. ಎಲ್ಲೆಲ್ಲಿ ಫ್ಲೈಓವರ್ ಇದೆ ಅದನ್ನು ಮುಗಿಸಬೇಕೆಂದು ಸರ್ಕಾರದ ದೃಢ ನಿರ್ಧಾರ ಇದೆ. ಮಾನ್ಯ

ಸೋಮಣ್ಣನವರು ಹೇಳಿದ ಹಾಗೆ ಅಧಿಕಾರಿಗಳು ಏನು ಉತ್ತರವನ್ನು ಹೇಳತಕ್ಕಂಥ ರೀತಿಯಲ್ಲಿ ಮಿಸ್‌ಗೈಡ್ ಮಾಡಿದ್ದಾರೆ. ಕೆಲಸ ಆಗುತ್ತಿಲ್ಲ, ಅವರು ಮೇ ತಿಂಗಳ ಒಳಗೆ ಕೆಲಸವನ್ನು ಮಾಡುತ್ತೇವೆಂದು ಖಡಾಖಂಡಿತವಾಗಿ ಹೇಳಿದ್ದಾರೆ ಅದನ್ನೇ ನಾನು ಉತ್ತರದಲ್ಲಿ ಹೇಳಿದ್ದೇನೆ. ಆದರೂ ಕೆಲಸವನ್ನು ಮೇ ತಿಂಗಳ ಒಳಗೆ ಮುಗಿಸುತ್ತೇವೆಂದು ಹೇಳಿದರೂ ಕೂಡ ತಮಗೆ ಏನಾದರೂ ಸಂಶಯವಿದ್ದರೆ, ಈ ಸದನ ಮುಗಿದಮೇಲೆ ನಾನು ಮತ್ತು ಸೋಮಣ್ಣನವರು ಇಬ್ಬರೂ ಸೇರಿ ಕಮಿಷನರ್ ಜೊತೆ, ಇದನ್ನು ಯಾವರೀತಿಯಾಗಿ ಮಾಡುತ್ತಿದ್ದಾರೆ ಹಾಗೂ ಎಲ್ಲಿಯವರೆಗೆ ಪ್ರಗತಿಯಾಗಿದೆ, ಅದಕ್ಕೆ ಸ್ಪೀಡ್‌ಅಪ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ತಮ್ಮ ಮೂಲಕ ನಾನು ಆಶ್ವಾಸನೆ ಕೊಡುತ್ತೇನೆ.

ಶ್ರೀ ಆರ್. ದಿನೇಶ್ ಗುಂಡುರಾವ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸೋಮಣ್ಣನವರು ಕೇಳಿರುವಂತಹ ಪ್ರಶ್ನೆ ರಾಜಾಜಿನಗರ ಗ್ರೇಡ್ ಸಪರೇಟರ್ ಕಾಮಗಾರಿ ಕೆಲಸ ಒಂದು ಕಡೆ ನಿಧಾನಗತಿಯಲ್ಲಿ ನಡೆಯುತ್ತಿದೆ. ನಾನು ಈ ಸಭೆಯ ಮುಖಾಂತರ ಸಲಹೆ ಕೊಡುವುದೇನೆಂದರೆ ರಾಜಾಜಿನಗರ ಎಂಟ್ರೆನ್ಸ್ ಕಾರಿಡಾರ್ ರಸ್ತೆ ಏನಿದೆ, ನಾವು ರೈಲ್ವೆ ನಿಲ್ದಾಣದಿಂದ ಬರತಕ್ಕಂಥ ಒಂದು ಮಾರ್ಗ ಈ ಒಂದು ಗ್ರೇಡ್ ಸಪರೇಟರ್ ಕಾಮಗಾರಿ ಆದಮೇಲೆ ಮುಂದೆ ಹೋದಾಗ ಟ್ರಾಫಿಕ್ ಸಾಂದ್ರತೆ ಏನಿದೆ, ಓಕಳಿಪುರ ಮತ್ತು ರೈಲ್ವೆ ಸ್ಟೇಷನ್‌ನಿಂದ ವಾಟಾಳ್ ನಾಗರಾಜ್ ರಸ್ತೆ, ಆ ರಸ್ತೆಗಳಲ್ಲಿ ಇವತ್ತು ಟ್ರಾಫಿಲ್ ಮೂವ್‌ಮೆಂಟ್ ಬಹಳ ತೊಂದರೆ ಇದೆ. ಅದರ ಬಗ್ಗೆ ಮಹಾನಗರ ಪಾಲಿಕೆಯವರು ಮತ್ತು ರೈಲ್ವೆ ಇಲಾಖೆಯವರ ಜೊತೆ ಚರ್ಚೆ ಮಾಡಿದ್ದಾರೆ. ಆ ರಸ್ತೆಯನ್ನೂ ಕೂಡ ನೇರವಾಗಿ ತೆಗೆದುಕೊಳ್ಳಬೇಕೆಂದು ಪ್ರಪೋಸಲ್ ಇದೆ. ಆದುದರಿಂದ ನನ್ನ ಸಲಹೆ ಏನೆಂದರೆ ಗ್ರೇಡ್ ಸಪರೇಟರ್ ರಸ್ತೆ ಜೊತೆಯಲ್ಲಿ ಅದನ್ನು ಕೂಡ ಪ್ರಾರಂಭ ಮಾಡಿಸಿದರೆ ಈ ಒಂದು ರಸ್ತೆ ಮುಗಿದನಂತರ ಅದು ಬಹಳ ಅನುಕೂಲವಾಗುತ್ತದೆ. ಏಕೆಂದರೆ ವಿಜಯನಗರ, ಬಸವೇಶ್ವರ ನಗರ ಹಾಗೂ ಬಿನ್ನಿಪೇಟೆ ಜನರೆಲ್ಲಾ ಈ ಒಂದು ರಸ್ತೆಯಲ್ಲಿ ಬೆಂಗಳೂರು ನಗರ ಮಧ್ಯಭಾಗಕ್ಕೆ ಬರುತ್ತಾರೆ. ಆದುದರಿಂದ ಇದನ್ನು ನೇರವಾಗಿ ಮಾಡಬೇಕೆಂದು ಇದ್ದು, ಇದರ ಬಗ್ಗೆ ರೈಲ್ವೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ರೈಲ್ವೆ ಅಧಿಕಾರಿಗಳು ಭೂಮಿಯನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಅದನ್ನು ಅವರು ಕಾರ್ಯಗತ ಮಾಡುವುದಕ್ಕೆ ಈ ಸಮಯದಲ್ಲೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಈ ಒಂದು ಪ್ರಶ್ನೆಗೆ ಉಪಪ್ರಶ್ನೆಯ ಮೂಲಕ ಮಾನ್ಯ ದಿನೇಶ್ ಗುಂಡುರಾವ್ ಅವರು ಪ್ರಶ್ನೆಯನ್ನು ಕೇಳಿದ್ದಾರೆ. ಈಗಾಗಲೇ ನಾವು ಕೇಂದ್ರದ ರೈಲ್ವೆ ಸಚಿವರ ಜೊತೆ ಮಾತನಾಡಿದ್ದೇವೆ. ಅವರು ಕೂಡ ಬಂದಾಗ ಇದರ ಬಗ್ಗೆ ಅವರಿಗೆ ಗೊತ್ತಾಗಿದೆ. ಅದರ ಬಗ್ಗೆ ನಾನು ಆ ಏರಿಯಾದಲ್ಲಿ ಹೋಗತಕ್ಕಂಥ ಕಾಲದಲ್ಲಿ ಮಾನ್ಯ ಸೋಮಣ್ಣನವರ ಜೊತೆ ಗ್ರೇಡ್ ಸಪರೇಟರ್ ನೋಡತಕ್ಕಂಥ ಸಂದರ್ಭದಲ್ಲಿ ಇನ್ಸ್‌ಪೆಕ್ಷನ್ ಹೋಗುತ್ತೇನೆ. ಆಗ ಮಾನ್ಯ ದಿನೇಶ್ ಗುಂಡುರಾವ್ ಅವರನ್ನು ಕರೆದುಕೊಂಡು ಹೋಗಿ ಎಲ್ಲಿ ಏನಾಗಬೇಕಾಗಿದೆ ಎನ್ನುವುದನ್ನು ನೋಡಿ ಅದರ ಬಗ್ಗೆ ಸ್ಥಳದಲ್ಲೇ ಆದೇಶವನ್ನು ಕೊಡುತ್ತೇನೆ.

ಅರ್ಕಾವತಿ ಬಡಾವಣೆಯ ಭೂಸ್ವಾಧೀನ

23 (115) : ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) ಮಾನ್ಯ ಪಿ.ಸಿ ಮೋಹನ್(ಚಿಕ್ಕಪೇಟೆ) ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅರ್ಕಾವತಿ ಬಡಾವಣೆಗೆಂದು ಎಷ್ಟು ಎಕರೆ ಜಮೀನನ್ನು ಭೂಸ್ವಾಧೀಣ ಮಾಡಿಕೊಂಡಿದೆ;

ಆ) ಈ ಬಡಾವಣೆಯಲ್ಲಿ ಎಷ್ಟು ನಿವೇಶನಗಳನ್ನು ಹಂಚಲಾಗುವುದು ಮತ್ತು ನಿವೇಶನ ಹಂಚುವ ದಿನಾಂಕವನ್ನು ಸರ್ಕಾರವು ನಿಗಧಿಪಡಿಸಿದೆಯೇ;

ಇ) ಈ ಭೂಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ ಎಷ್ಟು ಎಕರೆ ಜಮೀನನ್ನು ಡಿನೋಟಿಫೈ ಮಾಡಲಾಗಿದೆ;

ಈ) ಈ ಜಮೀನನ್ನು ಡಿನೋಟಿಫೈ ಮಾಡಲು ಕಾರಣವೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) 2,750 ಎಕರೆ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಿ, ಇಲ್ಲಿಯವರೆಗೆ 1224 ಎಕರೆ 06 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದೆ. ಉಳಿದ ಜಮೀನಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

ಆ) 20,000 ನಿವೇಶನಗಳು.

ದಿನಾಂಕ 15.1.2005ನ್ನು ನಿವೇಶನಗಳ ಹಂಚಿಕೆ ಮಾಡಲು ನಿಗದಿಪಡಿಸಲಾಗಿತ್ತು. ಸದರಿ ಬಡಾವಣೆಗೆ ಭೂಸ್ವಾಧೀನಪಡಿಸಿಕೊಂಡ ಜಮೀನುಗಳ ಬಗ್ಗೆ ಉದ್ಭವವಾದ ಕಾನೂನಿನ ತೊಡಕಿನಿಂದಾಗಿ ನಿವೇಶನ ಹಂಚಿಕೆ ಪ್ರಕ್ರಿಯೆಯನ್ನು ಮುಂದೂಡಲಾಗಿದೆ.

ಇ) ಅರ್ಕಾವತಿ ಬಡಾವಣೆಗಾಗಿ ಅಂತಿಮ ಅಧಿಸೂಚನೆಯಾಗಿರುವ 2750 ಎಕರೆ ಭೂಮಿಯ ಪೈಕಿ ಯಾವುದೇ ಜಮೀನನ್ನು ಡಿನೋಟಿಫಿಕೇಷನ್ ಮಾಡಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಪಿ.ಸಿ ಮೋಹನ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಓದಗಿಸಲಾಗಿದೆ. ಅದರಲ್ಲಿ ಅರ್ಕಾವತಿ ಬಡಾವಣೆ ನಿವೇಶನಕ್ಕೆ ಎಷ್ಟು ಜನ ಅರ್ಜಿ ಸಲ್ಲಿಸಿದ್ದರು ಎನ್ನುವುದು ಒಂದು ಪ್ರಶ್ನೆ. ಅರ್ಜಿ ಸಲ್ಲಿಸಲು ಕಡೆಯ ದಿನಾಂಕ ಯಾವುದು ಆಗಿತ್ತು? ಮತ್ತೆ ಉತ್ತರದಲ್ಲಿ 20,000 ನಿವೇಶನಗಳನ್ನು ಹಂಚುವುದಕ್ಕೆ 2,750 ಎಕರೆ ಜಮೀನು ಬೇಕೆಂದು ಹೇಳಿದ್ದಾರೆ. ಅದರಲ್ಲಿ ಇದುವರೆಗೆ 1,224 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಹಾಗೂ ಉಳಿದ ಜಮೀನಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿದೆ ಎಂದು ಹೇಳಿದ್ದಾರೆ. ಇದನ್ನು ಯಾವಾಗ ಸ್ವಾಧೀನಪಡಿಸಿಕೊಳ್ಳುತ್ತಾರೆ ಹಾಗೂ ನಿವೇಶನಗಳನ್ನು ಯಾವಾಗ ಕೊಡುತ್ತಾರೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಅರ್ಕಾವತಿ ಬಡಾವಣೆ ಸೈಟ್ ಹಂಚಿತಕ್ಕಂಥ ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಮತ್ತು ಇದಕ್ಕೆ ಯಾವ ದಿನಾಂಕದಿಂದ ಯಾವ ದಿನಾಂಕದಲ್ಲಿ ಸಲ್ಲಿಸಬೇಕೆಂದು ಹೇಳಿ ಕೊನೇ ದಿನಾಂಕವನ್ನೂ ಸಹ ನಿಗದಿಪಡಿಸಲಾಗಿದೆ. ಈಗ ಬಿಡಿಎ ಸ್ವಾಧೀನದಲ್ಲಿ 1,224 ಎಕರೆ ಜಮೀನು ಲಭ್ಯವಾಗಿದೆ. ಇಲ್ಲಿ 10,600 ಸೈಟುಗಳನ್ನು

ಹಂಚಬೇಕೆಂದು ಇದೆ. ನಾನು ಪ್ರಪ್ರಥಮವಾಗಿ ಐದು ತಿಂಗಳ ಹಿಂದೆ ಬಿಡಿಎ ಆಫೀಸಿಗೆ ಹೋಗಿ ಅಲ್ಲಿ ಅರ್ಕಾವತಿ ಬಡಾವಣೆಯಿಂದ ಬೆಂಗಳೂರು ನಿವಾಸಿಗಳಿಗೆ ಸೈಟ್ ಹಂಚಿಕೆ ಆಗತಕ್ಕಂಥ ವಿಚಾರದಲ್ಲಿ ನೋಡಿದಾಗ 922 ಕೋಟಿ ರೂಪಾಯಿ ಇದರ ಸಲುವಾಗಿ ಡೆಪಾಸಿಟ್ ಕೂಡ ಬಂದಿದೆ. ಮತ್ತು ನಿವೇಶನ ಬೇಕೆಂದು 2 ಲಕ್ಷ 35 ಸಾವಿರ ಅರ್ಜಿಗಳೂ ಕೂಡ ಬಂದಿದ್ದು, ಅರ್ಜಿಗಳನ್ನು ಜೂನ್ 2004ರಲ್ಲಿ ನಿವೇಶನಕ್ಕೆಂದು ಕಾಲ್ ಮಾಡಿದ್ದು, ಅದರಿಂದ 935 ಕೋಟಿ ರೂ. ಠೇವಣಿ ಕೂಡ ಸಂಗ್ರಹವಾಗಿದೆ. ಈ ವಿಚಾರವಾಗಿ ನಾವು ಜನವರಿ 15 ರಂದು ಸೈಟ್ ಹಂಚಿತಕ್ಕಂಥ ಕಾರ್ಯಕ್ರಮ ಇತ್ತು. ಆದರೆ ಭೂಸ್ವಾಧೀನ ಪಡಿಸಿಕೊಳ್ಳುವ ವಿಚಾರದಲ್ಲಿ ಇವತ್ತು ಕೇಸುಗಳು ಹೈಕೋರ್ಟ್‌ನ ಮುಂದೆ ಇವೆ. 27 ರಂದು ತೀರ್ಪು ಕೊಡುವ ಹಂತದಲ್ಲಿದೆ. ಅದು ಆದಮೇಲೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಅರ್ಕಾವತಿ ಬಡಾವಣೆಗೆ ನಾನು ಹೋಗಿ ಬಂದು ಅಲ್ಲಿನ ಕರ್ಮಕಥೆಯನ್ನು ನಾನು ಹೇಳಿದ್ದೆ. ಎ ತು ಪ್ರಮುಖವಾದ ವಿಷಯ. ಒಂದು ಈಗಾಗಲೇ ಅಲ್ಲಿ ಮನೆ ಕಟ್ಟಿಕೊಂಡು 30--40 ವರ್ಷಗಳಿಂದ ರೈತರ್ಯಾರಿದ್ದಾರೆ ಅವರಿಗೆ ತೊಂದರೆ ಆಗದ ಹಾಗೆ ನೋಡಿಕೊಳ್ಳುತ್ತೀರಾ? ಪಕ್ಕದಲ್ಲಿ ಖಾಲಿ ಸೈಟ್ ಡಿ-ನೋಟಿಫೈ ಆಗಿದೆ. ಮಧ್ಯದಲ್ಲಿ ಇರುವವರನ್ನು ಅಕ್ವೈರ್ ಮಾಡಿಕೊಂಡಿದ್ದೀರಿ. ಆ ಕಡೆ ಇರುವಂತಹ ಬೆಲ್ಡರ್ಸ್ ಡಿ-ನೋಟಿಫೈ ಆಗಿದೆ. ಇಂತಹ ನೂರಾರು ಉದಾಹರಣೆ ಕೊಡುತ್ತೇನೆ. ನಾನು ಆ ಸ್ಪಾಟ್‌ಗೆ ಹೋಗಿ ಬಂದಿದ್ದೇನೆ. ಇನ್ನು ಎರಡನೆಯದಾಗಿ ಅಲ್ಲಿರುವಂತಹ ಬಡವರು ಯಾರಿದ್ದಾರೆ, ಮನೆ ಯಾರು ಕಟ್ಟಿಕೊಂಡಿದ್ದಾರೆ ಅವರಿಗೆ ತೊಂದರೆ ಆಗದಂತೆ ನೋಡಿಕೊಳ್ಳುತ್ತೀರಾ? ನೀವು 2,750 ಎಕರೆ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಿದ್ದರೆ ಈಗ ಕೇವಲ ಜಮೀನು ವಶಕ್ಕೆ ತೆಗೆದುಕೊಂಡಿರುವುದು 1,224 ಎಕರೆ 6 ಗುಂಟೆ ಮಾತ್ರ. ದಯಮಾಡಿ ಏಕೆ ನಿಮ್ಮ ಅಧಿಕಾರಿಗಳು ಡಿಲೇ ಮಾಡುತ್ತಿದ್ದಾರೆ. ಮೂರನೆಯದಾಗಿ ನೂರಾರು ಎಕರೆ ಬೆಲ್ಡರ್ಸ್‌ಗೆ ಸೆಕ್ಷನ್ 4(1) ಆದಮೇಲೆ ಅವರಿಗೆ ವಾಪಸ್ಸು ಜಮೀನು ಕೊಟ್ಟರು, ಅಂತಹ ಹತ್ತಾರು ಉದಾಹರಣೆಗಳನ್ನು ನಾನು ತಂದು ಕೊಡುತ್ತೇನೆ. ಅವರಿಂದ ಜಮೀನು ವಾಪಸ್ಸು ಪಡೆಯುತ್ತೀರಾ? ಇವತ್ತು ಟೈಮ್ಸ್ ಆಫ್ ಇಂಡಿಯಾದಲ್ಲಿ ಫ್ರೆಂಟ್ ಪೇಜ್‌ನಲ್ಲಿ ಈಗಾಗಲೇ 20,000 ಸೈಟುಗಳು ಫೈನಲೈಜ್ ಆಗಿದೆ ಎಂದು ಬಂದಿದೆ, ಉಳಿದಂತಹ ಅರ್ಜಿದಾರರಿಗೆ ದುಡ್ಡು ವಾಪಸ್ಸು ಕೊಡುತ್ತೇವೆಂದು ಇದೆ. ಅದಕ್ಕೆ ಮಾರ್ಗಸೂಚಿ ಏನು? ನಿಮಗೆ ನೂರು ಉದಾಹರಣೆ ಕೊಡುತ್ತೇನೆ. ಈಗಾಗಲೇ ಯಾರ್ಯಾರಿಗೆ ಸೈಟ್ ಮಂಜೂರಾಗಿದೆ ಎಂದು ನಾನು ನಿಮಗೆ ಪಟ್ಟಿಯನ್ನು ಕೊಡುತ್ತೇನೆ. ಬಿಡಿಎನಲ್ಲಿ ಕೆಲವು ಅಧಿಕಾರಿಗಳು ಒಳ ವ್ಯವಹಾರ ಮಾಡಿಕೊಂಡು ಇಂತಹವರಿಗೆ ಎಂದು ಪಟ್ಟಿ ಮಾಡಿ ಇಟ್ಟರೆ ಬಡವರ ಗತಿಯೇನು? ಅದಕ್ಕೆ ನಿಮ್ಮಲ್ಲಿ ವಿನಂತಿ ಮಾಡುತ್ತೇನೆ, ನಿಮ್ಮ ಪ್ರಕಾರ ತಡೆಯಾಜ್ಞೆಯಾಗಿದೆ, ಸೈಟ್ ಕೊಡುವುದನ್ನು ತಡೆ ಮಾಡಿದ್ದೇವೆಂದು ಹೇಳಿದ್ದೀರಿ. ಇನ್ನೊಂದು ಕಡೆ 20,000 ಸೈಟ್ ಕೊಟ್ಟು ಉಳಿದವರಿಗೆ ದುಡ್ಡು ವಾಪಸ್ಸು ಕೊಡುತ್ತೇವೆಂದು ಹೇಳುತ್ತೀರಿ. ಮತ್ತೊಂದು ಕಡೆ ಒಳ ವ್ಯವಹಾರ ಕುದುರುತ್ತಿದೆ. ಅದರ ಬಗ್ಗೆ ತಾವೇ ಏನಾದರೂ ಮಾಡಿ ಅದನ್ನು ಸರಿಪಡಿಸಿ. ಡಿ-ನೋಟಿಫೈ ಆಗಿರುವುದನ್ನು ವಾಪಸ್ಸು ತೆಗೆದುಕೊಂಡು ಬಡವರಿಗೆ ಸೈಟ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ? ಲಕ್ಷಾಂತರ ಜನ

ಅರ್ಜಿ ಹಾಕಿಕೊಂಡು ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ನಿಮ್ಮ ಕಾಲದಲ್ಲಿಯಾದರೂ ಪ್ರತಿಯೊಬ್ಬರಿಗೂ ಸೈಟ್ ಸಿಗುವಂತಹ ವ್ಯವಸ್ಥೆಯನ್ನು ಮಾಡುತ್ತೀರಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮುಖ್ಯವಾದ ಇನ್ನೊಂದು ವಿಚಾರ ಇದೆ. ಇಲ್ಲಿ 2,750 ಎಕರೆ ಜಮೀನನ್ನು ಸ್ವಾಧೀನ ಮಾಡಿಕೊಂಡಿರುವಂತಹ ಭೂಮಿಯನ್ನು ಡಿನೋಟಿಫೈ ಮಾಡಲಾಗಿದೆ, ಎಂದು ಹೇಳತಕ್ಕಂಥಾದ್ದು. ಇಲ್ಲಿ ನೋಟಿಫಿಕೇಶನ್ ಮಾಡುವುದಕ್ಕೆ ಮೊದಲೇ, ವಾಸ್ತವವಾಗಿ ಯಾವ ಭೂಮಿಯನ್ನು ನೋಟಿಫೈ ಮಾಡಬೇಕಾಗಿತ್ತೋ, ಅದನ್ನು ಮಾಡದೇ, ಯಾವ ಭೂಮಿಯನ್ನು ನೋಟಿಫೈ ಮಾಡಬಾರದಾಗಿತ್ತೊ, ಅದನ್ನು ಮಾಡಿರುವಂಥಾದ್ದು ಬಹಳ ಮುಖ್ಯವಾದಂತಹ ಅಂಶವಾಗಿದೆ. ಈ ವಿಚಾರವನ್ನು ಹಿಂದೆ ನಾವೇ ಚರ್ಚೆ ಮಾಡಿದ್ದೇವೆ. ಅಂದರೆ ವಾಸ್ತವ ಏನಾಗಿದೆಯೆಂದರೆ ಡೆವಲಪ್ಡ್ ಆಗಿರುವಂತಹ ಕೆಲವು ಪ್ರದೇಶವನ್ನು ಮತ್ತು ಕಟ್ಟಡಗಳನ್ನು ಕಟ್ಟಿರುವಂಥಾದ್ದನ್ನು ನೋಟಿಫೈ ಮಾಡಿದ್ದಾರೆ, ಏನು ಕಟ್ಟದೇ ಇರುವಂತಹ ನೂರಾರು ಎಕರೆಗಳನ್ನು ನೋಟಿಫೈ ಮಾಡಲಿಲ್ಲ. ಈ ನೋಟಿಫೈ ಮಾಡುವುದಕ್ಕೆ ಅರ್ಹತೆ ಇದ್ದು, ನೋಟಿಫೈ ಮಾಡದೇ ಇರುವಂತಹ ಜಮೀನು ಎಷ್ಟು ಎಂಬುದನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು, ಮತ್ತು ಇದು ಯಾರದೆಂಬುದನ್ನು ಹೇಳಬೇಕು. ಏಕೆಂದರೆ ನಮಗೆ ಗೊತ್ತಿರುವ ಮಾಹಿತಿಯ ಪ್ರಕಾರ ಪ್ರಭಾವಿ ವ್ಯಕ್ತಿಯೊಬ್ಬರ ಜಮೀನು ನೋಟಿಫೈ ಮಾಡದೇ ಬಿಟ್ಟು, ಈಗ ಅವರೇ ಖಾಸಗಿಯಾಗಿ ನಿವೇಶನಗಳನ್ನು ಮಾಡಿ 20 ಲಕ್ಷ, 30 ಲಕ್ಷ ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ಇದು ಹೇಗೆ ಆಯಿತು? ಹೇಗೆ ಸಾಧ್ಯವಾಯಿತು? ಪ್ರಭಾವಿ ವ್ಯಕ್ತಿಗಳ ಭೂಮಿಯಾದರೆ ಬಿಡುವುದು, ಬಡವರು, ಪಾಪದವರದ್ದು ಆದರೆ, ಭೂಮಿಯನ್ನು ನೋಟಿಫೈ ಮಾಡುವಂಥಾದ್ದು. ಇದಕ್ಕೆ ಸರ್ಕಾರದಿಂದ ಸ್ಪಷ್ಟವಾದಂತಹ ಉತ್ತರ ಕೊಡಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, ನಾನು ಇದೇ ವಿಷಯವನ್ನು ಮುಂದುವರೆಸುತ್ತಾ, ನಮಗೆ ತಿಳಿದ ಸುದ್ದಿಯ ಪ್ರಕಾರ ಮಧ್ಯೆ ಇರುವಂತಹ ಜಾಗವನ್ನು ಡಿನೋಟಿಫೈ ಮಾಡಿದ್ದಾರೆಂದು ಇನೆ. ಆದರೆ ಸರ್ಕಾರ ಡಿ ನೋಟಿಫೈ ಮಾಡಿಲ್ಲವೆಂದು ಹೇಳಿದ್ದಾರೆ. ಒಂದು ವೇಳೆ ಡಿ ನೋಟಿಫೈ ಮಾಡಿದ್ದರೆ ಅಕ್ವಿಜೇಷನ್ ಪ್ರೊಸೀಡಿಂಗ್ಸ್ ಇನಿಶೀಯೇಟ್ ಮಾಡಿಲ್ಲ. ಮಧ್ಯೆ ಇರುವಂಥಾದ್ದನ್ನು ಬಿಟ್ಟು ಸುತ್ತ ಇರುವಂಥಾದ್ದು ಅಕ್ವಾಯರ್ ಮಾಡುವಂತಹ ಪರಿಸ್ಥಿತಿ ಹೇಗೆ ಉದ್ಭವವಾಯಿತು? ಇದಕ್ಕೆ ಸರ್ಕಾರ ಉತ್ತರವನ್ನು ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಆರ್. ಅಶೋಕ್‌ರವರ ಪರವಾಗಿ ನಾನು ಮಾತನಾಡುತ್ತೇನೆ. ಈ ಅರ್ಕಾವತಿ ಬಡಾವಣೆಯು ಅತೀ ಪ್ರತಿಷ್ಠಿತವಾದಂಥಾದ್ದು ಇದರ ಬಗ್ಗೆ ಚರ್ಚೆ ಮೊದಲಿನಿಂದಲೂ ನಡೆಯುತ್ತಿದೆ, ಮತ್ತೆ ಬಹಳ ರಾಜಕೀಯವಾಗಿ ಪ್ರತಿಷ್ಠಿತರ ಮಧ್ಯೆ ಇರುವಂತಹ ಜಗ್ಗಾಟ ಸಹ ಇದೆ. ಇದು ನಮಗೆಲ್ಲರಿಗೂ ಗೊತ್ತೇ ಇದೆ. ಪತ್ರಗಳ ವ್ಯವಹಾರಗಳು ನಡೆದಿರುವಂಥಾದ್ದು, ಇತ್ಯಾದಿಗಳೆಲ್ಲಾ. ಇದರಲ್ಲಿ ಬಹಳ ಮುಖ್ಯವಾಗಿ ಈಗಾಗಲೇ ಈ ವಿಷಯವೂ ಪ್ರಸ್ತಾಪವಾಗಿದೆ. ಇಲ್ಲಿ ಯಾರು ಮನೆಗಳನ್ನು ಅಲ್ಲಿ ಕಟ್ಟಿಕೊಂಡಿದ್ದಾರೋ, ಅವರಿಗೆ ಯಾವುದೇ ರೀತಿಯಲ್ಲೂ ತೊಂದರೆಯಾಗಬಾರದು. ಸರ್ಕಾರವೂ ಸಹ ಅವರು ಕಟ್ಟಿಕೊಂಡಿರುವಂತಹ ಮನೆಗಳನ್ನು ಕೆಡವಬಾರದೆಂದು ನಾನು ಇದು ಈಗಾಗಲೇ ಪ್ರಸ್ತಾಪವಾಗಿದ್ದರೂ, ನಾನು ಇದನ್ನು

ಮತ್ತೊಮ್ಮೆ ಹೇಳಬಯಸುತ್ತೇನೆ. ಇನ್ನು 20,000 ನಿವೇಶನಗಳನ್ನು ಈ 2,750 ಎಕರೆ ಪ್ರದೇಶದಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ವಸ್ತುಸ್ಥಿತಿ ಇದು ಸಾಧ್ಯವೋ? ಹೇಗೆ? ಏಕೆಂದರೆ ಸುಮಾರು 140 ಎಕರೆ ಬಿ.ಇ.ಎಂ.ಎಲ್. ಸಂಘ ತನ್ನದೆಂದು ಹೇಳಿಕೊಂಡಿದೆ. ಇನ್ನು 131 ಎಕರೆ ಮಾನ್ಯತಾ ಪ್ರಮೋಟ್ಸ್‌ನವರು ತಮ್ಮದೆಂದು ಹೇಳಿಕೊಂಡಿದ್ದಾರೆ. ಈಗ 140 ಎಕರೆ ಮತ್ತು 131 ಎಕರೆ, ಇಷ್ಟು ಪ್ರದೇಶವನ್ನು ತಮ್ಮದು ಎಂಬ ಹಕ್ಕನ್ನು ಸ್ಥಾಪಿಸಿಕೊಳ್ಳಲು ಬಯಸುತ್ತಿದ್ದಾರೆ. ಲ್ಲದರ ಜೊತೆಯಲ್ಲಿ ಈಗಾಗಲೇ 800 ಸೈಟ್‌ಗಳಲ್ಲಿ ಬಡವರು ಅಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಹಾಗಾಗಿ ಇಲ್ಲಿ 20,000 ಸೈಟ್‌ಗಳನ್ನು ವ್ಯವಹಾರಿಕವಾಗಿ ಕೊಡುವುದಕ್ಕೆ ಸಾಧ್ಯವಿದೆಯೋ, ಅಥವಾ ಸರ್ಕಾರ ಪ್ರಚಾರವನ್ನು ಗಿಟ್ಟಿಸಿಕೊಳ್ಳುವ ಸಲುವಾಗಿ, ಈ 20,000 ನಿವೇಶನವನ್ನು ಕೊಡುತ್ತೇವೆಂದು, ಹೇಳಿದೆಯೋ, ಹೇಗೆ ಎಂಬ ಬಗ್ಗೆ ವಿವರಣೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು, ಮತ್ತು ಮಾನ್ಯ ಜಿ.ವಿ. ಶ್ರೀರಾರೆಡ್ಡಿಯವರು, ಮತ್ತು ಮಾನ್ಯ ವಿಶ್ವೇಶ್ವರ ಹೆಗಡೆಯವರು ಹಾಗೂ ಮತ್ತಿತರರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಅರ್ಕಾವತಿ ಲೇ ಔಟ್ ನಮಗೆಲ್ಲಾ ಗೊತ್ತಿರುವ ಹಾಗೆ ಬೆಂಗಳೂರು ನಗರದ ಮಧ್ಯೆ ಆಗಿದೆ. ಇದಕ್ಕೆ 2003ರಲ್ಲಿ ( ) ನೋಟಿಫಿಕೇಶನ್ ಆಗಿ, 6(1) ನೋಟಿಫಿಕೇಶನ್ ಕೂಡ ಆಗಿದೆ. ಇದು ಆದ ಮೇಲೆ ಅಲ್ಲಿಗೆ ನಾನು ಭೂಮಿ ಪೂಜೆಗೆ ಹೋಗಿದ್ದೆ. ಆಗ ಅಲ್ಲಿ ಯಾರ್ಯಾರು ಸಣ್ಣ ರೈತರು ಇದ್ದಾರೆ, ಅವರು 1 ಎಕರೆ, 30 ಗುಂಟೆ ಭೂಮಿ ಇರತಕ್ಕಂಥ ಜನರು ಬಂದರು. ಇದು ನಮ್ಮ ಆಸ್ತಿ, ಇದನ್ನು ಸೈಟ್ ಮಾಡುತ್ತಿದ್ದೀರಾ, ಎನ್ನುವಂತಹ ಮಾತನ್ನು ಹೇಳಿದ್ದಾರೆ. ನಾನು ಒಂದು ಮಾತನ್ನು ಸದನದಲ್ಲಿ ಹೇಳುವಂಥಾದ್ದು, ಏನೆಂದರೆ ಇವತ್ತು ನಿವೇಶನದ ಹಂಚಿಕೆ ಕರ್ನಾಟಕದ ಜನರಿಗೆ ಆಗಲೇ ಬೇಕು. ಇವತ್ತು ರೂರಲ್ ಏರಿಯಾದಿಂದ ಪಟ್ಟಣ ಪ್ರದೇಶಕ್ಕೆ ಬರುವ ಆಸಕ್ತಿ ಹೆಚ್ಚು ಆಗಿದೆ. ಇಲ್ಲಿ ಎಷ್ಟರಮಟ್ಟಿಗೆ ನಾವು ಸೈಟ್‌ಗಳನ್ನು ನಿಜವಾದಂತಹ ಜನರಿಗೆ ಕೊಡುತ್ತೇವೆಂಬ ವಿವಾದಾತ್ಮಕದ ಬಗ್ಗೆ ನಾನು ಮತ್ತೆ ಹೇಳುತ್ತೇನೆ. ಆದರೆ ಎಲ್ಲಿ ಡಿಸ್‌ಪ್ಯೂಟ್ ಇಲ್ಲ, ಎಲ್ಲಿ ಮನೆಗಳು ಇಲ್ಲ, ಅಂಥ ಕಡೆಯಲ್ಲಿ ಸೈಟ್‌ಗಳನ್ನು ಮಾಡುವಂಥಾದ್ದು ಮಾಡಬೇಕಾಗುತ್ತದೆ. ಆದರೂ ಕೂಡ ನಮ್ಮ ಉದ್ದೇಶ ಏನು ಇತ್ತೆಂದರೆ, ಬೆಂಗಳೂರು ನಗರಕ್ಕೆ ಇವತ್ತು ಸೈಟ್ ಹಂಚಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಬೇಕು, ನಾವು ಪದೇ ಪದೇ ಹೇಳಿದ್ದೇನೆ. ನಾನು 1980ರಲ್ಲಿ ನಗರಾಭಿವೃದ್ಧಿ ಸಚಿವನಾಗಿದ್ದೆ, ಮಾನ್ಯ ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗಿದ್ದರು. Bangalore was one of the fastest growing cities in the Country, 74%. 1940ರಲ್ಲಿ ಬೆಂಗಳೂರು ನಗರದ ಜನಸಂಖ್ಯೆ 4 ಲಕ್ಷ ಇದ್ದದ್ದು, ಈಗ 90 ಲಕ್ಷಕ್ಕೆ ಹೋಗಿದೆ. ಇಂತಹ ಒಂದು ಪಟ್ಟಣಕ್ಕೆ Metropolitan Authority- ಬಿ.ಡಿ.ಎ. ಸೈಟ್ ಮಾಡಬೇಕಾದರೆ, BDA must consult the Water Supply Board. BDA must consult the Electricity Board. ನಾವು ಎಷ್ಟು ಜನರಿಗೆ ಸೈಟ್ ಕೊಡುತ್ತೇವೆ, ಅಷ್ಟು ಜನರಿಗೆ ನೀರು ತಲುಪಿಸುವುದಕ್ಕೆ ಆಗುತ್ತದೆಯೇ? ನಾನು ಒಮ್ಮೆ ಹೇಳಿದ್ದೇನೆ, ಅದನ್ನು ನಾನು ಪದೇ ಪದೇ ಹೇಳುವುದಕ್ಕೆ ಇಚ್ಛಿಸುವುದಿಲ್ಲ. ಜಗತ್ತಿನಲ್ಲಿ ಇದು 6ನೇ ಪಟ್ಟಣವಾಗಿದೆ ಲೋವರ್ ಲೆವಲ್‌ನಿಂದ ಹೈಯರ್ ಲೆವಲ್‌ಗೆ, 1500 Ft. you have to lift the water. ಬಾಂಬೆಯಲ್ಲಿ ಹಾಗೆ ಇಲ್ಲ. Gravity is there. ಇವತ್ತು ನೀರು ಕೊಡುವಂಥಾದ್ದು, ಇವೆಲ್ಲವನ್ನೂ ನಾವು ನೋಡಿಕೊಂಡು ಮಾಡಬೇಕು. ಸೈಟ್ ಕೊಟ್ಟರೆ

ನೀರು ಕೊಡಬೇಕು, ಇವೆಲ್ಲಾ ಸವಲತ್ತುಗಳು ಆಗಬೇಕಾಗುತ್ತದೆ. ಆದರೂ ಕೂಡ we have collected the money. ಎರಡು ಲಕ್ಷಕ್ಕೂ ಹೆಚ್ಚಿಗೆ ಜನರು ಅರ್ಜಿಗಳನ್ನು ಕೊಟ್ಟಿದ್ದಾರೆ, 995 ಕೋಟಿ ರೂಪಾಯಿಗಳನ್ನು ಡಿಪಾಸಿಟ್ ಕೊಟ್ಟಿದ್ದಾರೆ. ನಾನು ಬಿ.ಡಿ.ಎ.ಗೆ ಹೋಗಿ ಸೈಟ್ ಯಾವಾಗ ಹಂಚುತ್ತೀರೆಂದು ಕೇಳಿದೆ. ಅದಕ್ಕೆ ಕಮೀಷನರ್ ವಿದ್ಯಾ ಶಂಕರ್‌ರವರು, ಜನವರಿ 15 ರಂದು ಸಂಕ್ರಮಣದ ದಿವಸ ಸೈಟನ್ನು ಕೊಡುವಂಥಾದ್ದು ಎಂದು ಹೇಳಿದರು. ಇದು ಆದ ಮೇಲೆ 635 ಎಕರೆಯಲ್ಲಿ ಜನರು ಕೋರ್ಟಿಗೆ ಹೋಗಿ ಸ್ಟೇ ತಂದರು. ಇನ್ನು ಅವೇಲೆಬಲ್ ಲ್ಯಾಂಡ್ 1230 ಎಕರೆ ಜಮೀನು ಏನು ಸ್ವಾಧೀನದಲ್ಲಿ ಇತ್ತು. ಅಲ್ಲಿ 10,000 ಜನರಿಗೆ ಸೈಟ್ ಕೊಡಬೇಕೆಂದು ಕಂಪ್ಯೂಟರೈಜ್ ಮಾಡಿದ್ದೆವು. ಆದರೆ ಯಾರಿಗೂ ಕೊಟ್ಟಿಲ್ಲ, ಇದನ್ನು ಹಾಗೆ ಹೇಗೆ ಕೊಡಲು ಸಾಧ್ಯ? ಆದುದರಿಂದ ಕಂಪ್ಯೂಟರ್‌ನಲ್ಲಿ ಹಾಕಿ ರೆಡಿಯಾಗಿ ಇತ್ತು. ನಾವು ಕೃಷ್ಣಾದಲ್ಲಿ ಜನವರಿ 15ನೇ ತಾರೀಖಿನಂದು ಕೊಡುತ್ತೇವೆಂದು ಜನರಿಗೆ ಸೈಟ್ ಹಂಚುವಂಥಾದ್ದು ಇತ್ತು. ಆದರೆ 12ನೇ ತಾರೀಖಿನಂದು ಸ್ಟೇ ಆರ್ಡರ್ ಬಂತು, 17ನೇ ತಾರೀಖಿನಂದು, ಹೈಕೋರ್ಟ್‌ನಲ್ಲಿ ಇತ್ತು. ಈಗ ಕೇಸ್ ನಡೆಯುತ್ತಿದೆ, ಅಲ್ಲಿಂದ ವರ್ತಮಾನ ಬಂತು, ಎಲ್ಲಿ ಮನೆಗಳನ್ನು ಕಟ್ಟಿದ್ದಾರೆ, ಅಲ್ಲಿ ಮನೆಗಳನ್ನು ತೆಗೆದುಹಾಕಿ ಮತ್ತೆ ಸೈಟ್‌ಗಳನ್ನು ಕೊಡುವುದು ಹೇಗೆ? ಅದಕ್ಕೆ ನಾನು ಹೇಳುತ್ತಿದ್ದೇನೆ. ಇಲ್ಲಿ ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳಿದ್ದಾರೆ. ಎಲ್ಲೆಲ್ಲಿ ಪರ್ಮನೆಂಟ್ ಸ್ಟ್ರಕ್ಚರ್ ಇದೆ, ಅದನ್ನು ಕಿತ್ತುಹಾಕಿ ಸೈಟ್ ಕೊಡುವಂಥಾದ್ದು ಇಲ್ಲ. For that we are now verifying. ನಾವು ಇದನ್ನು ವೆರಿಫೈ ಮಾಡುತ್ತಿದ್ದೇವೆ. ಇದರ ಬಗ್ಗೆ ಹೆಚ್ಚಿನ ಮಾತುಗಳನ್ನು ಸದನದಲ್ಲಿ ಪ್ರಸ್ತಾಪ ಮಾಡುವುದು, ಸರಿಯಾಗುವುದಿಲ್ಲ, ಏಕೆಂದರೆ ಇದು ಕೋರ್ಟಿನ ಮುಂದೆ ಕೇಸ್ ಇದೆ. ವಾದ ವಿವಾದಗಳು ನಡೆಯುತ್ತಿವೆ. ನಾವು ಹೇಳತಕ್ಕಂಥ ಮಾತುಗಳಲ್ಲಿ, ಯಾವುದಕ್ಕೂ for and against ಏನು ಎಂದರೆ, ಅದು ಅಲ್ಲಿ ಬರಬಾರದೆಂಬತಕ್ಕದ್ದು. ನಾನು ಒಂದು ಮಾತನ್ನು ಹೇಳುವುದೆನೆಂದರೆ, ಅರ್ಕಾವತಿ ಬಡಾವಣೆಯಿಂದ ಯಾವ ಬಡಜನರಿಗೆ ತೊಂದರೆಯಾಗುತ್ತದೆ, ಎಲ್ಲಿ ಪರ್ಮನೆಂಟ್ ಸ್ಟ್ರಕ್ಚರ್ ಇದೆ, I have seen the map. ಅಲ್ಲಿ ಇಲ್ಲಿ ಮನೆ, ಮಧ್ಯೆ ಏಲ್ಲಾ ಹೋಗಿದೆ. ಇವತ್ತು ತಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಹೈಕೋರ್ಟಿನ ತೀರ್ಮಾನ ಬಂದಮೇಲೆ, ಇದನ್ನು ಹೇಗೆ ಮಾಡಬೇಕೆಂಬ ಬಗ್ಗೆ ಮಾಡೋಣ, ಏಕೆಂದರೆ ಇದು ಕಷ್ಟಕರವಾದಂತಹ ಕೆಲಸವಾಗಿದೆ. ಒಂದು ಕಡೆ 995 ಕೋಟಿ ರೂಪಾಯಿಗಳ ಡಿಪಾಸಿಟ್ ಅನ್ನು ಕಲೆಕ್ಟ್ ಮಾಡಿದ್ದೇವೆ. ಇವತ್ತು ಇದನ್ನು ವ್ಯವಹಾರಿಕವಾಗಿ ನೋಡುತ್ತಾ ಬಂದಿದೆ, ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಸರ್ಕಾರ ಕ್ರಮವನ್ನು ತೆಗೆದುಕೊಳ್ಳುತ್ತದೆ, ಆಗತಕ್ಕಂಥ ವಿಚಾರಗಳು ಸಹ ಸರ್ಕಾರದ ಗಮನದಲ್ಲಿ ಇದೆ. ಮಾನ್ಯ ವಿರೋಧಪಕ್ಷದ ನಾಯಕರಿಗೂ ಮತ್ತು ಮಾನ್ಯ ಸದಸ್ಯರಿಗೂ ಹೇಳುತ್ತಿದ್ದೇನೆ. ಇದು ಬಹಳ ಕ್ಲಿಷ್ಟಕರವಾದಂತಹ ಸಮಸ್ಯೆ, ನಮ್ಮೆಲ್ಲರ ಎದುರಿಗೆ ಇದೆ. ಆದರೂ ಕೂಡ ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ಇವತ್ತು ಬೆಂಗಳೂರು ನಗರದ ನಿವಾಸಿಗಳಿಗೆ ನಾವು ಸೈಟ್‌ಗಳನ್ನು ಹಂಚಿಕೆ ಮಾಡಬೇಕಾಗಿದೆ, ಇದನ್ನು ಹಂಚಿಕೆ ಮಾಡುತ್ತೇವೆಂಬ ಮಾತನ್ನು ಹೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನೋಟಿಫೈ ಮಾಡಬೇಕಾದಂತಹ ಭೂಮಿಯನ್ನು ನೋಟಿಫೈ ಮಾಡದೇ ಬಿಟ್ಟಿರುವಂಥಾದ್ದು. ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಹೇಳಲಿಲ್ಲ.

ಶ್ರೀ ಧರ್ಮಸಿಂಗ್ : ಮಾನ್ಯ ಶ್ರೀರಾಮರೆಡ್ಡಿಯವರೇ, ಈ ಎಲ್ಲಾ ವಿಷಯಗಳಿಗೂ ನಮ್ಮ ಅಧಿಕಾರಿಗಳು ಮತ್ತು ನಮ್ಮ ವಕೀಲರುಗಳು ಪ್ರತಿಪಾದನೆಯನ್ನು ಮಾಡುತ್ತಿದ್ದಾರೆ. ಅದಕ್ಕೆ ನಾನು ಸದನದಲ್ಲಿ ಈ ವಿಷಯ ಕೋರ್ಟಿನಲ್ಲಿ ಇರುವುದರಿಂದ, ಇಲ್ಲಿ ಹೆಚ್ಚಿನ ವಿವರವಾದ ಚರ್ಚೆಗೆ ಅಗತ್ಯವಿಲ್ಲವೆಂದು ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ಈ 20,000 ನಿವೇಶನಗಳನ್ನು ಕೊಡುವಂಥಾದ್ದು ಸತ್ಯವೇ, ಅಥವಾ 20,000 ಸಾವಿರ ನಿವೇಶನಗಳನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಬರೀ 10,000 ನಿವೇಶನಗಳನ್ನು ಮಾತ್ರ ಕೊಡುವುದಕ್ಕೆ ರಿಸ್ಟ್ರಿಕ್ಟ್ ಮಾಡಿದ್ದೆವೆಂದು ಆದರೂ ಹೇಳಲಿ.

ಶ್ರೀ ಧರ್ಮಸಿಂಗ್ : ನಾವು ನಿವೇಶನಗಳನ್ನು ಕೊಡಬೇಕೆಂದು, ನಾವು ಅರ್ಜಿಗಳನ್ನು ಆಹ್ವಾನ ಮಾಡಿ, ಈಗಾಗಲೇ ದುಡ್ಡನ್ನು ಕಲೆಕ್ಟ್ ಮಾಡಿದ್ದೇವೆ. ಮೊದಲು 10,000 ನಿವೇಶನವನ್ನು ಕೊಡುವಂತಹ ಕಾರ್ಯಕ್ರಮವೂ ಇತ್ತು. ಆದರೆ ಹೈಕೋರ್ಟಿನ ತಡೆಯಾಜ್ಞೆ ಬಂದಮೇಲೆ ಇದನ್ನು ನಿಲ್ಲಿಸಿದ್ದೇವೆ.

ಉಡುಪಿ ಜಿಲ್ಲೆ ನಬಾರ್ಡ್ ಯೋಜನೆಯಡಿಯಲ್ಲಿ ವೆಂಟೆಡ್ ಡ್ಯಾಂಗಳಿಗೆ ಹಣ ಬಿಡುಗಡೆ

24 (494) : ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2004–05ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ನಬಾರ್ಡ್ ಯೋಜಜನೆಯಡಿ ಎಷ್ಟು ವೆಂಟೆಡ್ ಡ್ಯಾಂಗಳು ಮಂಜೂರಾಗಿರುತ್ತವೆ.

ಆ) ಅದರಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಯಾವ ಯಾವ ಸ್ಥಳಗಳಲ್ಲಿ ವೆಂಟೆಡ್ ಡ್ಯಾಂಗಳನ್ನು ಮಂಜೂರು ಮಾಡಲಾಗಿರುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) 09 ವೆಂಟೆಡ್ ಡ್ಯಾಂಗಳು ಮಂಜೂರಾಗಿರುತ್ತವೆ.

ಆ) ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಸ್ಥಳಗಳಲ್ಲಿ ವೆಂಟೆಡ್ ಡ್ಯಾಂಗಳನ್ನು ಮಂಜೂರು ಮಾಡಲಾಗಿರುತ್ತದೆ.

1. ಕೊಡ್ಲಾಡಿ ಎಂಬಲ್ಲಿ ಕೊಡ್ಲಿ ಹೊಳೆಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು ನಿರ್ಮಾಣ.
2. ಸೇನಾಪುರ ಗ್ರಾಮದ ಬಂಡ್ಯಾಡಿ ಎಂಬಲ್ಲಿ ಕೊಲ್ಲೂರು ಹೊಳೆಗೆ ಅಡ್ಡಲಾಗಿ ಉಪ್ಪುನೀರು ತಡೆ ಅಣೆಕಟ್ಟು ನಿರ್ಮಾಣ.

ಶ್ರೀ ಕೆ. ಗೋಪಾಲ ಪೂಜಾರಿ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಎರಡು ವೆಂಟೆಡ್ ಡ್ಯಾಂಗಳು ನಬಾರ್ಡ್ ವತಿಯಿಂದ ಮಂಜೂರಾಗಿವೆ. ಹಿಂದೆ, ಬಂಡ್ಸೆ ಎಂಬಲ್ಲಿ ಉಪ್ಪುನೀರು ತಡೆ ಅಣೆಕಟ್ಟು ನಿರ್ಮಾಣಕ್ಕೆ ಅನುಮತಿಯಾಗಿ ಈಗ ಅದು ಟೆಂಡರ್ ಆಗಿದೆ. ಅದು ಯಾವಾಗ ಕೆಲಸ ಪ್ರಾರಂಭವಾಗುತ್ತದೆ. ಅದಲ್ಲದೆ, ಈಗ ಮಂಜೂರಾಗಿರುವ ಇವೆರಡು ವೆಂಟೆಡ್ ಡ್ಯಾಂಗಳಿಗೆ ಸರ್ಕಾರದ ಅನುದಾನವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಯಾವಾಗ ಇವುಗಳ ಕೆಲಸ ಪ್ರಾರಂಭವಾಗುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಉಡುಪಿ ಜಿಲ್ಲೆಯಲ್ಲಿ ಈಗಾಗಲೇ 9 ವೆಂಟೆಡ್ ಡ್ಯಾಂಗಳಿಗೆ ಮಂಜೂರಾತಿ ಮಾಡಲಾಗಿದೆ. ಅವುಗಳಲ್ಲಿ, ಈ ಶಾಸಕರ ಮತಕ್ಷೇತ್ರದಲ್ಲಿ 2 ವೆಂಟೆಡ್ ಡ್ಯಾಂಗಳನ್ನು ಮಂಜೂರು ಮಾಡಿದ್ದೇವೆ. ಇದರಲ್ಲಿ ಸೇನಾಪುರ ಗ್ರಾಮದ ಯೋಜನೆಗೆ ಮೂರನೇ ಒಂದರಷ್ಟು ಅನುದಾನ ಪ್ರಾವಿಷನ್ ಇಲ್ಲ. ಏಕೆಂದರೆ, ಇದು 470 ಲಕ್ಷ ರೂಪಾಯಿಗಳ ವೆಂಟೆಡ್ ಡ್ಯಾಂ ಎಂದು ಅಂದಾಜು ಮಾಡಲಾಗಿದೆ. ಅದರಲ್ಲಿ ಮೂರನೇ ಒಂದರಷ್ಟು ಅನುದಾನ ಪ್ರಾವಿಷನ್ ಮಾಡಿ ಇಡಬೇಕು. ಈಗ ಅದು ಇಲ್ಲ. ಸಪ್ಲಿಮೆಂಟರಿ ಬಜೆಟ್‌ನಲ್ಲಿ ಮೂರನೇ ಒಂದರಷ್ಟು ಅನುದಾನಕ್ಕೆ ಪ್ರಾವಿಷನ್ ಮಾಡಿ, ಇವೆರಡೂ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಯಾವಾಗ ಎನ್ನುವ ಬಗ್ಗೆ ನಿಖರವಾದ ಡೇಟ್ ಪೇಳಲು ಆಗುವುದಿಲ್ಲ. ಟೆಂಡರ್ ಕಾಲ್ ಫಾರ್ ಮಾಡಿ ಕೂಡಲೇ ತೆಗೆದುಕೊಳ್ಳುತ್ತೇವೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಹಿಂದಿನ ಸರ್ಕಾರದವರು IIನೇ ವಿಧಾನಸಭೆಯಲ್ಲಿ ಹೇಳಿದ್ದರು, ನಮ್ಮ ಉಡುಪಿ ಜಿಲ್ಲೆಯ ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಪಶ್ಚಿಮ ವಾಹಿನಿ ನದಿಗಳಿಗೆ ಕಿಂಡಿ ಅಣೆಕಟ್ಟುಗಳನ್ನು ಕಟ್ಟಿ ಅಂತರ್ಜಲ ಹೆಚ್ಚು ಮಾಡುವುದು, ಕುಡಿಯುವ ನೀರು ಇವೆಲ್ಲದಕ್ಕೂ ಅವಕಾಶ ಮಾಡಿಕೊಟ್ಟು ಪಶ್ಚಿಮ ಘಟ್ಟ ತಪ್ಪಲಿನ ನಾಲ್ಕು ಜಿಲ್ಲೆಗಳನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿದ್ದರು. ಆ ಕಾರ್ಯಕ್ರಮ ಏನಾಯಿತು ಎಂದು ನಾನು ಕೇಳುತ್ತಿದ್ದೇನೆ. ಅದೂ ಅಲ್ಲದೆ, ನಾನು ಹಿಂದಿನ ವಿಧಾನಸಭೆಯಲ್ಲೂ ಹೇಳಿದ್ದೆ, ಸೇತುವೆಗಳನ್ನು ಕಟ್ಟುವುದು ನದಿಗಳಿಗೆ. ಆ ರೀತಿ ಸೇತುವೆಗಳನ್ನು ಕಟ್ಟುವಾಗ, ಕಿಂಡಿ ಅಣೆಕಟ್ಟುಗಳಿಗೆ ಅವಕಾಶವಿದ್ದರೆ ವೆಚ್ಚಗಳೂ ಸಹ ಕಡಿಮೆಯಾಗುತ್ತದೆ ಮತ್ತು ಇದರಿಂದ ಜನರಿಗೂ ಸಹ ಉಪಯೋಗವಾಗುತ್ತದೆ. ಆದ್ದರಿಂದ, ಎರಡೂ ಇಲಾಖೆಗಳು ಒಟ್ಟಾಗಿ ಕೆಲಸ ಮಾಡಿದರೆ ಜನರ ಸಮಸ್ಯೆಗಳನ್ನು ಪರಿಹಾರ ಮಾಡಬಹುದು ಎಂದು ನಾನು ಹಿಂದಿನ ವಿಧಾನಸಭೆಯಲ್ಲಿ ಹೇಳಿದ್ದೆ. ಅದರ ಬಗ್ಗೆ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಅದಕ್ಕೆ ಏನಾದರೂ ಪರಿಹಾರ ಕಂಡುಕೊಂಡರೆ ಜನರಿಗೂ ಉಪಯೋಗವಾಗುತ್ತದೆ, ವೆಚ್ಚ ಸಹ ಕಡಿಮೆಯಾಗುತ್ತದೆ ಎಂದು ಹೇಳಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಇದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ, ಅದಕ್ಕೆ ಉತ್ತರ ಒದಗಿಸಿಕೊಡುತ್ತೇವೆ. ಈ ಪ್ರಶ್ನೆಯನ್ನು ಕೇವಲ ಬೈಂದೂರಿಗೆ ಸಂಬಂಧಪಟ್ಟಂತೆ ಅವರು ಕೇಳಿದ್ದರು, ಅದರ ಮಾಹಿತಿಯನ್ನು ನಾನು ಕೊಟ್ಟಿದ್ದೇನೆ.

ಅಧ್ಯಕ್ಷರು : ಎಸ್.ಎಸ್. ಪಾಟೀಲರೇ, ನಿಮ್ಮ ಪ್ರಶ್ನೆಗೆ ಒಂದು ವಾರದ ಕಾಲಾವಕಾಶ ತೆಗೆದುಕೊಂಡಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಮುಂದಿನ ಸೋಮವಾರವಾದರೂ ಇದನ್ನು ತೆಗೆದುಕೊಳ್ಳುವಿರಾ?

ಅಧ್ಯಕ್ಷರು : ಈ ಅಧಿವೇಶನದಲ್ಲೇ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ತಾವು ನೀಡಿರುವ ಉತ್ತರದಲ್ಲಿ ಏನು ಹೇಳಿದ್ದೀರಿ ಎಂದರೆ, ಈ ಪ್ರಶ್ನೆಗೆ ಉತ್ತರವನ್ನು ಸರ್ಕಾರದಿಂದ ಪಡೆದ ನಂತರ ತಮಗೆ ಕಳುಹಿಸಿ ಕೊಡಲಾಗುವುದು ಎಂದು ಹೇಳಿದ್ದೀರಿ. ದಯವಿಟ್ಟು, ಉತ್ತರವನ್ನು ಕಳುಹಿಸಿ ಕೊಡುವುದು ಬೇಡ, ಮುಂದಿನ ಸೋಮವಾರಕ್ಕೆ ಈ ಪ್ರಶ್ನೆಯನ್ನು ಹಾಕಿಬಿಡಿ.

ಅಧ್ಯಕ್ಷರು : ಇಲ್ಲ, ಸರ್ಕಾರದವರು ಒಂದು ವಾರದ ಕಾಲಾವಕಾಶ ತೆಗೆದುಕೊಂಡಿದ್ದಾರೆ. ಈ ಅಧಿವೇಶನದಲ್ಲೇ ಉತ್ತರ ಕೊಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ : ಮುಖ್ಯಮಂತ್ರಿಗಳು ಉತ್ತರ ನೀಡಲು ತಯಾರಿದ್ದಾರೆ. ಆದರೆ ಅಧಿಕಾರಿಗಳು ಏಕೆ ಇದಕ್ಕೆ ಟ್ರೈಂ ತೆಗೆದುಕೊಂಡರೋ ನನಗೆ ಗೊತ್ತಾಗಲಿಲ್ಲ. ಇದು ಬಹಳ ಮಹತ್ವವಾದುದು. ಇದನ್ನು ಮುಂದಿನ ಸೋಮವಾರದ ದಿವಸ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಆಯಿತು. ಈಗ ಮುಂದಿನ ಪ್ರಶ್ನೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ರೈತರ ಜಮೀನುಗಳಿಗೆ ಪರಿಹಾರ

26 (463) : ಶ್ರೀ ಜೆ. ನರಸಿಂಹ ಸ್ವಾಮಿ (ದೊಡ್ಡಬಳ್ಳಾಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ರೈತರ ಜಮೀನುಗಳನ್ನು ನಿವೇಶನಕ್ಕಾಗಿ ಸ್ವಾಧೀನಪಡಿಸಿಕೊಂಡಾಗ ಅವರುಗಳಿಗೆ ನೀಡುವ ಪರಿಹಾರದ ಹಣವೆಷ್ಟು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತನ್ನ ಯೋಜನೆಗಳಿಗೆ ಭೂಸ್ವಾಧೀನಪಡಿಸಿಕೊಳ್ಳುವ ಜಮೀನುಗಳಿಗೆ ಭೂಸ್ವಾಧೀನಪಡಿಸಿಕೊಳ್ಳುವ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ 1894, ಕಲಂ 11ರನ್ವಯ ಭೂಪರಿಹಾರವನ್ನು ನಿಗದಿಪಡಿಸಿ ಪಾವತಿಸಲಾಗುತ್ತಿದೆ. ಈ ರೀತಿ ನಿಗದಿಪಡಿಸುವ ಭೂ ಪರಿಹಾರದಲ್ಲಿ ಪ್ರಾರಂಭಿಕ ಅಧಿಸೂಚನೆಯ ಸಮಯದಲ್ಲಿನ ಹಿಂದಿನ 3 ವರ್ಷಗಳ ಮಾರುಕಟ್ಟೆಯ ಸರಾಸರಿ ದರವನ್ನು ಪರಿಗಣಿಸಿ ನಿಗಧಿಪಡಿಸಿದ ಭೂಮಿಯ ಬೆಲೆ, 30% ಸೊಲೇಷಿಯಂ ಮತ್ತು ಪ್ರಾರಂಭಿಕ ಅಧಿಸೂಚನೆಯ ದಿನಾಂಕದಿಂದ ಐತೀರ್ಪು ರಚಿಸುವವರೆಗೆ ಅಥವಾ ಭೂಸ್ವಾಧೀನ ಪಡೆಯುವ ಅವಧಿಯವರೆಗೆ 12% ಹೆಚ್ಚುವರಿ ಮಾರುಕಟ್ಟೆಯ ಬೆಲೆಯು ಒಳಗೊಂಡಿರುತ್ತದೆ ಹಾಗೂ ಪ್ರೋತ್ಸಾಹದಾಯಕ ಯೋಜನೆಯಡಿ 40–60ರ ಒಂದು ನಿವೇಶನವನ್ನೂ ಗರಿಷ್ಠ 10 ನಿವೇಶನಗಳಿಗೆ ಸೀಮಿತಗೊಳಿಸಿ, ಶೇಕಡ 25ರ ಹಂಚಿಕೆ ದರವನ್ನು ಪಾವತಿಸಿಕೊಂಡು ನೀಡಲಾಗುತ್ತಿದೆ.

ಶ್ರೀ ಜೆ. ನರಸಿಂಹಸ್ವಾಮಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಕೊಡುವ ಪರಿಹಾರ ಹಣವೆಷ್ಟು ಎಂದು ಕೇಳಿದ್ದೇವೆ. ಅದಕ್ಕೆ ಉತ್ತರವಾಗಿ, ಮೂರು ವರ್ಷಗಳ ಮಾರುಕಟ್ಟೆಯ ಸರಾಸರಿ ದರದ ಮೇಲೆ ಶೇಕಡ 30ರಷ್ಟು ಹೆಚ್ಚಿಗೆ ಫಿಕ್ಸ್ ಮಾಡಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಅಧಿಕಾರಿಗಳು ಬಹಳ ಅವೈಜ್ಞಾನಿಕವಾಗಿ ಬೆಲೆ ನಿಗದಿ ಮಾಡುತ್ತಿದ್ದಾರೆಂದು ನಾವು ಭಾವಿಸಿದ್ದೇವೆ. ಇವತ್ತು ಅಲ್ಲಿ ಒಂದು ರೂಪಾಯಿ ರೇಟ್ ಇದ್ದರೆ, ಭೂಮಿ ಕಳೆದುಕೊಂಡಂಥ ರೈತರಿಗೆ ಬಿ ಡಿ ಎ ನವರು ಇಪ್ಪತ್ತು ಪೈಸೆಯಷ್ಟು ರೇಟನ್ನು ಕೊಡುತ್ತಿದ್ದಾರೆ. ಜಮೀನು ಕಳೆದುಕೊಂಡಂಥ ಸಂಪಿಗೆಹಳ್ಳಿಯ ರೈತ ಪಕ್ಕದ ದೇವನಹಳ್ಳಿಗೆ ಹೋಗಬೇಕಾಗುತ್ತದೆ. ದೇವನಹಳ್ಳಿಯಲ್ಲಿ ಇವತ್ತು ಒಂದು ಎಕರೆಗೆ ಒಂದು ಕೋಟಿ ರೂಪಾಯಿ ಬೆಲೆಯಾಗಿದೆ. ದೊಡ್ಡಬಳ್ಳಾಪುರಕ್ಕೆ ಹೋದರೆ, ಅಲ್ಲಿ ಒಂದು ಎಕರೆಗೆ ಇಪ್ಪತ್ತು ಲಕ್ಷ ರೂಪಾಯಿ ಆಗಿದೆ. ನೂರಾರು ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದಂಥ ರೈತರು ಇವತ್ತು ಜಮೀನನ್ನು ಕಳೆದುಕೊಂಡಿದ್ದಾರೆ. ಆದ್ದರಿಂದ, ಈಗ ಕೊಡುತ್ತಿರುವ ದರವನ್ನು ಪುನರ್

ಪರಿಶೀಲನೆ ಮಾಡಿ ಕನಿಷ್ಟವೆಂದರೆ ಅರ್ಧದಷ್ಟು ಅಂದರೆ ಅಲ್ಲಿ ಒಂದು ರೂಪಾಯಿ ಬೆಲೆ ಇದ್ದರೆ, ಅದಕ್ಕೆ 50 ಪೈಸೆಯಷ್ಟು ಬೆಲೆಯಾದರೂ ರೈತರಿಗೆ ಸಿಗುವಂತೆ ಆಗಬೇಕು ಎಂದು ಅಧ್ಯಕ್ಷರ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಈಗಾಗಲೇ ಅರ್ಕಾವತಿ ಬಡಾವಣೆಗೆ ಮತ್ತು ಬೇರೆ ಕಡೆಗಳಲ್ಲಿ ಜಮೀನು ತೆಗೆದುಕೊಳ್ಳುತ್ತಿದ್ದು, ಹಾಗೆ ತೆಗೆದುಕೊಳ್ಳತಕ್ಕಂಥ ಸಮಯದಲ್ಲಿ ಹಿಂದಿನ ಮೂರು ವರ್ಷಗಳ ಸರಾಸರಿ ಮಾರುಕಟ್ಟೆ ಬೆಲೆ, ಶೇಕಡಾ 30 ರಷ್ಟು ಸೊಲೇಷಿಯಂ ಮತ್ತು ಭೂಸ್ವಾಧೀನ ಪಡೆಯುವವರೆಗೆ ಶೇಕಡಾ 12ರಷ್ಟು ಹೆಚ್ಚುವರಿ ಮಾರುಕಟ್ಟೆ ಬೆಲೆ ಹಾಗೂ ಪ್ರೋತ್ಸಾಹಕ ಯೋಜನೆಯಡಿ ಎಕರೆ ಒಂದಕ್ಕೆ 40X60 ಅಳತೆಯ ಒಂದು ನಿವೇಶನ ಕೊಡಲಾಗುತ್ತಿದೆ. ಭೂಮಿ ಭಾಗಾಯತು ಜಮೀನಾಗಿದ್ದರೆ, ಎಕರೆಗೆ ಹೆಚ್ಚುವರಿ ಒಂದು ಲಕ್ಷ ರೂಪಾಯಿ ಮತ್ತು ಶೇಕಡಾ 30ರಷ್ಟು ಸೊಲೇಷಿಯಂ ಹಾಗೂ ಶೇಕಡಾ 12ರಷ್ಟು ಹೆಚ್ಚುವರಿ ದರವನ್ನು ನೀಡಲಾಗುತ್ತಿದೆ. ಆರ್ಕಿಡ್ ಗೈಡೆನ್ಸ್ ಏನಿದೆ, ಅದಕ್ಕಿಂತಲೂ ಹೆಚ್ಚಿನ ಹಣವನ್ನು ಕೊಡತಕ್ಕಂಥಾದ್ದನ್ನು ನಾವು ಮಾಡಿದ್ದೇವೆ. ಈಗಾಗಲೇ, ಅರ್ಕಾವತಿ ಬಡಾವಣೆಗೆ ಭೂಸ್ವಾಧೀನ ಮಾಡಿಕೊಂಡಿರುವ ಜಮೀನುಗಳಿಗೆ ಒಂದು ಎಕರೆಗೆ 11 ಲಕ್ಷ ರೂಪಾಯಿಗಳಿಂದ ಹಿಡಿದು 20 ಲಕ್ಷ ರೂಪಾಯಿಗಳವರೆಗೆ ನಾವು ಹಣವನ್ನು ಕೊಟ್ಟಿದ್ದೇವೆ. ಆ ಜಮೀನಿಗೆ ಹೆಚ್ಚಿನ ಬೆಲೆ ಇದೆ ಎನ್ನುವುದು ನಮಗೆ ಗೊತ್ತು. ಅದಕ್ಕಾಗಿಯೇ, ಅವರಿಗೆ ತೊಂದರೆಯಾಗಬಾರದು ಎನ್ನುವ ರೀತಿಯಲ್ಲಿ, ಕಾನೂನು, ಮಾರ್ಕೆಟ್ ವ್ಯಾಲ್ಯು ಮತ್ತು ಹೆಚ್ಚುವರಿ ಹಣವನ್ನು ಕೊಡತಕ್ಕಂಥಾದ್ದನ್ನು ಮಾಡಿದ್ದೇವೆ. ಈಗಾಗಲೇ ಒಂದು ಎಕರೆಗೆ 11 ಲಕ್ಷ ರೂಪಾಯಿಗಳಿಂದ ಹಿಡಿದು 20 ಲಕ್ಷ ರೂಪಾಯಿಗಳವರೆಗೆ ಕೊಟ್ಟಿದ್ದೇವೆ.

ಕಾರಾಗೃಹ ಕೈದಿಗಳಿಗೆ ಸೌಕರ್ಯ ಒದಗಿಸುವುದು

27 (449) : ಶ್ರೀ ಪಾಟೀಲ್ ಬಿ.ಸಿ (ಹಿರೇಕೆರೂರು) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜ್ಯದ ನಾನಾ ಕಾರಾಗೃಹಗಳಲ್ಲಿರುವ ಕೈದಿಗಳಿಗೆ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಲಾಗುತ್ತಿದೆಯೇ

2) ಕೈದಿಗಳಿಗೆ ವಿತರಿಸುತ್ತಿರುವ ಆಹಾರ ಧಾನ್ಯಗಳು ಹಾಗೂ ನಿಗದಿಪಡಿಸಿದ ಆಹಾರ ಸರಿಯಾಗಿ ಕೈದಿಗಳಿಗೆ ತಲುಪುತ್ತಿದೆಯೇ (ವಿವರ ನೀಡುವುದು) ತಲುಪದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

1) –ಹೌದು–

2) –ಹೌದು– ವಿವರ ಅನುಬಂಧದಲ್ಲಿ ನೀಡಿದೆ.

ANNEXURE

Weight of Cooked Food

The Weight of Raw / Cooked Food to be issued to each Prisoner

	Labouring					Non-Labouring				
	Morning		Evening			Morning		Evening		
Diet	Raw	Cooked	Raw	Cooked	Total	Raw	Cooked	Raw	Cooked	Total
Rice Diet:										
Rice	232.500 gms	790 gms	232.500 gms	790 gms	465 gms	175 gms	595 gms	175 gms	595gms	350 gms
Wheat	85.00gms	117gms	85 gms	117 gms	170gms	85 gms	117 gms	85 gms	117 gms	170 gms
Soji for Tiffan	50 gms	180gms			50 gms	50 gms	180gms			50 gms
Wheat Diet										
Wheat	232.500 gms	320gms	232.500gms	320gms	465gms	gms	240gms	175gms	240gms	350gms
Rice	85gms	290gms	85gms	290gms	170gms	85 gms	290gms	85gms	290gms	170gms
Soji for Tiffam	50gms	180gms			50gms	50gms	180gms			50gms
Mixed Diet										
Ragi	232.500gms	600gms	232.500gms	600gms	465gms	175gms	450gms	175gms	450gms	350gms
Rice	85gms	290gms	85gms	290gms	170gms	85gms	290gms	85gms	290gms	170gms
Soji for Tiffam	50gms	180gms			50gms	50gms	180gms			50gms

Dhal	70gms	280gms	70gms	280gms	140gms	70gms	280gms	70gms	280gms	140gms
Vegetables	85gms	220gms	85gms	220gms	170gms	85gms	220gms	85gms	220gms	170gms
Milk	20mls	100ml (Coffee/Tea)	60ml	200ml (Butter Milk)	80ml	20ml	100ml (Coffee/Tea)	60ml	200ml (Butter Milk)	80ml
Mutton:	Weeklyonce for Non Veg.					Weeklyonce for Non Veg				
Weekly once	115gms	90gms				115gms	90gms			
Beson:	Weeklyonce for Vegetarian					Weeklyonce for Vegetarian				
Beson	60gms					60gms				
Jaggery	60gms	120gms				60gms	120gms			
Sweet Oil	30gms					30gms				

ಶ್ರೀ ಬಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಯಾವ ಯಾವ ಮೂಳಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ ಎಂದು ಹೇಳಿಲ್ಲ. ಖೈದಿಗಳಿಗೆ ಆಹಾರ ಧಾನ್ಯಗಳನ್ನು ಒದಗಿಸುವುದರ ಬಗ್ಗೆ, ಎಷ್ಟು ಗ್ರಾಂ ಆಹಾರಧಾನ್ಯಗಳನ್ನು ಕೊಡಲಾಗುತ್ತಿದೆ ಎಂದು ಹೇಳಿದ್ದಾರೆಯೇ ಹೊರತು, ಅವರಿಗೆ ಯಾವಯಾವ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಟ್ಟಿದ್ದಾರೆ ಎನ್ನುವ ಪಟ್ಟಿ ಕೊಟ್ಟಿಲ್ಲ. ಆಹಾರಧಾನ್ಯಗಳನ್ನು ಕೊಡುವುದರ ಬಗ್ಗೆ ಮಾತ್ರ ಪಟ್ಟಿ ಇದೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯಿತಿ ಮತ್ತು ಬೇರೆ ಕಡೆಗಳಲ್ಲಿ ನಾವು ಯಾವ ರೀತಿ ಸಮಿತಿ ಮಾಡುತ್ತೇವೆಯೋ, ಅದೇ ರೀತಿ ಪ್ರತಿಯೊಂದು ಜೈಲಿನಲ್ಲೂ ಖೈದಿಗಳಿಂದ ಆಯ್ಕೆಯಾದಂಥ ಒಂದು ಸಮಿತಿ ಇದೆ. ಅವರೇ ಆಹಾರದ ವಿಷಯದಲ್ಲಿ ಸೂಪರ್‌ವಿಷನ್ ಮಾಡುತ್ತಾರೆ. ಹೆಚ್ಚಿನ ಸೂಪರ್‌ವಿಷನ್ ಮಾಡಲು ಡಿಸ್ಟ್ರಿಕ್ಟ್ ಸೆಷನ್ ಜಡ್ಜ್, ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟೇಟ್, ಡಿಸ್ಟ್ರಿಕ್ಟ್ ಸರ್ಜನ್, ಡಿ.ಸಿ., ಎಸ್.ಪಿ., ಸ್ವಯಂ ಸೇವಾ ಸಂಸ್ಥೆಗಳು ಇರುತ್ತವೆ. ಬೋರ್ಡ್ ಆಫ್ ವಿಸಿಟರ್ಸ್‌ನ್ನೂ ಕೂಡ ಸರ್ಕಾರದ ಪರವಾಗಿ ನಾಮಕರಣ ಮಾಡಿರುತ್ತೇವೆ. ಆಹಾರವನ್ನು ಟೆಂಡರ್ ಮುಖಾಂತರ ಕೊಂಡುಕೊಳ್ಳುತ್ತಾರೆ. ಟೆಂಡರ್ ನಿಯಮಾವಳಿಯನ್ನು ಕರಾರುವಕ್ಕಾಗಿ ಪಾಲಿಸಲಾಗುತ್ತದೆ. ಅವರ ಸುಧಾರಣೆಗಾಗಿ ವೊಕೇಷನಲ್ ಟ್ರೈನಿಂಗ್ ಮುಂತಾದ ಸೌಕರ್ಯಗಳನ್ನು ಕೂಡ ಕೊಟ್ಟಿದ್ದೇವೆ. ಇತ್ತೀಚಿನ ದಿವಸಗಳಲ್ಲಿ, ಖೈದಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ವಿಚಾರದಲ್ಲಿ ನಮ್ಮ ಅಧಿಕಾರಿಗಳು ಎಲ್ಲೆಲ್ಲಿ ತಪ್ಪು ಮಾಡಿದ್ದಾರೆ, ಅವರಿಗೆ ಶಿಕ್ಷೆ ಕೊಟ್ಟಿದ್ದೇವೆ. ಬೆಳಗಾವಿಯಲ್ಲಿ ಈಗಾಗಲೇ 12 ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆ. ಈ ರೀತಿಯ ಕ್ರಮಗಳನ್ನು ಕೂಡ ತೆಗೆದುಕೊಳ್ಳುತ್ತೇವೆ. ಖೈದಿಗಳಿಗೆ ಸೌಕರ್ಯಗಳನ್ನು ಕಲ್ಪಿಸಿ ಕೊಡುತ್ತೇವೆ, ಅಲ್ಲದೆ ಈಗ ಜನಪ್ರತಿನಿಧಿಗಳೂ ಕೂಡ ಆ ಸಮಿತಿಯಲ್ಲಿರುತ್ತಾರೆ, ಎಲ್ಲರೂ ಅದನ್ನು ನೋಡುತ್ತಾರೆ.

ಶ್ರೀ ಬಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಜೈಲುಗಳಲ್ಲಿ ಕೊಡುತ್ತಿರುವ ಆಹಾರ ಸರಿಯಾಗಿ ಖೈದಿಗಳಿಗೆ ಮುಟ್ಟುತ್ತಿಲ್ಲ. ಇದನ್ನು ನಾನು ನನ್ನ ಸ್ವಂತ ಅನುಭವದ ಮೇಲೆ ಹೇಳುತ್ತಿದ್ದೇನೆ. ತಾವು ಉತ್ತರದಲ್ಲಿ ತಿಳಿಸಿರುವಂತೆ 85 ಗ್ರಾಂ ಪ್ರಮಾಣದಲ್ಲಿ ಅಕ್ಕಿಯನ್ನು ಕೊಡುತ್ತಿಲ್ಲ. ಅಲ್ಲಿ ಕೊಡುವ ಸಾರು ಕೇವಲ ಬಿಸಿನೀರಾಗಿ ಇರುತ್ತದೆಯೇ ಹೊರತು ಅದರಲ್ಲಿ ಉಪ್ಪು, ಖಾರದ ಅಂಶಗಳ್ಯಾವುವೂ ಇರುವುದಿಲ್ಲ. ಜೈಲುಗಳಲ್ಲಿ ಬೆಳಗಿನ ಹೊತ್ತು ಟೀ ಮಾಡುತ್ತಾರೆ. ಅದರಲ್ಲಿ ಹಾಲಿನ ಅಂಶ ಇರುವುದಿಲ್ಲ. ಜೈಲುಗಳಲ್ಲಿ ಎರಡು ರೀತಿಯ ವ್ಯವಸ್ಥೆಗಳು ನಡೆಯುತ್ತಿವೆ. ಒಂದು ತರಹದ ಖೈದಿಗಳಿಗೆ ಯಾವ ರೀತಿಯ ಸೌಲಭ್ಯಗಳೂ ಸಿಗುವುದಿಲ್ಲ. ಆದರೆ ಒಂದು ತರಹದ ಖೈದಿಗಳು ಪ್ರತ್ಯೇಕವಾಗಿ ಅವರದೇ ಆದಂಥ ಅಡುಗೆಯನ್ನು ಕೂಡ ಮಾಡಿಕೊಳ್ಳುವಂಥ ವ್ಯವಸ್ಥೆ ಅಲ್ಲಿನ ಅಧಿಕಾರಿಗಳ ಕುಮ್ಮಕ್ಕಿನಿಂದ ನಡೆಯುತ್ತಿದೆ. ಅವರಿಗೆ ಬೇಕಾದಂಥ ತಿಂಡಿಗಳನ್ನು ಮಾಡಿಕೊಳ್ಳಬಹುದು. ಬೇಕಾದ ಊಟವನ್ನು ಮಾಡಬಹುದು. ಇಲ್ಲಿ ಏನಾಗುತ್ತದೆಂದರೆ, ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾದ ಖೈದಿ, ಆ ನ್ಯಾಯಾಲಯದಿಂದ ನೀಡಿದಂಥ ಶಿಕ್ಷೆಯನ್ನು ಅನುಭವಿಸಬೇಕೇ ಹೊರತು ಅವರ ಜೀವನಪರ್ಯಂತ ಜೈಲಿನ ಒಳಗಿರುವಾಗ ಈ ಆಹಾರಧಾನ್ಯ ವಿತರಣೆಯಲ್ಲಿ ಕೊರತೆಯುಂಟಾಗಿ ದೈಹಿಕ ಶಿಕ್ಷೆಯನ್ನು ಸಹ ಅನುಭವಿಸುವಂಥ ಪರಿಸ್ಥಿತಿ ಇವತ್ತು ಜೈಲಿನಲ್ಲಿ ನಡೆಯುತ್ತಿದೆ. ಆದರೆ ಇದರ ಬಗ್ಗೆ ಅಧಿಕಾರಿಗಳು ಏನು ಕ್ರಮ ಜರುಗಿಸುತ್ತಿದ್ದಾರೆ? ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆದರೆ ಅಲ್ಲಿ ಅಧಿಕಾರಿಗಳು ಅವರದೇ ಆದಂಥ ರೂಲ್ಸ್ ಅನ್ನು frame ಮಾಡಿಕೊಂಡಿದ್ದಾರೆ. ಆದ್ದರಿಂದ ಅಲ್ಲಿ ಸರಿಯಾದ ವ್ಯವಸ್ಥೆಯನ್ನು ಮಾಡಿದರೆ ಸೂಕ್ತ ಎಂದು ನನ್ನ ಅನಿಸಿಕೆಯನ್ನು ತಮ್ಮ ಮುಂದಿಡುತ್ತೇನೆ,

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ) : ಮಾನ್ಯ ಅಧ್ಯಕ್ಷರೆ, ಜೈಲಿನಲ್ಲಿ ಎಲ್ಲಾ ವ್ಯವಸ್ಥೆಗಳಿಗಿಂತ ನೀರಿನ ವ್ಯವಸ್ಥೆ ಬಹಳ ಕೆಟ್ಟದಾಗಿದೆ. ನೀರನ್ನು ಬೆಳಿಗ್ಗೆ ಒಂದು ಸಲ, ಮಧ್ಯಾಹ್ನ ಒಂದು ಸಲ ಮತ್ತು ಸಾಯಂಕಾಲ ಒಂದು ಸಲ ಬಿಡುವಂಥ ವ್ಯವಸ್ಥೆ ಮಾಡಿದರೆ ಆ ಜೈಲಿನೊಳಗಡೆ ಸೆಲ್‌ಗಳಲ್ಲಿರುವಂಥ ಆ ಟ್ಯಾಂಕುಗಳು ಲೀಕ್ ಆಗುವಂಥ ವ್ಯವಸ್ಥೆ ಇರುವುದರಿಂದ, ಆ ಖೈದಿಗಳಿಗೆ ಬೇರೆ ಎಲ್ಲಾ ವ್ಯವಸ್ಥೆಗಳ ಸಮಸ್ಯೆಯಾಗುವಂಥದ್ದು ಇರುವುದರಿಂದ ನೀರನ್ನು ಶೇಖರಿಸಿಡಲು ದೊಡ್ಡ ಟ್ಯಾಂಕ್ ಅನ್ನು ಕಟ್ಟಿ ಎಲ್ಲಾ ರೂಂಗಳಿಗೆ ನೀರಿನ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಿದರೆ ಬಹಳಷ್ಟು ಲಾಭವಾಗುತ್ತದೆ ಎನ್ನುವಂಥದ್ದು ನನ್ನ ಅಭಿಪ್ರಾಯವಾಗಿದೆ. ಏಕೆಂದರೆ ಜೈಲಿನಲ್ಲಿ ಮೇಜರ್ ಸಮಸ್ಯೆ ಇದಾಗಿದೆ. ಇನ್ನು ನಾವು ಖೈದಿಗಳ ಬಗ್ಗೆ ಮಾತ್ರ ಹೇಳಿದೆವು. ಆದರೆ ಅಲ್ಲಿರುವಂಥ ವಾರ್ಡನ್‌ಗಳ ಮನಃಸ್ಥಿತಿ ಏನಿದೆ ಎಂದರೆ, ಪೊಲೀಸರಿಗೂ ನಮಗೂ ತಾರತಮ್ಯವಿದೆ, ಪೊಲೀಸರಿಗೆ ರಜಾವಧಿಯ ಒಂದು ತಿಂಗಳ ಸಂಬಳ ಕೊಡುತ್ತಾರೆ, ನಮಗೆ 15 ದಿನದ್ದು ಮಾತ್ರ ಹಣ ಕೊಡುತ್ತಾರೆ, ನಮಗೂ ಅವರಂತೆ ಒಂದು ತಿಂಗಳ ರಜಾ ಸಂಬಳವನ್ನು ಕೊಡುವಂಥ ವ್ಯವಸ್ಥೆ ಆಗಬೇಕೆನ್ನುವಂಥದ್ದು ಜೈಲಿನ ವಾರ್ಡನ್ ಇನ್ನಿತರರ ಅನಿಸಿಕೆ ಇದೆ. ಹಾಗೆಯೇ ವಾರ್ಡನ್‌ಗಳಿಗೆ ಸಹ ಕಷ್ಟ ಇದೆ. ಖೈದಿಗಳನ್ನು ಹೊರಗಡೆಗೆ ತೋಟಕ್ಕೆ ಕರೆದುಕೊಂಡು ಹೋದರೆ ಅಲ್ಲಿ ಕಾಂಪೌಂಡ್‌ನ ವ್ಯವಸ್ಥೆ ಇಲ್ಲ, ಇದನ್ನೆಲ್ಲಾ ಮಾಡಿಕೊಡುವುದರಿಂದ ಜೈಲಿನ ವಾರ್ಡನ್‌ಗಳಿಗೂ ಅನುಕೂಲವಾಗುತ್ತದೆ. ದೊಡ್ಡ ಟ್ಯಾಂಕುಗಳನ್ನು ಕಟ್ಟಿ ನೀರಿನ ವ್ಯವಸ್ಥೆ ಮಾಡುವುದು, ಬೋರ್‌ವೆಲ್ ವ್ಯವಸ್ಥೆ ಮೂಲಕ ನೀರನ್ನು ಕೊಡುವಂಥದ್ದು ಮಾಡಿದರೆ ಒಳ್ಳೆಯದೆಂಬುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ನಾನು ಮಂಗಳೂರು ಜೈಲಿನ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಕಳೆದ ಒಂದೂವರೆ ವರ್ಷದಿಂದ ಚೀಫ್ ಜೈಲರ್ ಪೋಸ್ಟ್ ಇದ್ದರೂ ಕೂಡ ಚೀಫ್ ಜೈಲರ್‌ನ ನೇಮಕವಾಗಿಲ್ಲ. 8 ವಾರ್ಡರ್‌ಗಳ ಕೊರತೆ ಇದ್ದು ಎರಡು ವರ್ಷಗಳಿಂದ ನೇಮಕವಾಗಿಲ್ಲ. ಎಫ್‌ಡಿಸಿ ಹುದ್ದೆ ಒಂದು ಖಾಲಿ ಇದ್ದು ಕಳೆದ 4 ವರ್ಷದಿಂದ ತುಂಬಿಲ್ಲ. ಈ ಮೂಲಭೂತ ಸೌಲಭ್ಯಗಳ ಜೊತೆಗೆ ಈ ಸಿಬ್ಬಂದಿಗಳ ನೇಮಕಾತಿ ಬಗ್ಗೆ ಕೂಡ ವಿಶೇಷವಾದ ಗಮನವನ್ನು ಕೊಡಬೇಕಾಗುತ್ತದೆ. 150 ಕೆಪಾಸಿಟಿ ಇರುವಲ್ಲಿ 241 ಸ್ಟೆಂಥ್ ಅಂದರೆ ಇನ್‌ಮೇಟ್ಸ್ ಇದ್ದಾರೆ. ಇಂಥ ಕಡೆಯೂ ಕೂಡ ಇದರ ಕಡೆಗೆ ಕೊಡಬೇಕಾಗಿರತಕ್ಕಂಥ ಆದ್ಯತೆಯನ್ನು ಕೊಟ್ಟಿಲ್ಲವೆಂದು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷರೆ, ಮಾನವೀಯತೆಯ ದೃಷ್ಟಿಯಿಂದ ಒಳ್ಳೆಯ ಪ್ರಶ್ನೆಗಳನ್ನು ಶ್ರೀ ಬಿ.ಸಿ. ಪಾಟೀಲರು ಕೇಳಿದ್ದಾರೆ. ಇನ್ನು ಶ್ರೀ ಜೀವರಾಜ್‌ರವರು ಮೊನ್ನೆ ಅಲ್ಲಿಗೆ ಹೋಗಿ ಬಂದಿದ್ದಾರೆ. ಅವರಿಗೂನೂ ಕೂಡ ಸ್ವಲ್ಪ ಅಲ್ಲಿ ಎಲ್ಲಾ ಸಮಸ್ಯೆ ಇದೆ. ಏಕೆಂದರೆ ಇದು ಆಗುತ್ತಿಲ್ಲವೆಂದು ನಾನು ಹೇಳುವುದಿಲ್ಲ. ಇದು ಆಗುತ್ತಿದೆ. ಅದಕ್ಕಾಗಿ ಇದರ ಬಗ್ಗೆ ಹೆಚ್ಚಿನ ಕ್ರಮ ತೆಗೆದುಕೊಳ್ಳಬೇಕೆಂದು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈ ತರಹದ ಪ್ರಶ್ನೆ ಬರತಕ್ಕಂಥದ್ದು ಬಹಳ ವಿರಳ. ಜೈಲಿನಲ್ಲಿರತಕ್ಕಂಥ ಖೈದಿಗಳಿಗೆ ಮತ್ತು ಇತರ ವಿಚಾರಗಳ ಬಗ್ಗೆ ಸಲಹೆ ಸೂಚನೆಗಳನ್ನು ತಾವು ಕೊಟ್ಟಿದ್ದೀರಿ, ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮೊನ್ನೆ ನಾನು ಬಿಜಾಪುರ ಜಿಲ್ಲೆಗೆ ತಾವು ನಮ್ಮವರು ಕೆಲವರನ್ನು ಕಳುಹಿಸಿದ್ದರಿಂದ

ನೋಡುವುದಕ್ಕೆ ಹೋಗಿದ್ದೆ. ಅಲ್ಲಿ ನಮ್ಮ ಸಾವಿರಾರು ಜನ ಖೈದಿಗಳಿದ್ದಾರೆ. ಅವರ ಏನಂತಿ ಏನೆಂದರೆ, ಬೇರೆ ರಾಜ್ಯಗಳಲ್ಲಿ ಅವರ ನಡತೆ ನೋಡಿ ಮಾಡಿರುವಂಥ ಶಿಕ್ಷೆಯನ್ನು ಕಡಿಮೆ ಮಾಡಿ ಅವರನ್ನು ಆಗಸ್ಟ್ 15 ಮತ್ತು ಜನವರಿ 26 ರಂದು ಬಿಡುವಂಥ ಪದ್ಧತಿ ಇದೆ. ಆ ರೀತಿ ಯಾರು ಒಳ್ಳೆಯ ನಡತೆಯಿಂದಿದ್ದಾರೆ. ಅವರಿಗೆ ಶಿಕ್ಷೆ ಕಡಿಮೆ ಮಾಡಿ ಅವರಿಗೇನಾದರೂ ರಿಲೀಫ್ ಕೊಡುವುದರ ಬಗ್ಗೆ ಸರ್ಕಾರ ಯೋಚನೆ ಏನಾದರೂ ಮಾಡಬಹುದೇ ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಇದನ್ನು ಸರ್ಕಾರದ ಗಮನಕ್ಕೆ ತಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆಂದು ಅವರಿಗೆ ಅಲ್ಲಿ ಅಶ್ಯೂರೆನ್ಸ್ ಕೊಟ್ಟು ಬಂದಿದ್ದೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳಿದ್ದಾರೆ, 1978ರಲ್ಲಿ ಇವರ ಅಮೆಂಡ್‌ಮೆಂಟ್ ಆಗತಕ್ಕಂಥದ್ದು ಇತ್ತು. ಆಗಿನ ಕಾಲದಲ್ಲಿ ರಾಜ್ಯ ಸರ್ಕಾರದಲ್ಲಿದ್ದಂಥ ಶ್ರೀಮಾನ್ ದೇವರಾಜ್ ಅರಸುರವರು ಇದನ್ನು ಶಿಫಾರಸ್ಸು ಮಾಡಿದ್ದರು. ಯಾರ ನಡವಳಿಕೆ ಚೆನ್ನಾಗಿದೆ ಎನ್ನತಕ್ಕಂಥ ರೀತಿಯಲ್ಲಿ 26ನೇ ತಾರೀಕು ಜನವರಿಯಲ್ಲಿ ಮತ್ತು 15ನೇ ಆಗಸ್ಟ್ ಸಂದರ್ಭದಲ್ಲಿ ಕೆಲವು ಖೈದಿಗಳನ್ನು ಬಿಡತಕ್ಕಂಥದ್ದು ಇದೆ ಮತ್ತು ಬಿಡುತ್ತಾ ಬಂದಿದ್ದೇವೆ. ಅದರ ಬಗ್ಗೆ ನಾವು ಕ್ರಮ ಕೈಗೆದುಕೊಳ್ಳುತ್ತೇವೆ. ನಾವೇನೂ ಕೂಡ ಯಾರಿಗೂ ಜೈಲಿಗೆ ಕಳುಹಿಸತಕ್ಕಂಥ ಪ್ರಯತ್ನವನ್ನು ನಾವು ಏಕೆ ಮಾಡೋಣ? ನೀವಾಗಿಯೇ ನೀವು ಹೋಗುತ್ತಿದ್ದೀರಿ, ಅದು ಹೋಗಿರುವುದು ಸರಿಯಾಗಿಯೇ ಇತ್ತು ಕೆಲವು ಸಮಸ್ಯೆಗಳನ್ನು ನಮ್ಮ ಗಮನಕ್ಕೆ ತಂದಿದ್ದಿರಿ.

ಸವಳು ಜವಳಿನಿಂದ ಹಾನಿಗೊಳಗಾದ ಭೂಮಿಯ ಸುಧಾರಣೆ

28 (49) : ಶ್ರೀ ಕಾರಜೋಳ ಗೋವಿಂದ್ ಮಕಟಪ್ಪ (ಮುಧೋಳ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಧೋಳ ತಾಲ್ಲೂಕಿನಲ್ಲಿ ಸವಳು ಜವಳಿನಿಂದ ಹಾನಿಗೊಳಗಾದ ಭೂಮಿಯ ವಿಸ್ತೀರ್ಣ ಎಷ್ಟು: (ವಿವರಗಳನ್ನು ಎಕರೆಗಳಲ್ಲಿ ನೀಡುವುದು);

ಆ) ಸವಳು ಜವಳಿನಿಂದ ಹಾನಿಗೊಳಗಾದ ಕ್ಷೇತ್ರದಲ್ಲಿ ಅಂತರ ಬಸಿಗಾಲುವೆಗಳನ್ನು ನಿರ್ಮಾಣಮಾಡಿ ಸುಧಾರಣೆಗಳನ್ನು ಮಾಡಲು ಸರ್ಕಾರ ಹಾಕಿಕೊಂಡಿರುವ ಯೋಜನೆಯ ವಿವರಗಳನ್ನು ನೀಡುವುದು;

ಇ) ಈ ಯೋಜನೆಯ ಒಟ್ಟು ಮೊತ್ತವೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಮುಧೋಳ ತಾಲ್ಲೂಕಿನಲ್ಲಿ ಒಟ್ಟು 11092.31 ಎಕರೆಯಷ್ಟು ಭೂಮಿಯು ಸವಳು ಜವಳುನಿಂದ ಹಾನಿಗೊಳಗಾಗಿದೆ.

ಆ) ಕೇಂದ್ರ ಸರ್ಕಾರದ ಮಾರ್ಗಸೂಚಿಗಳನುಸಾರ ಹಾನಿಗೊಳಗಾದ ಕ್ಷೇತ್ರದಲ್ಲಿ ಅಂತರಬಸಿಗಾಲುವೆಗಳನ್ನು ನಿರ್ಮಾಣ ಮಾಡಿ ಸುಧಾರಣೆಗಳನ್ನು ಮಾಡಲು ಪ್ರಸ್ತಾವನೆಗಳನ್ನು ತಯಾರಿಸಿ, ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ, ಕೇಂದ್ರ ಸರ್ಕಾರದ ಅನುಮೋದನೆ ಪಡೆದ ನಂತರ ಅನುಷ್ಠಾನಗೊಳಿಸಬೇಕಾಗಿರುತ್ತದೆ. ಅದರಂತೆ ಪ್ರಸ್ತಾವನೆಗಳನ್ನು ತಯಾರಿಸುತ್ತಿದ್ದು, ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆದ ನಂತರ ಈ ಕಾರ್ಯಕ್ರಮವನ್ನು ಅನುದಾನದ ಲಭ್ಯತೆಯನ್ನು ಅನುಸರಿಸಿ ಅನುಷ್ಠಾನಗೊಳಿಸಲಾಗುವುದು.

ಮುಧೋಳ ತಾಲ್ಲೂಕಿನ 11092.31 ಎಕರೆ ವಿಸ್ತೀರ್ಣದಲ್ಲಿ ಇಲ್ಲಿ ತನಕ 381.24 ಎಕರೆ ಕ್ಷೇತ್ರವನ್ನು ಸುಧಾರಿಸಲಾಗಿದೆ.

ಇ) ಬಾಕಿ ಉಳಿದ 10711.07 ಎಕರೆ ಕ್ಷೇತ್ರ ಸುಧಾರಣೆಗೆ ರೂ. 1734.60 ಲಕ್ಷಗಳು ಬೇಕಾಗುತ್ತದೆ.

ಶ್ರೀ ಗೋವಿಂದಪ್ಪ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದು ಅದು ನನಗೆ ತೃಪ್ತಿಕರವಾಗಿಲ್ಲ. ಮುಧೋಳ ತಾಲ್ಲೂಕಿನ ಒಟ್ಟು ಜಮೀನಿನಲ್ಲಿ 5240 ಹೆಕ್ಟೇರ್ ಪ್ರದೇಶದಲ್ಲಿ ಸವಳು-ಜವಳಾಗಿದೆ. ಆ ಸವಳು-ಜವಳನ್ನು ತೆಗೆಯುವುದಕ್ಕೆ ಸರ್ಕಾರ ಹಾಕಿಕೊಂಡಂಥ ಕಾರ್ಯಕ್ರಮಗಳೇನು ಎಂದು ನಾನು ಪ್ರಶ್ನೆ ಕೇಳಿದ್ದೆ. 'ಅನುದಾನದ ಆಧ್ಯತೆ ಮೇಲೆ ಕೇಂದ್ರ ಸರ್ಕಾರಕ್ಕೆ ಯೋಜನೆಯನ್ನು ಕಳುಹಿಸಿ ಒಪ್ಪಿಗೆ ಪಡೆದು ಮಾಡುತ್ತೇವೆಂದು' ಉತ್ತರದಲ್ಲಿ ತಿಳಿಸಿದ್ದಾರೆ. ಇಲ್ಲಿ ಬಡ ರೈತರಿಗೆ ಸಂಬಂಧಿಸಿದ ಬಹಳ ಬೆಲೆಬಾಳುವಂಥ ಜಮೀನಾಗಿರುತ್ತದೆ. ಕೇಂದ್ರ ಸರ್ಕಾರದ ಯೋಜನೆ ಒಂದೆರಡು ವರ್ಷದಲ್ಲಿ ಬರುವುದಿಲ್ಲ. ಈಗಾಗಲೇ ಕಳುಹಿಸಿದಂಥ ಯೋಜನೆಗಳು ಅಲ್ಲಿ ಹತ್ತೆಂಟು ವರ್ಷ ಪೆಂಡಿಂಗ್‌ನಲ್ಲಿವೆ. ಅದಕ್ಕಾಗಿ, ಸರ್ಕಾರ ಅದಕ್ಕೆ ವಿಶೇಷ ಅನುದಾನ ಕೊಟ್ಟು, ಮುಂದಿನ ಬಜೆಟ್ ಅಂದರೆ 2005-06ರ ಸಾಲಿನಲ್ಲಿ ಸುಮಾರು 20 ಕೋಟಿ ರೂಪಾಯಿಗಳನ್ನು ಒದಗಿಸಿ ಸವಳು-ಜವಳನ್ನು ತೆಗೆಯಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಆ ಕೆಲಸದಲ್ಲಿ ಇನ್ನೇನಾಗಿದೆ ಎಂದರೆ, ಹಳೆಯ ಪದ್ಧತಿ ಪ್ರಕಾರ ಓಪನ್ ಡ್ರೈನೇಜ್ ಮಾಡಿ ಸವಳು ತೆಗೆಯಲಿಕ್ಕೆ ಹೋಗುತ್ತಾರೆ. ಅದರಿಂದ ಸಾಧ್ಯವಾಗುವುದಿಲ್ಲ. ಆ ಮಣ್ಣು ಪುನಃ ಅದೇ ತಗ್ಗಿನಲ್ಲಿ ಬಿದ್ದು ಮುಚ್ಚಿಹೋಗಿ ಕೆಲಸ ಸರಿಯಾಗಿ ಆಗುವುದಿಲ್ಲ. ರೈತರು ತಿಳುವಳಿಕೆ ಇಲ್ಲದೆ ನಾಲೆಗಳನ್ನು ಒತ್ತುವರಿ ಮಾಡಿಕೊಂಡು ಮುಚ್ಚಿಬಿಟ್ಟಿದ್ದಾರೆ. ಅದಕ್ಕಾಗಿ ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಆ ನಾಲೆಗಳನ್ನು ಪುನಃ ಓಪನ್‌ಮಾಡಿ ಡ್ರೈನೇಜ್ ಮಾಡಿದರೆ ಶಾಶ್ವತವಾದ ಕೆಲಸವಾಗುತ್ತದೆ. ಅದರ ಜೊತೆಯಲ್ಲಿ ಸಬ್ ಸರ್‌ಫೇಸ್ ಡ್ರೈನೇಜನ್ನು ಕೂಡ ಇಂಟರ್ನಲ್ ಮಾಡಬೇಕಾಗುತ್ತದೆ. ಆ ರೀತಿಯಾಗಿ ಮಾಡಿದರೆ ಶಾಶ್ವತವಾಗಿ ಈ ಸವಳು-ಜವಳು ಹೋಗುತ್ತದೆ. ಅದಕ್ಕಾಗಿ, ಮುಧೋಳ ತಾಲ್ಲೂಕಿನಲ್ಲಿ ಮೊಟ್ಟಮೊದಲನೆಯ ಆಧ್ಯತೆಯಾಗಿ 38 ಕಿ.ಮೀ. ಇರುವಂಥ ಪ್ರಮುಖ ನಾಲೆಗಳನ್ನು ಓಪನ್ ಮಾಡುವಂಥ ಕೆಲಸವನ್ನು ಮಾಡಬೇಕು. ಆ ನಾಲೆಗಳನ್ನು ಓಪನ್ ಮಾಡಲಿಕ್ಕೆ ಪ್ರತಿ ಕಿಲೋಮೀಟರ್‌ಗೆ ಸುಮಾರು 13 ಲಕ್ಷ ರೂಪಾಯಿಗಳ ಖರ್ಚು ಸರ್ಕಾರಕ್ಕೆ ಬರುತ್ತದೆ. ಅದಕ್ಕೆ ಮುಂದಿನ ಬಜೆಟ್‌ನಲ್ಲಿ 17-18 ಕೋಟಿ ರೂಪಾಯಿಗಳನ್ನಾದರೂ ಸರ್ಕಾರ ಕೊಟ್ಟು ಕೆಲಸ ಪ್ರಾರಂಭ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಹಾಗೆಯೇ ನಾಲಾ ಒತ್ತುವರಿ ಮಾಡಿಕೊಳ್ಳದ ಹಾಗೆ ಸಂಬಂಧಪಟ್ಟಂಥ ಅಧಿಕಾರಿಗಳಿಗೆ ನೋಡಿಕೊಳ್ಳಲಿಕ್ಕೆ ಕೂಡ instructions ಕೊಡಬೇಕು. ಕೃಷಿ ಇಲಾಖೆಯವರಿದ್ದಾರೆ, ನೀರಾವರಿ ಇಲಾಖೆಯವರಿದ್ದಾರೆ ಅವರೆಲ್ಲರಿಗೂ ಸಹ ಒಂದು ಆದೇಶವನ್ನು ಸರ್ಕಾರ ಹೊರಡಿಸಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದು ನಿಜವಾಗಿಯೂ ಈ ಕಾಡಾ ವ್ಯಾಪ್ತಿಯಲ್ಲಿ ಬರತಕ್ಕಂಥ ಅನೇಕ ತಾಲ್ಲೂಕುಗಳಲ್ಲಿ ಈ ಸಮಸ್ಯೆ ಇದೆ. ಮುಧೋಳದಲ್ಲಿ ಅವರು ಹೇಳಿದ ಹಾಗೆ, ನನ್ನಲಿರತಕ್ಕಂಥ ಮಾಹಿತಿ ಪ್ರಕಾರ 4489 ಹೆಕ್ಟೇರ್‌ನಲ್ಲಿ ಈ ಸಮಸ್ಯೆ ಇದೆ. ಅದಕ್ಕೆ ಈಗಾಗಲೇ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಆದರೆ ಹಣದ ಅಭಾವದಿಂದ ಕೇವಲ 154 ಹೆಕ್ಟೇರ್ ಪ್ರದೇಶವನ್ನು ಮಾತ್ರ ತೆಗೆದುಕೊಳ್ಳುವುದಕ್ಕೆ ಆಯಿತು.

ಕೇವಲ 28 ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಿದೆ. ಆದ್ದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲವೆಂದು ನಮಗೂ ಕೂಡ ಗೊತ್ತಿದೆ. ಅದಕ್ಕೆ ಸಮಗ್ರವಾಗಿ ಕಾಡಾ, ಘಟಪ್ರಭಾ, ಮಲಪ್ರಭಾ, ಅದೇ ರೀತಿಯಾಗಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಕೆಳಗೆ ಇರತಕ್ಕಂಥದ್ದು ಮತ್ತು ತುಂಗಭದ್ರಾ ಪ್ರಾಜೆಕ್ಟ್‌ಗಳ ಕೆಳಗಿರತಕ್ಕಂಥದ್ದು, ಹೀಗೆ ಇವೆಲ್ಲವನ್ನೂ ಸೇರಿಸಿ ಒಂದು ಸವಿಸ್ತಾರವಾಗಿ ಅಭ್ಯಾಸ ಮಾಡಿ ಇದನ್ನು ಕೇಂದ್ರ ಸರ್ಕಾರಕ್ಕೆ ವಿಶೇಷವಾಗಿ ಮುಧೋಳ ಬಗ್ಗೆ ಮತ್ತು ಈ ನಮ್ಮ ಮಲಪ್ರಭಾ ಘಟಪ್ರಭಾ ಸಂಬಂಧಪಟ್ಟಂತೆ ತಾಲ್ಲೂಕುಗಳ ಬಗ್ಗೆ ಒಂದು ಪ್ರೊಜೆಕ್ಷನ್ ಅನ್ನು ಕೊಟ್ಟಿದ್ದೇವೆ. ಆದರೆ ಅವರು ಹೇಳಿದ ಹಾಗೆ ಅಲ್ಲಿ ಕೇಂದ್ರದವರೂ ಸಹ ಕೊಡುತ್ತಿಲ್ಲ. ಏಕೆಂದರೆ 50 ಪರ್ಸೆಂಟ್‌ನಷ್ಟು ಹಣ ನಾವು ಕೊಡಬೇಕು. ಇನ್ನು 50 ಪರ್ಸೆಂಟ್ ಕೇಂದ್ರದವರು ಕೊಡಬೇಕಾಗುತ್ತದೆ. ಆದರೆ ಇತ್ತೀಚೆಗೆ ಮತ್ತೊಂದು ಕಂಡಿಶನ್ ಹಾಕಿದ್ದಾರೆ. ಆ 50 ಪರ್ಸೆಂಟ್‌ನಲ್ಲಿ ಪುನಃ 10 ಪರ್ಸೆಂಟ್ ಹಣವನ್ನು ಫಲಾನುಭವಿಗಳು ಹಾಕಬೇಕೆಂದು ಹೇಳಿದ್ದಾರೆ. ಈಗಾಗಲೇ ಸರ್ವೇಸಾಮಾನ್ಯ ಕೆಲಸಕ್ಕೆ ಯಾರೂ ಹಣ ಕೊಡುವುದಿಲ್ಲ. ಈ ಸವಳು ಜಮೀನನ್ನು ಮತ್ತು alkaline land ಅನ್ನು ಸರಿಪಡಿಸಬೇಕೆಂದರೆ ಬಹುಶಃ ಇದಕ್ಕೆ ರೈತರು ಹಣ ಕೊಟ್ಟು ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಸರ್ಕಾರವೇ ಇದನ್ನು ಯಾವ ರೀತಿಯಾಗಿ ವಹಿಸಿಕೊಳ್ಳಬೇಕೆನ್ನುವುದು ಒಂದು ಚಿಂತನೆಯಾಗಿದೆ. ಆದರೂ ಇದಕ್ಕೆ ಹೆಚ್ಚಿನ ಹಣ ಬೇಕು. ಈಗ ಕೇವಲ ಮುಧೋಳ ಒಂದೇ ಒಂದು, ಈ ತಾಲ್ಲೂಕಿನಲ್ಲಿ ನಾವು ಉಳಿದಂಥ ಜಮೀನು ಸುಮಾರು 4334 ಹೆಕ್ಟೇರ್ ಸರಿಪಡಿಸಬೇಕಾದರೆ 17 ಕೋಟಿ 33 ಲಕ್ಷ ರೂಪಾಯಿಗಳು ಬೇಕು. ನಾವು ಎಲ್ಲಾ ಹಾಕಿಕೊಂಡರೆ ಸುಮಾರು 36-37 ಕೋಟಿ ರೂಪಾಯಿಗಳನ್ನು ಇದಕ್ಕೆ ಒದಗಿಸಬೇಕಾಗುತ್ತದೆ. ಅದಕ್ಕೆ ಇದರಲ್ಲಿ ಎಷ್ಟು ಸಾಧ್ಯವಾಗುತ್ತದೆ ಅದನ್ನು ನಾನು ಆರ್ಥಿಕ ಇಲಾಖೆಗೆ ಮನವಿ ಮಾಡಿಕೊಂಡು ಆದಷ್ಟು ಹೆಚ್ಚಿನ ಹಣವನ್ನು ವಿಶೇಷವಾಗಿ ಮುಧೋಳ ತಾವು ಹೇಳಿದ ಹಾಗೆ ಅದೇ ರೀತಿ ಬಾಗಲಕೋಟೆಯಲ್ಲೂ ಈ ಸಮಸ್ಯೆ ಇದೆ ಮತ್ತು ವಿಶೇಷವಾಗಿ ನಮ್ಮ ಬೆಳಗಾಂನಲ್ಲೂ ಕೂಡ ಈ ಸಮಸ್ಯೆ ಇದೆ, ಇದೆಲ್ಲವನ್ನೂ ನಾವು ಗಮನದಲ್ಲಿಟ್ಟುಕೊಂಡು ಎಲ್ಲಿ ಹೆಚ್ಚು ಜಮೀನಿಗೆ ಈ ಒಂದು ಸಲಿನಿಟಿ ಮತ್ತು ಅಲ್ಕಲಿನಿಟಿ ಬರುತ್ತದೆ ಅಲ್ಲಿಗೆ ಹೆಚ್ಚಿನ ಹಣವನ್ನು ಒದಗಿಸುವ ಪ್ರಯತ್ನ ಮಾಡುತ್ತೇನೆ ಮತ್ತು ಉಳಿದ ಏನಾದರೂ ಸಮಸ್ಯೆ ಇದ್ದರೆ ತಮಗೆ ಸಮಯವಿದ್ದರೆ, ತಾವು ಬಂದು ಬೇಕಾದರೆ ಚರ್ಚೆ ಮಾಡಬಹುದು. ನಮ್ಮ ಅಧಿಕಾರಿಗಳೂ ಕೂಡ ಇರುತ್ತಾರೆ. ಸಂಬಂಧಪಟ್ಟ ಯಾವ ಅಧಿಕಾರಿಗೆ ನಿರ್ದೇಶನ ಕೊಡಬೇಕೋ ಅದನ್ನು ಬೇಕಾದರೆ ಕೊಡಿಸೋಣ.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರಿಗೆ, ಮುಧೋಳ ತಾಲ್ಲೂಕು ಪ್ರಕಾರ, ನಮ್ಮ ಜಮಖಂಡಿ ತಾಲ್ಲೂಕಿನಲ್ಲಿಯೂ ಹತ್ತಾರು ಸಾವಿರ ಎಕರೆ ಸವಳು-ಜವಳಿನಿಂದ ಫಲವತ್ತಾದ ಜಮೀನು ಹಾಳಾಗುವ ಪರಿಸ್ಥಿತಿ ಇದೆ. ಈ ಸವಳು-ಜವಳು ಪ್ರತಿ ವರ್ಷವೂ ಹಂತ ಹಂತವಾಗಿ ಫಲವತ್ತಾದ ಜಮೀನನ್ನು ಕಬಳಿಸುತ್ತಾ ಬಂದಿದೆ. ಇದಕ್ಕೆ ಸರ್ಕಾರದ ಮಟ್ಟದಲ್ಲಿ ಯಾವುದಾದರೊಂದು ಉಪಯುಕ್ತವಾದ ಯೋಜನೆ ಮೂಲಕ ಹಣವನ್ನು ಬಿಡುಗಡೆ ಮಾಡಿ ಆ ಫಲವತ್ತಾದ ರೈತರ ಜಮೀನನ್ನು ಉಳಿಸಿಕೊಡಬೇಕು. ಈಗಾಗಲೇ ಎಸ್‌ಜಿಆರ್‌ವೈನಲ್ಲಿ ಪ್ರತಿ ಪಂಚಾಯಿತಿಗೆ ಒಂದು ಲಕ್ಷ ಹಣವನ್ನು ಜಲ ಸಂರಕ್ಷಣೆ ಸಲುವಾಗಿ ಉಪಯೋಗ ಮಾಡುವಂಥ ಪರಿಸ್ಥಿತಿ ಇದೆ. ಆದರೆ, ವಿಚಿತ್ರವೆಂದರೆ, ಎಲ್ಲಿ ಸವಳು-ಜವಳು ಜಮೀನುಗಳಿದ್ದ ಊರುಗಳಿವೆ, ಅಲ್ಲಿ ಜಲ ಸಂರಕ್ಷಣೆ ಅವಶ್ಯಕತೆ

ಇರುವುದಿಲ್ಲ. ಅಂಥ ಕಡೆ ಲಕ್ಷ, 2 ಲಕ್ಷಗಟ್ಟಲೆ ಜಲ ಸಂರಕ್ಷಣೆ ನೆಪದಲ್ಲಿ ಹಣ ಹಾಳಾಗುವ ಪರಿಸ್ಥಿತಿ ಇದೆ. ಆ ಜಲ ಸಂರಕ್ಷಣೆಯನ್ನು ಬದಲಾವಣೆ ಮಾಡಿ, ಎಲ್ಲಿ ಸವಳು-ಜವಳು ಜಮೀನಿದೆ, ಅಂಥ ಊರುಗಳಲ್ಲಿ, ಆ ಸವಳು-ಜವಳು ತೆಗೆಯುವಂಥ ನಾಲೆಗಳನ್ನು ಅಭಿವೃದ್ಧಿಪಡಿಸಲಿಕ್ಕೆ ಅಥವಾ ಒಳಚರಂಡಿ ಮಾಡಲು ಆ ಹಣವನ್ನು ಉಪಯೋಗ ಮಾಡಿದರೆ ಆ ಫಲವತ್ತಾದ ಜಮೀನನ್ನು ಸ್ವಲ್ಪವಾದರೂ ಉಳಿಸಲು ಸಾಧ್ಯವಾಗುತ್ತದೆನ್ನುವ ಮಾತನ್ನು ಹೇಳಬಯಸುತ್ತೇನೆ. ಏಕೆಂದರೆ, ನನ್ನ ತಾಲ್ಲೂಕಿನಲ್ಲಿ ವಿಶೇಷವಾಗಿ ಹೇಳಬೇಕಾದರೆ, ಹತ್ತಾರು ಹಳ್ಳಿಗಳು ನೂರಕ್ಕೆ 90ರಷ್ಟು ಜಮೀನುಗಳು ಸವಳು-ಜವಳಿನಿಂದ ಒಕ್ಕಲುತನವನ್ನೇ ನಿಲ್ಲಿಸುವ ಧಾರುಣ ಸ್ಥಿತಿ ಇದೆ. ಅದಕ್ಕಾಗಿ ಸರ್ಕಾರ ತೀವ್ರವಾದ ಗಮನವನ್ನು ಆ ಕಡೆ ಕೊಟ್ಟು ಆ ಜಮೀನನ್ನು ಉಳಿಸಿಕೊಡುವ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಾರಜೋಳರವರು ಕೇಳಿದ ಪ್ರಶ್ನೆಗೆ ನಾನು ಉತ್ತರ ಹೇಳಿದ್ದೇನೆ. ಈ ಸಮಸ್ಯೆ ಇಲ್ಲವೆಂದಲ್ಲ. ಇದೆ. ಆದರೆ ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ನಾನು ಈಗಾಗಲೇ ಹೇಳಿದ ಹಾಗೆ, ಕೇವಲ 100 ಕೋಟಿ ರೂಪಾಯಿ ನಮ್ಮ ಮಲಪ್ರಭಾ ಮತ್ತು ಘಟಪ್ರಭಾ ಈ ಕಾಡಾಗಳಿಗೇ ಬೇಕಾಗುತ್ತದೆ. ಉಳಿದ ನಮ್ಮ ಅಪ್ಪರ್‌ಕೃಷ್ಣ ಮತ್ತು ತುಂಗಭದ್ರಾ ಈ ಕಾಡಾಗಳಿಗೆ ರೆಸ್ಪೆಕ್ಟೀವ್ಲಿ 152 ಕೋಟಿ ರೂಪಾಯಿ ಅಪ್ಪರ್‌ಕೃಷ್ಣಗೆ ಮತ್ತು ಸುಮಾರು 36 ಕೋಟಿ ರೂಪಾಯಿ ತುಂಗಭದ್ರಾಗೆ ಬೇಕಾಗುತ್ತದೆ. ಅಂದರೆ, ಟೋಟಲಿ 200 ಕೋಟಿ ರೂಪಾಯಿಗಳ ಮೇಲ್ಪಟ್ಟು ಹಣ ಬೇಕಾಗುತ್ತದೆ. ಆದರೆ, ನಾವು ಎಲ್ಲೆಲ್ಲಿ ಸಾಧ್ಯವಿದೆ ಅಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿ ಪ್ರಯತ್ನ ಮಾಡಿದರೂ ಕೂಡ, ಈ ಒಂದು ಕೆಲಸಕ್ಕೆ ಹೆಚ್ಚಿನ ಹಣ ಇಲ್ಲ. ಅದಕ್ಕೆ ತಾವು ಹೇಳಿದಿರಿ ಮತ್ತು ಕಾರಜೋಳರವರ ಉದ್ದೇಶ ಕೂಡ ಅದೇ ಇದೆ. ಇದಕ್ಕೆ ಹೆಚ್ಚಿನ ಹಣ ಕೊಡಿಸಿ, ಈ ಸಮಸ್ಯೆ ಎಲ್ಲಿದೆ, ಅಲ್ಲಿ ಆದಷ್ಟು ಅದನ್ನು ಬಗೆಹರಿಸಬೇಕು, ಇಲ್ಲದಿದ್ದರೆ, ಶಾಶ್ವತವಾಗಿ ಆ ರೈತರ ಜಮೀನುಗಳು ಕೆಟ್ಟು ಹೋಗುತ್ತವೆ ಎನ್ನುವ ಪ್ರಸ್ತಾಪವನ್ನು ಅವರು ಮಾಡಿದ್ದಾರೆ. ನಾನು ಅದನ್ನು ಒಪ್ಪುತ್ತೇನೆ. ಆದರೆ, ಹಣದ ಕೊರತೆ ಇದ್ದ ಕಾರಣ, ತಕ್ಷಣ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ಎಷ್ಟು ಹೆಚ್ಚಿನ ರೀತಿಯಲ್ಲಿ ನಾವು ತೆಗೆದುಕೊಳ್ಳಬಹುದೋ, ಅಷ್ಟು ನಾನು ಪ್ರಯತ್ನ ಮಾಡುತ್ತೇನೆ.

ಐ.ಪಿ.ಡಿ. ಸಾಲಪ್ಪನವರ ವರದಿ ಅನುಷ್ಠಾನ

29 (432) : ಶ್ರೀ ಅಂಜನೇಯ ಹೆಚ್. (ಭರಮಸಾಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಐ.ಪಿ.ಡಿ. ಸಾಲಪ್ಪನವರ ವರದಿಯನ್ನು ಸರ್ಕಾರ ಅಂಗೀಕರಿಸಿರುವುದೆ;
2) ಹಾಗಿದ್ದಲ್ಲಿ ಈ ವರದಿಯಲ್ಲಿರುವ ಶಿಫಾರಸ್ಸುಗಳು ಯಾವುವು;
3) ಈ ಶಿಫಾರಸ್ಸುಗಳನ್ನು ಜಾರಿಗೆ ತರಲಾಗಿದೆಯೇ;
4) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

1) ಹೌದು.
2) ಪ್ರಮುಖ ಶಿಫಾರಸ್ಸುಗಳನ್ನು ಅನುಬಂಧದಲ್ಲಿ ನೀಡಿದೆ.

3) ಎಲ್ಲಾ ಪ್ರಮುಖ ಶಿಫಾರಸ್ಸುಗಳನ್ನು ಜಾರಿ ಮಾಡಲಾಗಿದೆ.
4) ಉದ್ಭವಿಸುವುದಿಲ್ಲ.

ಅನುಬಂಧ

Important recommendation of Sri I.P.D. Salappa

1. All dry latrines in the town should be converted into flush type latrines.
2. There should be one sweeper for every 700 population in the case of Municipalities and 500 population in the case of the Corporations.
3. A minimum of 18% of the posts of Pourakarmikas should be reserved for SC/ST and recruitment to the said post may also be made from other communities.
4. All Pourakarmikas who are temporarily employed and who have put in continuous service of not less than one year, should be confirmed forthwith.
5. All the Pourakarmikas should be made to avail of one months leave in a block period of 2 years or 15 days leave in a year for the rest and relaxation.
6. In respect of women workers of Pourakarmikas maternity leave should be sanctioned as per K.C.S.R.
7. The timings of working of the Pourakarmikas should be as follows.

   6.00 AM to 10.00 AM.
   2.00 PM to 5.00 PM.

   They should work halfday on Sunday and another day on some other day to be determined by the Municipal Councils (to equal 8 hours work) Half-a-day holiday should be given the next day on 15th August 26th January and 2nd October of each year.
8. Pourakarmikas carrying rubbish in vehicle should be with one pair of rubber hand gloves, face-protections and gumboat, in addition to the usual uniforms given to all other categories.
9. While distributing sites, preference should be given to the Pjourakarmikas.

10. If there are quarters belonging to the Municipalities, they should be allotted to the sweepers and scavengers, and other civic amounting may also be provided immediately.
11. The Municipalities may construct community halls containing a radio set, a handicraft section for women and girls and gymnasium depending upon their financial position. The Corporation of the City of Bangalore should build a community hall at Jakkarayanakere Gowripalya within a month.
12. The Municipal quarters constructed for this employees should be allotted to Pourakarmikas and other employees. As far its possible, the quarters of Pourakarmikas should not be side by side.
13. The Municipalities and Corporation should give a guarantee for salary deductions, so that the Nationalised Banks may come forward to give loans on long term period and recoverable in easy instalments.
14. The Medical expenditure incurred by the Pourakarmikas should be re-imbursed in accordant with the Medical re-imbursement rules.
15. The Municipalities should extend all facilities to the children of Pourakarmikas upto the age of college going stage by way of giving free clothing books and hostel facilities. This expenditure should be met out of the 18% budget provisions of the Municipalities.
16. Encouragement should be given to educate the Pourakarmikas on the evils of the large families.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ,ಈ ರಾಜ್ಯದಲ್ಲಿ ಜೀತ ಪದ್ಧತಿ ಏನಾದರೂ ಒಂದು ಕ್ಷೇತ್ರದಲ್ಲಿದೆ ಎಂದು ಹೇಳಿದರೆ ಅದು ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಮಟ್ಟದಲ್ಲಿದೆ. ಕಳೆದ 20 ವರ್ಷಗಳಿಂದ ಯಾವುದೇ ರೀತಿಯ ಹೊಸ ನೇಮಕಾತಿ ಈ ಕ್ಷೇತ್ರದಲ್ಲಿ ಆಗಿಲ್ಲ. ಐಪಿಡಿ ಸಾಲಪ್ಪನವರ ವರದಿಯನ್ನು ಕರ್ನಾಟಕ ಸರ್ಕಾರ ಒಪ್ಪಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇತ್ತೀಚಿಗೆ ಪೌರ ಕಾರ್ಮಿಕರ ವಿರೋಧಿತನವನ್ನು ಮತ್ತು ದಲಿತ ವಿರೋಧಿ ನೀತಿಯನ್ನು ಅನುಸರಿಸುವ ಒಂದು ಆಜ್ಞೆ ಪೌರಾಡಳಿತ ಇಲಾಖೆಯಿಂದ ಹೊರ ಹೊಮ್ಮಿದೆ. ಅಂದರೆ 700 ಜನರಿಗೆ ಒಬ್ಬ ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಬೇಕೆನ್ನುವುದನ್ನು ಸರ್ಕಾರ ಒಪ್ಪಿದೆ.

ಆದರೆ, ಕಳೆದ ವರ್ಷ ಸೆಪ್ಟೆಂಬರ್ ತಿಂಗಳಿನಲ್ಲಿ ಪೌರಾಡಳಿತ ಇಲಾಖೆ ಒಂದು ಆದೇಶ ಹೊರಡಿಸಿದೆ. ಒಂದು ಸಾವಿರ ಜನಸಂಖ್ಯೆಗೆ ಒಬ್ಬ ನೌಕರನನ್ನು ನೇಮಕ ಮಾಡುತ್ತೇವೆಂದು ಒಂದು ಆದೇಶ ಹೊರಡಿಸಿದ್ದಾರೆ. ಐಪಿಡಿ ಸಾಲಪ್ಪನವರ ವರದಿಯಲ್ಲಿ ಏನು 700 ಜನಸಂಖ್ಯೆಗೆ ಒಬ್ಬ ಪೌರ ಕಾರ್ಮಿಕನನ್ನು ನೇಮಕಾತಿ ಮಾಡುತ್ತೇವೆಂದು ಹೇಳಿದ್ದಾರೆ, ಆ ರೀತಿ ಅವರ ನೇಮಕಾತಿ ಆಗಿದೆಯೇ? ಅದು ಆಗಲಿಲ್ಲ. ಮುಂದಿನ ನನ್ನ ಪ್ರಶ್ನೆ ಏನೆಂದರೆ, ಕಳೆದ 20 ವರ್ಷಗಳಿಂದ ಆ ಪೌರ ಕಾರ್ಮಿಕರನ್ನು ಖಾಯಂ ಆಗಿ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಇಲ್ಲಿ ನಡೆದಿಲ್ಲ. ಸ್ವಚ್ಛತಾ ಕಾರ್ಯವನ್ನು ಒಬ್ಬ ಶ್ರೀಮಂತನಿಗೆ, ಗುತ್ತಿಗೆದಾರರಿಗೆ ಕೊಡುತ್ತಿದ್ದಾರೆ. ಆತ ಲಕ್ಷಾಂತರ ರೂಪಾಯಿಗಳನ್ನು ಅಲ್ಲಿ ಲೂಟಿ ಮಾಡಿಕೊಂಡು ಹೋಗುತ್ತಿದ್ದಾನೆ. ಅಲ್ಲಿ ಕಸ ಗುಡಿಸುವ ಕೆಲಸವನ್ನು ಅಮಾಯಕದಿಂದ ಮಾಡಿಸಿಕೊಂಡು 300–400 ರೂಪಾಯಿಗಳ ಕೂಲಿ ಕೊಡುವ ಜೀತಗಾರಿಕೆ ಅಲ್ಲಿಟ್ಟುಕೊಂಡು ಇವತ್ತು ಜೀವಂತವಾಗಿ ಅವರನ್ನು ದುಡಿಸಿಕೊಳ್ಳುವ ಕೆಲಸ ನಗರಸಭೆ, ಪುರಸಭೆಯಲ್ಲಿ ನಡೆಯುತ್ತಿದೆ. ಆದುದರಿಂದ, ಗುತ್ತಿಗೆ ಆಧಾರವನ್ನಿಟ್ಟುಕೊಂಡು ಮಾಡುವ ಪದ್ಧತಿಯನ್ನು ತೆಗೆದು ಹಾಕಿ, ನೀವು ನಿಜವಾಗಲೂ ಐಪಿಡಿ ಸಾಲಪ್ಪನವರ ವರದಿಯನ್ನು ಒಪ್ಪಿದ್ದರೆ, ಅದರ ಪ್ರಕಾರ ಜನಸಂಖ್ಯೆಗನುಗುಣವಾಗಿ 700 ಜನರಿಗೆ ಒಬ್ಬ ಪೌರ ಕಾರ್ಮಿಕನನ್ನು ಖಾಯಂ ಆಗಿ ನೇಮಕ ಮಾಡಿಕೊಳ್ಳಬೇಕೆಂದು ಹೇಳಿ ನಿಮ್ಮಲ್ಲಿ ಒತ್ತಾಯಿಸುತ್ತೇನೆ. ಜೊತೆಗೆ, ಇವರ ಆರೋಗ್ಯವನ್ನು ಕಾಪಾಡಬೇಕೆಂದು ವಿಶೇಷವಾಗಿ ಹೇಳಿದ್ದಾರೆ. ಅವರ ಆರೋಗ್ಯ ಕಾಪಾಡಲು ಯಾವುದೇ ರೀತಿಯಿಂದ ಸರ್ಕಾರದ ನೆರವು, ನಗರಸಭೆ ನೆರವು ಇಲ್ಲಿಯವರೆಗೆ ದೊರೆತಿಲ್ಲ. ಕಾಲ್ನಡಿಗೆ ಕಸ ಗುಡಿಸುವವರಿಗೆ, ಎಲ್ಲಾ ರೀತಿಯ ಸೌಕರ್ಯವಿದೆ. ಬೀದಿಯಲ್ಲಿ ಕಸ ಗುಡಿಸುವವರಿಗೆ, ಮಲ ಹೊರುವವರಿಗೆ....

ಅಧ್ಯಕ್ಷರು : ಆಂಜನೇಯರವರೇ, ಪ್ರಶ್ನೆಯನ್ನು ಸಂಕ್ಷಿಪ್ತವಾಗಿ ಕೇಳಿ.

ಶ್ರೀ ಹೆಚ್. ಆಂಜನೇಯ : ಸರ್ಕಾರಿ ನೌಕರರಿಗೆ ಏನು ಸೌಲಭ್ಯ ಸಿಗುತ್ತದೆ, ಅದೇ ರೀತಿಯಲ್ಲಿ ಪೌರ ಕಾರ್ಮಿಕರಿಗೆ ಐಪಿಡಿ ಸಾಲಪ್ಪ ವರದಿಯಲ್ಲಿ ಹೇಳಿರುವಂತೆ ತಾವು ಇವರಿಗೂ ಎಲ್ಲಾ ಸವಲತ್ತುಗಳನ್ನೂ ಕಲ್ಪಿಸಿಕೊಡಲು ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ. ಐಪಿಡಿ ಸಾಲಪ್ಪನವರ ವರದಿಯನ್ನು ಕರ್ನಾಟಕ ಸರ್ಕಾರ ಒಪ್ಪಿದೆ. ದಿವಂಗತ ಬಸವಲಿಂಗಪ್ಪನವರ ಕಾಲದಲ್ಲಿ ಮಲ ಹೊತ್ತು ಮಾಡುವ ಕೆಲಸ ಕಾರ್ಯಗಳೇನಿವೆ ಮೊಟ್ಟ ಮೊದಲನೆಯದಾಗಿ ಅವರು ಪೌರಾಡಳಿತ ಸಚಿವರಾಗಿದ್ದಾಗ ಅದನ್ನು ನಿಲ್ಲಿಸಿದ್ದರು. ಆಗ ನಾನೂ ಕೂಡ ಒಬ್ಬ ಶಾಸಕನಾಗಿದ್ದೆ. ಐಪಿಡಿ ಸಾಲಪ್ಪನವರೂ ಕೂಡ ಶಾಸಕರಾಗಿದ್ದರು. ಅವರು ಬಸವಲಿಂಗಪ್ಪನವರಿಗೆ ಬಹಳ ಬೇಕಾದವರು. ಅದಕ್ಕೆ ಐಪಿಡಿ ಸಾಲಪ್ಪನವರ ನೇತೃತ್ವದಲ್ಲಿ ಸ್ಕ್ಯಾವೆಂಜರ್ಸ್ ಮಲ ಹೊರುವುದನ್ನು ನಿಲ್ಲಿಸಿದ್ದು ಮತ್ತು ಅವರ ಸಕಲ ಕೆಲಸ ಕಾರ್ಯಗಳನ್ನು ಮಾಡಬೇಕೆನ್ನುವ ರೀತಿಯಲ್ಲಿ ಐಪಿಡಿ ಸಾಲಪ್ಪನವರ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿದರು. ಐಪಿಡಿ ಸಾಲಪ್ಪನವರು ವರದಿ ಕೊಟ್ಟರು. ಈಗಾಗಲೇ ಏನೂ ಮಾಡಿಲ್ಲವೆಂದಲ್ಲ. ಪೂರ್ಣವಾಗಿ ಆಗಿದೆ ಎಂದು ಹೇಳುವ ಮಾತಿಗೆ ನಾನು ಒಪ್ಪುವವನೂ ಅಲ್ಲ. ಐಪಿಡಿ ಸಾಲಪ್ಪನವರು ವರದಿ ಕೊಟ್ಟ ಮೇಲೆ ಇವತ್ತು ಜನಾಭಿಪ್ರಾಯ, ಅನಿಸಿಕೆ ಮೂಡಿಸುವ ರೀತಿಯಲ್ಲಿ ಸರ್ಕಾರ ಕೆಲಸ ಮಾಡಲು ಹೊರಟಿದೆ. ನಾವು ಈಗಾಗಲೇ 32 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಬೇರೆ ಬೇರೆ ಕಡೆ 64 ಸಾವಿರ ಲೆಟ್ರೀನ್ ಕಟ್ಟಿಸುವ ಕಾರ್ಯಕ್ರಮವಿದೆ. ಅವರಿಗೆ

ಗ್ಲೋಪ್ಸ್ ಕೊಡುವುದು, ಬೇರೆ ಬೇರೆ ಯಾವ ರೀತಿಯಾಗಿ ಸ್ವಚ್ಛತೆಯ ದೃಷ್ಟಿಯಿಂದ ಕೆಲವು ರೆಕಮೆಂಡೇಷನ್ಸ್ ಇದೆ ಅದನ್ನು ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡಿದ್ದಾರೆ. ಇಷ್ಟಕ್ಕೆ ನನಗೆ ಸಂತೋಷವಾಗುತ್ತಿಲ್ಲ ಇದನ್ನು ನಿಮ್ಮ ಮುಂದೆ ಹೇಳುತ್ತಿಲ್ಲ. ಪೂರ್ವಭಾವಿಯಾಗಿ ನಮ್ಮ ಅಧಿಕಾರಿಗಳ ಜೊತೆ ಮಾಡುವ ಕೆಲಸಕಾರ್ಯಗಳಲ್ಲಿ they require a comitment ಸಾಲಪ್ಪನವರ ವರದಿ ಇದು ಬಹಳ ವಿಶೇಷವಾಗಿ ಹರಿಜನ-ಗಿರಿಜನರಿಗೆ ಮತ್ತು ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಬಸವಲಿಂಗಪ್ಪನವರಂಥ ಧೀಮಂತ ನಾಯಕರು ಇದರ ಬಗ್ಗೆ ಕಾರ್ಯಕ್ರಮ ಕೈಗೊಂಡಿದ್ದರು. ಇದು ಸುಮ್ಮನೆ ಏನು ಪ್ರಶ್ನೆ ಕೇಳುತ್ತಾರೆ ಉತ್ತರ ಹೇಳತಕ್ಕಂಥದ್ದು ಅಲ್ಲ. ಇದಕ್ಕೆ ಒಂದು ಸಭೆ ನಡೆಸಿ ಎಲ್ಲಾ ವಿರೋಧ ಪಕ್ಷಗಳ ನಾಯಕರನ್ನು ಕರೆಸಿ, ಇಲಾಖಾಧಿಕಾರಿಗಳನ್ನು ಕರೆಸಿ ಸಾಲಪ್ಪನವರು ಏನು ವರದಿ ಕೊಟ್ಟಿದ್ದಾರೆ, ಅದು ಎಲ್ಲಿಯವರೆಗೆ ಕಾರ್ಯಗತವಾಗಿದೆ ಎಂಬುದರ ಬಗ್ಗೆ ಚರ್ಚೆ ಮಾಡುತ್ತೇವೆ. ಇದು ಪ್ರಾರಂಭವಾಗಿದೆ. ಈ ದೇಶದಲ್ಲಿ ಎಲ್ಲವೂ ಒಮ್ಮಿಂದೊಮ್ಮೆ ಆಗುವುದಿಲ್ಲ ಇದಕ್ಕೆ ಸಮಯ ಹಿಡಿಯುತ್ತದೆ. ನಾನು ಎಷ್ಟೋ ಸಲ ಹೇಳಿದ್ದೇನೆ, ನಾವು ಪ್ರಜಾಪ್ರಭುತ್ವದಲ್ಲಿ, ಮುಖ್ಯಮಂತ್ರಿಗಳಾಗಲಿ, ವಿರೋಧ ಪಕ್ಷದ ನಾಯಕರಾಗಲಿ ಮತ್ತು ಬೇರೆ ಪಕ್ಷದಲ್ಲಿ ಇರುವ ಶಾಸಕರ ಮನಸ್ಸಿನಲ್ಲಿರುವ ಭಾವನೆಗಳು ಅನುಷ್ಠಾನಕ್ಕೆ ಬರಬೇಕಾದರೆ, ಅಧಿಕಾರಿಗಳಲ್ಲೂ ಕೂಡ bureaucratic commitment - ಬೇಕಾಗುತ್ತದೆ. ಅಷ್ಟೇ ಒಂದು ಛಲ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡಿದರೆ ಇವೆಲ್ಲಾ ಕಾರ್ಯಗತವಾಗುತ್ತದೆ. ಅದಕ್ಕೆ ಮೊನ್ನೆ ಕೂಡ 18 ಪರ್ಸೆಂಟ್ ಹಣ ಖರ್ಚು ಮಾಡುವ ರೀತಿಯಲ್ಲಿ ಕಟ್ಟುನಿಟ್ಟಾದ ಕ್ರಮ ಕೈಗೊಂಡಿದ್ದೇವೆ. ನಾನೂ ಕೂಡ ನಗರಾಭಿವೃದ್ಧಿ ಸಚಿವನಾಗಿದ್ದಾಗ social-Justice committee ಎಂದು ತಿದ್ದುಪಡಿ ಮಾಡಿದ್ದೆ. ಇವತ್ತು ಏನು ನಾವು ಎಷ್ಟು ಅಭಿವೃದ್ಧಿ ಮಾಡಿದರೂ ಕೂಡ ವಿಶೇಷವಾದ 18 ಪರ್ಸೆಂಟ್ ಹಣ ಖರ್ಚು ಮಾಡುವ ರೀತಿಯಲ್ಲಿ ಎಲ್ಲವೂ ಕೂಡ ಇದೆ. ಮೊನ್ನೆ ಮಾನ್ಯ ಪುಟ್ಟಣ್ಣಯ್ಯನವರು, ದಲಿತ ಸಂಘರ್ಷ ಸಮಿತಿಯ ನಾಯಕರ ಜೊತೆಯಲ್ಲಿ ಕೂಡ ಮಾತನಾಡಿದ್ದೇನೆ. ನಾನು ಮಾನ್ಯ ಅಂಜನೇಯರವರೇನು ಪ್ರಶ್ನೆ ಕೇಳಿದರು ಅದಕ್ಕೆ ನಾನು ಒಪ್ಪುತ್ತೇನೆ, ಇದಕ್ಕೆ ಒಂದು ಸಭೆ ಕರೆಸುತ್ತೇನೆ, ಆ ಸಭೆಯಲ್ಲಿ ಚರ್ಚೆ ಮಾಡಿ ಮುಂದೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮಗಳ ಜೊತೆ ಯಾವ ರೀತಿಯಾಗಿ ಮುಂದೆ ಹೋಗಬೇಕೆನ್ನುವ ರೀತಿಯಲ್ಲಿ ಚರ್ಚೆ ಮಾಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಇಲ್ಲಿ ಎರಡು ಸಮಸ್ಯೆಗಳು ಇವೆ. ಇದರಲ್ಲಿ ಕೆಲವರನ್ನು ಖಾಯಂ ಮಾಡಲಿಕ್ಕೆ ಸರ್ಕಾರದ ಆದೇಶವಾಗಿತ್ತು. ಕೆಲವು ಪುರಸಭೆಯವರು ಲಿಸ್ಟ್ ಮಾಡಿ ಡಿಸಿ ಗೆ ಕಟ್-ಆಫ್-ಡೇಟ್‌ನಲ್ಲಿ ಕಳುಹಿಸಲಿಲ್ಲ ಎನ್ನುವ ಒಂದು ಕಾರಣಕ್ಕೆ ಸುಮಾರು ಪುರಸಭಾ ಪೌರ ಕಾರ್ಮಿಕರು ಹಾಗೆಯೇ ಉಳಿದುಕೊಂಡಿದ್ದಾರೆ. ವೇಕೆನ್ಸಿ ಇದ್ದರೂ ಅವರುಗಳು ಹಾಗೆಯೇ ಉಳಿದಿದ್ದಾರೆ. ಮತ್ತೆ ಅವರಿಗೆ ಕೊಡುತ್ತಿದ್ದ ಕೆಲಸವೂ ಕೂಡ ಇಂದು ಗೊಂದಲಕ್ಕೆ ಬಂದಿದೆ. ಕಂಟ್ರಾಕ್ಟ್ ಕೊಡಬೇಕು ಪುರಸಭೆಗಳ ನೀರು ಬಿಡಲಿಕ್ಕೆ ಮತ್ತು ಕ್ಲೀನ್ ಮಾಡಲಿಕ್ಕೆ ಎಂದು, ನಿರ್ಧಾರ ತೆಗೆದುಕೊಂಡಿರುವುದರಿಂದ ಇವರ ಸ್ಥಿತಿಯೇನು ಎಂಬುದು ಗೊತ್ತಿಲ್ಲ. ಮೂರನೆಯದು, ಅವರಿಗೆ ಕನಿಷ್ಠ ಯೂನಿಫಾರಂ, ಶೂ, ಕೊಡುವ ವ್ಯವಸ್ಥೆಯನ್ನು ಪುರಸಭೆಯವರು ಮಾಡುತ್ತಿಲ್ಲ. ಇದರಲ್ಲಿ ಬಹುತೇಕ ಸುಮಾರು 80 ರಿಂದ 90 ರಷ್ಟು ಜನ ಷೆಡೂಲ್ಡ್ ಕಾಸ್ಟ್ ಜನ ಇದ್ದಾರೆ. ಆ ಒಂದು ಕಟ್-ಆಫ್-ಡೇಟ್ ಎಕ್ಸ್‌ಟೆಂಡ್ ಮಾಡಿ, ಎಲ್ಲೆಲ್ಲಿ ವೇಕೆನ್ಸಿ, ಎಲ್ಲೆಲ್ಲಿ ಪುರಸಭೆಯಲ್ಲಿ resolution ಆಗಿದೆ ಅವರನ್ನಾದರೂ ಖಾಯಂ ಮಾಡುವುದಕ್ಕೆ ತಾವು ಕ್ರಮ ಜರುಗಿಸುತ್ತೀರಾ?

ಶ್ರೀ ಜಿ.ಎಸ್. ಶ್ರೀರಾಮರೆಡ್ಡಿ : ಈಗ ಕಾಂಟ್ರಾಕ್ಟ್ ಕೊಡತಕ್ಕಂಥದ್ದನ್ನು ತಪ್ಪಿಸಬೇಕು. ಇವರ ಹಣವನ್ನು ಕಂಟ್ರಾಕ್ಟರ್ ಹೊಡೆಯುತ್ತಾನೆ. ಇವರಿಗೆ ಹಣ ಹೋಗುವುದಿಲ್ಲ. ಹಿಂದಿನಿಂದ ಕೆಲಸ ಮಾಡುತ್ತಿದ್ದವರನ್ನು ಕಂಟ್ರಾಕ್ಟರ್ ಕೆಲಸಕ್ಕೆ ಕರೆಯುವುದಿಲ್ಲ. ಹೊಸಬರನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಾನೆ. ಹಾಗಾಗಿ ಹಲವಾರು ವರ್ಷಗಳಿಂದ ಕೆಲಸ ಮಾಡಿರತಕ್ಕಂಥವರಿಗೆ ಕೆಲಸವೂ ಇಲ್ಲ, ಅವರು ಖಾಯಂ ಇಲ್ಲ, ಇವನು ಕಾಂಟ್ರಾಕ್ಟರ್ ಹೊಸ ಕೆಲಸಗಾರರ ಹೆಸರಿನಲ್ಲಿ ದಂಧೆ ಮಾಡುತ್ತಾನೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಕಾಂಟ್ರಾಕ್ಟ್ ಕೊಡತಕ್ಕಂಥ ಪದ್ಧತಿಯನ್ನು ತಪ್ಪಿಸಬೇಕು, ಹಿಂದಿನಿಂದ ಯಾರು ಕೆಲಸ ಮಾಡುತ್ತಿದ್ದರೋ ಅವರಿಗೆ ಕೊಡಬೇಕು, ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಈ-ಆಫ್-ಡೋಟ್ ಅನ್ನು ರಿಲ್ಯಾಕ್ಸ್ ಮಾಡಿ ಅವರಿಗೆಲ್ಲಾ ಖಾಯಂ ಮಾಡಬೇಕು.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಪೌರ ಕಾರ್ಮಿಕರನ್ನು ನೇಮಕ ಮಾಡುವುದನ್ನು ರದ್ದು ಮಾಡಿ ಇಲಾಖೆಯಲ್ಲಿ 15 ವರ್ಷಗಳಾಗಿವೆ. ಆ ನಂತರ ಇದುವರೆವಿಗೂ ಪೌರ ಕಾರ್ಮಿಕರ ನೇಮಕಾತಿಯನ್ನು ಸರ್ಕಾರ ನಿಲ್ಲಿಸಿದೆ. ಆದರೆ ಇತ್ತೀಚಿಗೆ ಸಾಲಪ್ಪಹಮರ ವರದಿಯಂತೆ ಮುನಿಸಿಪಾಲಿಟಿಯಲ್ಲಿ 700 ಜನಕ್ಕೆ ಒಬ್ಬರಂತೆ ಕಾರ್ಪೊರೇಷನ್‌ನಲ್ಲಿ 500 ಜನಕ್ಕೆ ಒಬ್ಬರಂತೆ, ನೇಮಿಸಬೇಕೆಂದು ಹೇಳಿದೆ. ಆದರೆ, ಈಗ ಏನಾಗಿದೆ ಎಂದರೆ, ಆ ಒಂದು ಕೆಲಸ ಮಾಡುವುದು ದಲಿತರೇ. ಅವರಿಗೆ ಲೈಫ್ ಸೆಕ್ಯೂರಿಟಿಯೂ ಇಲ್ಲ, ಜಾಬ್ ಸೆಕ್ಯೂರಿಟಿಯೂ ಇಲ್ಲ. ಮತ್ತೊಂದು ಭಾಗದಿಂದ ಅವರ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದ್ದಾರೆ. ಯಾವ ದಲಿತರು ಆ ಉದ್ಯೋಗವನ್ನು ಮಾಡುತ್ತಿದ್ದಾರೆ ಅದನ್ನು ಕಿತ್ತುಕೊಳ್ಳಿತ್ತಿದ್ದಾರೆ. ಹಾಗೆಯೇ ಆರ್ಥಿಕವಾಗಿ ಅವನನ್ನು, ತುಳಿದು ಅವನ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದ್ದಾರೆ. ಸರ್ಕಾರ ನೇಮಕಾತಿ ಮಾಡಬೇಕಾಗುತ್ತದೆ. ಮಾನ್ಯ ಬಸವಲಿಂಗಪ್ಪನವರು ಹೇಳಿದ್ದು ಮಲವನ್ನು ತಲೆ ಮೇಲೆ ಹೊರಬಾರದು ಎಂದು. ಅದರ ಬಗ್ಗೆ ಹೋರಾಟ ನಡೆದಿತ್ತು. ಆದರೆ ಇವತ್ತು ಸರ್ಕಾರ ಅದನ್ನು ಮಾಡುವುದು ಬಿಟ್ಟು, ಯಾವುದೋ ಗುತ್ತಿಗೆದಾರನಿಗೆ ಕೊಟ್ಟಿದೆ. ಅದನ್ನು ರದ್ದು ಮಾಡಿ, ಸರ್ಕಾರವೇ ಅವರಿಗೆ ಜಾಬ್ ಹಾಗೂ ಲೈಫ್ ಸೆಕ್ಯೂರಿಟಿಯನ್ನು ಕೊಡಬೇಕು. ಈ ನಿಟ್ಟಿನಲ್ಲಿ ಸರ್ಕಾರ ಯೋಚಿಸಿ ನೇಮಕಾತಿ ಮಾಡಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಇದು ಬಹಳ ಗಂಭೀರವಾದ ಸಮಸ್ಯೆ. ಎಲ್ಲಾ ಸದಸ್ಯರ ಅಭಿಪ್ರಾಯವನ್ನು ಮಾನ್ಯ ಮುಖ್ಯಮಂತ್ರಿಗಳು ಕೇಳಿದರು. ತಮಗೆ ಗೊತ್ತಿರುವ ಹಾಗೆ ಜನಸಂಖ್ಯಾಧಾರದ ಮೇಲೆ ನಗರ ಸಭೆ, ಪುರಸಭೆ, ಮಹಾನಗರ ಸಭೆಯಲ್ಲಿ ಎಷ್ಟುಪೌರ ಕಾರ್ಮಿಕರು ಇರಬೇಕು ಅದರ ಹತ್ತು ಪಟ್ಟು ಜನಸಂಖ್ಯೆ ಇದ್ದರೂ ಅವನು ಒಬ್ಬರು ಇಬ್ಬರು ಇದ್ದರೂ ಆ ಕೆಲಸ ಮಾಡಿಕೊಂಡು ಹೋಗುತ್ತಿದ್ದಾನೆ. 15–20 ವರ್ಷಗಳಿಂದ ಕೆಲಸ ಮಾಡಿರತಕ್ಕಂಥ ಸಾವಿರಾರು ಉದಾಹರಣೆಗಳು ಇವೆ, ಅವರನ್ನು ಖಾಯಂ ಮಾಡಲಿಲ್ಲ ಇವತ್ತು ಅವರು ಡೈಲಿ ವೇಜಸ್ ನಲ್ಲಿ ಅವನು ಬದುಕುತ್ತಿದ್ದಾನೆ. ಆ ಕೆಲಸಗಾರರ ಮೇಲೆ ಇದೊಂದು ರೀತಿಯ ಅಮಾನುಷ್ಯವಾದ ನಡವಳಿಕೆ. ಅದಕ್ಕೆ ನಿಮ್ಮ ಕಾಲದಲ್ಲಿ ಆದರೂ ಇಷ್ಟು ವರ್ಷಗಳು ಕೆಲಸ ಮಾಡಿದಂಥವನಿಗೆ ಖಾಯಂ ಮಾಡುತ್ತೇವೆ, ಡೈಲಿ ವೇಜಸ್ ಮೇಲೆ ಇನ್ನು ಮೇಲೆ ತೆಗೆದುಕೊಳ್ಳುವುದಿಲ್ಲ, ಸರ್ಕಾರವೇ ನಿಗದಿ ಮಾಡಿರತಕ್ಕಂಥ ಜನಸಂಖ್ಯಾಧಾರದ ಮೇಲೆ ಪೌರ ಕಾರ್ಮಿಕರನ್ನು ನೇಮಕ ಮಾಡುತ್ತೇವೆ, ಈ ದಿಟ್ಟ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ ಹಾಗೂ

ನೀವು ಸರ್ಕಾರಿ ಆದೇಶವನ್ನು ಹೊರಡಿಸಬೇಕಾಗುತ್ತದೆ. ಇದರ ಬಗ್ಗೆ ಸ್ಪಷ್ಟವಾದ ತಮ್ಮ ಉತ್ತರವೇನು ಎಂದು ಕೇಳಲಿಕ್ಕೆ ನಾನು ಇಚ್ಛಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಪೌರ ಕಾರ್ಮಿಕರ ಅಭಿವೃದ್ಧಿಯ ಬಗ್ಗೆ ಸಾಲಪ್ಪನವರು ಸುಮಾರು 30 ವರ್ಷಗಳ ಹಿಂದೆ ಕೊಟ್ಟಂಥ ವರದಿ, ಇದರಲ್ಲಿ ಬಹುತೇಕ ಶಿಫಾರಸ್ಸುಗಳು ಕಾರ್ಯಗತವಾಗಿಲ್ಲ. ಹೀಗೇ ಪ್ರತಿ ವರ್ಷ ಮುಂದುವರಿಯುತ್ತಿದೆ ಸಾಲಪ್ಪ ವರದಿ ಎಲ್ಲೋ ಒಂದು ಕಡೆ ಧೂಳಿನಲ್ಲಿ ಕುಳಿತಿದೆ. ನಾನು ತಮಗೆ ಹೇಳುತ್ತಿದ್ದೇನೆ, ಎಷ್ಟೋ ಜನ ಪೌರ ಕಾರ್ಮಿಕರ ಮನೆಗೆ ಹೊರಟು ಹೋಗಿದ್ದಾರೆ, ಅವರ ಜೀವನ ಹಸನಾಗಿಲ್ಲ ಅವರ ಪರಿಸ್ಥಿತಿ ಹದಗೆಟ್ಟಿದೆ, ಅವರಿಗೆ ಮನೆಗಳು ಇಲ್ಲ, ಅಷ್ಟು ಹದಗೆಟ್ಟಿದೆ. ಅವರಿಗೆ ವಿಶೇಷವಾದಂಥ ಭತ್ಯೆ ಕೊಡಬೇಕು, ವಿಶೇಷವಾದಂಥ ಅನುಕೂಲಗಳನ್ನು ಕೊಡಬೇಕು, ವಿಶೇಷವಾದಂಥ ಮನೆಗಳನ್ನು ಕೊಡಬೇಕು, ಎಲ್ಲರಿಗಿಂತ ಬೇರೆ ಸರ್ಕಾರಿ ನೌಕರರಿಗಿಂತ ಇವರಿಗೆ ಬಹಳ ಹೆಚ್ಚಿನ ಭತ್ಯೆ ಕೊಡಬೇಕು. ಅದಕ್ಕೆ ವಿಶೇಷವಾದಂಥ ಸಹಾಯ ಸಹಕಾರ ಅನುದಾನ ಮತ್ತು ಅವರಿಗೆ ಭತ್ಯೆ ಕೊಡುವುದಕ್ಕೆ ಸರ್ಕಾರ ಸಿದ್ದ ಸಿದ್ದವಿದೆಯೇ?

ಅಧ್ಯಕ್ಷರು : ವಿಶೇಷವಾಗಿ ಎಂದರೆ ಬಹಳ ಸ್ಪಷ್ಟವಾಗಿ ಹೇಳಿ, ನಿಮ್ಮ ಮಾತಿನ ಅರ್ಥದಲ್ಲಿ ವಿಶೇಷ ಎಂದರೆ ಏನು?

ಶ್ರೀ ವಾಟಾಳ್ ನಾಗರಾಜ್ : ಅವರಿಗೆ ಹೆಚ್ಚಿನ ಒಳ್ಳೆಯ ಬೂಟ್ಸ್‌ಗಳನ್ನು ಕೊಡಬೇಕಾಗಿದೆ, ಬಟ್ಟೆಗಳನ್ನು ಕೊಡಬೇಕಾಗಿದೆ, ಉತ್ತಮ ಉಡುಪು, ಒಳ್ಳೆಯ ಮನೆಗಳನ್ನು ಹಾಗೂ ದೀಪಗಳನ್ನು ಕೊಡಬೇಕಾಗಿದೆ. ಅವರಿಗೆ ಉಚಿತವಾಗಿ ಭಾಗ್ಯಶ್ರೀ ಎಂದು ದೀಪಗಳನ್ನು ಕೊಡಬೇಕಾಗಿದೆ. ಅವರು ಇರುವ ಬಡಾವಣೆ ಏನು ಇದೆ ಆ ಬಡಾವಣೆಗೆ ಉತ್ತಮ ರಸ್ತೆಗಳು, ಕುಡಿಯುವ ನೀರಿನ ವ್ಯವಸ್ಥೆ ಇವೆಲ್ಲಾ ಮಾಡಿಕೊಡಬೇಕಾಗುತ್ತದೆ. ಅವರನ್ನು ಎಲ್ಲೋ ಒಂದು ರೀತಿ ಪೌರಕಾರ್ಮಿಕರು ಎಂದರೆ ಸಮಾಜದಿಂದ ದೂರಿಕರಿಸಿದ್ದೇವೆ. ಇದು ಒಳ್ಳೆಯದಲ್ಲ. ಅವರೂ ಸಮಾಜದ ಜೊತೆಯಲ್ಲಿರತಕ್ಕಂಥವರು, ಮಹಾತ್ಮಾ ಗಾಂಧೀಜಿಯವರ ಹೆಸರನ್ನು ನಾವು ಹೇಳಬೇಕು ಎನ್ನುವುದಾದರೆ, ಪೌರಕಾರ್ಮಿಕರಿಗೆ ಎಲ್ಲಾ ರೀತಿಯ ಅನುಕೂಲಗಳನ್ನು ಮಾಡಬೇಕು, ಅದಕ್ಕಾಗಿ ವಿಶೇಷವಾದಂಥ ಯೋಜನೆಯನ್ನು ಸರ್ಕಾರ ತಯಾರಿಸಿದಿಯೇ? ತಯಾರು ಮಾಡಿದ್ದರೆ ಮಾಡುತ್ತದೆಯೇ ಎಂದು ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳಬಯಸುತ್ತೇನೆ.

ಶ್ರೀ ಎ. ಪಾಪರೆಡ್ಡಿ : ಮಾನ್ಯ ಅಧ್ಯಕ್ಷರೆ, ನಮ್ಮ ರಾಯಚೂರು ನಗರದಲ್ಲಿ 250 ಪೌರ ಕಾರ್ಮಿಕರು ಇದ್ದಾರೆ, 120 ಜನ ಈಗಾಗಲೇ ನಿವೃತ್ತಿ ಹೊಂದಿದ್ದಾರೆ, ಈಗ ಅಲ್ಲಿ ವಾರ್ಡ್ ವೈಸ್ ಖಾಸಗಿ ಕಾಂಟ್ರಾಕ್ಟ್‌ರ್ಸ್‌ರವರು ಕರೆಸಿ ಟೆಂಡರ್ ಕೊಟ್ಟು ಕೆಲಸ ಮಾಡುತ್ತಿದ್ದಾರೆ. ಪ್ರೈವೇಟ್ ಕಾಂಟ್ರಾಕ್ಟ್‌ರವರು 1800 ರೂಪಾಯಿ ಸಂಬಳ ಇದ್ದರೆ 1000 ರೂಪಾಯಿ ಕೊಟ್ಟು ಕೆಲಸ ಮಾಡಿಸುತ್ತಿದ್ದಾರೆ. ಅಲ್ಲಿ ಎಲ್ಲಾ ಕಂಟ್ರಾಕ್ಟ್ ನಗರ ಸಭಾ ಸದಸ್ಯರು ತೆಗೆದುಕೊಂಡು ಸ್ವಚ್ಛತಾ ಕೆಲಸ ನಿಂತು ಹೋಗಿದೆ, ಸ್ವಚ್ಛತಾ ಕೆಲಸ ಆಗುತ್ತಿಲ್ಲ, ಆ ಕಾರಣದಿಂದ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಈಗ ಎಲ್ಲಾ ಹೊಸದಾಗಿ ನಗರ ಸಭೆಯವರೇ ಅವರನ್ನು ಅಪಾಯಿಂಟ್‌ಮೆಂಟ್ ಮಾಡಬೇಕು, ಕಂಟ್ರಾಕ್ಟ್‌ರವರು ಮಾಡುವುದರಿಂದ ಎಲ್ಲಾ ಕಾಂಟ್ರಾಕ್ಟ್‌ರ್ಸ್ ನಗರ ಸಭೆಯ ಸದಸ್ಯರುಗಳು ಗುತ್ತಿಗೆದಾರರಾಗಿ ಊರಿನ ಸ್ವಚ್ಛತಾ ಆಗುತ್ತಿಲ್ಲ. ಆ ಕಾರಣದಿಂದ ಕಾಂಟ್ರಾಕ್ಟ್ ಪದ್ದತಿಯನ್ನು ರದ್ದು ಮಾಡಿ ಸರ್ಕಾರವೇ ವಹಿಸಿಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಎನ್. ಯೋಗೇಶ್ ಭಟ್ : ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾ ನಗರ ಪಾಲಿಕೆಯಲ್ಲಿ ನೂರಕ್ಕಿಂತ ಹೆಚ್ಚು ಪೌರ ಕಾರ್ಮಿಕರು, ಅದರಲ್ಲಿ ಬಹುತೇಕ ಎಸ್‌ಸಿ–ಎಸ್‌ಟಿ ಯವರು. ಇಲ್ಲಿ ಸಮಸ್ಯೆ ಬಂದಿರುವುದು ಏನೆಂದರೆ, ಎಲೆಕ್ಟ್ರಿಕಲ್ ಸೆಕ್ಷನ್ ನಲ್ಲಿ ಕೆಲಸ ಮಾಡುತ್ತಿದ್ದಾರೆ, ಮೊನ್ನೆ ಷಾಕ್ ಹೊಡೆದು ಅಪಘಾತವಾಯಿತು, ಹೀಗಾಗಿ ಅವರ ಜೀವಕ್ಕೆ ಅಪಾಯ ಇದೆ. ಅಂಥ ಸನ್ನಿವೇಶದಲ್ಲಿ ಭದ್ರತೆ ಕೊಡುವ ಯಾವುದೇ ಕಾರ್ಯಕ್ರಮ ಆಗಿಲ್ಲ. ಕಳೆದ ಮೂರು ವರ್ಷಗಳಿಂದ ನಮ್ಮ ಎಂ.ಎಸ್. ಬಿಲ್ಡಿಂಗ್‌ನಲ್ಲಿ ಆ ಫೈಲ್ ಸುತ್ತಾಡುತ್ತಿದೆ. ಮಂಗಳೂರು ಮಹಾ ನಗರ ಪಾಲಿಕೆ ಅದಕ್ಕೆ ರೆಸಲ್ಯೂಷನ್ ಮಾಡಿದೆ, ಅವರನ್ನು ಖಾಯಂ ಮಾಡಬೇಕೆಂದು ನಿರ್ಣಯ ಮಾಡಿದ್ದರೂ ಕೂಡ ಯಾವುದೇ ರೀತಿಯಲ್ಲಿ ಅದಕ್ಕೆ ಅಧಿಕಾರಿಗಳಿಂದ ಸರಿಯಾದ ರೆಸ್ಪಾನ್ಸ್ ಸಿಗುತ್ತಿಲ್ಲ. ನಾನು ಕಳಕಳಿಯಿಂದ ಕೇಳುತ್ತಿದ್ದೇನೆ ಇಂಥದ್ದರ ಬಗ್ಗೆ ತುರ್ತಾಗಿ ಮಾನವೀಯತೆಯ ದೃಷ್ಟಿಯಿಂದ ಅದನ್ನು ಖಾಯಂಗೊಳಿಸುವಂಥ ಕಾರ್ಯವನ್ನು ಮಾಡಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಸನ್ಮಾನ್ಯ ಅಧ್ಯಕ್ಷರೆ, ಈಗ ಐ.ಪಿ.ಡಿ. ಸಾಲಪ್ಪನವರು ಏನು ಒಂದು ವರದಿ ಕೊಟ್ಟಿದ್ದಾರೆ ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದಕ್ಕೆ ಪ್ರಾಮಾಣಿಕತೆಯಿಂದ ಹೇಳುವುದಾದರೆ, ನೋಡುತ್ತೇನೆ, ಮಾಡುತ್ತೇನೆ, ಎಂದು ಹೇಳುವುದಲ್ಲ. ಇದಕ್ಕೆ ಸಮಗ್ರವಾಗಿ ಐ ಪಿ ಡಿ ಸಾಲಪ್ಪನವರ ವರದಿಯನ್ನು ನೋಡಬೇಕಾಗುತ್ತದೆ. ಅವರ ಶಿಫಾರಸ್ಸುಗಳನ್ನು ಎಲ್ಲಿಯವರೆಗೆ ಜಾರಿಗೆ ಆಗಿವೆ ಎಂಬುದನ್ನು ನೋಡಬೇಕಾಗುತ್ತದೆ. ಕಟ್–ಆಫ್–ಡೇಟ್ ಬಗ್ಗೆ ಹೇಳಿದರು, ಸುಪ್ರೀಂ ಕೋರ್ಟು 1–1–1986 ಗೆ ಎಂದು ಹೇಳಿದ್ದಾರೆ. ಆದರೂ ಕೂಡ ಸಾಕಷ್ಟು ಜನ ಇದ್ದಾರೆ, ಇವೆಲ್ಲಾ ಏನಾಗುತ್ತದೆ ಎಂದರೆ, ಪುರಸಭೆಯಲ್ಲಿ ಕಾರ್ಪೊರೇಷನ್‌ನಲ್ಲಿ ಬೇರೆ ಕಡೆಗಳಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಸಾಲಪ್ಪನವರ ವರದಿ ಏನಾಗಿದೆ ಎಂದು ಚರ್ಚೆ ಮಾಡಲಿಕ್ಕೆ ಅವಕಾಶ ಇದೆ. ಹೇಗೆ ವಿಧಾನ ಸಭೆಯಲ್ಲಿ ಅವಕಾಶ ಇದೆಯೋ ಹಾಗೆ ಇದೆ. ಇದನ್ನು ಮಾಡದೆ, ನಮ್ಮ ಒಬ್ಬರು ಸದಸ್ಯರು, ಮಂಗಳೂರು ಕಾರ್ಪೊರೇಷನ್ ನಲ್ಲಿ ಮಾಡಿದ ಬಗ್ಗೆ ಹೇಳಿದರು, ಅವರೂ ಕೂಡ ಇದು ಎಲ್ಲಾ ಪ್ರತಿಯೊಂದು ಹಂತದಲ್ಲಿ ಚರ್ಚೆ ಮಾಡಿ, ಅವರ ಸಮಸ್ಯೆಗಳು ಏನು ಎಂಬುದನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ಕ್ರಮ ತೆಗೆದುಕೊಳ್ಳುವುದಕ್ಕೆ ಒಳ್ಳೆಯದಾಗುತ್ತದೆ. ಐ ಪಿ ಡಿ ಸಾಲಪ್ಪನವರ ವರದಿಯ ಬಗ್ಗೆ ನಮ್ಮ ಎಲ್ಲಾ ವಿರೋಧ ಪಕ್ಷದವರ ನಾಯಕರನ್ನು ಒಂದು ಸಭೆಗೆ ಕರೆಸಿ ಈ ವಿಧಾನ ಸಭೆ ಮುಗಿದು ಹೋದ ಮೇಲೆ 6 ಗಂಟೆಯ ನಂತರ, ತಾವು ಮಾನ್ಯ ಸಭಾಧ್ಯಕ್ಷರು ಬಂದರೂ ಸರಿ ಆಗುತ್ತದೆ, ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ, ಇದರ ಫೈನಾನ್ಷಿಯಲ್ ಇಂಪ್ಲಿಕೇಷನ್ ನೋಡೋಣ. ಏಕೆಂದರೆ, ಈಗಾಗಲೇ ಸುಪ್ರೀಂ ಕೋರ್ಟಿನ ಆದೇಶ ಕೊಟ್ಟ ಮೇಲೆ ಎಷ್ಟು ಜನರಿಗೆ ಏನೇನು ಆಗುತ್ತದೆ ಇವೆಲ್ಲಾ ನೋಡಬೇಕಾಗುತ್ತದೆ. ಇವೆಲ್ಲಾ ನೋಡಿ ನಾವು ಎಷ್ಟರಮಟ್ಟಿಗೆ ಇದನ್ನು ಮಾಡಬಹುದು ಎಷ್ಟರಮಟ್ಟಿಗೆ ನಾವು ಶಿಫಾರಸ್ಸಿಗೆ ಒಪ್ಪಬಹುದು ಎನ್ನುವುದು ಅಂತಿಮವಾಗಿ ತೀರ್ಮಾನಕ್ಕೆ ಬರಲಿಕ್ಕೆ ಸಾಧ್ಯವಾಗುತ್ತದೆ. ಆ ತರಹದ ಒಂದು ವ್ಯವಸ್ಥೆ ನಾವು ಮಾಡೋಣ.

ಸವದತ್ತಿ ಪಟ್ಟಣಕ್ಕೆ ಒಳಚರಂಡಿ ಯೋಜನೆ ಮಂಜುರಾತಿ

16 (441) : ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಾಸಗಡ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಸವದತ್ತಿ ಪಟ್ಟಣ 38,212 ರಷ್ಟು ಜನಸಂಖ್ಯೆ ಹೊಂದಿದ್ದು, ಧಾರ್ಮಿಕ ಸ್ಥಳವಾದ ಕಾರಣ ಲಕ್ಷಾಂತರ ಪ್ರವಾಸಿಗರು ಭೇಟಿ ನೀಡುತ್ತಿರುವುದು ನಿಜವಲ್ಲವೇ;

2) ಆರೋಗ್ಯ ದೃಷ್ಟಿಯಿಂದ ಒಳಚರಂಡಿ ನಿರ್ಮಿಸಲು ಬಹಳ ವರ್ಷಗಳಿಂದ ಪ್ರಸ್ತಾವನೆ ಸರ್ಕಾರದಲ್ಲಿ ನೆನೆಗುದಿಗೆ ಬಿದ್ದಿರುವುದರ ಬಗ್ಗೆ ಕೈಗೊಂಡ ಕ್ರಮಗಳೇನು;

3) ಸವದತ್ತಿ ಪಟ್ಟಣಕ್ಕೆ ಒಳಚರಂಡಿ ಯೋಜನೆಯನ್ನು ನಿರ್ಮಿಸಲು ಮಂಜೂರಾತಿ ಮಾಡಲು ಸರ್ಕಾರ ಈಗಲಾದರೂ ಕ್ರಮ ಕೈಗೊಳ್ಳುವುದೆ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

1) ಹೌದು.

2) ಸವದತ್ತಿ ಪಟ್ಟಣಕ್ಕೆ ಒಳಚರಂಡಿ ಯೋಜನೆಯನ್ನು ಕಲ್ಪಿಸಲು ರೂ. 660.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ಯೋಜನೆಗೆ ಸ್ಥಳೀಯ ಸಂಸ್ಥೆಯ ವಂತಿಗೆಯಾದ ಶೇ. 20 ರಂತೆ ರೂ. 132.00 ಲಕ್ಷಗಳನ್ನು ಪುರಸಭೆ ಭರಿಸದ ಕಾರಣ ಯೋಜನೆ ಅನುಮೋದನೆಗೊಂಡಿರುವುದಿಲ್ಲ. ತದನಂತರ ಯೋಜನೆಯನ್ನು ಕೇಂದ್ರ ಸರ್ಕಾರದ ಪುರಸ್ಕೃತ ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದ್ದು ಅದರಂತೆ ಸವದತ್ತಿ ಪಟ್ಟಣದ ಸರ್ವೇಕ್ಷಣೆ ಕಾಮಗಾರಿ ಪೂರ್ಣಗೊಳಿಸಿ ಹೈಡ್ರಾಲಿಕ್ ನಕ್ಷೆಗಳನ್ನು ಈಗಾಗಲೇ ತಯಾರಿಸಲಾಗಿದೆ. ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ.

3) ಪ್ರಸ್ತಾವನೆ ಸರ್ಕಾರಕ್ಕೆ ಬಂದ ನಂತರ ಪರಿಶೀಲಿಸಲಾಗುವುದು.

ಶ್ರೀ ಮಾಮನಿ ವಿಶ್ವನಾಥ ಕಲಬಪ್ಪ : ಮಾನ್ಯ ಅಧ್ಯಕ್ಷರೆ, ಸವದತ್ತಿ ಯಲ್ಲಮ್ಮ ಪುರಸಭೆ ಸುಮಾರು 40 ಸಾವಿರ ಜನಸಂಖ್ಯೆ ಹೊಂದಿದೆ. ಆದರೆ, ಇಲ್ಲಿ ಇವತ್ತಿನವರೆಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಿಕೊಟ್ಟಿಲ್ಲ. ಇದಕ್ಕಾಗಿ ಸುಮಾರು 6 ಕೋಟಿ 60 ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ಮಾಡಿದ್ದಾರೆ. ಇದಕ್ಕೆ 20 ಪರ್ಸೆಂಟ್ ಹಣವನ್ನು ಮುನಿಸಿಪಾಲಿಟಿಯವರು ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಆದರೆ, ಅಲ್ಲಿನ ಮುನಿಸಿಪಾಲಿಟಿ ಇಷ್ಟು ಹಣ ಕೊಡತಕ್ಕಂಥ ಸ್ಥಿತಿಯಲ್ಲಿ ಇಲ್ಲದೇ ಇರುವುದರಿಂದ 1 ಕೋಟಿ 20 ಲಕ್ಷ ರೂಪಾಯಿಗಳನ್ನು ಸಾಲದ ರೂಪದಲ್ಲಿ ಕೊಟ್ಟರೆ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತೆ ಇದಲ್ಲದೆ, ಎರಡು-ಮೂರು ವರ್ಷದ ನ್ಯಾಷನಲ್ ರಿವರ್ ಆಕ್ಷ್ಯನ್ ಪ್ಲಾನ್ ಅಡಿಯಲ್ಲಿ ಇದನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಆದರೆ, ಇದೂ ಕೂಡ ಕಾರ್ಯಗತ ಆಗಿಲ್ಲ. ಇವತ್ತಿನದಿವಸ ಅಲ್ಲಿ ಏನಾಗಿದೆ ಎಂದರೆ, ಒಳಚರಂಡಿಯ ನೀರು ಮಲಪ್ರಭ ನದಿಗೆ ಸೇರಿ ಅಲ್ಲಿರತಕ್ಕಂಥ ಹುಬ್ಬಳ್ಳಿ-ಧಾರವಾಡ ವಾಟರ್ ಸಪ್ಲೈ ಮತ್ತು ಸವದತ್ತಿ ನಗರಕ್ಕೆ ನೀರು ಸರಬರಾಜು ಆಗುತ್ತಿರುವ ಜಾಕವೆಲ್‌ಗೆ ಈ ಒಳಚರಂಡಿ ನೀರು ಸೇರುತ್ತಿದೆ. ಇದರಿಂದ 100 ಪರ್ಸೆಂಟ್ ಪಲ್ಯೂಷನ್ ಫ್ರೀ ವಾಟರ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಒಳಚರಂಡಿ ವ್ಯವಸ್ಥೆ ಅಲ್ಲಿ ಆಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಕೆಲಸವನ್ನು ರಾಜ್ಯವಲಯದ ಮೂಲಕ ತೆಗೆದುಕೊಳ್ಳಲಾಗುತ್ತದೆಯೇ ಎನ್ನತಕ್ಕಂಥದ್ದನ್ನು ನಾನು ಕೇಳುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಭರವಸೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೆ, ಸವದತ್ತಿ ಪಟ್ಟಣದ ಬಗ್ಗೆ ಹೇಳಬೇಕಾದರೆ, ಒಳಚರಂಡಿ ವ್ಯವಸ್ಥೆ ಪ್ರಾಜೆಕ್ಟ್‌ನ್ನು ಹಿಂದೆ ತೆಗೆದುಕೊಂಡಾಗ ಇದಕ್ಕೆ ಅವರು 20 ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಡಲಿಲ್ಲವೆಂದು ಆ ಕೆಲಸ ನಿಂತುಹೋಗಿತ್ತು. ಆದರೂ ಕೂಡ ಇದನ್ನು

ಬಿಡುವುದಿಲ್ಲ. ಬರುವ ವರ್ಷದಲ್ಲಿ ಕರ್ನಾಟಕ ರಿಫಾರ್ಮ್ಸ್ ಪ್ರಾಜೆಕ್ಟ್‌ನಲ್ಲಿ ಇದನ್ನು ಸೇರಿಸಿ ಸದರಿ ಕೆಲಸವನ್ನು ಪೂರ್ಣಮಾಡಿ ಕೊಡಲಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ಮಾನ್ಯ ನಿರ್ಮಲ್ ಸುರಾನರವರೆ, ತಮ್ಮ ಪ್ರಶ್ನೆಯನ್ನು ಪಸಶಿ ಇಲಾಖೆಗೆ ವರ್ಗಾಹಿಸಲಾಗಿದೆ. ಈಗ ಲಿಖಿತದ ಮೂಲಕ ಉತ್ತರಿಸುವ ಪ್ರಶ್ನೆಗಳು.

2(ಅ) ಲಿಖಿತ ಮೂಲಕ ಉತ್ತರಿಸಲಾದ ಪ್ರಶ್ನೆಗಳು

ಶ್ರೀ ಹೆಚ್.ಜಿ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 25.1.2005ರ 2ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 196 ಪ್ರಶ್ನೆಗಳ ಪೈಕಿ 135 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂಧ--1)

ಅಧ್ಯಕ್ಷರು : ಮಂಡಿಸಲಾಯಿತು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ವಿಷಯ: ಬೆನ್ನಿಹಿನ್ ಕಾರ್ಯಕ್ರಮ ಕುರಿತು

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಮೂಲಕ ಅಥವಾ ಯಾವುದೇ ರೂಲ್ ಪ್ರಕಾರ ಪ್ರಮುಖವಾದಂಥ ಒಂದು ವಿಷಯವನ್ನು ತೆಗೆದುಕೊಳ್ಳಬೇಕೆಂದು ನೆನ್ನೆ ದಿವಸ ಬೆನ್ನಿಹಿನ್ ಕಾರ್ಯಕ್ರಮದ ಹಿನ್ನಲೆಯಲ್ಲಿ ನಾನು ತಮ್ಮ ಗಮನಕ್ಕೆ ತಂದಿದ್ದೆ. ನೆನ್ನೆದಿವಸ ಈ ವಿಷಯವನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ, ನಾನು ಇವತ್ತು ತಮ್ಮ ಕೊಠಡಿಗೆ ಬಂದು ತಮ್ಮ ಜೊತೆ ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ಇದರ ಬಗ್ಗೆ ಮಾತನಾಡುವುದಕ್ಕೆ ನಾನು ಹೆಚ್ಚಿನ ಸಮಯ ತೆಗೆದುಕೊಳ್ಳುವುದಿಲ್ಲ. ಸಂಕ್ಷಿಪ್ತವಾಗಿ ಹೇಳುತ್ತೇನೆ. ಇವತ್ತು ಬೆಳಿಗ್ಗೆ 6.00 ಗಂಟೆಗೆ ನಾನು ಜಕ್ಕೂರ್ ವಿಮಾನ ನಿಲ್ದಾಣಕ್ಕೆ ಹೋಗಿದ್ದೆ. ಅಲ್ಲಿನ ಕಾರ್ಯಕ್ರಮಕ್ಕೆ ಬೆನ್ನೆನಿಂದ ಮೈಕ್‌ಸೆಟ್ ಮತ್ತು ಇತರೇ ಸಾಮಗ್ರಿಗಳು ಬಂದಾಗ ಇದಕ್ಕೆ ಕಟ್ಟಬೇಕಾಗಿದ್ದಂಥ 80 ಸಾವಿರ ರೂಪಾಯಿ ಕೊಟ್ಟಿಲ್ಲವೆಂದು ಮತ್ತು ಸುಂಕ ಮತ್ತು ವಲಸೆ ವಿಭಾಗದ ಅಧಿಕಾರಿಗಳು ಬೆನ್ನಿಹಿನ್ ವಿಮಾನದಲ್ಲಿದ್ದಾಗ ಅಲ್ಲಿಗೆ ಹೋಗಿ ತೆರಿಗೆ ಹಣ ಪಾವತಿ ಮಾಡಿಲ್ಲ ಎಂದು ಅವರನ್ನು ತಡೆದು ಕೇಳಿದಾಗ ಆ ಸಂದರ್ಭದಲ್ಲಿ ಮಾತಿನ ಚಕಮಕಿ ಆಗಿರತಕ್ಕಂಥ ವಿಷಯ ಪತ್ರಿಕೆಗಳಲ್ಲಿ ಬಂದಿದೆ. ಇದನ್ನು ನಾನೂ ಕೂಡ ನೋಡಿದ್ದೇನೆ. ಇವತ್ತು ಜಕ್ಕೂರು ವಿಮಾನ ನಿಲ್ದಾಣ ಸಂಪೂರ್ಣವಾಗಿ ನಾಶವಾಗಿದೆ. ಮತ್ತೆ ಸುಮಾರು 8–10 ಲಾರಿ ತುಂಬುವಷ್ಟು ಪ್ಲಾಸ್ಟಿಕ್ ಚೀಲಗಳು ಅಲ್ಲಿ ಬಿದ್ದಿವೆ. ಮತ್ತೆ ಸಾಕಷ್ಟು ಗುಂಡಿಗಳು ಅಲ್ಲಿ ಬಿದ್ದಿವೆ. ಇನ್ನು ಎರಡು ತಿಂಗಳಾದರೂ ಅಲ್ಲಿ ವಿಮಾನ ಯಾನ ಮಾಡುವುದಕ್ಕೆ ಆಗದೇ ಇರತಕ್ಕಂಥ ವಿಚಿತ್ರ ಪರಿಸ್ಥಿತಿ ಅಲ್ಲಿ ತಲೆದೋರಿದೆ. ಈ ನಿಲ್ದಾಣವನ್ನು ಸರ್ಕಾರಿ ಮತ್ತು ಖಾಸಗಿ ಕಂಪನಿಗಳು ವೈಮಾನಿಕ ಉದ್ದೇಶಕ್ಕಾಗಿ ಬಳಸುತ್ತಿದ್ದರು. ಇಲ್ಲಿ ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಕೂಡ ಇದೆ. ಕಳೆದ ನಾಲ್ಕು ತಿಂಗಳಿಂದ ಈ ಒಂದು ಕಾರ್ಯಕ್ರಮಕ್ಕೆ ಕೆಲಸ ಪ್ರಾರಂಭವಾಗಿತ್ತು. ಇದಕ್ಕೆ ಯಾರು ಪರ್ಮಿಷನ್ ಕೊಟ್ಟಿದ್ದರು? ಮತ್ತು ಬೆನ್ನಿಹಿನ್ ಬರುತ್ತಾನೆಂದು ಯಾರು ಅವರಿಗೆ ತಿಳಿಸಿದ್ದರು? ಇದಕ್ಕೆ ನೀವು ಮೌಖಿಕವಾಗಿ ಯಾವರೀತಿಯಾಗಿ ಅನುಮತಿ ಕೊಟ್ಟಿದ್ದೀರಿ? ಸಂಬಂಧಪಟ್ಟಂಥ ಇಲಾಖೆಯಿಂದ ಅಂದರೆ, ಏರ್‌ಪೋರ್ಸ್ ಅಥಾರಿಟಿಯಿಂದ ಈ ಮೈದಾನ ಉಪಯೋಗ ಮಾಡುವುದಕ್ಕೆ ಅನುಮತಿ ತೆಗೆದುಕೊಂಡಿದ್ದೀರಾ? ಆದ್ದರಿಂದ, ಇದಕ್ಕೆ ತಾವು ಹೇಗೆ ಅನುಮತಿ ಕೊಟ್ಟಿದ್ದೀರಿ? ಇದು ನನ್ನ ಮೊದಲನೇ ಪ್ರಶ್ನೆಯಾಗಿದೆ. ಎರಡನೇ ಪ್ರಶ್ನೆ

ಏನೆಂದರೆ, ಮೂರು ದಿವಸಗಳ ಈ ವೈಭವದ ಕಾರ್ಯಕ್ರಮವಾದಾಗ ನೆಲ ಬಾಡಿಗೆ ಎಷ್ಟು ಎಂದು ಫಿಕ್ಸ್ ಮಾಡಿದ್ದೀರಿ? ಮತ್ತೆ ಈಗಾಗಲೇ ಎಷ್ಟು ಹಣವನ್ನು ವಸೂಲ್ಮಾಡಿದ್ದೀರಾ? ಇವತ್ತಿನದಿವಸ ಅಲ್ಲಿ ಇಡೀ ಮೈದಾನ ಗುಂಡಿ ಬಿದ್ದಿರುವಂಥದ್ದನ್ನು ರಿಪೇರಿ ಮಾಡುವುದಕ್ಕೆ ಸುಮಾರು ಹತ್ತಾರು ಲಕ್ಷ ರೂಪಾಯಿ ಬೇಕಾಗುತ್ತದೆ. ಈ ಹಣವನ್ನು ಯಾರು ಭರಿಸುತ್ತಾರೆ? ಮೂರನೇ ಪ್ರಶ್ನೆ ಏನೆಂದರೆ, ಸುಮಾರು 10 ರಿಂದ 12 ಸಾವಿರ ಪೊಲೀಸ್‌ನವರ ರಕ್ಷಣೆಯೊಂದಿಗೆ ರೆಡ್ ಕಾರ್ಪೆಟ್ ಹಾಸಿ ಈ ಕಾರ್ಯಕ್ರಮ ನಡೆಸಿದ್ದು, ಇದರ ವೆಚ್ಚವನ್ನು ಯಾರು ಭರಿಸುತ್ತಾರೆ? ಸುನಾಮಿ ದುರಂತದ ನಂತರ ಕರ್ನಾಟಕ ರಾಜ್ಯದಲ್ಲಿ ಈ ರೀತಿಯಾದ ಯಾವುದೇ ಕಾರ್ಯಕ್ರಮ ನಡೆಯಬಾರದೆಂದು ದೊಡ್ಡ ದೊಡ್ಡ ಮಠಾಧಿಪತಿಗಳೇ ಕಾರ್ಯಕ್ರಮಗಳನ್ನು ರದ್ದು ಮಾಡುತ್ತಿರುವಾಗ ಸಂದರ್ಭದಲ್ಲಿ, ಈ ಕಾರ್ಯಕ್ರಮಕ್ಕೆ ತಾವು ಅನುಮತಿ ಕೊಟ್ಟಂಥದ್ದು ಮಾನವೀಯತೆ ದೃಷ್ಟಿಯಿಂದ ಸರಿಯೇ ಎಂಬ ಈ ಎಲ್ಲಾ ಪ್ರಶ್ನೆಗಳು ನಮ್ಮ ಮುಂದಿವೆ. ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ನೀವು ಸಾಕಷ್ಟು ಗಾಂಧಿ ವಿಚಾರವನ್ನು ತಿಳಿದುಕೊಂಡವರು ಮತ್ತು ಕಾಂಗ್ರೆಸ್‌ನಲ್ಲಿ ಬಂದಿರತಕ್ಕಂಥವರಾಗಿದ್ದೀರಿ. ಮಹಾತ್ಮ ಗಾಂಧಿಜಿಯವರು ಏನು ಹೇಳಿದ್ದರೆಂದರೆ, ಸ್ವಾತಂತ್ರ್ಯ ಬಂದ ತಕ್ಷಣ ನಾನು ಮಾಡುವ ಮೊದಲನೇ ಕೆಲಸ ಏನೆಂದರೆ, ಹೊರದೇಶದಿಂದ ಮತಾಂತರಕ್ಕೆ ಬಂದಿರತಕ್ಕಂಥ ಮೆಷನರೀಸ್‌ನ್ನು ಮೊದಲು ಹೊರ ಅಟ್ಟುತ್ತೇನೆ ಎಂಬ ಮಾತನ್ನು ಹೇಳಿದ್ದರು. ಆದರೆ, ಈಗಿನ ದುರ್ದೈವ ಏನೆಂದರೆ, ಈ ದೇಶವನ್ನೇ ಒಂದು ರೀತಿ ಕ್ರಿಶ್ಚಿಯನ್‌ಮಯ ಮಾಡುವಂಥ ಒಂದು ವ್ಯವಸ್ಥಿತವಾದಂಥ ತಂತ್ರ, ಷಡ್ಯಂತ್ರ ನಡೆಯುತ್ತಿದೆ ಎನ್ನತಕ್ಕಂಥದ್ದನ್ನು ಇವತ್ತಿನದಿವಸ ಸಾಮಾನ್ಯ ಜನರು ಮಾತನಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆ ಪಡುವುದೇನೆಂದರೆ, ಬಲತ್ಕಾರದ ಮತಾಂತರ ವ್ಯಭಿಚಾರಕ್ಕಿಂತ ಕಡೆ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದೆವು. ಮತ್ತು ರಾಜಕೀಯವಾಗಿ ನಮಗೆ ಸ್ವಾತಂತ್ರ್ಯ ಸಿಕ್ಕಿತು, ಆದರೆ, ಇವತ್ತು...

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ನಿಲುವಳಿ ಸೂಚನೆ ಬಗ್ಗೆ..

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾನ್ಯ ಅಧ್ಯಕ್ಷರ ಪರ್ಮಿಷನ್ ತೆಗೆದುಕೊಂಡು ಮಾತನಾಡುತ್ತಿದ್ದೇನೆ. ದಯಮಾಡಿ ನನಗೆ ಅವಕಾಶ ಕೊಡಿ.

ಗೊಂದಲ

ಶ್ರೀ ಸಿ.ಟಿ. ರವಿ : ನೆನ್ನೆಯಿಂದಲೇ ಈ ವಿಚಾರ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಆಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ಈ ವಿಚಾರವನ್ನು ಮಾತನಾಡುವುದಕ್ಕೆ ದಯಮಾಡಿ ಅವಕಾಶ ಕೊಡಬೇಕು.

ಗೊಂದಲ

ಶ್ರೀ ವಿ. ಸುನೀಲ್‌ಕುಮಾರ್ : ಈ ವಿಷಯದ ಬಗ್ಗೆ ಚರ್ಚೆಯಾಗಬೇಕೆಂದು ನೆನ್ನೆದಿವಸವೇ ತೀರ್ಮಾನವಾಗಿದೆ. ಆದ್ದರಿಂದ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವುದಕ್ಕೆ ದಯಮಾಡಿ ಅವಕಾಶ ಕಲ್ಪಿಸಿಕೊಡಬೇಕು.

ಗೊಂದಲ

ಅಧ್ಯಕ್ಷರು : ಈ ರೀತಿಯಾಗಿ ಎಲ್ಲರೂ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ವಿ. ಸುನಿಲ್ ಕುಮಾರ್ : ಬೆನ್ನಿಹಿನ್ ಬಗ್ಗೆ ಇವತ್ತು ಚರ್ಚೆಯಾಗಲೇಬೇಕು.

ಶ್ರೀ ಸಿ.ಟಿ. ರವಿ : ಪೂರ್ಣ ಸ್ವಾಭಿಮಾನ ಬಿಟ್ಟ ಹಾಗೆ ಮಾಡಬೇಡಿ. ಸ್ವಲ್ಪವಾದರೂ ಸ್ವಾಭಿಮಾನ ಇಟ್ಟುಕೊಳ್ಳಿ.

ಗೊಂದಲ

ಅಧ್ಯಕ್ಷರು : ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ವಿ. ಸುನಿಲ್ ಕುಮಾರ್ : ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಹೆಚ್.ಕೆ. ಪಾಟೀಲ್ : ನಿಮ್ಮ ಸಂಪೂರ್ಣ ಸಹಕಾರ ನಮಗೆ ಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆದಿವಸ ನಮ್ಮ ಸಂಪೂರ್ಣವಾದ ಸಹಕಾರವನ್ನು ತಮಗೆ ಕೊಟ್ಟಿದ್ದೇವೆ.

ಶ್ರೀ ಹೆಚ್.ಕೆ. ಪಾಟೀಲ್ : ಒಂದು ಸೆಕೆಂಡ್ ನಾನು ಹೇಳತಕ್ಕಂಥದ್ದನ್ನು ಕೇಳಿ. ಅನಂತರ ಇದನ್ನು ಕೇಳಿದ ಮೇಲೆ ನಮ್ಮದೇನೂ ತಕರಾರು ಇರುವುದಿಲ್ಲ. ಶಾಂತವಾಗಿ ಚರ್ಚೆ ಮಾಡಲು ನಾವು ಸಿದ್ದರಿದ್ದೇವೆ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರು ಮೊದಲು ಶಾಂತವಾಗಿರಬೇಕು.

ಅಧ್ಯಕ್ಷರು : ಈ ರೀತಿಯಾಗಿ ಎಲ್ಲಾ ಸದಸ್ಯರು ಎದ್ದು ನಿಂತುಕೊಂಡರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ನೋ ಸಾರ್. ದಯವಿಟ್ಟು ತಾವು ಕ್ಷಮಿಸಬೇಕು. ಪ್ರತಿಪಕ್ಷದವರಾದ ನಾವು ನಿಮಗೆ ಗೌರವ ಕೊಡುತ್ತೇವೆ. ನೀವು ಸೂಕ್ಷ್ಮವಾಗಿ ಸನ್ನೆ ಮಾಡಿದರೆ ಸಾಕು ನಾವು ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ತಾವು ಕುಳಿತುಕೊಂಡಿದ್ದರೂ ನಿಮ್ಮವರೆಲ್ಲರೂ ಎದ್ದು ನಿಂತುಕೊಂಡಿದ್ದರೆ ಏನರ್ಥ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಚಿವರು ಮಧ್ಯದಲ್ಲಿ ನಿಂತು ಕೊಂಡು ಮಾತನಾಡಿದರೆ ನಾವೇನು ಮಾಡಬೇಕು?

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದಾರೆ. ಇದರ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ತಾವು ಅವರಿಗೆ ಅವಕಾಶ ಮಾಡಿಕೊಡುವುದಕ್ಕೆ ತಮಗೆ ಸಂಪೂರ್ಣವಾದ ಅಧಿಕಾರವಿದೆ. ಮತ್ತೆ ಇದು ತಮಗೆ ಬಿಟ್ಟಿರತಕ್ಕಂಥ ವಿಷಯವಾಗಿದೆ. ಸನ್ಮಾನ್ಯ ವಿರೋಧಪಕ್ಷದ ನಾಯಕರ ಗಮನಕ್ಕೆ ಹಾಗೂ ತಮ್ಮಲ್ಲಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಅವರು ಕಳುಹಿಸಿಕೊಟ್ಟಿರತಕ್ಕಂಥ ನೋಟೀಸ್‌ನ್ನು ಯಾವುದೇ ಕಾರಣಕ್ಕೂ ನಿಲುವಳಿ ಸೂಚನೆ ಕೆಳಗೆ ಅವರು ಅರಿಕೆ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ಕಾರಣ ಏನೆಂದರೆ, ಇದನ್ನು ಅವರೇ ಹೇಳಿದ್ದಾರೆ, ನಾವ್ಯಾರೂ ಹೇಳಿಲ್ಲ. ಅಂದರೆ, ಅವರೇ ಹೇಳಿದ

ಪ್ರಕಾರ ದಿನಾಂಕ 21 ರಿಂದ 23, ಜನವರಿ ತಿಂಗಳಲ್ಲಿ ಬೆಂಗಳೂರು ನಗರದಲ್ಲಿ ಅಮೇರಿಕ ಮೂಲದ ಬೆನ್ನಿಹಿನ್ ಕಾರ್ಯಕ್ರಮಕ್ಕೆ ಚೆನ್ನೈ ಮತ್ತು ಮುಂಬಯಿಯಿಂದ ಎಲೆಕ್ಟ್ರಾನಿಕ್ ಉಪಕರಣಗಳು ಮತ್ತು ಇತರೇ ಸಲಕರಣೆಗಳನ್ನು ತರಲಾಗಿದ್ದು, ಇದಕ್ಕೆ ವಿಶೇಷ ತೆರಿಗೆ ಹಣವನ್ನು ಸಂಘಟಕರು ನೀಡಿರುವುದಿಲ್ಲ. ಹಾಗೂ ಈ ಕಾರ್ಯಕ್ರಮ ಮುಗಿದ ನಂತರವೂ ಕೂಡ ತೆರಿಗೆ ಹಣವನ್ನು ನೀಡಲು ಸಂಘಟಕರು ನಿರಾಕರಿಸಿದ ಕಾರಣ ರಾಜ್ಯದ ತೆರಿಗೆ ಇಲಾಖೆಯವರು ಸುಮಾರು 250 ಲಾರಿಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಸನ್ಮಾನ್ಯ ಅಧ್ಯಕ್ಷರ ಗಮನಕ್ಕೆ ಮತ್ತು ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ನಮ್ಮ ನಿಯಮಗಳ ಪ್ರಕಾರ ಯಾವುದೇ ಒಂದು ನಿಲುವಳಿ ಸೂಚನೆ ತರಬೇಕಾದರೆ.....

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ನಿಲುವಳಿ ಸೂಚನೆಯಲ್ಲ. ನಿಲುವಳಿಸೂಚನೆ ಮೂಲಕ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತೆಗೆದುಕೊಂಡಿಲ್ಲವೆಂದು ನಾನೇ ಹೇಳುತ್ತಿದ್ದೇನೆ. ಬೇರೆ ರೀತಿಯಲ್ಲಿ ಇದನ್ನು ಸಬ್‌ಮಿಷನ್ ಮಾಡಿ, ಇದು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲವೆಂದು ಹೇಳಿದ ಮೇಲೆ ನಾನು ಈಗ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇದಕ್ಕೆ ಮಾನ್ಯ ಅಧ್ಯಕ್ಷರ ಅನುಮತಿ ಕೂಡ ತೆಗೆದುಕೊಂಡಿದ್ದೇನೆ. ಈ ವಿಷಯವನ್ನು ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪ ಮಾಡುವುದು ಬೇಡ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿ ಎಂದು ಹೇಳಿದ ಮೇಲೆ ನಾನು ಈಗ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರು ಇದು ನಿಲುವಳಿ ಸೂಚನೆಗೆ ಸಂಬಂಧಪಡುವುದಿಲ್ಲವೆಂದು ಹೇಳಿದರೆ ನನ್ನದೇನೂ ತಕರಾರು ಇಲ್ಲ.

ಅಧ್ಯಕ್ಷರು : ಆಯಿತು. ಈಗ ಸಬ್‌ಮಿಷನ್ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಲುವಳಿಸೂಚನೆ ಮೇಲೆ ಪ್ರಸ್ತಾಪ ಮಾಡುತ್ತಿಲ್ಲ ಎಂದು ನಾನೇ ಹೇಳಿದ್ದೇನೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ತಾವು ನಮ್ಮ ಮಾತನ್ನು ಮುಂದುವರಿಸಿ.

ಶ್ರೀ. ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ. ನೆನ್ನೆದಿವಸ ನೀವು ಹೇಳಿದ್ದನ್ನು ನಾವು ಶಾಂತರೀತಿಯಿಂದ ಕೇಳಿದ್ದೇವೆ. ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಧೈರ್ಯವುದಕ್ಕೆ ಹೊರಟಿರತಕ್ಕಂಥ ವಿಷಯ ಏನೆಂದರೆ, ಬಲತ್ಕಾರದ ಮತಾಂತರ ಮಾಡುವುದು ವ್ಯಭಿಚಾರಕ್ಕಿಂತ ಕಡೆ ಎಂದು ನನ್ನ ಸ್ಪಷ್ಟವಾದ ನಿಲುವಾಗಿದೆ. ಬಿಟಿಷರ ವಿರುದ್ಧ ರಾಜಕೀಯವಾಗಿ ಸ್ವಾತಂತ್ರ್ಯಕ್ಕಾಗಿ ನಾವು ಹೋರಾಟ ಮಾಡಿದ್ದೆವು. ನಮಗೆ ಧಾರ್ಮಿಕವಾಗಿ ಸ್ವಾತಂತ್ರ್ಯ ಸಿಕ್ಕಿದೆ ಎಂದು ನಾವು ಅಂದುಕೊಂಡಿದ್ದೇವೆ. ಆದರೆ, ಧಾರ್ಮಿಕವಾಗಿ ನಮ್ಮ ದೇಶ ಹೊರದೇಶದ ಒತ್ತಾಯದಿಂದ ಮತ್ತು ವ್ಯವಸ್ಥಿತವಾದಂಥ ಒಂದು ಷಡ್ಯಂತ್ರಕ್ಕೆ ಬಲಿಯಾಗುತ್ತಿದೆ ಎನ್ನತಕ್ಕಂಥ ವಾತಾವರಣವನ್ನು ನಾವು ಬೆನ್ನಿಹಿನ್ ಕಾರ್ಯಕ್ರಮದ ಮೂಲಕ ಕಾಣುತ್ತಿದ್ದೇವೆ. ಸ್ವಾತಂತ್ರ್ಯ ಹೋದರೂ ಕೂಡ ಮತ್ತೆ ಹೋರಾಟ ಮಾಡಿ ಸ್ವಾತಂತ್ರ್ಯ ಗಳಿಸಿಕೊಳ್ಳಬಹುದು. ಆದರೆ, ಧಾರ್ಮಿಕವಾಗಿ ನಮ್ಮ ವಿಚಾರವನ್ನು ಕಳೆದುಕೊಂಡರೆ ಶಾಶ್ವತವಾಗಿ ನಮ್ಮ ಸ್ವಾತಂತ್ರ್ಯ ಹರಣವಾಗುತ್ತದೆಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. 15000 ಜನ ಪೋಲೀಸರ ರಕ್ಷಣೆಯೊಂದಿಗೆ ಸರ್ಕಾರವೇ ಮಾನ್ಯ ಮುಖ್ಯಮಂತ್ರಿಗಳ ಒಂದು ಮೇಲ್ವಿಚಾರಣೆಯ ಮೂಲಕ

ರತ್ನಗಂಬಳಿಯನ್ನು ಹಾಸಿ ಅವನನ್ನು ಬರಮಾಡಿಕೊಂಡು ಮೂರು ದಿವಸದ ವೈಭವದ ಕಾರ್ಯಕ್ರಮದಲ್ಲಿ ನಾವು ಮಾಡಿರುವ ಸಾಧನೆ ಏನು? ಎಷ್ಟು ಜನರು ಗುಣಮುಖರಾದರು? ಇದಕ್ಕೆ ಎಷ್ಟು ಕೋಟಿ ರೂಪಾಯಿಗಳು ಖರ್ಚಾಯಿತು? ಇಂತಹ ಸಂದರ್ಭದಲ್ಲಿ ನೀವು ಹೇಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ ಎನ್ನುವಂಥದ್ದು ಒಂದು. ಅವರ ಪ್ರಾರ್ಥನೆ ಏನು? ನಾನು ಏಸುವನ್ನು ಕೇಳಿಕೊಂಡರೆ ನಾನು ಅನ್ಯ ಜನಗಳನ್ನೆಲ್ಲಾ ಅಂದರೆ ಹಿಂದುಗಳನ್ನೆಲ್ಲಾ ನಿನಗೆ ಅಧೀನ ಮಾಡುವೆನು. ಭೂಮಿಯ ಕಟ್ಟಕಡೆಯವರೆವಿಗೂ ಇರುವ ಎಲ್ಲಾ ದೇಶಗಳನ್ನು ನಿನಗೆ ಸ್ವಾಸ್ಥವಾಗಿ ಕೊಡುತ್ತೇನೆ. ಕರ್ನಾಟಕಕ್ಕೆ ಬಂದು ಇಡೀ ಈ ಭಾಗದ ನಾಡನ್ನೆಲ್ಲಾ ಕ್ರಿಶ್ಚಿಯನ್‌ಮಯ ಮಾಡಿ ಏಸುವಿನ ಪಾದದಲ್ಲಿ ತರುತ್ತೇನೆಂದು ಹೇಳುವಂಥ ಪ್ರಾರ್ಥನೆಗೆ ನೀವು ಹೋಗಿ ಕುಳಿತು ಆಶೀರ್ವಾದ ಮಾಡಿದರೆ ಸಹಕಾರ ಕೊಟ್ಟರೆ ಇನ್‌ಡೈರೆಕ್ಟಾಗಿ ನೀವು ಮತಾಂತರಕ್ಕೆ ಅವಕಾಶ ಮಾಡಿಕೊಟ್ಟಂತೆ, ಅದು ನನ್ನ ಮೊದಲನೆಯ ಪ್ರಶ್ನೆ. ನೀವು ಏನು ಹೇಳಬಹುದು, ಎಲ್ಲಾ ವಿಧವಾದ ವಿಗ್ರಹಾರಾಧನೆ ವ್ಯಭಿಚಾರ ಮಾಟಮಂತ್ರ ಹುಚ್ಚುಗುತನದ ಆತ್ಮಗಳನ್ನು ಕಟ್ಟುಹಾಕಿ ಜನರು ಏಸುಸ್ವಾಮಿಯನ್ನು ಸ್ವೀಕರಿಸುವುದಕ್ಕಾಗಿ ಪ್ರಾರ್ಥಿಸಿದಿರಿ. ಎಲ್ಲಾ ವಿಧದ ವಿಗ್ರಹಾರಾಧನೆ ಅಂದರೆ ಏನು? ಬಹುಸಂಖ್ಯಾತ ಹಿಂದೂಗಳು ಯಾವ ದೊಡ್ಡ ಪ್ರಮಾಣದಲ್ಲಿ ಸಾಯಿಬಾಬಾಗೆ ಹೋಗುತ್ತಾರೆ, ತಿರುಪತಿಗೆ ಕೋಟ್ಯಾಂತರ ಜನ ಹೋಗುತ್ತಾರೆ, ಇವರ ಭಾವನೆಗೆ ಅಡ್ಡಿ ಮಾಡುವಂಥ ಅವರಿಗೆ ನೋವು ಮಾಡುವಂಥ ಈ ಸಂದರ್ಭ ಅಲ್ಲವೆ? ಮತ್ತೆ ಇದನ್ನು ಅವರು ಏನು ಹೇಳಿದ್ದಾರೆ, ಈ ಕರಪತ್ರಗಳನ್ನು ಚರ್ಚೆಗಳಲ್ಲಿ ಹಂಚುವುದಕ್ಕೋಸ್ಕರ ಇವುಗಳನ್ನು ಉಪಯೋಗ ಮಾಡುತ್ತಿದ್ದೇವೆ. ಕ್ರಿಶ್ಚಿಯನ್ ಸಮುದಾಯದಲ್ಲಿ ಹಂಚುವುದಕ್ಕೋಸ್ಕರ ಇವುಗಳನ್ನು ಉಪಯೋಗ ಮಾಡುತ್ತೇವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಪ್ರೆಸ್‌ಮೀಟ್‌ನಲ್ಲಿ ಒಪ್ಪಿಕೊಂಡಿರುವಂಥ ಮಾತು, ಆದರೆ ಅದನ್ನು ಇವತ್ತು ಅಲ್ಲಗಳೆಯುತ್ತಾರೆಂಬುದನ್ನು ನಂಬುವುದಕ್ಕೆ ಸಾಧ್ಯವಿಲ್ಲ. ಬಹಳ ಮುಖ್ಯವಾದಂಥದ್ದು ಈ ರಾಜ್ಯದ ಹಿಂದೂಗಳ ಸಹಿಷ್ಣತೆಯನ್ನು ವಿಶಾಲ ಹೃದಯವನ್ನು ದುರುಪಯೋಗ ಮಾಡಿಕೊಳ್ಳುವಂಥ ಪ್ರಯತ್ನವನ್ನು ಮಾಡಬಹುದಾ? ಅವರು ಏನು ಹೇಳಿದರು, ಆಗ ತಾವೂ ಕೂಡ ಇದ್ದೀರಿ, ಆ ಕಾರ್ಯಕ್ರಮದಲ್ಲಿ, ಎಲ್ಲಾ ಪತ್ರಿಕೆಗಳ ಮುಖ ಪುಟಗಳಲ್ಲಿ ಬಂದಿದೆ. ಅವನು ಏನು ಹೇಳುತ್ತಾನೆ ಏಸುವನ್ನು ಪ್ರಾರ್ಥಿಸಿ ಕೇವಲ ರೋಗ ರುಜಿನಗಳನ್ನು ವಾಸಿಮಾಡುವುದು ಮಾತ್ರವಲ್ಲ, ನಿಮ್ಮನ್ನು ಲಕ್ಷ್ಮಾಧಿಪತಿಯಾಗಿ ಮಾಡುತ್ತೇನೆ. ಈ ಮಾತನ್ನು ಹೇಳಿದ್ದಾನೆ. ಅಂದರೆ ಈ ರಾಜ್ಯದಲ್ಲಿ ಗುಡಿಸಿಲಿನಲ್ಲಿ ವಾಸ ಮಾಡತಕ್ಕಂಥ ಸಾಮಾನ್ಯ ಕಡುಬಡವರು ನಾವು ಅಲ್ಲಿ ಹೋಗಿ ಏಸುವನ್ನು ಪ್ರಾರ್ಥನೆ ಮಾಡಿದರೆ ಬೆನ್ನಿಹಿನ್ ಕೈಯಿಂದ ಮುಟ್ಟಿಸಿಕೊಂಡರೆ ಅಥವಾ ಆ ಕಾರ್ಯಕ್ರಮದಲ್ಲಿ ಹೋಗಿ ಕೃತಾರ್ಥರಾದರೆ ನಾವು ಲಕ್ಷ್ಮಾಧಿಪತಿಗಳು ಆಗುತ್ತೇವೆ. ನಮ್ಮ ರೋಗರುಜಿನಗಳು ಹೋಗುತ್ತವೆ, ಈ ಭಾವನೆಯಿಂದ ಒಂದು ರೀತಿಯ ಮತಾಂತರಕ್ಕೆ ನಾವು ಅವಕಾಶವನ್ನು ಮಾಡಿಕೊಟ್ಟಂತೆ ಆಗಲಿಲ್ಲವೆ? ಇವತ್ತು ನೀವು ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಹೇಳಿ ಸ್ವಾಮಿ. ಇವತ್ತು ತಾವೇ ಹೇಳಿ, ಅಂಕಿ ಅಂಶಗಳನ್ನು ತರಿಸಿಕೊಳ್ಳಿ, ಎಷ್ಟು ಜನ ಭಾರತೀಯರು ಅಥವಾ ಕರ್ನಾಟಕದವರು ಅಲ್ಲಿ ಬಂದಂಥವರಿಗೆ ಬೆನ್ನಿಹಿನ್ ಮುಟ್ಟಿರುವುದರಿಂದ ಆರೋಗ್ಯ ಸುಧಾರಣೆಯಾಗಿದೆ. ನಮ್ಮ ನರಸಿಂಹಯ್ಯನವರು ಆರೋಗ್ಯ ಬಹಳ ಕೆಟ್ಟು ಕುಳಿತಿದ್ದಾರೆ, ಅವರನ್ನು ಕರೆದುಕೊಂಡು ಬಂದು ಬೆನ್ನಿಹಿನ್‌ನ ಆಶೀರ್ವಾದ ಮಾಡಿಸಿ ಅವರನ್ನು ಉಳಿಸಿದ್ದರೆ ನಾನು ರಾಜ್ಯದ ಜನರ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತಿದ್ದೆನು. ಆ ಕಾರ್ಯಕ್ರಮದಲ್ಲಿ ಟಾಪ್ ಪೋಲೀಸ್ ಆಫೀಸರ್ಸ್, ಕ್ಯಾಬಿನೆಟ್ ಸಚಿವರು ಕುಳಿತುಕೊಂಡು ಈ

ರೀತಿಯ ಪ್ರಾರ್ಥನೆಗೆ ಅವಕಾಶವನ್ನು ನೀವು ಮಾಡಿಕೊಟ್ಟರೆ ಇನ್‌ಡೈರೆಕ್ಟ್ ಆಗಿ ಈ ಮತಾಂತರಕ್ಕೆ ಬಡವರು ಆಕರ್ಷಿತರಾಗುವುದಕ್ಕೆ ನೀವೇ ಅವಕಾಶ ಮಾಡಿಕೊಟ್ಟಂತಾಗಲಿಲ್ಲವೆ? ಇವತ್ತು ನೀವು ಒಂದು ರೀತಿಯಲ್ಲಿ ರಹದಾರಿಯನ್ನು ತೋರಿಸಿದ ಪರಿಣಾಮ ಇಂದು ಕರ್ನಾಟಕ, ಮುಂದೆ ಆಂಧ್ರಪ್ರದೇಶಕ್ಕೆ ಹೋಗುವ ಪ್ರಯತ್ನ ನಡೆದಿದೆ. ನಾನು ಹೇಳುತ್ತಿಲ್ಲ, ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿ ಕೊಡುತ್ತೇನೆ. 16ನೇ ಜನವರಿ 2005 ಕನ್ನಡಪ್ರಭ ಪತ್ರಿಕೆಯಲ್ಲಿ ಬಂದಿದೆ, ಅನೇಕ ಲೇಖನಗಳು ಬಂದಿದೆ, ಸಿಡಿಗಳು ಇದ್ದಾವೆ. ಸಿಜೆ ಎಸ್ ಚಾರ್ಜ್, ಸುಳ್ಳು ಬೊಗಳೆ ದೈವನಿಂದನೆ ಅದನ್ನು ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಅವನು ಇಲ್ಲಿ ಏನು ಹೇಳಿದ್ದಾನೆ, ಈ ಪಾಪಾಡ ಪುರುಷ ಧಾರ್ಮಿಕ ವಲಯದಲ್ಲಿ ಅತಿ ಸಂಶಯಾಸ್ಪದ ವ್ಯಾಪಾರಿಯಾಗಿ ಕುಖ್ಯಾತ, ಈತನ ಬಗ್ಗೆ ಭಾರತೀಯ ಅನುಯಾಯಿಗಳಿಗೆ ಗೊತ್ತಿಲ್ಲ. ಈತನ ಬಗ್ಗೆ ಸಾವಿರಾರು ಪುಟಗಳ ಸಾಹಿತ್ಯ ಇದೆ. 'The confusing world of Benny Hinn' ಪುಸ್ತಕದಿಂದ ಹಿಡಿದು, 'The Men Faces of Benny Hinn' ಎಂದು ವಿಡಿಯೊಗಳವರೆಗೆ ಸಾಹಿತ್ಯ ಭಂಡಾರವಿದೆ ಎಂದು ಅವರು ಲೇಖನಗಳನ್ನು ಬರೆದಿದ್ದಾರೆ. ಅವರು ಒಂದು ಕಡೆ ಹೇಳಿದ್ದಾರೆ, ದೇವರು ಹೆಂಗಸರನ್ನು ಸೃಷ್ಟಿಸಿರುವುದೇ ಮಕ್ಕಳನ್ನು ಹೆರುವುದಕ್ಕೆ. ಅಲ್ಲಿ ಈ ಮಾತಿಗೆ ಆಕ್ಷೇಪ ಬಂದಾಗ ಅದನ್ನು ಹೇಳಲೇ ಇಲ್ಲವೆಂದು ಹೇಳಿ, ಕೋರ್ಟಿನಲ್ಲಿ ಕೇಸ್ ಈಗ ನಡೆಯುತ್ತಿದೆ. ನಿಮಗೆ ನಾನು ದಾಖಲೆಗಳನ್ನು ಕೊಡುತ್ತೇನೆ. ಈಗ ನಮ್ಮ ಭಾರತೀಯನೊಬ್ಬ ಪ್ರಕಾಶ್ ಎನ್ನುವ ಒಂದು ಕುಟುಂಬ ಈ ಕಾರ್ಯಕ್ರಮಕ್ಕೆ ಹೋದರು. ಅವನಿಗೆ ಬ್ರೇನ್ ಟ್ಯೂಮರ್ ಇತ್ತು, ಜನರು ಅವರನ್ನು ನಂಬಿಸಿದರು. ಮಾನ್ಯ ಹೆಚ್.ಕೆ. ಪಾಟೀಲರೇ ತಮಗೆ ಆಶ್ಚರ್ಯವಾಗಬಹುದು, ನಾನು ನಿಮಗೆ ವಿವರವನ್ನು ಕೊಡುತ್ತೇನೆ. ಬ್ರೇನ್ ಟ್ಯೂಮರ್ ಹೋಗುತ್ತದೆ ಎಂದು ಹೇಳಿದರು ಎನ್ನುವ ಕಾರಣಕ್ಕೋಸ್ಕರ ಅವನು ಕ್ರಿಶ್ಚಿಯನ್‌ಗೆ ಕನ್ವರ್ಟ್ ಆದ, ಕಾರ್ಯಕ್ರಮದಲ್ಲಿ ಭಾಗವಹಿಸಿದನು. ಎರಡು ಸಾವಿರ ಡಾಲರ್ ಚಕ್‌ನ್ನು ಕೊಟ್ಟ, ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಬೆನ್ನುಮುಟ್ಟಿಸಿಕೊಂಡು ಆಶೀರ್ವಾದ ಪಡೆದ ಏಳು ವಾರದಲ್ಲಿ ಅವನು ತೀರಿಕೊಂಡನು. ಲೇಖನ ಇದೆ, ವಿವರ ಇದೆ, ದಾಖಲೆ ಇದೆ. ಮೊನ್ನೆ ಇದೇ ಕಾರ್ಯಕ್ರಮದಲ್ಲಿ 52 ವರ್ಷದ ಒಬ್ಬ ವ್ಯಕ್ತಿ ಆರೋಗ್ಯ ಸರಿಯಿಲ್ಲದವನು ಈ ಕಾರ್ಯಕ್ರಮಕ್ಕೆ ಬಂದಾಗ ಬೆನ್ನಿಹಿನ್ ಆಶೀರ್ವಾದ ಮಾಡಿದ ಮೇಲೆ ಅಲ್ಲಿಯೇ ತೀರಿಕೊಂಡನು. ನಾನು ಸರ್ಕಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ ಆ ಕೇಸ್ ರಿಜಿಸ್ಟರ್ ಆಗಿದೆಯಾ? ಅವನ ಮೇಲೆ ಕ್ರಮ ತೆಗೆದುಕೊಳ್ಳುವಂಥ ಪ್ರಯತ್ನ ಏನು ಮಾಡಿದ್ದೀರಾ? ಅಲ್ಲಿ ಸಾವಿರಾರು ಜನ ಕೈ ಮತ್ತು ಕಾಲು, ಕಣ್ಣು ಇಲ್ಲದವರು ಬಂದಿದ್ದರು, ಅವರು ಯಾರೊಬ್ಬರೂ ಅವನ ಹತ್ತಿರಕ್ಕೆ ಹೋಗುವುದಕ್ಕಾಗಲಿಲ್ಲ. ಅಂದರೆ ವ್ಯವಸ್ಥಿತವಾಗಿ ಟ್ರೈನ್‌ಅಪ್ ಮಾಡಿದಂಥ ಕೆಲವರು ಆರೋಗ್ಯ ಸರಿಯಿಲ್ಲವೆಂದು ಬಂದು ಅವರು ಏಸುವಿನ ಪ್ರಾರ್ಥನೆಯನ್ನು ಮಾಡಿದ ಮೇಲೆ ಕೈ ಮತ್ತು ಕಾಲು ಬಂತು ಎಂದು ಕುಣಿದು ಕುಪ್ಪಳಿಸಿದ ದೃಶ್ಯವನ್ನು ನೋಡಿದ್ದನ್ನು ಬಿಟ್ಟರೆ ಇನ್ನಾವ ರೀತಿಯಲ್ಲಿ ಅಲ್ಲಿ ಗುಣಮುಖರಾದರು ಎಂದು ಸರ್ಕಾರ ಏನಾದರೂ ವರದಿಯನ್ನು ತರಿಸಿಕೊಂಡಿದೆಯಾ? ಅದರ ಬಗ್ಗೆ ತಮ್ಮಲ್ಲಿ ಮಾಹಿತಿ ಏನಾದರೂ ಇದೆಯಾ? ಈ ರೀತಿಯಾಗಿ ಸ್ಪಷ್ಟವಾಗಿ ಮೋಸ ಮಾಡುವಂಥ ಒಂದು ಕೆಲಸ ಅವರು ಇವತ್ತು ಮಾಡಿದ್ದಾರೆ. ಒಂದು ರೀತಿ ನಾವು ನೀವೆಲ್ಲಾ ಸೇರಿ ಈ ವಿದೇಶಿ ಪಾದ್ರಿಯನ್ನು ಈ ಕಾರ್ಯಕ್ರಮಕದಕೆ ಅವಕಾಶ ಮಾಡಿಕೊಟ್ಟು ಇಲ್ಲಿ ಮತಾಂತರಕ್ಕೆ ಹಿಂದುಗಳ ಭಾವನೆಯನ್ನು ಕೆರಳಿಸುವುದಕ್ಕೆ ರಾಜ್ಯಸರ್ಕಾರ

ಇದಕ್ಕೆ ಅವಕಾಶ ಮಾಡಿಕೊಟ್ಟಿರುವುದು ಸರಿಯೆ? ಮತ್ತೆ ಬಿನ್ನಿಹಿನ್‌ನ ಈ ಒಂದು ವೈಯಕ್ತಿಕ ಈ ಕಾರ್ಯಕ್ರಮಕ್ಕೆ ಬಂದೋಬಸ್ತಿಗೆ ಸರ್ಕಾರದಿಂದ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಖರ್ಚು ಮಾಡಿದ್ದೀರಿ ಅದನ್ನು ಕೊಡುವವರು ಯಾರು? ಸಾಮಾನ್ಯ ಜನರು ಕೊಡುವಂಥ ತೆರಿಗೆ ಹಣವನ್ನು ಉಪಯೋಗ ಮಾಡಿಕೊಂಡು ಈ ಕೆಲಸವನ್ನು ಮಾಡಿರುತ್ತೀರಿ, ಇದನ್ನು ಸಹಿಸಬೇಕೆ? ಇದನ್ನು ಸರ್ಕಾರ ಯಾವರೀತಿಯಾಗಿ ಭರಿಸುತ್ತದೆ? ಬೆನ್ನಿಹಿನ್‌ನಿಂದ ತಾವು ಏನು ವಸೂಲು ಮಾಡಿದ್ದೀರಾ? ಅದರ ಮಾಹಿತಿಗಳನ್ನು ತಾವು ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಕೊಡಿ. ಜಕ್ಕೂರು ವಿಮಾನ ನಿಲ್ದಾಣವನ್ನು ವಿದೇಶಿ ಒಬ್ಬ ಮತಾಂತರದವನಿಗೆ ಕೊಡುವುದಾದರೆ ಇದಕ್ಕೆ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾದಿಂದ ಅನುಮತಿಯನ್ನು ತಾವು ಪಡೆದಿದ್ದೀರಾ? ನೀವು ಹೇಗೆ ಅನುಮತಿಯನ್ನು ಕೊಟ್ಟಿರಿ? ವಿದೇಶಿ ಪಾದ್ರಿ ಬೆನ್ನಿಹಿನ್ ಜೊತೆ ಯಾರ್ಯಾರು ವಿದೇಶಿ ಜನ ಇಲ್ಲಿಗೆ ಬಂದಿದ್ದರು. ಗುಪ್ತದಳದಿಂದ ಯಾರ್ಯಾರು ಬಂದಿದ್ದರು? ಒಂದು ರೀತಿಯಿಂದ ಜಗತ್ತೇ ಹೇಳುತ್ತಿರುವಂಥದ್ದು ಅಮೆರಿಕ ಅಧ್ಯಕ್ಷ ಮತ್ತೆ ಬಿನ್ನಿಹಿನ್ ಬೆನ್ನುತಟ್ಟಿ ಅವರಿಬ್ಬರೂ ಜೋಡಿ ಒಂದೇ ಎಂದು ಹೇಳುತ್ತಾರೆ. ಅವರ ಆಶೀರ್ವಾದದಿಂದ ಇಲ್ಲಿಗೆ ಬಂದಿದ್ದಾನೆಂದು ಹೇಳುತ್ತಾರೆ. ಅಂದರೆ ಮತಾಂತರ ಬಿಟ್ಟು ಬೇರೆ ಕಾರಣಕ್ಕೆ ಆಗುವುದಿಲ್ಲ. ಈ ರೀತಿಯ ಒಂದು ತಂತ್ರಕ್ಕೆ ನಾವು ಬಲಿಯಾಗಬೇಕೆ? ಬಹಳ ಮುಖ್ಯವಾದಂಥದ್ದು ಹಿರಿಯರಾದ ಶ್ರೀ ರಮೇಶ್ ಕುಮಾರ್‌ರವರು, ಹಾಗೂ ಶ್ರೀ ಹೆಚ್.ಕೆ. ಪಾಟೀಲ್‌ರವರಿದ್ದಾರೆ, ಬೆನ್ನಿಹಿನ್ ಪತ್ನಿ ಸೂಸನ್‌ವರು ಬಹಳ ಸ್ಪಷ್ಟವಾಗಿ ಹೇಳಿರುವಂಥದ್ದು ಅಲ್ಲಿಯ ಸಾರ್ವಜನಿಕ ಸಭೆಯಲ್ಲಿ ಹೇಳಿರುವಂಥದ್ದು ರೆಕಾರ್ಡ್ ಇದೆ, ನಾನು ಶ್ರೀಮತಿ ಸೋನಿಯಾಗಾಂಧಿಯವರನ್ನು ದೂರುವುದಿಲ್ಲ. ಸೋನಿಯಾಗಾಂಧಿ ನನಗೆ ಚೆನ್ನಾಗಿ ಗೊತ್ತು ಸಂತೋಷದಿಂದ ಅವರು ಲಕ್ಷ್ಯಾಂತರ ಜನರ ಎದುರುಗಡೆ ಪರಿಚಯವನ್ನು ಮಾಡಿಕೊಟ್ಟರು. ಅದಕ್ಕಿಂತ ಬಹಳ ನೋವನ್ನು ತರುವಂಥದ್ದು ನಾನು ತನಿಖೆ ಮಾಡಬೇಕಾಗಿರುವಂಥದ್ದು ಉನ್ನತ ಪೊಲೀಸ್ ಅಧಿಕಾರಿಗಳಿಂದ ಬೆನ್ನಿಹಿನ್ ಸಾರ್ವಜನಿಕ ಸಭೆಯಲ್ಲಿ ಹೇಳಿರುವಂಥ ಮಾತು, ಬೆನ್ನಿಹಿನ್ ಹೆಂಡತಿ ಸೂಸನ್‌ರವರ ಗೆಳತಿ ಗ್ರೇಸ್ ಪಿಂಟೊ ಇವರು ಸಭಿಕರಿಗೆ ಪರಿಚಯವನ್ನು ಮಾಡಿಕೊಟ್ಟು ಸರ್ಕಾರದಲ್ಲಿ ಬಹಳ ಇನ್‌ಫ್ಲೂಯೆನ್ಸ್ ಇರುವಂಥ ವ್ಯಕ್ತಿ ಈ ಗ್ರೇಸ್ ಪಿಂಟೊ ಎಂದು ಹೇಳಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯವನ್ನು ಮಾಡುವಂಥದ್ದು, ತಾವು ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರದಲ್ಲಿ ಮಹತ್ವದ ಇನ್‌ಫ್ಲುಯೆನ್ಸ್ ಇಟ್ಟುಕೊಂಡಿರುವಂಥ ಈ ಗ್ರೇಸ್ ಪಿಂಟೊ ಯಾರು? ಇವರ ಹಿನ್ನಲೆ ಏನು? ಎಷ್ಟು ವರ್ಷದಿಂದ ಭಾರತದಲ್ಲಿದ್ದಾರೆ? ಕೇಂದ್ರ ಸರ್ಕಾರದಲ್ಲಿ ಅಧಿಕಾರ ನಡೆಸುವಂಥವರಿಗೆ ಮತ್ತು ಇವರಿಗೆ ಏನು ಸಂಬಂಧ, ಈ ಮಾತನ್ನು ಬೆನ್ನಿಹಿನ್‌ನೇ ಹೇಳಿರುವುದರಿಂದ ಇದರ ಪೂರ್ವಾಪರ ವಿಚಾರವನ್ನು ಮಾಡದಿದ್ದರೆ ಎಲ್ಲೋ ಒಂದು ಕಡೆ ಕೇಂದ್ರ ಸರ್ಕಾರದಲ್ಲಿ ಈ ರೀತಿಯ ಹೊರದೇಶದ ಏಜೆಂಟ್‌ಗಳು ಒಳನುಗ್ಗಿ ನಮ್ಮ ವ್ಯವಸ್ಥೆಯನ್ನು ಬುಡಮೇಲು ಮಾಡುವಂಥ ಒಂದು ಷಡ್ಯಂತ್ರ ಇಲ್ಲಿ ನಡೆಯುತ್ತಿದೆ ಎನ್ನುವ ಒಂದು ಅನುಮಾನ ನಿಜವಾಗಿ ಇಲ್ಲಿ ಬರುತ್ತಿದೆ, ಅವನೇ ಪರಿಚಯವನ್ನು ಮಾಡಿಕೊಟ್ಟಿದ್ದಾನೆ. ಈ ಗ್ರೇಸ್ ಪಿಂಟೊ ಯಾರು ಎನ್ನುವ ಬಗ್ಗೆ ತಾವು ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಸರ್ಕಾರಕ್ಕೆ ಮಾಹಿತಿ ಇರಲೇಬೇಕು. ಆ ವಿವರನ್ನು ಕೊಡಬೇಕು ಎನ್ನುವ ಒಂದು ಒತ್ತಾಯವನ್ನು ನಾನು ಮಾಡುತ್ತೇನೆ. ಬಹಳ ಮುಖ್ಯವಾಗಿ ಇರುವಂಥದ್ದು, ಆ ಕಡೆ ಈ ಕಡೆ ಇರುವಂಥ ಶಾಸಕರು ನಾವು ಬೇಧಭಾವವನು.

ಇಟ್ಟುಕೊಳ್ಳುವ ಅಗತ್ಯವಿಲ್ಲ. ನಿಮ್ಮ ಸಮಕ್ಷಮ ಕರ್ನಾಟಕದಲ್ಲಿ ಕ್ರೈಸ್ತಧರ್ಮ ಪ್ರಚಾರಕ್ಕೆ ಮೀಸಲಾಗಿರುವ ಖಾಸಗೀ ಸಿಡಿ ಅಂಡ್ ಟಿವಿ ಚ್ಯಾನಲ್ ಪ್ರಾರಂಭ ಮಾಡುವ ಒಂದು ನಿರ್ಧಾರವನ್ನು ಅವರು ಪ್ರಕಟ ಮಾಡಿದ್ದಾರೆ. ಅಂದರೆ ಇದು ಸರಿಯೆ? ಬಹುಸಂಖ್ಯಾತ ಹಿಂದೂಗಳು ವಾಸ ಮಾಡುವಂಥ ಅನೇಕ ಮತದ ಜನಾಂಗ ವಾಸ ಮಾಡುವ ಈ ಸ್ಥಳಕ್ಕೆ ಬಂದು ತಮ್ಮ ಒಂದು ಕೋಮಿಗೆ ಸಂಬಂಧಪಟ್ಟಂಥ ಪ್ರಚಾರಕ್ಕಾಗಿ ಒಂದು ಟಿವಿ ಚಾನಲ್‌ನ್ನು ನಾನೇ ಪ್ರಾರಂಭ ಮಾಡುತ್ತೇನೆಂದು ನಿಮ್ಮ ಎದುರುಗಡೆ ಒಂದು ರಹದಾರಿಯನ್ನು ಪರ್ಮಿಷನ್ ತೆಗೆದುಕೊಳ್ಳುತ್ತಾನೆಂದರೆ ಇದನ್ನು ಸಹಿಸಿಕೊಳ್ಳುವುದು ಹೇಗೆ? ಇದನ್ನು ನಾವು ಹೇಗೆ ಒಪ್ಪಿಕೊಳ್ಳಬೇಕು? ನನ್ನ ಮಾತು ಬೇಡ ಸ್ವಾಮಿ, ನಿಮ್ಮ ಹೈಯರ್ ಎಜುಕೇಷನ್ ಮಿನಿಸ್ಟರ್ ಶ್ರೀ ಮಂಜೂನಾಥ್‌ರವರು ಯಾವುದೇ ಕಾರಣಕ್ಕೆ ಬೆನ್ನಿಹಿನ್ ಕಾರ್ಯಕ್ರಮ ನಡೆಯಕೂಡದು, ಮುಖ್ಯಮಂತ್ರಿಗಳು ಹೋಗಬಾರದು, ಪರ್ಮಿಶನ್ ಕೊಟ್ಟಿರುವುದನ್ನು ರದ್ದು ಮಾಡಬೇಕೆಂದು ಹೇಳಿದ್ದಾರೆ. ಹಿರಿಯ ನಾಯಕರಾದಂತಹ ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಬಹಳ ಸ್ಪಷ್ಟವಾಗಿ ಮುಖ್ಯಮಂತ್ರಿಗಳಿಗೆ ಹಾಗೂ ಸರ್ಕಾರಕ್ಕೆ ಕಿವಿಮಾತನ್ನು ಹೇಳಿದ್ದಾರೆ. ಯಾವುದೇ ಕಾರಣಕ್ಕಾಗಿ ಇದಕ್ಕಾಗಿ ಅನುಮತಿಯನ್ನು ಕೊಡಬಾರದು, ಮುಖ್ಯಮಂತ್ರಿಗಳು ಹೋಗಬಾರದು ಎಂದು ಹೇಳಿದ್ದಾರೆ. ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಶ್ರೀ ಯು.ಆರ್. ಅನಂತಮೂರ್ತಿಯವರು ಈ ಮಾತನ್ನು ಹೇಳಿದ್ದಾರೆ. ತಾವು ಏತಕ್ಕಾಗಿ ಮಾತನಾಡುತ್ತಿದ್ದೀರಿ, ನಾನು ಯೀಲ್ಡ್ ಆಗಿಲ್ಲ. ನಾನು ಪೂರ್ಣವಾಗಿ ಮಾತನಾಡುವವರೆಗೂ ಕೂಡ ಯೀಲ್ಡ್ ಆಗುವುದಿಲ್ಲ. ನಾನು ಯೀಲ್ಡ್ ಆಗಿಲ್ಲ.

ಗೊಂದಲ

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಲಿ, ತಾವು ಕುಳಿತುಕೊಳ್ಳಿ. ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹಳ ಮುಖ್ಯವಾಗಿ ರಾಜ್ಯದ ಮುಖ್ಯಮಂತ್ರಿಗಳೇ,...

ಶ್ರೀ ಆಲೋಡ ಹನುಮಂತಪ್ಪ : ವಿರೋಧಪಕ್ಷದ ನಾಯಕರು ಮಾತನಾಡಿದ ಮೇಲೆ ನಮಗೆ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಯೀಲ್ಡ್ ಆಗಿಲ್ಲ, ನಮಗೆ ನಿಮ್ಮ ಸಹಾಯ ಬೇಡ.

ಶ್ರೀ ಆಲೋಡ್ ಹನುಮಂತಪ್ಪ : ಆಮೇಲೆ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಸಾರ್ ಪ್ಲೀಸ್ ಅವರಿಗೆ ಹೇಳಿ ಸಾರ್.

ಗೊಂದಲ

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಈಲ್ಡ್ ಆಗಿಲ್ಲ. ನಾನು ಈಲ್ಡ್ ಆಗದೆ ಅವರು ಮಾತನಾಡಿದರೆ ಹೇಗೆ?

ಶ್ರೀ ಅರಗ ಜ್ಞಾನೇಂದ್ರ : ಅವರಿಗೆ ಅವಕಾಶ ಕೊಟ್ಟ ಮೇಲೆ ಅವರು ಮಾತನಾಡಲಿ. ಅವರ ಪರವಾಗಿ ಇವರು ವಕಾಲತ್ತು ವಹಿಸುವುದಕ್ಕೆ ಇವರು ಯಾರೂ ಸಾರ್? ಮಾನ್ಯ ಮಂಜುನಾಥ್‌ರವರು ಈ ಮನೆಯ ಹಿರಿಯ ಸದಸ್ಯರಾಗಿದ್ದಾರೆ. ಅವರು ಬಂದು ಇಲ್ಲಿ ಹೇಳಲಿ.

ಗೊಂದಲ

ಶ್ರೀ ಆಲ್ಕೋಡ್ ಹನುಮಂತಪ್ಪ : ಮಾನ್ಯ ಅಧ್ಯಕ್ಷರೆ,

ಗೊಂದಲ

ಅಧ್ಯಕ್ಷರು : ಹನುಮಂತಪ್ಪನವರೆ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಲಿ ಬಿಡಿ. ನಂತರ ತಾವು ಮಾತನಾಡಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದೇ ಒಂದು ಮಾತು ಮುಖ್ಯಮಂತ್ರಿಗಳಿಗೆ ಹೇಳುವುದಾದರೆ, ತಾವು ಅನುಭವಿಗಳಿದ್ದೀರಿ, ಬುದ್ಧಿವಂತರಾಗಿದ್ದೀರಿ; ತಮ್ಮ ಬಾಯಿಯಲ್ಲಿ ಏನು ಬರುತ್ತಿದೆ. ಈ ಬಿಜೆಪಿಯವರು ಹೊಸ ಹೊಸ ಸಮಸ್ಯೆಗಳನ್ನು ಹುಟ್ಟುಹಾಕುತ್ತಿದ್ದಾರೆ. ಈ ಮಾತನ್ನು ತಾವು ಹೇಳಿದ್ದೀರಿ. ಮತ್ತೆ ಬಿಜೆಪಿಯನ್ನು ಒಂದು ವೆಪನ್ ಆಗಿ ಉಪಯೋಗಿಸುವಂತಹ ಪ್ರಯತ್ನ, ಇವರು ಬೇರೆ ಮತಾಂತರದ ಮತಗಳ ವಿರುದ್ಧ ಇರುವಂತಹ ಜನ, ಈ ರೀತಿಯಾಗಿ ಭಾವನೆಯನ್ನು ಕೆರಳಿಸುವಂತಹ ಪ್ರಯತ್ನ ಮಾಡಿದ್ದೀರಿ. ನಾನು ನಿಮ್ಮನ್ನು ಕೇಳುತ್ತೇನೆ. ನೀವು ನಮ್ಮ ಮಾತನ್ನು ಕೇಳಬೇಡಿ. ಸಂಘ, ಸಂಘಪರಿವಾರ ಬಿಜೆಪಿ ಮಾತನ್ನು ಕೇಳಬೇಡಿ. ಹಾರ್ನಳ್ಳಿ ರಾಮಸ್ವಾಮಿಯವರು ಸಂಘದವರಲ್ಲ, ನಮ್ಮ ಮುಖಂಡರಾದಂತಹ ನಿಮ್ಮ ಕ್ಯಾಬಿನೆಟ್ ಕೊಲೀಗ್ ಆದಂತಹ ಮಂಜುನಾಥ್‌ರವರು ನಮ್ಮವರು ಏನೂ ಅಲ್ಲ, ಜ್ಞಾನಪೀಠ ಪ್ರಶಸ್ತಿ ವಿಜೇತ ಶ್ರೀ ಯು.ಆರ್. ಅನಂತಮೂರ್ತಿಯವರು ನಮ್ಮವರು ಅಲ್ಲ. ನೂರಾರು ಜನ ಬಹಳ ಸ್ಪಷ್ಟವಾಗಿ ಈ ಕೆಲಸವನ್ನು ತಾವು ಮಾಡಬಾರದು ಎಂದು ಹೇಳಿ ವಿನಂತಿಯನ್ನು ಮಾಡಿದ ಮೇಲೂ ಸಹ ತಾವು ಈ ಕಾರ್ಯಕ್ರಮಕ್ಕೆ ಅನುಮತಿಯನ್ನು ಕೊಡುವಂಥದ್ದು, ಇದು ಎಷ್ಟರಮಟ್ಟಿಗೆ ಸರಿ ಎಂಬುದರ ಬಗ್ಗೆ ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಬಹಳ ಸ್ಪಷ್ಟವಾಗಿ ಡಾ: ಯು.ಆರ್. ಅನಂತ ಮೂರ್ತಿಯವರ ಮಾತನ್ನು ಕೇಳುವುದಾದರೆ, "ಬೆನ್ನಿಹಿನ್ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳು ಹೋಗುತ್ತಾರಂತೆ, ಏನು ಹೇಸಿಗೆ ಇದೆಲ್ಲಾ." ಇದು ಅನಂತಮೂರ್ತಿಯವರು ಹೇಳುವಂತಹ ಮಾತು. ಮತ್ತೆ ಎಲ್ಲಾ ಪ್ರಮುಖರು ಯಾರ್ಯಾರು ನಿಮಗೆ... ಅವರೆಲ್ಲರೂ ಸಹ ಇಷ್ಟೆಲ್ಲಾ ಹೇಳಿದ ಮೇಲೆ....

ಡಾ. ವೈ ನಾಗಪ್ಪ (ಸಮಾಜ ಕಲ್ಯಾಣ ಇಲಾಖಾ ಸಚಿವರು) : ಮಾನ್ಯ ಅಧ್ಯಕ್ಷರೆ, ಕಡತದಿಂದ ಆ ಪದವನ್ನು ತೆಗಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅನೇಕ ಪತ್ರಿಕೆಗಳಲ್ಲಿ ಎಡಿಟೋರಿಯಲ್ ಕಾಲಂನಲ್ಲಿ ಬಂದ ಮೇಲೆ...

ಡಾ. ವೈ. ನಾಗಪ್ಪ : ಮಾನ್ಯ ವಿರೋಧಪಕ್ಷದ ನಾಯಕರು ಅನ್‌ಪಾರ್ಲಿಮೆಂಟರಿ ಶಬ್ದವನ್ನು ಉಪಯೋಗಿಸಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅನಂತಮೂರ್ತಿಯವರು ಹೇಳಿರುವುದು ಪತ್ರಿಕೆಗಳಲ್ಲಿ ಬಂದಿದೆ, ಅದರ ಕಟಿಂಗ್ ನಾನು ನಿಮಗೆ ಕಳುಹಿಸಿಕೊಡುತ್ತಿದ್ದೇನೆ.

ಡಾ. ವೈ. ನಾಗಪ್ಪ : ಆ ಮಾತನ್ನು ಪಾಪಸ್ಸು ತೆಗೆದುಕೊಳ್ಳಬೇಕು.

ಗೊಂದಲ

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ವಿರೋಧಪಕ್ಷದ ನಾಯಕರು ಈ ಸಭೆಯಲ್ಲಿ ಅಸಮರ್ಪಕವಾದ ಶಬ್ದವನ್ನು ಪ್ರಯೋಗ ಮಾಡಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನು ನಾನು ಹೇಳುತ್ತಿಲ್ಲ. ಅದು ಬಂದಿರುವುದನ್ನು ನಿಮಗೆ ಕೊಡುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಆ ಶಬ್ದವನ್ನು ಕಡತದಿಂದ ತೆಗೆದುಹಾಕಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲಾ ಪತ್ರಿಕೆಗಳಲ್ಲಿ ಧಾರವಾಹಿಯಾಗಿ ಅವರ ಭಾಷೆಯಲ್ಲಿಯೇ ಹೇಳಿದ್ದಾರೆ.

ಅಧ್ಯಕ್ಷರು : ಸಭಾ ಮರ್ಯಾದೆಗೆ ತಕ್ಕ ಹಾಗೆ ಮಾತನಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನು ನಾನು ಹೇಳಲಿಲ್ಲ. ಅಲ್ಲಿ ಬಂದಿರುವುದರ ಬಗ್ಗೆ ನಾನು ಹೇಳುತ್ತಿರುವುದು. ಪತ್ರಿಕೆಯಲ್ಲಿ ಏನು ಬಂದಿದೆ ಅವರು ಹೇಳಿದ್ದು ಏನಿದೆ, ಅದನ್ನು ಮಾತ್ರ ನಾನು ಹೇಳುತ್ತಿದ್ದೇನೆ. ನಾನು ಏನೂ ಹೇಳುತ್ತಿಲ್ಲ. ಜ್ಞಾನಪೀಠ ಪ್ರಶಸ್ತಿ ಕೊಟ್ಟಂತಹವರು, ಯಡಿಯೂರಪ್ಪನವರ ಮಾತನ್ನು ಕೇಳಬೇಡಿ. ಸಂಘಪರಿವಾರದವರ ಮಾತನ್ನು ಕೇಳಬೇಡಿ. ಸಂಘಪರಿವಾರವನ್ನು ಒಂದು ವೆಪನ್ ಆಗಿ ಉಪಯೋಗ ಮಾಡಿಕೊಳ್ಳಬೇಡಿ. ವಾಸ್ತವಿಕವಾಗಿ ನಿಮ್ಮ ಹಿತೈಷಿಗಳು ಈ ನಾಡಿನ ಹಿತಚಿಂತಕರು ಹೇಳಿದ ಮಾತಿಗೆ ನೀವು ಬೆಲೆ ಕೊಡಲಿಲ್ಲವಲ್ಲ ಎಂದು ಹೇಳಿದೆವೆಯೇ ಹೊರತು ಬೇರೆ ಯಾವುದೇ ಕಾರಣಕ್ಕೂ ಅಲ್ಲ.

ಶ್ರೀ ಅರಗ ಜ್ಞಾನೇಂದ್ರ : ಅದು ಸರಿಯಿಲ್ಲದಿದ್ದರೆ ಯು.ಆರ್. ಅನಂತಮೂರ್ತಿಯವರ ಮೇಲೆ ಕಾನೂನು ರೀತಿಯ ಕ್ರಮವನ್ನು ತೆಗೆದುಕೊಳ್ಳಿ. ಪ್ರಕಟ ಮಾಡಿರುವಂತಹ ಪೇಪರ್ ಮತ್ತು ಅನಂತ ಮೂರ್ತಿಯವರ ಮೇಲೆ ಕಾನೂನು ರೀತಿಯಾಗಿ ಕ್ರಮವನ್ನು ತೆಗೆದುಕೊಳ್ಳಿ. ಅವರ ಮೇಲೆ ಮೊಕದ್ದಮೆಯನ್ನು ಹೂಡಿ. ಅದು ಆಗುತ್ತದೆಯೇ ನೋಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಯು.ಆರ್. ಅನಂತಮೂರ್ತಿಯವರ ಭಾಷಣವನ್ನು ಅವರು ಓದಿಕೊಂಡು ಹೇಳುತ್ತಿದ್ದಾರೆ. How can you call it unparliamentary? He is only quoting his words. It is not his words.

ಗೊಂದಲ

ಶ್ರೀ ಹೆಚ್.ಕೆ. ಪಾಟೀಲ್ : ಅವರಿಗೆ ಪರವಾನಿಗೆಯನ್ನು ಕೊಟ್ಟಿದ್ದೀರಿ, ಅವರು ಎಷ್ಟು ನಿಮಿಷ ಆ ದರ್ಜೆಯನ್ನು ಮಾಡುತ್ತಾರೆ.

ಅಧ್ಯಕ್ಷರು : ಅವರು ಪ್ರಸ್ತಾವನೆಯನ್ನು ಶೂನ್ಯವೇಳೆಯಲ್ಲಿ ಪ್ರಸ್ತಾವನೆಯನ್ನು ಮಾಡುತ್ತಿದ್ದಾರೆ. ಮಾನ್ಯ ಯಡಿಯೂರಪ್ಪನವರೇ, ಪ್ರಮುಖವಾದ ವಿಷಯವೆಂದು ಚರ್ಚೆಯನ್ನು ಮಾಡುತ್ತಿದ್ದೀರಿ. ದಯಮಾಡಿ ಬೇಗ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ : ಹೇಸಿಗೆ ಎನ್ನುತಕ್ಕ ಪದ ಸಂಸದೀಯ ಪದ. ಅದರಿಂದ ಏನು ಅನುಮಾನ ಪಡಬೇಕಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದು ಯಡಿಯೂರಪ್ಪನವರು ಬಳಸಿರುವಂತಹ ಪದವಲ್ಲ. ಬಹಳ ಹಿರಿಯಸಾಹಿತಿಗಳು ಬಳಸಿರುವಂತಹ ಪದವಾಗಿದೆ. ಪೇಪರನಲ್ಲಿ ಬಳಸಿರುವಂತಹ ಪದ ಬಳಸುವುದು ಅನ್‌ಪಾರ್ಲಿಮೆಂಟರಿ ಹೇಗೆ ಆಗುತ್ತದೆ ಸಾರ್?

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಈ ಪ್ರಸ್ತಾವನೆಯನ್ನು ಶೂನ್ಯವೇಳೆಯಲ್ಲಿ ಮಾಡುತ್ತೇವೆಂದು ಹೇಳಿದ್ದೀರಿ. ನಾನು ತಮಗೆ ಅವಕಾಶವನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ಎಷ್ಟು ಸಮಯ ಬೇಕು ಎಂಬುದು ತಮ್ಮ ವಿವೇಚನೆಗೆ ಬಿಟ್ಟಿದ್ದು. ದಯಮಾಡಿ ಬೇಗನೆ ಮುಗಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರಲ್ಲಿ ಯಡಿಯೂರಪ್ಪ ಹೊಸದಾಗಿ ಪ್ರಸ್ತಾಪ ಮಾಡುವಂಥದ್ದು ಏನೂ ಇಲ್ಲ. ದಾಖಲೆಗಳಲ್ಲಿ ಕೆಲವು ಉಳಿಯಬೇಕು ಎನ್ನುವ ದೃಷ್ಟಿಯಲ್ಲಿ ನಾನು ನಾನು ನಿಂತಿದ್ದೇನೆಯೇ ಹೊರತು ಮಾನ್ಯ ಮುಖ್ಯಮಂತ್ರಿಗಳೇ, ಇದರ ಬಗ್ಗೆ ನಾನು ಏನು ಹೇಳಲೇ ಇಲ್ಲ. ಇವತ್ತು ಇಲ್ಲಿ ಹೇಳಿದ್ದೆ ಹೇಳುವಂತಹ ಪ್ರಶ್ನೆಯೇ ಇಲ್ಲ. ಈಗ ನಿಮ್ಮ ಪರಿಸ್ಥಿತಿ ಬೇರೆ ಇದೆ. ನಿಮ್ಮ ಸಮಸ್ಯೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ನೀವು ತೊಂದರೆಯಲ್ಲಿ ಸಿಕ್ಕಿಕೊಂಡಿದ್ದೀರಿ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ತಾವು ಯಾವ ನಿಯಮಾವಳಿಯಲ್ಲಿ ಅವರಿಗೆ ಅವಕಾಶವನ್ನು ಕೊಡುತ್ತಿದ್ದೀರಿ, ಎಂಬುದು ಗೊತ್ತಿಲ್ಲ, ಅವರು ವಿರೋಧಪಕ್ಷದ ನಾಯಕರಾಗಿದ್ದಾರೆ, ಅವರು ಪ್ರಸ್ತಾಪ ಮಾಡುವಂಥ ಹಕ್ಕು ಇದೆ. ಏನಾಗಿದೆ ಎಂದರೆ ಬೆನ್ನಿಹಿನ್ ಅಮೇರಿಕಾ ಹೋಗಿ ತಲುಪಿ ಆಗಿದೆ. ಬೆನ್ನಿಹಿನ್ ಬಗ್ಗೆ ಕಳೆದ ಹತ್ತು ದಿನಗಳಿಂದ ಹೇಳುತ್ತಿದ್ದೀರಿ. ಹೊಸದಾಗಿ ಏನಾದರೂ ಹೇಳುವುದು ಇದ್ದರೆ ಹೇಳಿ ಅದರ ಬಗ್ಗೆ ನಾವು ಉತ್ತರ ಕೊಡುತ್ತೇವೆ. ಈಗ ಎಲ್ಲರೂ ಕೂಡ ಅದರ ಬಗ್ಗೆ ಮಾತನಾಡಬೇಕಾದರೆ I have no objections, ನೀವು ಯಾವ ನಿಯಮದ ಅಡಿಯಲ್ಲಿ ಅವಕಾಶ ಕೊಡುತ್ತೀರಿ, ಇದರ ಬಗ್ಗೆ ಒಂದು ದಿವಸಗಳ ಕಾಲ ಚರ್ಚೆ ನಡೆಯಲಿ, ಬೇರೆಯವರಿಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೂ ಕೂಡ ನಮ್ಮ ಕಡೆಯವರು ಕೂಡ ಮಾತನಾಡುವವರು ಇದ್ದಾರೆ. ಇದರ ಬಗ್ಗೆ ತಕ್ಕ ಉತ್ತರವನ್ನು ಕೊಡುತ್ತೇವೆ. ತಾವು ವಿರೋಧಪಕ್ಷದ ನಾಯಕರಾಗಿ ಇಂತಹ ವಿಷಯಗಳ ಬಗ್ಗೆ ಕಾಲಹರಣ ಮಾಡಬೇಡಿ. ಸಾಕಷ್ಟು ಜ್ವಲಂತವಾದಂತಹ ಸಮಸ್ಯೆಗಳು ಇವೆ. ನೀವು ಈ ರೀತಿಯಾಗಿ ಮಾಡಿ ಮಾಡಿ ನಿಮಗೆ ಜನಗಳು ಪಾಠವನ್ನು ಕಲಿಸಿದ್ದಾರೆ. ಮತ್ತೆ ಅದೇ ವಿಷಯವನ್ನು ಹೇಳಿಕೊಂಡು ಹೋಗುತ್ತಿದ್ದೀರಿ. ಜನರು ನಿಮಗೆ ಪಾಠವನ್ನು ಕಲಿಸಿದ್ದಾರೆ. 2004ರಲ್ಲಿ ಎಷ್ಟು ಸಾರಿ ಸೋನಿಯಾಗಾಂಧಿಯವರ ಹೆಸರನ್ನು ತೆಗೆದುಕೊಳ್ಳುತ್ತೀರಿ, ಅಷ್ಟೇ ಸಾರಿ ಜನರು ನಿಮಗೆ ಅವಮಾನವನ್ನು ಮಾಡಿದ್ದಾರೆ.

ಕೊಂದಲ

ಶ್ರೀ ಅರಗ ಜ್ಞಾನೇಂದ್ರ : ಕಳೆದ ಸಾಲಿನಲ್ಲಿ ನೀವು ಎಷ್ಟು ಜನರು ಇದ್ದೀರಿ, ಈಗ ಎಷ್ಟು ಜನರು ಇದ್ದೀರಿ.

ಗೊಂದಲ

ಶ್ರೀ ಎಸ್.ಎಸ್. ಪಾಟೀಲ್ : ಕುಡಿಯುವ ನೀರಿನದ್ದು ಏನಾಯಿತು? ಕುಡಿಯುವ ನೀರು ಹೋಗೇ ಬಿಟ್ಟಿತು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಏನೇನು ಆಗಿಲ್ಲ, ಈ ದೇಶದ ಹಾಗೂ ಈ ರಾಜ್ಯದ ಜನ ನಿಮ್ಮ ಎಲ್ಲಾ ಮುಖಂಡರಿಗೆ ಸರಿಯಾದ ರೀತಿಯಲ್ಲಿ ಪಾಠವನ್ನು ಕಲಿಸಿದ್ದಾರೆ. ಸೋನಿಯಾಗಾಂಧಿ, ಸೋನಿಯಾಗಾಂಧಿ ಎಂದು ಏನು ಅರ್ಥವಿಲ್ಲದ ರೀತಿಯಲ್ಲಿ ಮಾತನಾಡುತ್ತೀರಿ. ತಾವು ಮಾತನಾಡಿ ನಮ್ಮ ಬಗ್ಗೆ ರಾಜ್ಯದ ಮುಖ್ಯಮಂತ್ರಿಯಾಗಿ ಅಲ್ಲಿ ಹೋಗಿದ್ದೀರಿ, ಏನು ಲೋಪಗಳು ಆಗಿದೆ, ಕರ್ನಾಟಕ ಸರ್ಕಾರ ಎಲ್ಲಿ ತಪ್ಪಿದೆ,

ಶ್ರೀ ಅರಗ ಜ್ಞಾನೇಂದ್ರ : ಇವರು ಬೆನ್ನಿಹಿನ್‌ನನ್ನು ವಿವೇಕಾನಂದರಿಗೆ ಹೋಲಿಸಿದರು. ವಿವೇಕಾನಂದರು ಏನು ಎನ್ನುವುದು ಗೊತ್ತಿದೆಯಾ? ವಿವೇಕಾನಂದರನ್ನು ಯಾವ ಕಾರಣಕ್ಕಾಗಿ ಹೋಲಿಸಿದ್ದೀರಿ?

ಗೊಂದಲ

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ನಾನು ನನ್ನ ಉತ್ತರದಲ್ಲಿ ಹೇಳುತ್ತೇನೆ. ನೀವು ಪ್ರಸ್ತಾಪ ಮಾಡಿ ಬಿಟ್ಟು ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಒಂದು ಮಾತನ್ನು ಹೇಳಿಬಿಟ್ಟು ಮುಗಿಸಿ ಬಿಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡುವುದು ಮುಗಿದೆ ಹೋಯಿತು. ಅದು ಸಮಸ್ಯೆ ಇದ್ದದ್ದು ಅದು ಮುಂದಕ್ಕೆ ಹೋಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ .....

(ಅತೀವ ಗೊಂದಲ ಎರಡೂ ಕಡೆಯಿಂದ ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡುತ್ತಿದ್ದರು)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾತನಾಡುವಾಗ ಹತೋಟಿ ಇರಲಿ. ಏನು ಮಾತನಾಡುತ್ತಿದ್ದೀರಿ ನೀವು? ಅದು ಬಿಡಿ, ನಿಮ್ಮದು ಹೇಳಿ. ವಿರೋಧ ಪಕ್ಷದ ನಾಯಕರಾಗಿ ಸ್ವಲ್ಪ ಅರಿತು ಮಾತನಾಡಿ. ಏನು ಮಾತನಾಡುತ್ತೀರಿ ನೀವು?

ಗೊಂದಲ

ಅಧ್ಯಕ್ಷರು : ಯಾವುದೂ ರೆಕಾರ್ಡಿಗೆ ಹೋಗಬಾರದು. ಯಾರು ಏನು ಮಾತನಾಡಿದರೂ ರೆಕಾರ್ಡ್ ಮಾಡುವ ಹಾಗಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಸಮಗ್ರ ತನಿಖೆಯಾದರೆ ಅನೇಕ ಸತ್ಯ ಸಂಗತಿಗಳು ಈಚೆಗೆ ಬರುತ್ತವೆ. ನಿಮಗೆ ನಿಜವಾಗಿ ಧೈರ್ಯ ಇದ್ದರೆ ಇದನ್ನು ತನಿಖೆಗೆ ಒಳಪಡಿಸಿ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ಮಾನ್ಯ ಯಡಿಯೂರಪ್ಪನವರು ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮ್ಮದೂ ಅಭಿಪ್ರಾಯ ಇದೆ.

ಅಧ್ಯಕ್ಷರು : ಇಲ್ಲ, ಯಾರಿಗೂ ಅವಕಾಶ ಕೊಡುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಾಗಾದರೆ ಅವರಿಗೆ ಯಾವ ನಿಯಮಾವಳಿ ಅಡಿಯಲ್ಲಿ ಅವಕಾಶ ಕೊಟ್ಟಿರಿ? ಆದ್ದರಿಂದ ನಮಗೂ ಅವಕಾಶ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ನಾವೂ ಕೂಡ ಮಾತನಾಡಬೇಕು.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ಅವರು ನಿಲುವಳಿ ಸೂಚನೆಯನ್ನು ಕಳುಹಿಸಿದ್ದರು. ಅದನ್ನು ನಾನು ಒಪ್ಪುವುದಕ್ಕೆ ಆಗುವುದಿಲ್ಲ ಎಂದು ಹೇಳಿದಾಗ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೇಳಿದ್ದಾರೆ. ನಾನು ಅವಕಾಶ ಕೊಟ್ಟಿದ್ದೇನೆ. ಆದ್ದರಿಂದ ಇಲ್ಲಿಗೆ ಇದು ಮುಕ್ತಾಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ನಮಗೂ ಅವಕಾಶ ಕೊಡಿ.

ಅಧ್ಯಕ್ಷರು : ಯಾರಿಗೂ ಅವಕಾಶ ಕೊಡುವುದಿಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲ, ಇಲ್ಲ. ನಮಗೂ ಅವಕಾಶ ಕೊಡಬೇಕು.

ಅಧ್ಯಕ್ಷರು : ಯಾವುದೇ ಕಾರಣಕ್ಕೆ ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ಈಗ ಸಭಾನಾಯಕರು ಉತ್ತರ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ತಾವು ನಮಗೂ ಕೂಡ ಅವಕಾಶ ಕೊಡಬೇಕು. ತಾವು ಸಿಟ್ಟುಮಾಡಿಕೊಳ್ಳಬೇಡಿ. ನಮಗೂ ಅವಕಾಶ ಕೊಡಿ.

ಅಧ್ಯಕ್ಷರು : ನಾನು ಯಾವುದೇ ಕಾರಣಕ್ಕೂ ಸಿಟ್ಟು ಮಾಡಿಕೊಳ್ಳುವ ಪ್ರಶ್ನೆ ಇಲ್ಲ. ಆದರೆ ಈ ವಿಚಾರದಲ್ಲಿ ನಾನು ಯಾವುದೇ ಕಾರಣಕ್ಕೆ ಅವಕಾಶವನ್ನು ಕೊಡುವುದಿಲ್ಲ. ಈಗ ಸಭಾನಾಯಕರು ಅದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನಾವೂ ಕೂಡ ವಿರೋಧ ಪಕ್ಷದಲ್ಲಿದ್ದೇವೆ. ಆದ್ದರಿಂದ ನಮಗೂ ಅವಕಾಶವನ್ನು ತಾವು ಕೊಡಬೇಕು.

ಶ್ರೀ ಎಸ್. ರಾಜೇಂದ್ರನ್ : ನಮ್ಮ ಅಭಿಪ್ರಾಯವನ್ನು ಹೇಳುವುದಕ್ಕೂ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು : ಇಲ್ಲಿ ಕೇಳಿ. ಅವರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದರು. ನಾನು ಒಪ್ಪುವುದಕ್ಕೆ ಆಗುವುದಿಲ್ಲವೆಂದು ಹೇಳಿದಾಗ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಕೇಳಿದಾಗ ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ಅವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಆದ್ದರಿಂದ ಇದರಲ್ಲಿ ದಯಮಾಡಿ ಯಾರಿಗೂ ಅವಕಾಶವನ್ನು ಕೊಡುವುದಕ್ಕೆ ಆಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ನಮ್ಮ ವಿಚಾರಗಳು ಬೇರೆ, ನಮ್ಮ ವಿಚಾರಧಾರೆ ಬೇರೆ....

ಶ್ರೀ ಜೆ.ಸಿ. ಮಾಧುಸ್ವಾಮಿ : ವಿರೋಧ ಪಕ್ಷಗಳು ಎಲ್ಲಾ ವಿಷಯಗಳಲ್ಲೂ ಒಂದಾಗಿಲ್ಲ. ಯಡಿಯೂರಪ್ಪನವರು ಹೇಳಿದ್ದೇ ಸರಿಯೇ, ತಪ್ಪೇ ಎನ್ನುವ ಭಾವನೆ ಹೊರಗಡೆ ಹೋಗಬಾರದು. ನಾವು ಬೇರೆಬೇರೆ ಪಕ್ಷಗಳಲ್ಲಿ ಇದ್ದೇವೆ. ಆದ್ದರಿಂದ ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ತಾವು ಒಂದು ಅವಕಾಶವನ್ನು ಈ ಇಶ್ಯೂನಲ್ಲಿ ಕೊಡಬೇಕು.

ಗೊಂದಲ

(ಮಾನ್ಯ ಸದಸ್ಯರುಗಳಾದ ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು ಮತ್ತು ಶ್ರೀ ಎಸ್. ರಾಜೇಂದ್ರನ್ ಅವರು ಸಭಾಧ್ಯಕ್ಷರ ಪೀಠದ ಮುಂದಿನ ಆವರಣದಲ್ಲಿ ಬಂದು ನಿಂತರು)

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು : ಸಂದದೀಯ ವ್ಯವಹಾರಗಳ ಸಚಿವರು ಏನೋ ಹೇಳುತ್ತಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಅನೇಕ ವಿಚಾರಗಳನ್ನು ನಾವು ಹೇಳಬೇಕಾಗಿದೆ. ಮಾನ್ಯ ಯಡಿಯೂರಪ್ಪನವರ ಭಾಷಣ ಬಂದು ಕಡೆ ಆಯಿತು. ನಾವು ಹೇಳತಕ್ಕದ್ದೂ ಕೂಡ ಜನರಿಗೆ ಗೊತ್ತಾಗಬೇಕು. ಆ ದೃಷ್ಟಿಯಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ನಾನು ಚರ್ಚೆಗೆ ಅವಕಾಶ ಕೊಟ್ಟಿಲ್ಲ.

(ಗೊಂದಲ ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಲು ತೊಡಗಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಕುಸ್ತಿಗೆ ಕರಿತಿದ್ದೀರೇನ್ರಿ? ಪ್ರಜಾತಂತ್ರ ವ್ಯವಸ್ಥೆಯಲ್ಲಿ ನನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ನನಗೆ ಸ್ವಾತಂತ್ರ್ಯ ಇದೆ.

ಗೊಂದಲ

ಅಧ್ಯಕ್ಷರು : ಈಗ ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸದಸ್ಯರುಗಳೆಲ್ಲರೂ ಕುಳಿತುಕೊಳ್ಳಬೇಕು. ಈ ತರಹ ಆದರೆ ಸಭೆಯನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ. ಇನ್ನೂ ಅನೇಕ ಗಂಭೀರವಾದ ವಿಚಾರಗಳ ಬಗ್ಗೆ ಚರ್ಚೆಯಾಗಬೇಕು. ಆದ್ದರಿಂದ ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಈಗ ಏನಾಗಿದೆ ಎಂದರೆ ಬೇರೆ ವಿರೋಧ ಪಕ್ಷಗಳ ಮುಖಂಡರುಗಳು ಕೇಳುತ್ತಿದ್ದೀರಿ. ಇದನ್ನು ನಾನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಿದ್ಧವಿಲ್ಲ. ತಾವು ತಮ್ಮ ಅಭಿಪ್ರಾಯಗಳನ್ನು ಎರಡು-ಎರಡು ನಿಮಿಷದಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ತಾವು ಎರಡು ನಿಮಿಷದಲ್ಲಿ ತಮ್ಮ ಅಭಿಪ್ರಾಯವನ್ನು ಪ್ರಸ್ತಾಪ ಮಾಡಬಹುದು. ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡುವ ಅಗತ್ಯ ಇಲ್ಲ. ಆಮೇಲೆ ಸರ್ಕಾರದ ಪರವಾಗಿ ಮಾನ್ಯ ಸಭಾನಾಯಕರು ಉತ್ತರ ಹೇಳುತ್ತಾರೆ. ಅಲ್ಲಿಗೆ ಈ ವಿಚಾರವನ್ನು ಮುಗಿಸೋಣ. ಈಗ ಮಾನ್ಯ ಮಾಧುಸ್ವಾಮಿಯವರು ಮತ್ತು ಬೇರೆ ವಿರೋಧ ಪಕ್ಷಗಳ ನಾಯಕರು ತಮ್ಮ ಅಭಿಪ್ರಾಯವನ್ನು ಹೇಳಿ. ಆದರೆ ನಾನು ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಿದ್ಧನಿಲ್ಲ. ಮೊದಲು ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ಈಗ ಮಾನ್ಯ ಮಾಧುಸ್ವಾಮಿಯವರೇ, ಎರಡು ನಿಮಿಷದಲ್ಲಿ ನಿಮ್ಮ ಅಭಿಪ್ರಾಯಗಳನ್ನು ಹೇಳಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಸನ್ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವ ವೇಳೆಗೆ ಒಂದು ಗುರುತರವಾದಂಥ ಆಪಾದನೆಯನ್ನು ಮಾಡಿದ್ದಾರೆ. ಈ ಹಿಂದೆ ಪಾರ್ಲಿಮೆಂಟ್‌ನಲ್ಲಿ ವಿರೋಧ ಪಕ್ಷದ ನಾಯಕಿಯಾಗಿ ಕೆಲಸ ಮಾಡಿದ್ದಾರೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅದು ಒಂದು ಮಹತ್ತರವಾದಂಥ ಸ್ಥಾನ. ಇವತ್ತು ಅವರು ಪಾರ್ಲಿಮೆಂಟಿನ ಸದಸ್ಯರಾಗಿದ್ದಾರೆ. ತಮ್ಮನ್ನು ತಾವು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವರು ಇಲ್ಲಿ ಇಲ್ಲ. ಇವರು ಆಪಾದನೆ ಮಾಡಿದ್ದಾರೆ. ಆ ಆಪಾದನೆ ಕಡತದಲ್ಲೇ ಉಳಿಯಬೇಕಾ? ಅದನ್ನು ಹಾಗೆಯೇ ಬಿಡುತ್ತೀರಾ? ಅಥವಾ ಇಲ್ಲಿಗೆ ಬಂದು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ? ತಮ್ಮ ರೂಲಿಂಗ್‌ನ್ನು ಕೊಡಬೇಕು.

ಅಧ್ಯಕ್ಷರು : ನಾನು ಕಡತ ತರಿಸಿ ನೋಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಅಭಿಪ್ರಾಯ ಬಹಳ ಸ್ಪಷ್ಟವಾಗಿದೆ. ಅದು ಇಡೀ ಜಗತ್ತಿಗೇ ಗೊತ್ತಿರತಕ್ಕಂಥಾದ್ದು. ಪ್ರತಿಯೊಂದು ಸಂದರ್ಭದಲ್ಲಿ ಯಾರೂ ಬಂದು ಹೇಳುವುದಕ್ಕೆ ಆಗುವುದಿಲ್ಲ. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ. ಇಡೀ ದೇಶದಲ್ಲಿ ಇರುವಂಥ ಅಭಿಪ್ರಾಯ.

ಅಧ್ಯಕ್ಷರು : ನಾನು ಕಡತವನ್ನು ತರಿಸಿ ನೋಡಿ ಎಕ್ಸಪಂಜ್ ಮಾಡಬೇಕಾದ ಪದಗಳನ್ನು ಎಕ್ಸಪಂಜ್ ಮಾಡುತ್ತೇನೆ.

XX ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಗೊಂದಲ

ಅಧ್ಯಕ್ಷರು : ಎಲ್ಲಾ ಸದಸ್ಯರಲ್ಲೂ ನನ್ನ ಒಂದು ವಿನಂತಿ ಇಷ್ಟೆ. ಪ್ರತಿಯೊಂದನ್ನೂ ಸಹ ತಮ್ಮ ತಮ್ಮ ಪಕ್ಷಗಳ ಗಾಜಿನಿಂದ ನೋಡಬೇಡಿ. ಯಾವುದೇ ವಿಚಾರವಾಗಲಿ ತಮ್ಮ ನಾಡಿನ ದೃಷ್ಟಿಯಿಂದ, ದೇಶದ ದೃಷ್ಟಿಯಿಂದ ಚರ್ಚೆ ಮಾಡಿರಿ. ಇಲ್ಲಿ ಏನಾಗಿದೆ ಎಂದರೆ ಇದು ಬೇರೆ ಬೇರೆ ರೀತಿಯಲ್ಲಿ ಗಂಭೀರತೆ ಹೋಗುತ್ತದೆ ಎನ್ನತಕ್ಕಂಥ ಮಾತನ್ನು ಎಲ್ಲಾ ಸದಸ್ಯರಲ್ಲಿ ನಾನು ಮನವಿ ಮಾಡುತ್ತೇನೆ. ಈಗ ಮಾನ್ಯ ರಮೇಶ್ ಕುಮಾರ್ ಅವರು ಎತ್ತಿದ್ದಕ್ಕೆ ನಾನು ಕಡತ ತರಿಸಿ ನೋಡುತ್ತೇನೆ. ಯಾವುದನ್ನು ತೆಗೆದುಹಾಕಬೇಕೆಂದು ನೋಡಿ ಅದನ್ನು ತೆಗೆದುಹಾಕುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿ, ಈಗ ಸಂಸದೀಯ ವ್ಯವಹಾರ ಸಚಿವರಾದ ಪಾಟೀಲರು ಏನಾದರೂ ಹೇಳುವುದು ಇದ್ದರೆ ಹೇಳಿ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ತಮ್ಮಲ್ಲಿ ನಾನು ವಿನಂತಿ ಮಾಡುವುದು ಇಷ್ಟೇ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವ ಆ ಭರಾಟೆಯೊಳಗೆ ಅವರೇನು ಬುದ್ಧಿಪೂರ್ವಕವಾಗಿ ಹೇಳಿದರೋ ಏನೋ ನನಗೆ ಗೊತ್ತಿಲ್ಲ. ಏಕೆಂದರೆ ಆ ಕೆಳಮಟ್ಟದ ಮಾತುಗಳನ್ನು ಯಾವುದೇ ಗೌರವಾನ್ವಿತ ರಾಜಕಾರಣಿಗಳಿಗೆ ಬಳಸಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮಿಂದ ನಾನು ಪಾಠ ಹೇಳಿಸಿಕೊಳ್ಳಬೇಕಾಗಿಲ್ಲ. ನೀವು ನನಗೆ ಬುದ್ಧಿ ಹೇಳುವುದಕ್ಕೆ ಆಗುವುದಿಲ್ಲ. ಅದು ನನ್ನ ಸ್ಪಷ್ಟವಾದ ಅಭಿಪ್ರಾಯ.

ಗೊಂದಲ

ಶ್ರೀ ಹೆಚ್.ಕೆ. ಪಾಟೀಲ್ : ತಾವು ಬೀದಿಮಟ್ಟದಲ್ಲಿ ಏನು ಮಾತನಾಡುತ್ತಿದ್ದೀರಿ, ಅದಕ್ಕೆ ಇದೇ ಉತ್ತರ. ಅದಕ್ಕೆ ಬೇರೆ ಉತ್ತರ ಏನೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಾದರೆ ಕಾರ್ಯಕ್ರಮಕ್ಕೆ ಏಕೆ ಅವಕಾಶ ಮಾಡಿಕೊಟ್ಟಿರಿ? ಬಹುಸಂಖ್ಯಾತರ ಕಾರ್ಯಕ್ರಮ ಮಾಡಲು ಆಗುವುದಿಲ್ಲ. ಮಾನ್ಯ ಅಧ್ಯಕ್ಷರೆ ಅವರು ಮಾತನಾಡಿದ ಮಾತುಗಳನ್ನು ಕಡದಿಂದ ತೆಗೆದುಹಾಕಬೇಕು.

ಅಧ್ಯಕ್ಷರು : ನೀವು ಹೀಗೆ ಪರಸ್ಪರ ಮಾತನಾಡಿದರೆ ಹೇಗೆ?

ಗೊಂದಲ

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು ಕಡತತರಿಸಿ ನೀಡಿ ಸಾರ್.

ಗೊಂದಲ

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಕಡತ ತರಿಸಿ ನೋಡುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಅವರು ಯಾವ ದುರುದ್ದೇಶದ ಮಾತುಗಳನ್ನಾಡಿದ್ದಾರೆ ಅವುಗಳನ್ನು ತಾವು ಕಡತದಿಂದ ತೆಗೆಸಿ ಹಾಕಬೇಕು. ಅದನ್ನು ತಾವು ಇವತ್ತು ನೋಡಿ ನಾಳೆ ತೆಗೆಸಿ ಹಾಕುವುದಿಲ್ಲ. ಈಗಾಗಲೇ ತಾವು ಅದನ್ನು ಗಮನಿಸಿದ್ದೀರಿ. ಸೋನಿಯಾ ಗಾಂಧಿಯವರ ಬಗ್ಗೆ ಅವರು ಏನೇನು ಶಬ್ದ ಮಾತನಾಡಿದರು, ಅದು ರಾಜಕೀಯ ದುರುದ್ದೇಶಪೂರಿತವಾಗಿರತಕ್ಕಂಥಾದ್ದು, ಈ ಸದನದಲ್ಲಿ ಆಡಬಾರದಾಗಿರತಕ್ಕಂಥ ಮಾತುಗಳನ್ನಾಡಿದ್ದಾರೆ. ಅದಕ್ಕೆ ಸಂಬಂಧಿಸಿದಂತೆ ಎಲ್ಲವನ್ನೂ ತಕ್ಷಣವೇ ತೆಗೆದುಹಾಕಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯ್ಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ಈ ದೇಶದ ಸಂವಿಧಾನದಲ್ಲಿ ಎಲ್ಲಾ ಧರ್ಮೀಯರಿಗೂ ಅವರವರ ಧರ್ಮದ ಬಗ್ಗೆ, ಅವರಿಗೆ ಇಷ್ಟ ಬಂದಹಾಗೆ ಮಾತನಾಡಲಿಕ್ಕೆ ಅವಕಾಶ ಇದೆ. ಬೆನ್ನಿಹಿನ್ನಾರವರು ಇಲ್ಲೇಕೆ ಬಂದರು, ಸಭೆ ಏಕೆ ನಡೆಸಿದರು ಎಂದು ಕೇಳುವ ಪರಿಸ್ಥಿತಿಯಲ್ಲಿ ನಾನು ಈ ದೇಶದ ಪ್ರಜೆಯಾಗಿ ಇಲ್ಲ. ಏಕೆಂದರೆ, ಸಂವಿಧಾನ ಗ್ಯಾರಂಟಿ ಮಾಡಿರುವ ಹಕ್ಕನ್ನು ಕಿತ್ತುಕೊಳ್ಳಬೇಕೆಂದು ಹೇಳಿ.....

ಡಾ. ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) : ಅವರು ಇಲ್ಲೇಕೆ ಬಂದರು ಎಂದು ಕೇಳುವ ಪರಿಸ್ಥಿತಿಯಲ್ಲಿ ಇಲ್ಲವೆಂದು ಹೇಳುತ್ತೀರಿ ಮತ್ತೆ ಅವರಿಗೆ ಇಷ್ಟಬಂದಹಾಗೆ ಮಾತನಾಡಲಿಕ್ಕೆ ಅವಕಾಶ ಇದೆಯೆಂದು ಹೇಳುತ್ತೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರ ಅಭಿಪ್ರಾಯಗಳನ್ನು ಅಭಿವ್ಯಕ್ತಪಡಿಸಲಿಕ್ಕೆ ಅಧಿಕಾರ ಇದೆಯೆಂದು ಹೇಳಿದೆ. ಅದೊಂದು ಫಂಡಮೆಂಟಲ್ ರೈಟ್ಸ್ ಅಲ್ಲವೇ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಸೇರಿಸಿದ್ದಾರೆ, ಡಾಕ್ಟರೇ ನೀವು ಸ್ವಲ್ಪ ಓದಿ, ಬರೀ ಮೆಡಿಸಿನ್ ಬಗ್ಗೆ ಓದಿಕೊಂಡು ಇಲ್ಲಿ ಬಂದರೆ ಹೀಗಾಗುತ್ತದೆ. ಅವರು ಏನು ಮಾತನಾಡಿದರು ಎನ್ನುವುದಕ್ಕಿಂತ ಹೆಚ್ಚಾಗಿ ಒಂದೇ ಒಂದು ನೋವಿನ ಸಂಗತಿ ಎಂದರೆ ಬಹಳ ಸೂಕ್ಷ್ಮ ಪ್ರದೇಶದಲ್ಲಿ ಈ ಸಭೆ ನಡೆಸಲಿಕ್ಕೆ ತಾವು ಬಿಟ್ಟಿದ್ದೀರಿ. ಏರ್‌ಪೋರ್ಟ್‌ಗಳನ್ನು ಕೊಡುವುದು, ರೈಲ್ವೆ ಸ್ಟೇಷನ್‌ಗಳನ್ನು ಕೊಡುವುದು ಅಥವಾ ಬಸ್ ಸ್ಟ್ಯಾಂಡ್‌ಗಳನ್ನು ಇಂತಹ ಕಾರ್ಯಕ್ರಮಕ್ಕೆ ಕೊಡುವುದು ಒಳ್ಳೆಯ ಸಂಪ್ರದಾಯ ಆಗುವುದಿಲ್ಲ. ಅದರಲ್ಲೂ ಏರ್‌ಪೋರ್ಟನ್ನು ಕೊಟ್ಟಿರುವುದು, ಅತ್ಯಂತ ಸೂಕ್ಷ್ಮವಾದ ಪ್ರದೇಶ ಎಂದು ಗೊತ್ತಿದ್ದೂ, ಅಲ್ಲಿ ಈ ಸಭೆ ನಡೆಸಬೇಕಾಗಿತ್ತಾ? ಎರಡನೆಯದು, ನಿಮಗೆ ಆರು ತಿಂಗಳಿನಷ್ಟು ಅವಕಾಶ ಇತ್ತು. ಆ ಸಭೆಯನ್ನೇ ಮಾಡಬೇಕಾಗಿದ್ದರೆ, ಬೇರೆ ಜಾಗದಲ್ಲಿ ಮಾಡಬೇಕಾಗಿತ್ತು. ಮೂರನೆಯದು, ಈ ಕಾರ್ಯಕ್ರಮಕ್ಕೆ ಎಷ್ಟು ಖರ್ಚಾಗಿತ್ತು, ಇದರಲ್ಲಿ ಯಾರು ಯಾರು ಇನ್‌ವಾಲ್ ಆಗಿದ್ದಾರೆ, ನಮಗೆ ಎಷ್ಟು ಟ್ಯಾಕ್ಸ್ ಬಂತು, ನಮ್ಮಿಂದ ಎಷ್ಟು ಖರ್ಚಾಯಿತು ಎಂಬುದನ್ನು ದಯಮಾಡಿ ಈ ಸಭೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆ ಮಾಡಬೇಕಾಗುತ್ತದೆ. ಇದು ಯಾರಿಗೋಸ್ಕರ? ಇದೇನು ಖಾಸಗಿ ಕಾರ್ಯಕ್ರಮವೇ ಅಥವಾ ಸರ್ಕಾರಿ ಕಾರ್ಯಕ್ರಮವೇ? ಖಾಸಗಿ ಕಾರ್ಯಕ್ರಮಕ್ಕೆ ತಾವು ಅತಿಥಿಗಳಾಗಿ ಹೋದಿರೋ ಅಥವಾ ನೀವೇ ಏನಾದರೂ ಸ್ಪಾನ್ಸರ್ ಮಾಡಿ ಈ ಕಾರ್ಯಕ್ರಮ ಮಾಡಿದಿರಾ ನಮಗೆ ಗೊತ್ತಿಲ್ಲ. ನಾನು ಸ್ಪಷ್ಟವಾಗಿ ಕೇಳುವುದು ಎಂದರೆ, ಈ ಸದನಕ್ಕೆ ಹಕ್ಕು ಇದೆ. ಆ ಕಾರ್ಯಕ್ರಮವನ್ನು ನಿಯೋಜನೆ ಮಾಡಲಿಕ್ಕೆ ಸರ್ಕಾರಕ್ಕೆ ಎಷ್ಟು ಖರ್ಚಾಯಿತು? ಅಲ್ಲಿ ನಮ್ಮ ಪೋಲೀಸಿನವರಿಗೆ ಹಣ ಕೊಟ್ಟವರು ಯಾರು? ಅಲ್ಲಿ ನಮ್ಮ ವಾಹನಗಳಿಗೆ ಹಣ ಕೊಟ್ಟವರು ಯಾರು? ಇವತ್ತು ಆಗಿದೆ, ಟ್ಯಾಕ್ಸ್ ಕಟ್ಟಿಲ್ಲವೆಂದು ಸೀಜ್ ಮಾಡಿದ್ದಾರೆ. ಕನಿಷ್ಠ ಆಡಳಿತಾತ್ಮಕ ದೃಷ್ಟಿಯಲ್ಲಿ ಇದನ್ನೆಲ್ಲಾ ನೀವು ಕ್ಲಿಯರ್ ಮಾಡಿಕೊಳ್ಳಬೇಕಾಗಿತ್ತು. ಟ್ಯಾಕ್ಸ್ ಏಕೆ ಕಟ್ಟಲಿಲ್ಲ, ಕುರ್ಚಿ ಏಕೆ ಹಿಡಿದಿಟ್ಟರು, ಲಾರಿ ಏಕೆ ಸೀಜ್ ಮಾಡಿದರು, ಅವರನ್ನು ಏರ್ ಪೋರ್ಟ್‌ನಲ್ಲಿ ಏಕೆ ತಡೆದು ನಿಲ್ಲಿಸಿದರು. ಈ ಕ್ಲಿಯರೆನ್ಸ್‌ಗಳು ಇಲ್ಲದೇ ಇಂತಹ ಸಭೆಗಳನ್ನು ಒಂದು ರಾಜ್ಯದಲ್ಲಿ ನಡೆಸುವುದಕ್ಕೆ ತಾವು ಅನುವು ಮಾಡಿಕೊಟ್ಟರೆ, ಮುಂದೆ ವ್ಯವಹಾರ ಬೇಕಾಬಿಟ್ಟಿ ಆಗಿಬಿಡುತ್ತದೆ. ಅವರು ಬರಲಿ, ಅವರವರ ಧರ್ಮ ಪ್ರಚಾರ ಮಾಡಲಿ, ನೊಂದಿರುವವರು ಅಥವಾ ಬೇಕಾದವರು ಯಾರಾದರೂ ಮತಾಂತರ ಆಗಲಿಕ್ಕೆ ನಾವು ಯಾರು ಅಡ್ಡಿ ಮಾಡಲಿಕ್ಕೆ? ಯಾರದೋ ಜನರನ್ನು ಸುಖವಾಗಿ

ಬಾಳಲಿಕ್ಕೆ ಬಿಡಲಿಲ್ಲವೆಂದರೆ, ಅವರು ಇಷ್ಟಪಟ್ಟ ಕಡೆ ಹೋಗಿ ಸುಖವಾಗಿ ಇರಲಿ ಬಿಡಿ. ನಾವೇನು ಇಲ್ಲಿ ಕಳೆದುಕೊಳ್ಳುತ್ತೇವೆ. This is not fair. ಅದು ನನ್ನ ಇಷ್ಟ. ನಾನು ಯಾವ ಧರ್ಮವನ್ನು ಆಚರಣೆ ಮಾಡಬೇಕು ಯಾವ ಧರ್ಮವನ್ನು ಒಪ್ಪಬೇಕು ಎಂಬುದು ನನ್ನ ಇಷ್ಟ. ನಾವು, ಅವರನ್ನು ಹೋಗಬಾರದು ಎಂದರೆ ಹೇಗೆ? ಅವರನ್ನು ಪ್ರೀತಿಸಬೇಕು, ಅವರನ್ನು ನಮ್ಮವರು ಎಂದು ಭಾವಿಸಬೇಕು ಅವರ ಒಡನಾಟ ಇಟ್ಟುಕೊಳ್ಳುವುದನ್ನು ಬಿಟ್ಟರೆ, ಯಾರೋ ಬೆನ್ನಿಹಿನ್ ಬಂದು ನಮ್ಮನ್ನೆಲ್ಲಾ ಮತಾಂತರ ಮಾಡುತ್ತಾರೆ, ಇನ್ನಾರೋ ಬಂದುಬಿಟ್ಟು ನಮ್ಮನ್ನೆಲ್ಲಾ ಶಂಕರಾಚಾರ್ಯರನ್ನು ಮಾಡುತ್ತಾರೆ, ಇನ್ನಾರೋ ಬಂದುಬಿಟ್ಟು ನಮ್ಮನ್ನೆಲ್ಲಾ ಬಸವಣ್ಣನವರನ್ನು ಮಾಡುತ್ತಾರೆ ಬುದ್ಧನನ್ನು ಮಡುತ್ತಾರೆಂದು ಹೇಳುವುದು ನನಗೇನೂ ಅಷ್ಟು ಚೆನ್ನಾಗಿ ಕಾಣಲಿಲ್ಲ. ಆಡಳಿತಾತ್ಮಕ ಲೋಪಗಳೇನಾಗಿದೆ ಅದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಈ ಸಭೆಗೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಅಧ್ಯಕ್ಷರೇ, ನಾನು ಸುಮಾರು ಅಮೇರಿಕಾ ಪಾದ್ರಿ ಬಂದಾಗಿನಿಂದ ಇಲ್ಲಿಯವರೆಗೆ ನೋಡುತ್ತಾ ಇದ್ದೇನೆ. ನಾನು ಯಾವುದನ್ನೂ ಮಾತನಾಡಿಲ್ಲ. ಬಹುಶಃ ಹಿಂದೂ ಧರ್ಮದ ಬಗ್ಗೆಯೇ ಆಗಲೀ, ಮತಾಂತರದ ಬಗ್ಗೆಯೇ ಆಗಲೀ ಅಥವಾ ಪಾದ್ರಿ ಬಗ್ಗೆಯೇ ಆಗಲೀ ನಾ ಇವತ್ತಿನವರೆಗೆ ಮಾತನಾಡಿಲ್ಲ. ಇವರಿದನ್ನೆಲ್ಲಾ ನೋಡುತ್ತಾ ಸುಮ್ಮನೆ ಗಂಭೀರವಾಗಿ ಕುಳಿತಿದ್ದೆ. ಜೊತೆಗೆ ಮುಖ್ಯಮಂತ್ರಿಗಳು ಭಾಗವಹಿಸಿದ್ದರು ಮತ್ತು ಮಾಜಿ ಪ್ರಧಾನಿಗಳು ಭಾಗ ವಹಿಸಿದ್ದರು. ಅಲ್ಲಿಗೆ ಹೋದರು, ಬಂದರು. ಇವೆಲ್ಲವನ್ನೂ ನಾನು ಗಮನಿಸುತ್ತಾ ಇದ್ದೇನೆ. ನನಗನ್ನಿಸುತ್ತದೆ, ಅಮೇರಿಕಾ ಪಾದ್ರಿಯೊಬ್ಬ ಈ ದೇಶಕ್ಕೆ ಬಂದು ಹಿಂದೂ ಧರ್ಮವನ್ನೇ ನಾಶ ಮಾಡಿಬಿಡುತ್ತಾನೆ ಎನ್ನುವ ಭಯ ಭೀತಿ ನಮಗೆ ಬರುವುದಾದರೆ, ಆ ಹಿಂದೂ ಧರ್ಮಕ್ಕೆ ಶಕ್ತಿ ಇಲ್ಲವೆಂದು ಅರ್ಥವಾಗುತ್ತದೆ. ಯಾರೋ ಬರುತ್ತಾನೆ, ಇಲ್ಲೇನೋ ಕೂಗಿಕೊಳ್ಳುತ್ತಾನೆ, ಕೂಗಿ ಹೋಗಲಿ. ನಾವೇಕೆ ಇದಕ್ಕೆ ದೊಡ್ಡ ಪ್ರಚಾರ ಕೊಡಬೇಕು? ಆ ಮನುಷ್ಯ ಇಲ್ಲಿ ಬಂದಿದ್ದಕ್ಕೆ ಭಾರಿ ಪ್ರಚಾರ ಸಿಕ್ಕಿತು. ಅವರು ಬರುವುದಕ್ಕಿಂತ ಹೆಚ್ಚಾಗಿ, ನಾವು ಕೊಟ್ಟ ಪ್ರಚಾರ ಇದೆಯಲ್ಲಾ ಅದು ಜಾಸ್ತಿ. ಅಲ್ಲಿ ನೋಡಿದರೆ, ಏನೂ ಇಲ್ಲ. ಅದೊಂದು ದೊಡ್ಡ ಸೊನ್ನೆ. ಆತ ಬರುತ್ತಿದ್ದರು, ನಾಲ್ಕು ಮಾತುಗಳನ್ನು ಹೇಳುತ್ತಿದ್ದರು, ನಂತರ ಹೋಗುತ್ತಿದ್ದರು. ಅದಕ್ಕೆ ನಾವೇಕೆ ತಲೆಕೆಡಿಸಿಕೊಳ್ಳಬೇಕಾಗಿತ್ತು? ಏನು ಆಕಾಶವೇ ಭೂಮಿಗೆ ಇಳಿದು ಬಂದಹಾಗೆ ಇತ್ತು. ಆ ವ್ಯವಸ್ಥೆಗಳನ್ನು ನಾನು ಟಿ.ವಿ.ಯಲ್ಲಿ ನೋಡುತ್ತಿದ್ದೆವು. ಆ ಮಾಂತ್ರಿಕ ಮಾಡತಕ್ಕಂಥ ವ್ಯವಸ್ಥೆಗಳು, ಯಾರನ್ನೋ ತಳ್ಳಿಬಿಡುವುದು, ಅವನು ಕೆಳಗೆ ಬಿದ್ದೇಬಿಡುವುದು. ಯಾರೋ ಹೋಗಿಬಿಡುವುದು. ಮುಖ್ಯಮಂತ್ರಿಗಳನ್ನು ತಬ್ಬಿಕೊಳ್ಳುವುದು, ಇದನ್ನೆಲ್ಲಾ ನಾವು ನೋಡುತ್ತಿದ್ದೇವೆ ಇದೆಲ್ಲಾ ಏನು ಕತೆ, ಏನು ವ್ಯವಸ್ಥೆಗಳು....

ಗೊಂದಲ

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಅವರು ಮಾತನಾಡಲಿ. ಯಾವುದಾದರೂ ಇದ್ದರೆ, ನೀವು ಅನಂತರ ಮಾತನಾಡಿ. ಈ ತರಹ ಎಲ್ಲರೂ ಒಟ್ಟಿಗೆ ನಿಂತು ಮಾತನಾಡಿದರೆ ಹೇಗೆ?

XX ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ನನಗಂತೂ ನಂಬಿಕೆ ಇಲ್ಲ. ಪ್ರಪ್ರಥಮವಾಗಿ ಮಠಾಧಿಪತಿಗಳು.....

ಗೊಂದಲ

ಅಧ್ಯಕ್ಷರು : ಕುಳಿತುಕೊಳ್ಳಿ, ಏನಾದರೂ ಅಬ್ಜಕ್ಷನ್ ಇದ್ದರೆ, ಅನಂತರ ಅವಕಾಶ ಕೊಡುತ್ತೇನೆ. ಎಲ್ಲರೂ ಒಮ್ಮೆಗೇನಿಂತುಕೊಂಡು ಮಾತನಾಡುತ್ತಿದ್ದರೆ, ನೀವೇನು ಮಾತನಾಡುತ್ತಿದ್ದೀರಿ ಎಂಬುದೇ ಗೊತ್ತಾಗುವುದಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : XX ದಯಮಾಡಿ, ಅದನ್ನು ಕಡತದಿಂದ ವಾಪಸ್ ತೆಗೆಸಿ. XX ಎನ್ನುವ ಪದವನ್ನು ಕಡತದಿಂದ ತೆಗೆಸಬೇಕು.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ವಾಟಾಳ್ ನಾಗರಾಜರವರು ಮಾಜಿ ಪ್ರಧಾನಿಗಳ ಬಗ್ಗೆ; ಪದೇ ಪದೇ ಮಾತನಾಡುತ್ತಿರುವುದು ಇದು ಎರಡನೇ ಬಾರಿ. ಇದು ಆಗಬಾರದು. ಹಿರಿಯ ಸದಸ್ಯರಾಗಿ ಈ ರೀತಿ ಮಾತನಾಡಲಿಕ್ಕೆ ಅವಕಾಶ ಕೊಡಬಾರದು.

ಶ್ರೀ ವಾಟಾಳ್ ನಾಗರಾಜ್ : ತಾವು ಬೇಕಾದರೆ ಅದನ್ನು ಕಡತದಿಂದ ವಾಪಸ್ ತೆಗೆಸಿ. ನನ್ನದೇನೂ ಅಭ್ಯಂತರ ಇಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರು ಕೆಲವು ಪದಗಳನ್ನೇನು ಉಪಯೋಗಿಸಿದ್ದಾರೆ, ಅದು ಸಭಾ ನಿಯಮಗಳಿಗೆ ವಿರೋಧವಾದದ್ದು, ಅನ್ ಪಾರ್ಲಿಮೆಂಟರಿ ಎಂದು ಏನು ಹೇಳುತ್ತಿದ್ದಾರೆ ನಾನು ಕಡತ ತರಿಸಿ; ಅಂತಹ ಎಲ್ಲವನ್ನೂ ತೆಗೆದುಹಾಕುತ್ತೇನೆ. ದಯಮಾಡಿ ಕುಳಿತುಕೊಳ್ಳಿ. ಸದನದಲ್ಲಿ ಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಂಡು ಮಾತನಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನನಗನ್ನಿಸುತ್ತದೆ, ಈ ತರಹ ಮೂಢ ನಂಬಿಕೆಗಳು ಈ ವ್ಯವಸ್ಥೆಗಳು, ಇದರ ಬಗ್ಗೆ ನಾವು ತೀವ್ರವಾದಂಥ ಒಂದು ಚಿಂತನೆ ಮಾಡಬೇಕಾಗುತ್ತೆ. ಜೊತೆಗೆ, ಇತಿಹಾಸದಲ್ಲಿ ಮಠಾಧಿಪತಿಗಳು ಬೀದಿಗೆ ಬರುವುದು, ನಮ್ಮ ಧರ್ಮ ಹಾಳಾಗುತ್ತೆ ಎಂದು ಮಠಾಧಿಪತಿಗಳು ಬೀದಿಗೆ ಬರುತ್ತಾರೆ. ನೀವು ಬೇರೆಯವರನ್ನೆಲ್ಲಾ ಬಂಧಿಸುತ್ತೀರಿ ಆದರೆ, ಈ ಮಠಾಧಿಪತಿಗಳನ್ನು ಏಕೆ ಬಂಧಿಸಲಿಲ್ಲ? ಅಷ್ಟೊಂದು ಜನ ಮಠಾಧಿಪತಿಗಳು ಬಂದರಲ್ಲಾ, ಅವರು ಏಕೆ ಬರಬೇಕು? ಅವರು ಧರ್ಮ ಹೇಳಿಕೊಂಡು, ಮಠದಲ್ಲಿ ವೇದಾಂತ, ತತ್ವ ಧರ್ಮ ಹೇಳಬೇಕೇ ಹೊರತು ವಿಧಾನ ಸೌಧಕ್ಕೆ ಬಂದು, ಧ್ವಜ ಹಿಡಿದು ಪ್ರತಿಭಟನೆ ಮಾಡತಕ್ಕಂಥ ಮಠಾಧಿಪತಿಗಳು. ಅವರೆಲ್ಲಾ ಬಂದಾಗ, ತಾವೆಲ್ಲರೂ ಹೋಗಿ ಅವರ ಪಾದಕ್ಕೆ ಬಿದ್ದು, ಶರಣಾರ್ಥಿ ಎಂದು ಅವರನ್ನು ಕರೆದುಕೊಂಡು ಬಂದು ಹನಮಂತಯ್ಯನವರ ಪ್ರತಿಮೆ ಹತ್ತಿರ ಕರೆದುಕೊಂಡು ಬಂದು, ತಾವು ಹೇಳಿದ್ದೆಲ್ಲಾ ಮಾಡುತ್ತೇವೆ ಎಂದು ಹೇಳುವುದು. ಇದು ಸರಿ ಎಂದು ನನಗನ್ನಿಸಲಿಲ್ಲ. ಮಠಾಧಿಪತಿಗಳು ಬೀದಿಗೆ ಇಳಿಯಬಾರದು. ಖಂಡಿತ ನನಗೇನೂ ಅದರ ಬಗ್ಗೆ ಒಳ್ಳೆಯ ಅಭಿಪ್ರಾಯ ಇಲ್ಲ. ಇದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ರಾಜಿನಾಮೆ ಕೊಡಬೇಕಾಗಿಲ್ಲ. ಅವರು ಏಕೆ ಕೊಡಬೇಕು? ಅವರನ್ನು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ, ಅವರನ್ನು ಒಬ್ಬ ಮುಖ್ಯಅತಿಥಿಗಳಾಗಿ ಅವರು ಕರೆದಿದ್ದಾರೆ. ಅವರೇಕೆ ರಾಜಿನಾಮೆ ಕೊಡಬೇಕು? ನಾನು ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಆದರೆ, ಅಲ್ಲಿನ ವ್ಯವಸ್ಥೆಗಳು ಇದೆಯಲ್ಲಾ, ಆ ರೀತಿ ತಬ್ಬಿಕೊಳ್ಳುವುದು, ಬೀಳುವುದು ಇದು ಅತ್ಯಂತ

XX ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಒಂದುತರಹ ಅನಾಗರೀಕವಾದ ವರ್ತನೆ. ಇಂತಹ ವರ್ತನೆ ಎಲ್ಲೂ ನಡೆಯಬಾರದು. ಆಮೇಲೆ, ಆ ವ್ಯಕ್ತಿ ಹೀಗೆ ತಳ್ಳಿಬಿಡುವುದು, ಹೀಗೆ ಅಂಟಿಕೊಳ್ಳುವುದು. ಇದೆಲ್ಲಾ ಮೊದಲೇ ಯೋಜನೆ. ಕಾಲು ಮುರಿದುಕೊಂಡವರು, ಕೈ ಮುರಿದುಕೊಂಡವರು ಅಲ್ಲಿಗೆ ಬರುವುದು ನಾನೊಂದು ಡಬ್ಬ ತಯಾರು ಮಾಡಿದ್ದೇನೆ. ನಿಮಗೂ ಬೇಕಾದರೆ ತೆಗೆದುಕೊಳ್ಳಿ. ಒಳ್ಳೆಯ ಔಷಧಿ. ನಾನಾ ರೀತಿಯ ಗಿಡ ಮೂಲಿಕೆಗಳಿಂದ ತಯಾರು ಮಾಡಿದ್ದೇನೆ. ಅದೇನು ಅದು ಆ ಡಬ್ಬ ಅಂದರೆ 25 ವರ್ಷದ ಹುಡುಗ ಅಲ್ಲ, 75 ವರ್ಷದ ಮುದುಕ 25 ವರ್ಷದ ಹುಡುಗನಾಗಬಹುದು. ನನ್ನ ಹತ್ತಿರ ಇದೆ. ನೀವು ಯಾರಾದರೂ ಬರಬಹುದು, ಇದಕ್ಕೆ ನಾನು ಹಿಮಾಲಯದಿಂದ ಎಲ್ಲಾ ಬೆಟ್ಟಗಳಿಂದ ತಂದಿರತಕ್ಕಂಥ ಗಿಡಮೂಲಿಕೆಗಳು, ಏನೇನೋ ಹಾಕಿದ್ದೇನೆ. ಅದರ ಜೊತೆಗೆ ಇನ್ನೊಂದು ಬೇರೆ ಹಾಕಿದ್ದೇನೆ. ನೀವು ಆ ಡಬ್ಬ ತೆಗೆದುಕೊಳ್ಳಬೇಕೆಂದು ಎಷ್ಟು ಜನ ಇದ್ದೀರಿ ಎನ್ನುವುದು ಮೊದಲು ನನಗೆ ಹೇಳಬೇಕು. ಆಮೇಲೆ ಅದಕ್ಕೆ ಏನು ಹಾಕಿದ್ದೇನೆಂದು ಹೇಳುತ್ತೇನೆ. ಇದರಿಂದ ನಿಜಕ್ಕೂ 75 ವರ್ಷದವರೂ 25 ವರ್ಷದವರಾಗಿ ಆಗಬಹುದು. ಮೂರು ಮೂರು ಜನರನ್ನು ಮದುವೆಯಾಗಬಹುದು ಏನೂ ತೊಂದರೆ ಇಲ್ಲ. ಅದರಲ್ಲಿ ಏನೂ ತೊಂದರೆಯೇ ಇಲ್ಲ. ಆದ್ದರಿಂದ ಯಾರಾದರೂ ಆ ತರಹದವರು ಇದ್ದರೆ ಕೊನೆಯಲ್ಲಿ ಆ ಡಬ್ಬದಲ್ಲಿ ಎಲ್ಲವನ್ನೂ ಸೇರಿಸಿದ್ದೇನೆ. ಆ ಡಬ್ಬವನ್ನು ನಾನು ಇನ್ನೂ ಮಾರಾಟಕ್ಕೆ ಬಿಟ್ಟಿಲ್ಲ. ಹೊರಗಡೆ ಹೇಳಿಲ್ಲ. ಅಂದರೆ ನಮ್ಮ ಜನ ಎಷ್ಟು ಮೌಢ್ಯಕ್ಕೆ ತಲೆ ಕೊಡುತ್ತಾರೆ ಎನ್ನುವುದಕ್ಕೆ ನಾನು ಹೇಳುತ್ತಿದ್ದೇನೆ. ಈಗ ನಾನು ನಾಳೆ ಈ ಒಂದು ಜಾಹೀರಾತು ಹಾಕಿ ಬೀದಿಗೆ ಬಿಡುಗಡೆ ಮಾಡಿದೆ ಎಂದು ಹೇಳಿದರೆ 70 ವರ್ಷದ ಮುದುಕರು ಎಲ್ಲರೂ ಇದನ್ನು ತೆಗೆದುಕೊಳ್ಳುವುದಕ್ಕೆ ಸಿಕ್ಕಾಪಟ್ಟೆ ಕ್ಯೂ ನಿಲ್ಲುತ್ತಾರೆ. ಅದರಲ್ಲಿ ಈ ಕೆಲವು ಪ್ರಾಣಿಗಳ ಮಲಮೂತ್ರವನ್ನು ಸೇರಿಸಿದ್ದೇನೆ. ನಾಯಿದು ಹಂದಿದು, ಎಲ್ಲಾ ಸೇರಿಸಿದ್ದೇವೆ. ಇದನ್ನು ತೆಗೆದುಕೊಂಡರೆ 75 ವರ್ಷದ ಮುದುಕರು 25 ವರ್ಷದ ಹುಡುಗರು ಆಗಬಹುದು. ಯಾರು ಬೇಕಾದರೂ ತೆಗೆದುಕೊಳ್ಳಬಹುದು. ಅಂದರೆ ಈ ತರಹ ನಾವು ನಾಟಕೀಯವಾಗಿ ಈ ಭವ್ಯ ದೇಶದಲ್ಲಿ ಈ ತರಹ ದೇವಮಾನವ ಎಂದು ಹೇಳುವುದು, ದೈವ ಮಾನವ ಎಂದು ಹೇಳುವುದು ವಿಚಿತ್ರವಾದ ವರ್ತನೆಗಳು, ವಿಚಿತ್ರವಾದ ಮಾತುಗಳು ಏನಿದೆಲ್ಲಾ? ಇದಕ್ಕೆ ಕಾರಣ ಯಾರೆಂದರೆ ನಮ್ಮ ರಾಜಕಾರಣಿಗಳೇ, ನಾವೇ ಅವರನ್ನೆಲ್ಲಾ ಬೆಳೆಸುತ್ತಿದ್ದೇವೆ. ಅವರ ಕಾಲುಗಳಿಗೆ ಬೀಳುತ್ತಿದ್ದೇವೆ. ಹಾರ ಹಾಕುತ್ತಿದ್ದೇವೆ ತುರಾಯಿ ಹಾಕುತ್ತಿದ್ದೇವೆ. ಅವರ ಹತ್ತಿರ ಹೋಗುತ್ತಿದ್ದೇವೆ, ಏನು ವೈಭವವಾಗಿ ಅವರು ಹೇಳಿದ್ದನ್ನೆಲ್ಲಾ ನಾವು ಕೇಳುತ್ತೇವೆ. ಈ ಒಂದು ಮೌಢ್ಯದ ವಿರೂಪ, ನನಗನ್ನಿಸುತ್ತದೆ ಇದು ಹೋಗಬೇಕು, ಇದರ ಬಗ್ಗೆ ನಾವು ಮಾತನಾಡಬಾರದು ಏಕೆಂದರೆ ನಾವೆಲ್ಲಾ ಚುನಾವಣೆಗೆ ನಿಲ್ಲುವುದರಿಂದ ಸತ್ಯ ಹೇಳುವುದಕ್ಕೆ ಹೋದಾಗ ಅನೇಕರಿಂದ ಅಪಾಯಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆ. ಆದ್ದರಿಂದ ಸತ್ಯ ಹೇಳಬಾರದಲ್ಲಾ ಎಂದು ಸುಮ್ಮನೇ ಇದ್ದೇವೆ. ಮಾನ್ಯ ಮಹದೇವಪ್ಪನವರೇ, ತಮಗೆ ಗೊತ್ತಿರಬೇಕು. ನಾನು ಸಾಮಾನ್ಯವಾಗಿ ಕಾಲಿಗೆ ಬೀಳುವುದಕ್ಕೆ ಹೋಗುವುದಿಲ್ಲ. ಏನು ವಾಟಾಳ್ ನಾಗರಾಜ್‌ರವರು ಕಾಲಿಗೆ ಬೀಳುವುದಿಲ್ಲ ಎಂದು ಕೆಲವರಿಗೆ ಬಹಳ ಕೋಪತಾಪಗಳು, ಅನೇಕ ವಿಚಾರಗಳು ಇವೆ. ನಾನು ಕಾಲಿಗೆ ಬಿದ್ದರೆ ನಮ್ಮ ತಾಯಿ, ನಮ್ಮ ತಂದೆ ಅದು ಬಿಟ್ಟರೆ ಬೇರೆ ಯಾರ ಕಾಲಿಗೂ ನಾನು ಬಿದ್ದವನಲ್ಲ. ಈ ಕಾಲಿಗೆ ಬೀಳುವುದೇ ಕೆಲವರು ಅಭ್ಯಾಸವಾಗಿಬಿಟ್ಟಿದೆ. ಯಾವಾಗಲೂ ಕಾಲಿಗೆ ಬೀಳುವುದೇ ಕೆಲವರ ಅಭ್ಯಾಸ. ಪಾದ ಪೂಜೆ ಮಾಡುವುದೇ ಕೆಲವರ ಅಭ್ಯಾಸ. ತೀರ್ಥ ಕುಡಿಯುವುದೇ ಕೆಲವರ ಅಭ್ಯಾಸ. ಇದನ್ನೆಲ್ಲಾ

ಮಾತನಾಡುವುದಕ್ಕೆ ಹೋದರೆ ನಾಳೆ ಇದಕ್ಕೆ ಹೊಂದಿಕೊಂಡಿರತಕ್ಕಂಥ ಕೆಲವು ಮತದಾರರು ಇದ್ದಾರಲ್ಲಾ ಅವರು ನಮಗೆ ಓಟು ಹಾಕುವುದಿಲ್ಲ. ಅವರು ನಮಗೆ ಓಟು ಹಾಕಲಿಲ್ಲ ಅಂದರೆ ನಾವು ಜಟಕಾ ಗಾಡಿಯಲ್ಲಿ ತಿರಗಾಡಬೇಕು. ಆದ್ದರಿಂದ ಓಟು ಹಾಕಿಸಿಕೊಳ್ಳಬೇಕೆನ್ನುವಾಗ ಇವರು ಹೇಳಿದ್ದನ್ನೆಲ್ಲಾ ನಾವು ಕೇಳಬೇಕಾಗಿದೆ. ಇದು ಪರಿಸ್ಥಿತಿಯ ನಿರ್ಮಾಣ. ಅದಕ್ಕೆ ಅನೇಕ ಕಡೆ ನನ್ನನ್ನು ಕರೆಯುತ್ತಾರೆ. ನಾನು ಯಾವ ಧಾರ್ಮಿಕ ಸಮ್ಮೇಳನಕ್ಕೂ ಹೋಗಿಲ್ಲ. ನಾನು ಯಾವ ಜಾತಿ ಸಮ್ಮೇಳನಕ್ಕೂ ಹೋಗಿಲ್ಲ. ನಾನು ಒಬ್ಬನೇ ಇಡೀ ಕರ್ನಾಟಕ ರಾಜ್ಯದಲ್ಲಿ ಜಾತ್ಯಾತೀತ ತಾವು ಈ ರಾಜ್ಯದ ಒಂದು ಶಾಲೆಯಲ್ಲಿ ಪಂಡಿತರಾಗಿದ್ದಿರಿ, ಉಪಾಧ್ಯಾಯರಾಗಿದ್ದಿರಿ. ಈಗ ಈ ಒಂದು ಉನ್ನತಮಟ್ಟಕ್ಕೆ ಬಂದಿದ್ದೀರಿ, ತಾವು ಇದುವರೆಗೂ ನೋಡಿದ್ದೀರಿ. ನನ್ನನ್ನು ತಾವು 20–30 ವರ್ಷಗಳಿಂದ ನೋಡಿದ್ದೀರಿ. ಎಲ್ಲಾದರೂ ಒಂದು ಕಡೆ ಯಾವುದಾದರೂ ಒಂದು ಕಡೆ ಹೋಗಿ ನಾನು ಈ ಕೆಲಸ ಮಾಡಿದ್ದೇನೆಂದು ತಾವು ಹೇಳಿಬಿಟ್ಟರೆ ನೀವು ಹೇಳಿದ ಶಿಕ್ಷೆಗೆ ನಾನು ಗುರಿಯಾಗುತ್ತೇನೆ. ನಾಳೆಬೆಳಿಗ್ಗೆ ನಾನು ರಾಜೀನಾಮೆ ಕೊಟ್ಟು ಹೊರಟು ಹೋಗುತ್ತೇನೆ. ಈ ರಾಜ್ಯದ ಜನ ಎಲ್ಲರೂ ಒಂದೇ, ಈ ದೇಶದ ಜನ ಎಲ್ಲರೂ ಒಂದೇ ನಮ್ಮಲ್ಲಿ ಬೇಧಭಾವ ಮಾಡಬಾರದು ಎನ್ನತಕ್ಕ ಒಂದು ಉದಾತ್ತವಾದ ಉದ್ದೇಶ ಇಟ್ಟುಕೊಂಡು ಇರತಕ್ಕಂಥ ವ್ಯಕ್ತಿ ನಾನು ಅನೇಕರಿಗೆ ನಾನು ಯಾರು ಎನ್ನುವುದು ಬಹಳ ವರ್ಷಗಳಿಂದ ಗೊತ್ತಿರಲಿಲ್ಲ. ಈಗ ಸುಮ್ಮಸುಮ್ಮನೆ ಗೊತ್ತಾಗುತ್ತದೆ ಆ ವಿಚಾರ ಬೇರೆ. ಆದರೆ ನಾನು ತಮಗೆ ಏಕೆ ಹೇಳುತ್ತಿದ್ದೇನೆಂದರೆ ಈ ಮೂಢ ನಂಬಿಕೆಗಳ ವಿರುದ್ಧ, ನನ್ನ ವಾದವನ್ನು ತಾವು ಒಪ್ಪುತ್ತೀರಿ ಎಂದು ಕಾಣುತ್ತದೆ. ಬೆನ್ನಿಹಿನ್ ಅಂತಹವನು ಇದ್ದರೂ ಇನ್ನೂ ಮೂಢನಂಬಿಕೆಗಳನ್ನು ಮಾಡಿ ಅನೇಕ ಅಪರಾಧಗಳನ್ನು ಮಾಡತಕ್ಕಂಥ ಜನ ಇದ್ದಾರೆ. ಮೂಢನಂಬಿಕೆಗಳ ವಿರುದ್ಧ ಇಂತಹ ವ್ಯಕ್ತಿಗಳ ವಿರುದ್ಧ, ಇಂತಹ ಶೋಷಣೆ ವಿರುದ್ಧ ಇದರ ಬಗ್ಗೆ ಅವರು ಯಾರೇ ಇರಬಹುದು, ಯಾವ ಮತದವರೇ ಇರಬಹುದು ಕೊನೆಗೆ ಮಠಾಧಿಪತಿಗಳೇ ಇರಬಹುದು ಬೇರೆ ಯಾರೇ ಇರಬಹುದು ಜೋತಿಷಿಗಳೇ ಇರಬಹುದು, ಇವರೆಲ್ಲರ ಬಗ್ಗೆ ನಾವು ಒಂದು ಪ್ರಾಮಾಣಿಕವಾದ ಚಿಂತನೆ ನಾವು ನೀವು ಮಾಡಲಿಲ್ಲ ಅಂತ ಅಂದರೆ ಈ ದೇಶಕ್ಕೆ ನಿಜವಾಗಿಯೂ ಅಪಾಯ ಇದೆ. ಅದರ ಬಗ್ಗೆ ನಾನು ಬಹಳ ಪ್ರಾಮಾಣಿಕವಾಗಿ ಒಂದೆರಡು ಮಾತು ತಮಗೆ ಹೇಳುತ್ತಿದ್ದೇನೆ. ಬಿನ್ನಿಹಿನ್ ಬಂದಿದ್ದಕ್ಕೋಸ್ಕರ ನಾವು ಇಷ್ಟು ಅಬ್ಬರ ಮಾಡಿಕೊಂಡು ಏನು ರಾಜ್ಯದಲ್ಲಿ ಇಷ್ಟೆಲ್ಲಾ ಮಾಡಬೇಕಾಗಿರಲಿಲ್ಲ. ಬಂದಿದ್ದರೆ ಇಷ್ಟು ಆಗುತ್ತಿರಲಿಲ್ಲ ಅಲ್ಲಿ ಜನ ಸೇರುತ್ತಿರಲಿಲ್ಲ. ನಾವು ಕೂಗಿ ಗದ್ದಲ ಮಾಡಿ ಹೋರಾಟ ಮಾಡಿದ್ದಕ್ಕೆ ಇಷ್ಟೆಲ್ಲಾ ಆಯಿತು, ನಮ್ಮ ಧರ್ಮಕ್ಕೂ ಅವರು ಹೇಳತಕ್ಕಂಥ ಧರ್ಮಕ್ಕೂ ಬಹಳ ಇತಿಹಸ ಇದೆ. ಅವರು ಹೇಳತಕ್ಕಂಥಾದ್ದಕ್ಕೆ ಅವರ ಇತಿಹಾಸ ಇದೆ. ನಾವು ಏಕೆ ಇದರ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗಿತ್ತು? ಆದರೆ ಅಲ್ಲ ನಡೆದಂತಹ ವ್ಯವಸ್ಥೆ ಅಲ್ಲಿ ಆದಂತಹ ಮೂಢನಂಬಿಕೆಗಳ ಪರಿಸ್ಥಿತಿ ಇದು. ನಿಜಕ್ಕೂ ಅತ್ಯಂತ ಅಪಾಯಕಾರಿ ಬೆಳವಣಿಗೆ ಇದನ್ನು ಹೋಗಲಾಡಿಸುವುದಕ್ಕೆ ನಾವೆಲ್ಲರೂ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕು, ಮಾನ್ಯ ಉಪ ಮುಖ್ಯಮಂತ್ರಿ ಒಂದು ಮಾತು ಹೇಳಿದರು ಮೈಸೂರಿನಲ್ಲಿ, ಅದನ್ನು ನಾನು ಒಪ್ಪಿದೆ. ನಾನು ಹಿಂದೂ ಇಲ್ಲ ಮುಂದೂ ಇಲ್ಲ ಅಂತ. ನಾವೂ ಅಷ್ಟೆ. ನನಗೂ ಅನೇಕರು ಬನ್ನಿ ಎಂದು ಹೇಳಿದರು, ಏನು ನೋಡುವುದು ಇದೆ? ಏಕೆ ಹೋಗಬೇಕು ಅಲ್ಲಿಗೆ? ಆ ಕಡೆಗೂ ಹೋಗಲಿಲ್ಲ ಈ ಕಡೆ ಮಠಾಧಿಪತಿಗಳ ಮೆರವಣಿಗೆಗೂ ಹೋಗಲಿಲ್ಲ ಬೇಕಾಗಿಲ್ಲ ನಮಗೆ ಆ ಪ್ರಶ್ನೆ ಬೇಕಾಗಿಲ್ಲ. ಅದಕ್ಕೆ ಹೊಸ ಇತಿಹಾಸ ಅದೇ ಬೇರೆ. ಅದಕ್ಕೆ ನಾನು ಒಂದು ಹೇಳುತ್ತೇನೆ ಸುಮ್ಮನೆ ಇದೊಂದು ಹಾಸ್ಯ

ಎಂದು ತಾವು ಅಂತೀರಿ. ಅದು ನಿಜ. ಈಗ ನಮ್ಮಲ್ಲಿ ಪಕ್ಷಾಂತರ ಆಗುತ್ತಿರುತ್ತಾರೆ. ಏನು ಪ್ರತಿವರ್ಷ ಪಕ್ಷಾಂತರಿಗಳು. ಪ್ರತಿ ವರ್ಷ ಈ ಪಕ್ಷ ಆ ಪಕ್ಷ ಬಿಟ್ಟು ಹೋಗುತ್ತಿರುತ್ತಾರೆ. ಅದನ್ನು ಬೆನ್ನಿಹಿನ್‌ನಿಲ್ಲಿಸಲಿ. ಮಾಡಲಿ ಸಾಧ್ಯವಾದರೆ ಮಾಡಲಿ, ಪಕ್ಷಾಂತರ ನಿಲ್ಲಿಸಲಿ. ಮಾನ್ಯ ಸಿದ್ಧರಾಮಯ್ಯನವರೇ, ಪಕ್ಷಾಂತರ ವರ್ಷ ವರ್ಷ ಮಾಡುತ್ತಿರುತ್ತಾರಲ್ಲಾ ಅದಕ್ಕೆ ಏನಾದರೂ ಬಂದು ಅವರು ಮಾಡಲಿ. ಅದು ಆಗುವುದಿಲ್ಲ. ಅದಕ್ಕೆ ನನಗನ್ನಿಸುತ್ತದೆ ತಮಗೆ ನಾನು ಹೇಳುತ್ತಿದ್ದೇನೆ ಮೂಢನಂಬಿಕೆಗಳ ವಿರುದ್ಧ ಇಂತಹ ಶೋಷಣೆಗಳ ವಿರುದ್ಧ ಸಮರವನ್ನೇ ನಾವೆಲ್ಲರೂ ಇದರ ವ್ಯವಸ್ಥೆಯಲ್ಲಿರತಕ್ಕಂಥ ನಾವೆಲ್ಲರೂ ಸಾರಬೇಕಾಗುತ್ತದೆ ಎಂದು ಪ್ರಕಾಶ್‌ರವರಿಗೂ ಹೇಳುತ್ತೇನೆ ಮಾನ್ಯ ಹೆಚ್.ಕೆ. ಪಾಟೀಲರಿಗೂ ಹೇಳುತ್ತೇನೆ ಮಾನ್ಯ ಸಿದ್ಧರಾಮಯ್ಯನವರಿಗೂ ಹೇಳುತ್ತೇನೆ. ಒಟ್ಟಿಗೆ ಬರೋಣ. ನಾನಂತೂ ತಯಾರಾಗಿದ್ದೇನೆ. ಮಾನ್ಯ ಸಿದ್ಧರಾಮಯ್ಯನವರೂ ಇದಕ್ಕೆ ತಯಾರಾಗಿದ್ದಾರೆ. ಈ ಮೂಢನಂಬಿಕೆಗಳ ವಿರುದ್ಧ ಟೀಮ್ ಮಾಡಿಕೊಳ್ಳೋಣ....

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ಈ ಅಂಧೋಳನವನ್ನು ನೀವೇ ಪ್ರಾರಂಭ ಮಾಡಿ. ಎಲ್ಲಾ ಸೇರಿಕೊಳ್ಳುತ್ತಾರೆ ಅದಕ್ಕೆ. ಈ ಮೌಢ್ಯದ ವಿರುದ್ಧ ಅಂಧೋಳನ.

ಶ್ರೀ ವಾಟಾಳ್ ನಾಗರಾಜ್ : ಮಾಡಲೇಬೇಕು. ಇದಕ್ಕೆ ನಾವೆಲ್ಲರೂ ಸೇರಿ ಮಾಡೋಣ. ಜನರನ್ನು ನಾವು ಈ ಮೌಢ್ಯದ ಹಾದಿಗೆ ತಿರುಗಿಸುವುದು ಬೇಡ. ಎಲ್ಲರೂ ಸೇರೋಣ. ಹೊಂದಾಣಿಕೆ ಇರತಕ್ಕಂಥವರು ಎಲ್ಲರೂ ಸೇರೋಣ. ಅದಕ್ಕೋಸ್ಕರವಾಗಿ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕು ಎಂದರೆ ಅವರು ಕೊಟ್ಟು ಬಿಡುತ್ತಾರಾ, ಅಷ್ಟು ಸುಲಭವಾಗಿ ಕೊಡುವುದಕ್ಕೆ ಬಂದಿರುವುದು ಅವರು? ಎಲ್ಲಾದರೂ ಉಂಟೇ? ಏನು ಮಾನ್ಯ ಯಡಿಯೂರಪ್ಪನವರು ನೀವು ಆಕಾಶ ಭೂಮಿಯರೆಗೆ ಹಾರಾಡಿದರೂ ಕೊಡುವುದಿಲ್ಲ ಅವರು. ಕೊಡುವುದಿಲ್ಲ ಏಕೆ ಕೊಡುತ್ತಾರೆ? ಕೊಡಬೇಕಾಗಿಲ್ಲ. ನಾನು ಸಹ ಅವರು ಕೊಡಬಾರದು ಅಂತ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : (ಬಾಗೇಪಲ್ಲಿ ಕ್ಷೇತ್ರ): ಮಾನ್ಯ ಅಧ್ಯಕ್ಷರೇ, ಇದು ಭಾರಿ ದುರ್ದೈವದ ಸಂಗತಿ. ನಮ್ಮ ಸದನದ ಸಮಯವನ್ನು ಯಾರೋ ಒಬ್ಬ ಬೂದಿ ಬಾಬನ ಬಗ್ಗೆ ಚರ್ಚೆ ಮಾಡಲಿಕ್ಕೆ ವ್ಯಯ ಮಾಡತಕ್ಕಂಥಾದ್ದು ನಿಜವಾಗಿಯೂ ಕರ್ನಾಟಕ ರಾಜ್ಯದ ದುರ್ದೈವ ಇದು. ಸದನದಲ್ಲಿ ಚರ್ಚೆಗೆ ಇಷ್ಟು ಸಮಯ ಅದಕ್ಕೆ ಹಾಳು ಮಾಡುತ್ತಿರತಕ್ಕಂಥಾದ್ದು. ಬೇಕಾದಷ್ಟು ಸಮಸ್ಯೆಗಳು ನಮ್ಮನ್ನು ಕಾಡುತ್ತಿದ್ದರಲೂ ಅದನ್ನು ಬಿಟ್ಟು ಯಾವನೋ ಒಬ್ಬ ಬೂದಿಬಾಬ ಅವನ, ಅಂತಹ ಬಾಬಗಳು ಈ ದೇಶದಲ್ಲಿ ಲಕ್ಷಾಂತರ ಜನ ಇದ್ದಾರೆ. ಆ ಬೂದಿಬಾಬಗಳೆಲ್ಲಾ ಈ ದೇಶದಲ್ಲಿ ಯಾರ ಜೊತೆಯಲ್ಲಿ ಇದ್ದಾರೆ ಎನ್ನತಕ್ಕಂಥಾದ್ದು ಸ್ಪಷ್ಟವಾಗಿ ಎಲ್ಲರಿಗೂ ಗೊತ್ತಿದೆ. ಯಾರ ಜೊತೆಯಲ್ಲಿದ್ದಾರೆ ಎಂದು ಅವರು ಹೇಳಲಿ ಯಾರು ಬೂದಿಬಾಬಗಳನ್ನು ಜೊತೆಯಲ್ಲಿಟ್ಟುಕೊಂಡಿದ್ದಾರೆ ಅವರೇ ಇವತ್ತು ಈ ಬೂದಿಬಾಬಗಳನ್ನು ವಿರೋಧ ಮಾಡುವುದು ಇದು ಇನ್ನೂ ವಿಪರ್ಯಾಸದ ಸಂಗತಿ ಇದು. ನಮ್ಮ ದೇಶದ ಪ್ರಧಾನ ಮಂತ್ರಿಗಳು, ಗೃಹ ಮಂತ್ರಿಗಳು ಬಾಬಗಳ ಕಾಲಿಗೆ ಬಿದ್ದಿರತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಅವತ್ತು ಯಾರಿಗೂ ಅವಮಾನ ಅಂತ ಅನಿಸಲಿಲ್ಲ. ಬಿಲ್ ಕ್ಲಿಂಟನ್ ಭಾರತ ದೇಶಕ್ಕೆ ಬಂದಾಗ ಇಡೀ ಡೆಲ್ಲಿ ಅಡ್ಮಿನಿಸ್ಟ್ರೇಶನ್ ಅನ್ನು ಅಮೇರಿಕಾ ಸೈನ್ಯಕ್ಕೆ ಪೊಲೀಸ್‌ನವರಿಗೆ ಕೊಟ್ಟಾಗ ಇವರಿಗೆ ಸ್ವಾಭಿಮಾನ ಅಡ್ಡ ಬರಲಿಲ್ಲ ಇವತ್ತು ಯಾವನೋ ಒಬ್ಬ ಬಂದ ಎಂದು ಹೇಳಿ, ಇವತ್ತು ನಾನು ಹೇಳುತ್ತೇನೆ ಮಾನ್ಯ ಅಧ್ಯಕ್ಷರೇ,

ಈ ದೇಶದಲ್ಲಿ ಭೌದ್ಧ ಧರ್ಮ ಹುಟ್ಟಿತು. ಹಿಂದೂ ಧರ್ಮದ ವಿರುದ್ಧವೇ ಸಿಡಿದೆದ್ದಿದ್ದು ಭೌದ್ಧ ಧರ್ಮ ಉಳಿಯಲಿಲ್ಲ ಇಲ್ಲಿ. ಜೈನ್ ಧರ್ಮ ಬಂತು ಉಳಿಯಲಿಲ್ಲ. ಹಿಂದೂ ಧರ್ಮ ಯಾರೋ ಅಂದುಕೊಂಡಿರುವಷ್ಟು ದುರ್ಬಲ ಅಲ್ಲ. ಅದರ ರಕ್ಷಣೆಯನ್ನು ಯಾರೂ ಯಾರಿಂದಲೂ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಹಿಂದೂ ಧರ್ಮಕ್ಕೆ ಆ ಶಕ್ತಿ ಇದೆ. ಏಕೆಂದರೆ ಹಿಂದೂ ಧರ್ಮದ ಉದ್ದೇಶ ಬಹಳ ವಿಶಾಲವಾದುದ್ದಾದ್ದರಿಂದ ಎಲ್ಲವನ್ನೂ ಆರಗಿಸಿಕೊಳ್ಳತಕ್ಕಂಥ ಶಕ್ತಿ ಅದಕ್ಕೆ ಇದೆ. ಯಾರೋ ಅಲೆಗ್ಸಾಂಡರೋ, ಪಲೆಗ್ಸಾಂಡರೋ ಬೆನ್ನಿಹಿನ್ ಬಂದುಬಿಟ್ಟು ಹಿಂದೂ ಧರ್ಮವನ್ನು ನುಂಗುತ್ತಾರೆಂದು ಯಾರಾದರೂ ಹೇಳಿದರೆ ಅದು ನಿಜವಾಗಿಯೂ ಹಾಸ್ಯಾಸ್ಪದವಾದಂತಹ ವಿಚಾರ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಹಿಂದೂ ಧರ್ಮ ಬಹಳ ಬಲಶಾಲಿಯಾಗಿದೆ ಎಂದು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅವರು ಮೊದಲು ಪ್ರಿಯಾಂಬಲ್‌ನಲ್ಲಿ ಹೇಳುವಾಗ ಭೌದ್ಧ ಧರ್ಮ ಬಂತು ಅದು ಉಳಿಯಲಿಲ್ಲ. ಜೈನ್ ಧರ್ಮ ಬಂತು. ಅದು ಉಳಿಯಲಿಲ್ಲ ಅಂದರೆ ಅದರ ವಿರುದ್ಧವಾಗಿ ನೀವು ನಿಲುವು ತೆಗೆದುಕೊಂಡಂತೆಯೇ? ಅಷ್ಟೇ ಅವು ಈ ದೇಶಿಯ ಧರ್ಮಗಳು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನ್ನ ಅರ್ಥ ಬೇರೆ. ಹೌದು ಈ ದೇಶದಲ್ಲಿಯೇ ಹುಟ್ಟಿದ್ದು ಅವು. ಈ ದೇಶಿಯ ಧರ್ಮಗಳೇ ಅವು. ಆದರೆ ಭೌದ್ಧ ಧರ್ಮ ಪ್ರಾರಂಭವಾಗಿದ್ದು ಹಿಂದೂ ಧರ್ಮದಲ್ಲಿರತಕ್ಕಂಥ ಮೌಢ್ಯದ ವಿರುದ್ಧ ಸಿಡಿದೆದ್ದು. ಹೌದೋ ಇಲ್ಲವೋ. ಆದರೂ ಕೂಡ ಭೌದ್ಧ ಧರ್ಮ....

ಶ್ರೀ ಎಂ.ಪಿ. ಪ್ರಕಾಶ್ : ಹಿಂದೂ ಧರ್ಮ ಬಹಳ ಬಲಶಾಲಿ ಎಂದು ಹೇಳಿದೆ. ಹಿಂದೂ ಧರ್ಮದ ದೌರ್ಬಲ್ಯಗಳಲ್ಲಿ ಅದೂ ಒಂದು ಎಂದು ಹೇಳಿ ಪ್ರಸ್ತಾಪ ಮಾಡಬಹುದು...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದು ನನ್ನ ಅಭಿಪ್ರಾಯ. ಇದು ನಿಮ್ಮ ಅಭಿಪ್ರಾಯ. ನಾನು ಯಾವುದೊ ಪಂಥದ ಬಗ್ಗೆ ಹೇಳುತ್ತಿಲ್ಲ. ಹಿಂದೂ ಧರ್ಮವನ್ನು ಯಾರೂ ನಾಶ ಮಾಡಲಿಕ್ಕೆ ಆಗುವುದಿಲ್ಲ ಎನ್ನತಕ್ಕಂಥ ವಿಚಾರವನ್ನಷ್ಟೇ ನಾನು ಹೇಳಿದ್ದು. ಅದಕ್ಕೆ ಮೀರಿ ಅರ್ಥೈಸುವಂತಹ ಅವಶ್ಯಕತೆ ಇಲ್ಲ. ಇವತ್ತು ಮಾಧುಸ್ವಾಮಿಯವರು ಹೇಳಿದ್ದನ್ನು ನಾನು ಒಪ್ಪುತ್ತೇನೆ ಸರ್ಕಾರ ಆಡಳಿತಾತ್ಮಕವಾಗಿ ಕೆಲವು ತಪ್ಪುಗಳನ್ನು ಮಾಡಿದೆ ಮಾಡಬಾರದಿತ್ತು. ಈ ದೇಶದಲ್ಲಿ ಬೂದಿ ಬಾಬುಗಳನ್ನು ಇವತ್ತು ಮಾತ್ರವಲ್ಲ, ಈ ದೇಶದ ಪರಂಪರೆಯೇ ಹಾಗೆ, ಈ ದೇಶದ ಮೌಢ್ಯತೆಯನ್ನು ಎಲ್ಲಾ ಖಾಯಿಲೆ ವಾಸಿ ಮಾಡುವುದಕ್ಕೆ ಪರಮಾತ್ಮನಿದ್ದಾನೆಂದು ನಂಬಿಕೊಂಡೇ ಬಂದಿದ್ದೇವೆ, ಇವತ್ತು ನಂಬುತ್ತಿದ್ದೇವೆ, ಇಷ್ಟೊಂದು ವೈಜ್ಞಾನಿಕ ಯುಗದಲ್ಲೂ ನಮ್ಮ ದೇಶದಲ್ಲಿ ತಾಯಿತ ಕಟ್ಟಿಸುತ್ತಾರೆ, ಮಂತ್ರ ಹಾಕಿಸುತ್ತಾರೆ, ನಿಂಬೆ ಹಣ್ಣು ಮಂತ್ರಿಸುತ್ತಾರೆ ಯಾರೂ ಅದನ್ನು ವಿರೋಧ ಮಾಡಲಿಲ್ಲ. ಆದುದರಿಂದ ಈ ವಿಚಾರವನ್ನು ಇವತ್ತು ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಸದನದ ಸಮಯವನ್ನು ನಾವು ಹಾಳು ಮಾಡುತ್ತಿದ್ದೇವಲ್ಲಾ, ಇದನ್ನು ನಮ್ಮ ಕರ್ನಾಟಕದ ಜನತೆ ಕ್ಷಮಿಸುವುದಕ್ಕೆ ಸಾಧ್ಯವಿಲ್ಲ.

ಇನ್ನು ಎರಡನೆ ವಿಚಾರ, ಆತನಿಗೆ ಪ್ರಚಾರ ಕೊಡುವ ವಿಚಾರದಲ್ಲಿ, ಜಕ್ಕೂರು ವಿಮಾನ ನಿಲ್ದಾಣವನ್ನು ಕೊಟ್ಟಿರುವುದರಲ್ಲಿ ನಮ್ಮದೂ ವಿರೋಧವಿದೆ. ಧರ್ಮ ಪ್ರಚಾರ ಮಾಡುವುದಕ್ಕೆ ಸಂವಿಧಾನಬದ್ಧವಾಗಿ ಎಲ್ಲರಿಗೂ ಹಕ್ಕಿದೆ, ಆದರೆ ರಕ್ಷಣಾ ಇಲಾಖೆಗೆ ಸಂಬಂಧಿಸಿದ ಒಂದು ಜಾಗವನ್ನು ಏನು ಕೊಡಲಾಗಿದೆ, ಅದು ಅಕ್ಷಮ್ಯ ಅಪರಾಧ, ಕಂಠೀರವ ಸ್ಟೇಡಿಯಂ ಕೊಡಬಹುದಾಗಿತ್ತು,

ಬೇರೆ ಬೇರೆ ಜಾಗಗಳಿವೆ ಅವುಗಳನ್ನು ಕೊಡಬಹುದಾಗಿತ್ತು, ಅದನ್ನೇ ಕೊಡುವಂಥ ಅವಶ್ಯಕತೆ ಇಲ್ಲ.

ಇನ್ನೊಂದು ವಿಚಾರವೇನೆಂದರೆ, ನೀವು ಜಾತ್ಯಾತೀತ ಮೌಲ್ಯಗಳನ್ನು ರಕ್ಷಣೆ ಮಾಡಬೇಕು, ಆದರೆ ನಮ್ಮ ದೇಶದ ರಾಜಕಾರಣಿಗಳಲ್ಲಿ ಏನಾಗಿದೆ ಎಂದರೆ, ಜಾತ್ಯಾತೀತತೆ ಎಂದರೆ, ಚರ್ಚ್‌ಗೆ ಹೋಗತಕ್ಕಂಥದ್ದು, ಗುಡಿಗೆ ಹೋಗತಕ್ಕಂಥದ್ದು, ಮಸೀದಿಗೆ ಹೋಗತಕ್ಕಂಥದ್ದು, ಈ ಮೂರು ಕಡೆಗೆ ಹೋಗಿಬಿಟ್ಟರೆ ನಾವು ಜಾತ್ಯಾತೀತರು ಎಂದು ಲೆಕ್ಕ. ಆ ಮೂರು ಕಡೆ ಹೋಗುವಂಥದ್ದು ಜಾತ್ಯಾತೀತರು ಎನ್ನುವ ಭಾವನೆ ಇದೆಯಲ್ಲಾ, ಅದು ಸಂಪೂರ್ಣವಾಗಿ ಅವೈಜ್ಞಾನಿಕವಾದದ್ದು. ಧರ್ಮ ವೈಯಕ್ತಿಕ ವಿಚಾರ, ಅದನ್ನು ಸಾರ್ವಜನಿಕ ಜೀವನದಲ್ಲಿ, ರಾಜಕಾರಣದಲ್ಲಿ ತರತಕ್ಕಂಥದ್ದು ಮಹಾ ಅಪರಾಧ, ಅದೇ ಈ ದೇಶಲ್ಲಿ ಇವತ್ತು ಆಗಿರತಕ್ಕಂಥದ್ದು. ಇದರಿಂದ ಇವತ್ತು ಏನಾಗುತ್ತಿದೆ ಎಂದರೆ, ಮನುಷ್ಯನ ಬದುಕು ಮತ್ತು ಭಾವನೆಗಳ ವಿರುದ್ಧ ಇವರು ಸಂಘರ್ಷವನ್ನು ಏರ್ಪಡಿಸಿದ್ದಾರೆ. ಮನುಷ್ಯನ ಬದುಕಿನ ಬಗ್ಗೆ ಆಲೋಚನೆ ಮಾಡುವುದು ಬಿಟ್ಟು ಭಾವನೆಗಳ ಬಗ್ಗೆ ಆಲೋಚನೆ ಮಾಡುವ ಸ್ಥಿತಿಗೆ ಇವತ್ತು ಇಳಿದು, ಆ ಭಾವನೆಗಳನ್ನು ಕೆರಳಿಸಿ, ಬದುಕು ಮತ್ತು ಭಾವನೆಗಳನ್ನು ಸಂಘರ್ಷಕ್ಕೆ ತೆಗೆದುಕೊಂಡು ಬಂದು, ಇಡೀ ಮನುಷ್ಯನ ಬದುಕನ್ನು ಹಾಳು ಮಾಡುತ್ತಿದ್ದೇವಲ್ಲಾ, ಅದು ಜೀವವಿರೋಧಿ ಕೃತ್ಯ. ಜನವಿರೋಧಿ ಕೃತ್ಯ. ನಾವು ಮನುಷ್ಯನ ಬದುಕಿನ ಬಗ್ಗೆ ಮಾತನಾಡಬೇಕೇ ಹೊರತು, ಮನುಷ್ಯನ ಬದುಕಿನ ಬಗ್ಗೆ ಚಿಂತನೆ ಮಾಡಬೇಕೇ ಹೊರತು, ಮನುಷ್ಯನ ಭಾವನೆಗಳ ಬಗ್ಗೆ ಅಲ್ಲ ಚಿಂತನೆ ಮಾಡಬೇಕಾಗಿರುವುದು. ಆ ಭಾವನೆಗಳ ಬಗ್ಗೆ ಚಿಂತನೆ ಮಾಡಿದ ಪರಿಣಾಮ ಮೊನ್ನೆ ಬೆಂಗಳೂರಿನಲ್ಲಿ ಏನಾಯಿತು? 134 ಕೋಟಿ ರೂಪಾಯಿಗಳ ನಷ್ಟವಾಯಿತು, ಅದು ಯಾರ ಆಸ್ತಿ, ಅದು ಸಾರ್ವಜನಿಕ ಆಸ್ತಿ, ಅದಕ್ಕೆ ಜವಾಬ್ದಾರರು ಯಾರು? ಅದನ್ನು ಕಟ್ಟಿಕೊಡುವವರು ಯಾರು? ಅದಕ್ಕೋಸ್ಕರ, ಇಂತಹ ಭಾವನೆಗಳನ್ನು ಕೆರಳಿಸಿ ಜನರ ಜೀವನದ ಜೊತೆ ಚಲ್ಲಾಟವಾಡತಕ್ಕಂಥವರನ್ನು ಎಂದಿಗೂ ಕ್ಷಮಿಸಲು ಸಾಧ್ಯವಿಲ್ಲ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ಕೊಡುವಂತಹ ಅವಶ್ಯಕತೆ ಇಲ್ಲ, ಅದಕ್ಕೆ ಅವರು ಏತಕ್ಕೆ ರಾಜೀನಾಮೆ ಕೊಡಬೇಕು? ಆದರೆ ಮುಖ್ಯಮಂತ್ರಿಗಳು ಅವರ ಆತ್ಮಕ್ಕೆ ಒಂದು ಪ್ರಶ್ನೆಯನ್ನು ಹಾಕಿಕೊಳ್ಳಬಾಕಾಗುತ್ತದೆ, ಬೆನ್ನಿಹಿನ್ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳಾಗಿ ಹೋಗಿದ್ದರೆ, ಧರ್ಮಸಿಂಗ್ ಆಗಿ ಹೋಗಿದ್ದರೆ? ಮುಖ್ಯಮಂತ್ರಿಗಳಾಗಿ ಆ ಕಾರ್ಯಕ್ರಮಕ್ಕೆ ಹೋಗಿದ್ದರೆ ಅಕ್ಷಮ್ಯ ಅಪರಾಧವಾಗುತ್ತದೆ. ನೀವು ಮೌಢ್ಯತೆಯನ್ನು ಬೆಂಬಲಿಸಿದಂತಾಗುತ್ತದೆ. ನಾನು ಸಿದ್ಧರಾಮಯ್ಯನವರನ್ನು ಖಂಡಿತವಾಗಿ ಪ್ರಶಂಸೆ ಮಾಡುತ್ತೇನೆ, ಮಾನ್ಯ ಸಿದ್ಧರಾಮಯ್ಯನವರು ಒಬ್ಬರು ಮಾತ್ರವೇ ಅಲ್ಲಿಗೆ ಹೋಗದೆ ಇರುವಂತಹವರು ನೀವು ಮುಖ್ಯಮಂತ್ರಿಯಾಗಿ ಅಲ್ಲಿಗೆ ಹೋಗಬಾರದಿತ್ತು, ಏಕೆಂದರೆ ನೀವು ಮೌಢ್ಯತೆಯನ್ನು ಬೆಂಬಲಿಸಿದಂತಾಗುತ್ತದೆ, ಧರ್ಮ ಪ್ರಚಾರವನ್ನು ಅವರು ಮಾಡಿಕೊಂಡು ಹೋಗಲಿ ಅವರ ಇಷ್ಟ ಅದಕ್ಕೆ ನಾವೇನೂ ಅಭ್ಯಂತರ ಮಾಡುವ ಅವಶ್ಯಕತೆ ಇಲ್ಲ. ಆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಯವರು ಹೋಗತಕ್ಕಂತಹ ಕಾರಣಕ್ಕೆ ಇವತ್ತು, ಇಡೀ ದೇಶದಲ್ಲಿ ಸಾಮಾನ್ಯ ಜನರು ಏನು ಮಾತನಾಡುತ್ತಾರೆ? ಮುಖ್ಯಮಂತ್ರಿಯಂತಹವರೇ ನಂಬಿ ಅಲ್ಲಿಗೆ ಹೋದಾಗ, ನಾನೊಬ್ಬ ಮುಗ್ಧ ಅಲ್ಲಿಗೆ ಏತಕ್ಕೆ ಹೋಗಬಾರದೆಂದು ಪ್ರಶ್ನೆಯನ್ನು ಅವನಷ್ಟಕ್ಕೆ ಅವನೇ ಹಾಕಿಕೊಳ್ಳುತ್ತಾನೆ. ಒಬ್ಬ ಪ್ರಧಾನಮಂತ್ರಿ, ಒಬ್ಬ ಗೃಹಮಂತ್ರಿ ಹೋಗಿ ಯಾರ್ಯಾರೋ ಕಾಲಿಗೆ ಬೀಳುವಾಗ ಒಬ್ಬ ಸಾಮಾನ್ಯ ಮನುಷ್ಯ, ನಾನು

ಕಾಲಿಗೆ ಬಿದ್ದರೆ ಏನು ತಪ್ಪೆಂದು ಆಲೋಚನೆ ಮಾಡುತ್ತಾನೆ. ಹಾಗಾಗಿ ನಾವು ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು, ಮೌಢ್ಯತೆಗೆ, ಅಂಧತ್ವಕ್ಕೆ, ಭಾವನೆಗಳ ಜೊತೆ ಚೆಲ್ಲಾಟ ಆಡುವುದಕ್ಕೆ ಅವಕಾಶ ಮಾಡಿಕೊಡಬಾರದು, ಅದನ್ನು ಯಾರು ಮಾಡಿದರೂ ತಪ್ಪಾಗುತ್ತದೆ, ಅಂತಹ ವಿಚಾರಗಳನ್ನು ಸದನದಲ್ಲಿ ಚರ್ಚೆ ಮಾಡಿ ಲಕ್ಷಾಂತರ ರೂಪಾಯಿಗಳ ಸಾರ್ವಜನಿಕರ ಹಣವನ್ನು ಪೋಲು ಮಾಡುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬಾರದೆಂದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಸನ್ಮಾನ್ಯ ಸಭಾಧ್ಯಕ್ಷರೆ, ಈ ವಿಷಯವನ್ನು ಈ ಸದನದಲ್ಲಿ ಚರ್ಚೆ ಮಾಡುವುದೇ ತಪ್ಪೆನ್ನುವುದು ನನ್ನ ಅಭಿಪ್ರಾಯ, we should not hurt anybody's feeling, ಯಾರ ಮನಸ್ಸಿಗೂ ನೋವು ಮಾಡಬಾರದು. ಬೆನ್ನಿಹಿನ್ ಬಂದರು, ಹೋದರು ಅದು ನಮಗೆ ಮುಖ್ಯವಲ್ಲ, ಬಂದರು ಪ್ರೇಯರ್ ಮಾಡಿದರು, ಅವರು ನಮ್ಮ ಗೌರವಾನ್ವಿತ ಮುಖ್ಯಮಂತ್ರಿಗಳನ್ನು ಆ ಕಾರ್ಯಕ್ರಮಕ್ಕೆ ಬನ್ನಿ ಎಂದು ಮನವಿ ಮಾಡಿದರು. ಇದನ್ನು ಚುನಾವಣೆಯ ಸಮಯದಲ್ಲಿ ಬಂದಿದ್ದರೆ ಯಾರೂ ಮಾತನಾಡುವುದಿಲ್ಲ, ಏಕೆಂದರೆ ಕ್ರಿಶ್ಚಿಯನ್ಸ್ ಓಟು ಬರಬೇಕಾಗುತ್ತದೆ. ಈಗ ಚುನಾವಣೆ ಇಲ್ಲ ಎಲ್ಲರೂ ಆ ಬಗ್ಗೆ ಮಾತನಾಡಬಹುದು. ಅವರು ಬರೀ ಮಿರಾಕಲ್ ಮಾಡಿದರೋ, ಬರೀ ಕ್ರಿಶ್ಚಿಯನ್ಸ್ ಬಗ್ಗೆ ಮಾತನಾಡಿದರೂ ಅದು ಮಾತ್ರವಲ್ಲ, ನಾವು ಹಿಂದೂಗಳು ದೇವರನ್ನೇ ಏಮಾರಿಸುತ್ತೇವೆ. ಒಬ್ಬನು ತಿರುಪತಿಗೆ ಹೋಗುತ್ತಾನೆ, ಸ್ವಾಮಿ, ನನ್ನ ಕಿಡ್ನಿ ಫೆಲ್ಯೂರ್ ಆಗಿಬಿಟ್ಟಿದೆ ನಾನು ಚೆನ್ನಾಗಿ ಆಗಿಬಿಟ್ಟರೆ, ನಾನು ಬಂದು ನಿಮ್ಮನ್ನು ನೋಡುತ್ತೇನೆಂದು ಅರಿಕೆ ಮಾಡಿಕೊಳ್ಳುತ್ತಾನೆ. ಅವನು ಬಂದೇನು ನೋಡಿದ್ದಾನೆ, ಕಿಡ್ನಿ ತೆಗೆದುಕೊಟ್ಟಿದಾನಾ, ಇಲ್ಲ, ಹತ್ತು ಫಿಂಗರ್ಸ್ ಇದೆ, ಒಂದು ದೇವರಿಗೆ ಕಟ್ ಮಾಡಿ ಕೊಟ್ಟಿದ್ದಾನಾ, ಇಲ್ಲ, ಮನುಷ್ಯ ಬಹಳ ಬುದ್ಧಿಶಾಲಿ. ಯಾವುದು ನೋವಿಲ್ಲ ಅದನ್ನು ಮಾತ್ರ ಕೊಟ್ಟುಬಿಟ್ಟು ಬರುತ್ತಾನೆ, ಕೂದಲು ತೆಗೆದು ದೇವರಿಗೆ ಕೊಡುತ್ತಾನೆ, ಮತ್ತೆ ಇದು ಬರುತ್ತದೆ ಆದರೆ ಕೈ ತೆಗೆದುಕೊಟ್ಟರೆ ಮತ್ತೆ ಬರುವುದಿಲ್ಲ, ಕಾಲು ಕಟ್ ಮಾಡಿಕೊಟ್ಟರೆ ಬರುವುದಿಲ್ಲ, ಕೂದಲು ತೆಗೆದರೆ ನೋವು ಇರುವುದಿಲ್ಲ, ಮತ್ತೆ ಅದು ಮೂರು ತಿಂಗಳಿನಲ್ಲಿ ಬರುತ್ತದೆ, ಅಂತಹ ಮಹಾನುಭಾವರು, that kind of human beings are there. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಲಿಲ್ಲವೆಂದರೆ, religious community ಅವರು ನಮ್ಮ ರಿಲಿಜಿಯನ್‌ಗೆ, ಕಮ್ಯುನಿಟಿಗೆ ವಿರೋಧಿ ಎಂದು ಹೇಳುತ್ತಾರೆ, ಹೋದರೆ ಇವರು ಹೋಗಿದ್ದು ತಪ್ಪೆಂದು ಹೇಳುತ್ತಾರೆ. ತಮಗೆ ಒಂದು ಉದಾಹರಣೆ ಹೇಳುತ್ತೇನೆ, ಗ್ರೀಕ್‌ನಲ್ಲಿ ಸಾಕ್ರೇಟಿಸ್ ಎಂಬ ಒಬ್ಬರಿದ್ದರು. He was giving a big speech. ಅವರ ಮೇಲೆ ಆ ದೇಶದಲ್ಲಿರುವಪರೆಲ್ಲಾ ಇವನು ಸರಿ ಇಲ್ಲ, ಸ್ಟೂಡೆಂಟ್ಸ್‌ಗಳನ್ನೂ, ಯಂಗ್‌ಸ್ಟರ್ಸ್ ಅನ್ನು, ಗರ್ಲ್ಸ್‌ಗಳನ್ನು ಡೈವರ್ಟ್ ಮಾಡುತ್ತಾನೆ, ಇವನು ಊರಿನಲ್ಲೇ ಇರಬಾರದು, ಇವನಿಗೆ ಶಿಕ್ಷೆ ಕೊಡಬೇಕೆಂದು ಡಿಸೈಡ್ ಮಾಡಿಯೇ ಬಿಟ್ಟರು. ಸಾಕ್ರೆಬಿಸ್‌ರನ್ನು ರಾಜನ ಹತ್ತಿರ ಕರೆದುಕೊಂಡು ಹೋದರು, ರಾಜ ಕೇಳಿದರು, ನೀವು ಬಹಳ ಅಪರಾಧ ಮಾಡುತ್ತಿದ್ದೀಯಾ ಎಂದು ಹೇಳಿದ್ದಾರೆ, ನೀವು ತಪ್ಪು ಕೆಲಸ ಮಾಡಿದ್ದಿರಿ, ದೇಶದ್ರೋಹ ಕೆಲಸವನ್ನು ಮಾಡಿದ್ದೀರೆಂದು ಎಲ್ಲಾ ಹೇಳಿದರು, ಸಾಕ್ರೆಟಿಸ್ ಅವರನ್ನು ನಾನೇನು ಮಾಡಿದೆ ಎಂದು ಕೇಳಿದಾಗ, ಇಲ್ಲ ನೀವೆಲ್ಲಾ ಸ್ಟೂಡೆಂಟ್ಸ್ ಅನ್ನು ಡೈವರ್ಟ್ ಮಾಡುತ್ತೀರಿ, ನೀವು ಭಾಷಣ ಮಾಡಿ ಮಕ್ಕಳನ್ನೆಲ್ಲಾ ನಿಮ್ಮ ಕಡೆಗೆ ಸೆಳೆದುಕೊಳ್ಳುತ್ತೀರಿ, ನಿಮ್ಮ ಭಾಷಣದಲ್ಲಿ ಈ ಜನರನ್ನೆಲ್ಲಾ ಡೈವರ್ಟ್ ಮಾಡುತ್ತೀರೆಂದು ಹೇಳಿದರು. ಆ ಮಹಾರಾಜನನ್ನು ಸಾಕ್ರೆಟಿಸ್ ನಾನು ಯಾವ ಭಾಷೆಯಲ್ಲಿ

ಮಾತನಾಡಿದ್ದೇನೆ, ಎಂದು ಕೇಳಿದರು ಅದಕ್ಕೆ ರಾಜ ನೀನು ಗ್ರೀಕ್ ಲಾಂಗ್ವೆಜ್‌ನಲ್ಲಿ ಮಾತನಾಡಿದ್ದೀಯಾ ಎಂದರು, ಸಾಕ್ರೆಟಿಸ್, ಆ ಲಾಂಗ್ವೆಜ್ ತಮಗೂ ಗೊತ್ತಿದೆ ಅಲ್ಲವೇ ಎಂದು ಕೇಳಿದರು, ಅದಕ್ಕೆ ರಾಜ, ಹೌದು ಎಂದು ಹೇಳಿದರು, ಹಾಗಾದರೆ ನೀವೂ ಕೂಡ ಹಾಗೆ ಮಾತನಾಡಿ ಡೈವರ್ಟ್ ಮಾಡಿಕೊಳ್ಳಿ ಎಂದು ಹೇಳಿದರು. ಆ ರೀತಿ ಬಿನ್ನಿಹಿನ್ ಮಾತನಾಡಿದರೆ, ನೀವು ಕೂಡ ಮೈಕ್ ತೆಗೆದುಕೊಳ್ಳಿ ಭಾಷಣ ಮಾಡಿ, ದೇವರು ಬರುತ್ತಾನೆಂದು ಹೇಳಿ, ಬರುದಿಲ್ಲವೆಂದರೆ ಬಿಡಿ. ಅವರಿಗೆ ಜನ ಬರುತ್ತಾರೆಂದರೆ ನಾವೇನು ಮಾಡುವುದಕ್ಕಾಗುತ್ತದೆ ಸ್ವಾಮಿ? ನೀವೇ ಹೇಳಿ? ಜಯೇಂದ್ರ ಸ್ವಾಮಿಗಳು ಪಾಪ ದೊಡ್ಡ ಮನುಷ್ಯರು, Throughout the world everybody knows him. We have no right to talk about that Maham ಬಹಳ ಓದಿರುವವರು, ಗೌರವಾನ್ವಿತರು, ಗೀತಾ ಗೊತ್ತಿದೆ ಎಲ್ಲಾ ಗೊತ್ತಿದೆ, ಅಂತಹವರು ಜೈಲಿನಲ್ಲಿರುವ ಸಂದರ್ಭದಲ್ಲಿ, ಮಾಜಿ ಕೇಂದ್ರ ಮಂತ್ರಿಗಳೆಲ್ಲಾ ಜೈಲಿನಲ್ಲಿ ಹೋಗಿ ಅವರನ್ನು ಹೇಗಿದ್ದಾರೆಂದು ಬೇಟಿ ಮಾಡಿದರು, ತಪ್ಪಾ? ಇಲ್ಲವೇ, ತಮಿಳುನಾಡಿನ ಮುಖ್ಯಮಂತ್ರಿಗಳು, law will take its own course. ಎಂದು ಹೇಳಿದರು. ಅವರ ಮೇಲೆ ಎಷ್ಟು ಅಪರಾಧ, ನೀವು ಹೀಗೆ ಮಾಡಿದ್ದು ತಪ್ಪೆಂದು ಹೇಳುತ್ತಾರೆ, ಅದಕ್ಕೆ ಅವರು ಬಾಯಿಯನ್ನು ತೆಗೆಯಲಿಲ್ಲ. ಆ ರೀತಿಯಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಕೂಡ ಯಾರು ಏನಾದರೂ ಹೇಳಿಕೊಂಡು ಹೋಗಲಿ ಸ್ವಾಮಿ, ತಾವು ಏಕೆ ಆ ಕಾರ್ಯಕ್ರಮಕ್ಕೆ ಹೋದಿರಿ ಎನ್ನುವುದಕ್ಕೆ ಉತ್ತರ ಕೊಡುವ ಅವಶ್ಯಕತೆ ಇಲ್ಲ, ತಾವು ಉತ್ತರ ಕೊಡಲಿಲ್ಲವೆಂದರೆ ಏ..ಏ ಮಾಡುತ್ತಾರೆ? ಅವಶ್ಯಕತೆ ಇಲ್ಲ, ಕೊಡಲೇ ಬಾರದು. ರಾಜೀನಾಮೆ ಕೊಡಿ ಎಂದು ಕೂಗಾಡುತ್ತೇವೆ ಒಂದುವಾರ ಪತ್ರಿಕೆಗಳಲ್ಲಿ ಬರುತ್ತದೆ. ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಸನ್ಮಾನ್ಯ ಜೆ.ಹೆಚ್. ಪಟೇಲರು, ನೀವು ಪತ್ರಿಕೆಗಳಲ್ಲಿ ಬರೆದುಕೊಂಡೇ ಇರಿ, ಹೌದು ಎಂದು ಹೇಳಿದರೆ ಏನು ಮಾಡುತ್ತೀರಿ ಎಂದು ಒಂದು ಸಲ ಹೇಳಿದ್ದರು. ಆ ರೀತಿಯಾಗಿ ತಾವು ಆ ಬಗ್ಗೆ ಯಾವುದೇ ಚಿಂತನೆಯನ್ನೇ ಮಾಡಬಾರದು, ತಾವು ರಾಜೀನಾಮೆ ಕೊಡುವ ಅವಶ್ಯಕತೆ ಇಲ್ಲ. ತಾವು ತಮ್ಮ ಜೊತೆ ಉಪಮುಖ್ಯಮಂತ್ರಿಯವರನ್ನು ಕರೆದುಕೊಂಡು ಹೋಗಿದ್ದರೆ ಇದು ದೊಡ್ಡ ಚರ್ಚೆಯೇ ಆಗುತ್ತಿರಲಿಲ್ಲ, ಅವರನ್ನು ಬಿಟ್ಟು ಹೋಗಿದ್ದಕ್ಕೆ ದೊಡ್ಡ ಚರ್ಚೆಯಾಗಿದೆ, ಯಾವಾಗಲೂ ನೀವು ಅವರ ಜೊತೆಯಲ್ಲಿಯೇ ಹೋಗಬೇಕು ಸ್ವಾಮಿ. ನಮ್ಮ ದೇಶದಲ್ಲಿ ಸೆಕ್ಯುಲರಿಸಂ ಬಗ್ಗೆ ಮಾತನಾಡುತ್ತೇವೆ, ನ್ಯಾಷನಲ್ ಇಂಟಿಗ್ರೇಷನ್ ಬಗ್ಗೆ ಮಾತನಾಡುತ್ತೇವೆ, ನಮ್ಮಲ್ಲಿ ಮತ, ಜಾತಿ, ಏನೂ ಇಲ್ಲವೆಂದು ಮಾತನಾಡುತ್ತೇವೆ There is no caste, colour and creed. ನಾಳೆ ನಾನು ಮಂತ್ರಿಯಾದರೂ ಈ ಡ್ರೇಸಾಗೆ. ನಮ್ಮದು style ಇದೇ ತಾನೆ? Ours is a secular country. ಈಗ ಸೆಕ್ಯುಲರಿಸಂ ಇಲ್ಲವೇ? Anybody can come and give prayer, nothing wrong in it. If anything goes wrong that my respectful Hon'ble Chief Minister. ಎಲ್ಲಿ ರಾಂಗ್ ಆಗಿದೆ ಅದನ್ನು ಸರಿಪಡಿಸುವುದಕ್ಕೆ, in future how we have to do, you just convince our people. I am thankful to you for giving me this opportunity. Nothing to worry, we are with you sir, in this hour. Thank you sir,

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ನನ್ನ ಸನೇಹಿತರಾದ ರಾಜೇಂದ್ರನ್‌ರವರು ಬಹಳ ಚೆನ್ನಾಗಿ ಮಾತನಾಡಿದರು. ನಾನು ಇವತ್ತು ಸಿದ್ಧರಾಮಯ್ಯನವರನ್ನು ಅಭಿನಂದಿಸುತ್ತೇನೆ, ಅವರು ಇವತ್ತು ಆ ಸಭೆಗೆ ಹೋಗಲಿಲ್ಲ, ಶ್ರೀರಾಮರೆಡ್ಡಿಯವರು ಕೇಳಿದಂತೆ

ಮುಖ್ಯಮಂತ್ರಿಗಳನ್ನು ನಾನು ಕೇಳುವುದೇನೆಂದರೆ ಅವರು ಮುಖ್ಯಮಂತ್ರಿಗಳಾಗಿ ಆ ಕಾರ್ಯಕ್ರಮಕ್ಕೆ ಹೋದರೆ ಅಥವಾ ಧರ್ಮಸಿಂಗ್ ಆಗಿ ಹೋದರಾ? ನಾನು ಏಕೆ ಹೇಳುತ್ತೇನೆಂದರೆ ಶ್ರೀ ಜವಾಹರ್ ಲಾಲ್ ನೆಹರೂ ಅವರು ಪ್ರಧಾನ ಮಂತ್ರಿಯಾಗಿದ್ದಾಗ ಅವರು ತಮ್ಮ ಮಂತ್ರಿಮಂಡಲದವರಿಗೆ ಒಂದು ಮಾತನ್ನು ಹೇಳಿದ್ದರು. ನಿಮ್ಮ ನಿಮ್ಮ ರಿಲೀಜನ್ ಅನ್ನು ಪ್ರಾಕ್ಟೀಸ್ ಮಾಡಲಿಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಧರ್ಮದ ಕಾರ್ಯಗಳಿಗೆ ಹೋಗುವಾಗ ನೀವು ಸರ್ಕಾರಿ ಕಾರುಗಳನ್ನು ತೆಗೆದುಕೊಂಡು ಹೋಗಬಾರದೆಂದು ಹೇಳಿದ್ದರು. ಅವರು ಸರ್ಕುಲರ್ ಕಳುಹಿಸಿದ್ದರು. ಅದಕ್ಕೆ ನಾನು ಕೇಳುತ್ತಿದ್ದೇನೆ. ಸರ್ಕಾರಿ ವ್ಯವಸ್ಥೆಯನ್ನು ಉಪಯೋಗ ಮಾಡಿ ಹೋಗುವಂಥದ್ದು ತಪ್ಪು. ನಿಮ್ಮ ವೈಯಕ್ತಿಕ ವಿಚಾರಗಳ ಬಗ್ಗೆ ನಾವು ಮಧ್ಯೆದಲ್ಲಿ ಬರುವುದಕ್ಕೆ ಆಗುವುದಿಲ್ಲ. ಇಂಟರ್‌ಫಿಯರ್ ಆಗಲಿಕ್ಕೆ ಆಗುವುದಿಲ್ಲ. ನಾವು ಅದನ್ನು ಕ್ವೆಶ್ಚನ್ ಸಹ ಮಾಡುವುದಿಲ್ಲ. ಆದರೆ ಸರ್ಕಾರ ಜಕ್ಕೂರು ವಿಮಾನ ನಿಲ್ದಾಣವನ್ನು ಕೊಟ್ಟಿದ್ದಂತು ಸರಿಯೇ? ಆ ಲೆಕ್ಕಾಚಾರಗಳ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಕೇಳಿದರು. ಇದರ ಬಗ್ಗೆ ಮಾಹಿತಿಯನ್ನು ಸದನಕ್ಕೆ ಕೊಡಬೇಕಾಗುತ್ತದೆ. ಆದರೆ ನಾನು ಮಾನ್ಯ ಯಡಿಯೂರಪ್ಪನವರ ಮಾತನ್ನು ಬಹಳ ಸೂಕ್ಷ್ಮವಾಗಿ ಆಲಿಸಿದೆ. ನಮ್ಮ ಸ್ನೇಹಿತರೆಲ್ಲಾ ಹೇಳಿದರು. ಬೆನ್ನಿಹಿನ್ ಬಂದಿದ್ದಕ್ಕಿಂತ ಜಾಸ್ತಿ, ಅವರು ಮಾಡಿದ್ದಕ್ಕಿಂತ ಜಾಸ್ತಿ ಪಬ್ಲಿಸಿಟಿಯನ್ನು ಇವರೇ ಅವರಿಗೆ ಕೊಟ್ಟು ಬಿಟ್ಟರು. ಅಗತ್ಯ ಇರಲಿಲ್ಲ. ನೀವು ಅಷ್ಟು ಗಲಾಟೆಯನ್ನು ಮಾಡಿ, ಪ್ರಚಾರ ಕೊಡುವಂತಹದ್ದು ಅಗತ್ಯ ಇರಲಿಲ್ಲ. ದೆಹಲಿಗೆ ಬಂದಿದ್ದು, ಬಾಂಬೆಗೆ ಅವರು ಬಂದಿದ್ದು ನನಗೆ ಗೊತ್ತೇ ಇಲ್ಲ. ನಾನು ದೂರದರ್ಶನದಲ್ಲಿ ಸಹ ಅವರ ಕಾರ್ಯಕ್ರಮವನ್ನು ನೋಡಲಿಲ್ಲ. ಬೆನ್ನಿಹಿನ್ ಕಾರ್ಯಕ್ರಮವನ್ನು ನಾನು ನೋಡಲಿಲ್ಲ. ಆದರೆ ನೀವೇ ಏಕೆ ಇಷ್ಟು ಪ್ರಚಾರವನ್ನು ಇಡೀ ರಾಜ್ಯಕ್ಕೆ, ಇಡೀ ದೇಶಕ್ಕೆ ಪ್ರಚಾರವನ್ನು ಕೊಟ್ಟಿರಿ? ಅದಲ್ಲದೆ ನಮ್ಮ ಸ್ವತ್ತನ್ನು ನಾವು ಹಾಳು ಮಾಡಿಕೊಂಡಿದ್ದು. ಬಸ್‌ಗೆ ಬೆಂಕಿ ಕೊಟ್ಟಿರಿ, ಕಾರ್‌ಗೆ ಬೆಂಕಿ ಕೊಟ್ಟಿರಿ. ಇದ್ದ ಕಟ್ಟಡಗಳಿಗೆ ಕಲ್ಲನ್ನು ಹೊಡೆದಿರಿ. ಇದು ಸರಿನಾ? ಬೆನ್ನಿಹಿನ್ ಬಂದ. ಅವನು ಚೀಲ ಹಿಡಿದ. ದುಡ್ಡು ಮಾಡಿಕೊಂಡು ತೆಗೆದುಕೊಂಡು ಹೋದ. ನೀವು ನಮ್ಮ ಆಸ್ತಿಯನ್ನು ಹಾಳು ಮಾಡುವಂತಹದ್ದು ಇದು ಎಂತಹ ದುರಂತ ಸ್ವಾಮಿ? ದಯವಿಟ್ಟು, ನೀವು ಅನೇಕ ಬಂದ್‌ಗಳನ್ನು ಇತ್ತೀಚಿನ ದಿನಗಳಲ್ಲಿ ಮಾಡಿದಿರಿ. ನೀವು ಆಲೋಚನೆಯನ್ನು ಮಾಡಿ. ಯಾರಿಗೆ ತೊಂದರೆ ಆಯಿತು? ನಮ್ಮ ರಾಜ್ಯದ ಸಾಮಾನ್ಯ ಜನರಿಗೆ ತೊಂದರೆ ಆಗಿದ್ದು ಬಿಟ್ಟರೆ ಅಲ್ಲಿ ಬಂದು ಹೋದವರಿಗೆ ಏನೂ ತೊಂದರೆ ಆಗಲಿಲ್ಲ. ನಾನು ಮಾನ್ಯ ವಾಟಾಳ್ ನಾಗರಾಜ್ ಅವರ ಮಾತನ್ನು ಒಪ್ಪುತ್ತೇನೆ. ನಾನೂ ಸಹ ತಂದೆ ತಾಯಿಗಳ ಕಾಲಿಗೆ ಬಿಟ್ಟು ಬೇರೆಯವರ ಕಾಲಿಗೆ ಬೀಳುವುದಿಲ್ಲ. ಆದರೆ ಸ್ವಲ್ಪ ಬದಲಾವಣೆ ಇದೆ. ನಾನು ಎಲ್ಲಾ ಜಾತಿಗಳ, ಎಲ್ಲಾ ಧರ್ಮಗಳ ಸಭೆ ಕರೆದಾಗಲೂ ಹೋಗಿದ್ದೇನೆ. ಹೋಗಿಲ್ಲವೆಂದು ಹೇಳುವುದಿಲ್ಲ. ಎಲ್ಲಾ ಧರ್ಮಗಳ ಸಭೆಗೆ ಹೋಗಿದ್ದೇನೆ. ಆದರೆ ನಿಮ್ಮ ಪಕ್ಷದವರೇ ಬಂದಿದ್ದರು. ಮುಸ್ಲಿಮ್ಸ್ ಕಾರ್ಯಕ್ರಮಕ್ಕೆ ಬಂದಿದ್ದರು. ಕ್ರಿಶ್ಚಿಯನ್ಸ್ ಕಾರ್ಯಕ್ರಮಕ್ಕೆ ಬಂದಿದ್ದರು. ಈಗೆಲ್ಲಾ ಬಂದು ಕುಳಿತುಕೊಳ್ಳುತ್ತಾರೆ. ಮಾನ್ಯ ಸಾಂಗ್ಲಿಯಾನಾ ಅವರ ಹೇಳಿಕೆ ಇದೆ. ನೀವು ಅವರನ್ನು ಪಕ್ಷದಿಂದ ಹೊರಗೆ ಹಾಕುತ್ತೀರಾ? ಫಸ್ಟ್ ಅವರನ್ನು ಹೊರಗೆ ಹಾಕಿ ನೀವು ಚರ್ಚೆ ಮಾಡಿ.

ಶ್ರೀ ಜಿ. ಶಿವಣ್ಣ : ನೀವು ಆ ಬಗ್ಗೆ ಹೇಳಬೇಕಾದ ಅವಶ್ಯಕತೆ ಇಲ್ಲ. ಉಪದೇಶ ಬೇಡ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನೀವೂ ಸಹ ನಮಗೆ ಉಪದೇಶ ಹೇಳುವ ಅಗತ್ಯವೂ ಇಲ್ಲ.

ಗೊಂದಲ

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಹಿಂದೂ ಧರ್ಮದ ಬಗ್ಗೆ ನೀವು ನನಗೆ ಹೇಳಬೇಕಾಗಿಲ್ಲ. ನಾನು ಒಬ್ಬ ಹಿಂದು. ನೀವು ಸಾಂಗ್ಲಿಯಾನ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಲು ಆಗದಿದ್ದರೆ ರಾಜ್ಯದ ಬಗ್ಗೆ ಏನು ಮಾತನಾಡುತ್ತೀರಿ?

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ನೀವು ಮಾತನಾಡಿ. ನೀವು ಮಾತನಾಡ ಬೇಡಿ ಎಂದು ಹೇಳಲಿಲ್ಲ. ಆದರೆ ನೀವು ನಮಗೆ ಉಪದೇಶ ಮಾಡಬೇಡಿ.

ಗೊಂದಲ

ಅಧ್ಯಕ್ಷರು : ಅವರಿಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಿಮಗೆ ಮಾತನಾಡಲು ಅವಕಾಶವನ್ನು ಮಾನ್ಯ ಅಧ್ಯಕ್ಷರು ಕೊಡುತ್ತಾರೆ. ಮಾತನಾಡಿ.

ಶ್ರೀ ಜಿ. ಶಿವಣ್ಣ : ಇವರು ಉಪದೇಶ ಮಾಡುವ ಅಗತ್ಯ ಇಲ್ಲ.

ಅಧ್ಯಕ್ಷರು : ಆಯಿತು, ತಾವು ಕುಳಿತುಕೊಳ್ಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈಗ ನೀವು ಮಾನ್ಯ ಮುಖ್ಯಮಂತ್ರಿಗಳಿಂದ ರಾಜೀನಾಮೆ ಕೇಳುವುದಕ್ಕೆ ಪ್ರಥಮವಾಗಿ ಸಾಂಗ್ಲಿಯಾನ ಅವರ ರಾಜೀನಾಮೆಯನ್ನು ಕೇಳಿ. ಆಮೇಲೆ ಮಾನ್ಯ ಮುಖ್ಯಮಂತ್ರಿಗಳ ರಾಜೀನಾಮೆಯನ್ನು ಕೇಳಿ. ಅದಕ್ಕೆ ನಾನು ಒಪ್ಪುತ್ತೇನೆ. ಅದಕ್ಕೆ ಮಾನ್ಯ ಯಡಿಯೂರಪ್ಪನವರು ಒಪ್ಪುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ ನಾವೇನಾದರೂ ಉಪದೇಶವನ್ನು ಮಾಡುವಾಗ ನಾವು ಮೊದಲು ಪ್ರಾಕ್ಟೀಸ್ ಮಾಡಬೇಕು. ಆಮೇಲೆ ಪ್ರೀಚ್ ಮಾಡಬೇಕು. ಪ್ರೀಚ್ ಮಾಡುವುದು ಒಂದು ಪ್ರಾಕ್ಟೀಸ್ ಮಾಡುವುದು ಒಂದು ಆಗಬಾರದು. ಅದಕ್ಕೆ ನಮ್ಮ ಸ್ನೇಹಿತರು ಹೇಳಿದ ಹಾಗೆ ಸದನದ ಸಮಯವನ್ನು ಬೆನ್ನಿಹಿನ್ ಬಗ್ಗೆ ಚರ್ಚೆ ಮಾಡಿದ್ದೇ ತಪ್ಪು. ಇಲ್ಲಿ ಚರ್ಚೆಗೆ ಬರಬಾರದಿತ್ತು. ಬೆನ್ನಿಹಿನ್ ಅವರು ದೆಹಲಿಗೆ ಬಂದಾಗಲೂ ಅನೇಕ ಮುಖಂಡರು ಹೋಗಿದ್ದರು ಎಂದು ನಾನು ಕೇಳಿದ್ದೇನೆ. ಹೈದರಾಬಾದ್‌ಗೆ ಬಂದಾಗಲೂ ಹೋಗಬಹುದು. ಎಲ್ಲಾ ಪಕ್ಷದವರೂ ಹೋಗುತ್ತಾರೆಂದು ಕಾಣುತ್ತದೆ. ಆದರೆ ಮಹಾರಾಷ್ಟ್ರದಲ್ಲಿ ಅನೇಕ ಮುಖಂಡರು ಹೋಗಿದ್ದರು ಎಂದು ನಾನು ಕೇಳಿದ್ದೇನೆ. ಅದರ ಬಗ್ಗೆ ನಾನು ಹೆಸರು ತೆಗೆಯುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಬಾಳ ಠಾಕ್ರೆ ಅವರು ಅಟೆಂಡ್ ಆಗಿದ್ದರು.

ಅಧ್ಯಕ್ಷರು : ಗಲಾಟೆ ಬೇಡ. ಅವರು ಮಾತನಾಡಲಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾನೊಬ್ಬ ಹಿಂದೂ. ನನ್ನನ್ನು ಕನ್‌ವರ್ಟ್ ಮಾಡಲಿಕ್ಕೆ ಯಾರಹತ್ತಿರವೂ ಸಾಧ್ಯ ಆಗುವುದಿಲ್ಲ. ಹಿಂದೂಗಳು ಯಾರು ಹಿಂದುಗಳು ಆಗಿಯೇ ಉಳಿಯಬೇಕೆಂದು ಇದ್ದಾರೋ ಅವರು ಹಿಂದುಗಳಾಗಿಯೇ ಉಳಿಯುತ್ತಾರೆ. ಅವರನ್ನು ಪರಿವರ್ತನೆ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಸ್ವಾಮೀಜಿಗಳು ವಿದೇಶಕ್ಕೆ ಹೋಗಿದ್ದಾರೆ. ಅಲ್ಲಿ ಅವಕಾಶ ಇತ್ತು. ಅದೇ ರೀತಿ ಅವರು ಬಂದಿದ್ದಾರೆ. ನಿಮಗೆ ಇಷ್ಟ ಇದ್ದರೆ ಹೋಗಿ, ಇಲ್ಲದಿದ್ದರೆ ಬಿಡಿ. ಮಾನ್ಯ

ಸಿದ್ದರಾಮಯ್ಯನವರು ಅದರ ಬಗ್ಗೆ ಏನಾದರೂ ಚರ್ಚೆ ಮಾಡಿದ್ದಾರಾ? ಅವರು ಹೋಗಲಿಲ್ಲ, ಚರ್ಚೆ ಮಾಡಲಿಲ್ಲ. ನಾನೂ ಹೋಗಲಿಲ್ಲ. ಟಿವಿಯಲ್ಲೂ ನೋಡಲಿಕ್ಕೆ ಹೋಗಲಿಲ್ಲ.

ಶ್ರೀ ಎಸ್. ರಾಜೇಂದ್ರನ್ : ನೆಕ್ಸ್ಟ್ ಟೈಮ್ ಏನಾದರೂ ಹೋಗುತ್ತೀರಾ ಸಾರ್.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಹೋಗುವುದಿಲ್ಲ. ನಾವು ಅದನ್ನು ಅರ್ಥ ಮಾಡಿಕೊಂಡರೆ ಇನ್ನು ಮುಂದಿನ ದಿನಗಳಲ್ಲಿ ಅಂತಹವರು ಬಂದಾಗ ನಮ್ಮ ಸರ್ಕಾರಿ ಮೆಷಿನರಿಯನ್ನು ಯೂಸ್ ಮಾಡುವಂಥದ್ದು ತಪ್ಪು. ಇಂತಹ ಸ್ಥಳಗಳನ್ನು ಕೊಡುವಂಥದ್ದು ತಪ್ಪು. ಆದರೆ ಇದರ ಬಗ್ಗೆ ಹೆಚ್ಚು ಚರ್ಚೆ ಮಾಡಿ ಅವರಿಗೇ ಪ್ರಚಾರ ಕೊಡುವಂಥದ್ದು ಮೂರ್ಖತನ ತಪ್ಪು ಎಂದು ಹೇಳುತ್ತಾ ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಸಭಾ ನಾಯಕರು ಮಾತನಾಡುತ್ತಾರೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಟಿ. ರವಿ : ಒಂದು ನಿಮಿಷ ಮಾತನಾಡಲು ಅವಕಾಶ ಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಕ್ರಿಶ್ಚಿಯನ್ ವರ್ಗದ ಕ್ಯಾಥಲಿಕ್ ಸೊಸೈಟಿಯವರಿಂದ ಹೇಳಿಕೆ ಬಂದಿದೆ.

ಅಧ್ಯಕ್ಷರು : ದಯಮಾಡಿ. ಎಲ್ಲವನ್ನೂ ಹೇಳಿದ್ದಾರೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಮಾಧುಸ್ವಾಮಿ ಅವರು, ಮಾನ್ಯ ವಾಟಾಳ್ ನಾಗರಾಜ್ ಅವರು....

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕ್ಯಾಥಲಿಕ್ ಸೊಸೈಟಿಯವರು ಈ ಬೆನ್ನಿಹಿನ್ ಕಾರ್ಯಕ್ರಮಕ್ಕೆ ವಿರೋಧ ಮಾಡಿದ್ದಾರೆ, ಅವರು ವಿರೋಧ ಮಾಡುತ್ತಿರುವುದಕ್ಕೆ ಪ್ರಮುಖವಾದ ಅಂಶಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ಎಲ್ಲಾ ಮಾತನಾಡಿದ್ದಾರೆ. ತಾವು ಕುಳಿತುಕೊಳ್ಳಿ. ಎಲ್ಲಾ ನಾಯಕರೂ ಮಾತನಾಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈ ವಿಷಯದ ಬಗ್ಗೆ ಎರಡೆರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಧರ್ಮಸಿಂಗ್ : ಮಾನ್ಯ ವಾಟಾಳ್ ನಾಗರಾಜ್ ಅವರು, ಇತ್ಯಾದಿ ಎಲ್ಲರೂ ಮಾತನಾಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮುಖ್ಯಮಂತ್ರಿಗಳು ಏಕೆ ರಾಜೀನಾಮೆ ಕೊಡಲೇಬೇಕಾದಂತಹ ಪರಿಸ್ಥಿತಿ ಏಕೆ ಇದೆ ಎಂಬುದನ್ನು ಹೇಳುತ್ತೇವೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

ಗೊಂದಲ

ಅಧ್ಯಕ್ಷರು : ಇಲ್ಲಿ ಎಲ್ಲಾ ಮುಖಂಡರೂ ಮಾತನಾಡಿದ್ದಾರೆ. ಮಾನ್ಯ ಸಭಾ ನಾಯಕರು ಮಾತನಾಡಿದ್ದಾರೆ.

ಶ್ರೀ ಧರ್ಮಸಿಂಗ್ : ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದಂತಹ ವಿಷಯಕ್ಕೆ ವಿಶೇಷವಾದಂತಹ ವಿಷಯ ಇದೆ ಎಂದು ಹೇಳಿ ಎಲ್ಲರಿಗೂ ಕೂಡ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡತಕ್ಕಂಥ ಕಾಲದಲ್ಲಿ....

ಶ್ರೀ ಸಿ.ಟಿ. ರವಿ : ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್ : ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡತಕ್ಕಂಥ ಕಾಲದಲ್ಲಿ ಬಹಳಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಭಾ ನಾಯಕರು ಮಾತನಾಡುತ್ತಿದ್ದಾಗ ಎಲ್ಲರೂ ಸಹಕಾರ ಮಾಡಬೇಕು. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಟಿ. ರವಿ : ಒಂದು ನಿಮಿಷ ಅವಕಾಶ ಮಾಡಿಕೊಡಿ.

ಗೊಂದಲ

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಟಿ. ರವಿ : ದಯಮಾಡಿ ಒಂದು ನಿಮಿಷ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ನಿಮ್ಮ ನಾಯಕರು ಮಾತನಾಡಿದ್ದಾರೆ.

ಶ್ರೀ ಧರ್ಮಸಿಂಗ್ : ಇದು ನಿಲುವಳಿ ಸೂಚನೆ ಅಲ್ಲ.

ಅಧ್ಯಕ್ಷರು : ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ನಾವು ಸಹ ಸಿಗ್ನೇಟರಿ ಇದ್ದೇವೆ.

ಶ್ರೀ ಧರ್ಮಸಿಂಗ್ : ಮಾನ್ಯ ಜ್ಞಾನೇಂದ್ರ ಅವರೇ, ಜೀರೋ ಅವರ್‌ನಲ್ಲಿ ಪ್ರಸ್ತಾಪ ಮಾಡಿದಂತಹ ವಿಷಯಕ್ಕೆ ಸಮಗ್ರವಾದಂತಹ ಚರ್ಚೆ ಆಗಿದೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಧರ್ಮಸಿಂಗ್ : ನಿಲುವಳಿ ಸೂಚನೆ ಮೇಲೆ ಚರ್ಚೆ ಮಾಡಲು ಒಂದು ದಿವಸ ಕಾಲ ನಿಗದಿ ಮಾಡಿ, ನಮಗೆ ಅಭ್ಯಂತರ ಇಲ್ಲ. ನಾನು ಕರ್ನಾಟಕ ರಾಜ್ಯದಲ್ಲಿ ಮುಖ್ಯಮಂತ್ರಿ ಆಗಿ ಆಡಳಿತ ನಡೆಸುತ್ತಿದ್ದೇನೆ. ಅಲ್ಲಿರತಕ್ಕ ಕೆಲವು ವ್ಯವಸ್ಥಾಪಕರು ಬಂದರು. ಬೆನ್ನಿಹಿನ್ ಬರುತ್ತಿದ್ದಾರೆ. ಇವತ್ತು ದೇಶದಲ್ಲಿ ಮೊಟ್ಟಮೊದಲನೆಯದಾಗಿ ಬೆನ್ನಿಹಿನ್ ಬಂದಿಲ್ಲ. ಎನ್‌ಡಿಎ ಸರ್ಕಾರ ಇದ್ದಾಗ ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನ ಮಂತ್ರಿ ಆಗಿದ್ದಾಗ, ಮಾನ್ಯ ಎಲ್.ಕೆ. ಅಡ್ವಾನಿ ಅವರು ಗೃಹ ಸಚಿವರಾಗಿದ್ದಾಗ, ಬೆನ್ನಿಹಿನ್ ಬಾಂಬೆಗೆ ಬಂದರು. ಬಾಳಾ ಠಾಕ್ರೆ ಕೂಡ ಅಲ್ಲಿಹೋಗಿದ್ದರು. ಇವತ್ತು ಎಲ್ಲಾ ಧರ್ಮಗಳಿಗೆ ours is a secular state. ಏಕೆ ನಾವು ಒಂದಾಗಿದ್ದೇವೆ? ಕಾಂಗ್ರೆಸ್ ಮತ್ತು ಜನತಾ ದಳ ಎಲ್ಲಾ ಏಕೆ ಒಂದಾಗಿದ್ದೇವೆ ಎಂದರೆ ನೀವು ಇಲ್ಲಿಗೆ ಬರಬಾರದು ಎಂದು ಒಂದಾಗಿದ್ದೇವೆ. ಅವಕಾಶ ಇಲ್ಲ. ಆದರೆ ವಿರೋಧ ಪಕ್ಷದ ನಾಯಕರಿಗೆ ಏನು ಹೇಳುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ನಿಮ್ಮಲ್ಲಿ ಒಬ್ಬರಿಗೊಬ್ಬರಿಗೂ ಹೊಂದಾಣಿಕೆ ಇಲ್ಲ.

ಶ್ರೀ ಧರ್ಮಸಿಂಗ್ : ಅದು ಬಿಡಿ.

ಅಧ್ಯಕ್ಷರು : ಮಾನ್ಯ ಸಭಾ ನಾಯಕರು ಮಾತನಾಡುವಾಗ ಇಡೀ ಸದನ ಕೇಳಬೇಕು. ಇಂತಹ ಸಾಮಾನ್ಯ ವಿಚಾರವೂ ತಮಗೆ ಗೊತ್ತಿಲ್ಲ ಎಂದರೆ ನಾವೇನು ಮಾಡುವುದು?

ಶ್ರೀ ಧರ್ಮಸಿಂಗ್ : ಬಹಳಷ್ಟು ಸಲ ಆವೇಶದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ನನ್ನ ರಾಜೀನಾಮೆ ಕೇಳಿದ್ದಾರೆ. ಈಗಾಗಲೇ ಮಾನ್ಯ ರಾಜೇಂದ್ರನ್ ಅವರು, ಮಾನ್ಯ ವಾಟಾಳ್ ನಾಗರಾಜ್ ಅವರುಗಳು ಮಾತನಾಡಿದ್ದಾರೆ. ನಾವು ರಾಜೀನಾಮೆ ಕೊಡಲಿಕ್ಕೆ ಬಂದಿಲ್ಲ, ಸರ್ಕಾರವನ್ನು

ನಡೆಸಲಿಕ್ಕೆ ಬಂದಿದ್ದೇವೆ. ನನ್ನ ರಾಜೀನಾಮೆ ಕೇಳಬೇಕಾದರೆ ಮೊದಲು ನೀವು ರಾಜೀನಾಮೆ ಕೊಡಬೇಕು ನೀವು ವಿರೋಧ ಪಕ್ಷದ ನಾಯಕರಲ್ಲ. ಕರ್ನಾಟಕದ ಐದು ಕೋಟಿ 45 ಲಕ್ಷ ಜನರ ವಿರೋಧ ಪಕ್ಷದ ನಾಯಕರು. ಇವತ್ತು ನಾನು ಏಕೆ ಹೇಳಿದ್ದೇನೆ? ಇಶ್ಯೂಗೆ ಇಶ್ಯೂ ಮಾಡತಕ್ಕ ರೀತಿಯಲ್ಲಿ ಈಗಾಗಲೇ ರಾಷ್ಟ್ರ ಮಟ್ಟದಲ್ಲಿ ತಾವು ಹತಾಶರಾಗಿದ್ದೀರಿ. ಸಾಕಷ್ಟು ಜನ ಪಾಠವನ್ನು ಕಲಿಸಿದ್ದಾರೆ. ಪ್ರತಿಯೊಂದು ವಿಷಯದಲ್ಲೂ ಕೂಡ ಈಗಾಗಲೇ ಮಾನ್ಯ ರಮೇಶ್ ಕುಮಾರ್ ಅವರು ಹೇಳಿದ ಹಾಗೆ ಶ್ರೀಮತಿ ಸೋನಿಯಾ ಗಾಂಧಿ ಅವರು ಯುಪಿಎ ಸರ್ಕಾರದ ಅಧ್ಯಕ್ಷಿಣಿ ಆಗಿದ್ದಾರೆ. ಕಾಂಗ್ರೆಸ್ ಪಕ್ಷದ ಅಧ್ಯಕ್ಷಿಣಿ ಆಗಿದ್ದಾರೆ. ವಿರೋಧ ಪಕ್ಷದ ನಾಯಕಿಯಾಗಿ ಅಟಲ್ ಬಿಹಾರಿ ವಾಜಪೇಯಿ ಅವರು ಮಾನ್ಯ ಪ್ರಧಾನ ಮಂತ್ರಿ ಆಗಿದ್ದಾಗ ಅವರ ಎದುರುಗಡೆ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ದೇಶಕ್ಕೆ ಸ್ಯಾಕ್ರಿಫೈಸ್ ಮಾಡಿದ್ದಾರೆ. ಶ್ರೀಮತಿ ಇಂದಿರಾ ಗಾಂಧಿಯವರನ್ನು 32 ಗುಂಟೇಟಿನಿಂದ ಯಾವ ರೀತಿಯಾಗಿ ಪ್ರತಿಕ್ರಿಯವಾದಿ ಶಕ್ತಿಗಳು ಕೊಂದು ಹಾಕಿದರು? ಈ ದೇಶದ ಇತಿಹಾಸದಲ್ಲಿ ರಾಜ್ಯದ ಯುವ ಪ್ರಧಾನಿಯಾಗಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು: ಯಾವ ರೀತಿಯಲ್ಲಿ ಅವರಹತ್ಯೆ ಆಯಿತು. ಎಂಬುದೆಲ್ಲವನ್ನೂ ಕೂಡ ಜನತೆ ತಮ್ಮ ಕಣ್ಣಿನಲ್ಲಿ ನೋಡಿದ್ದಾರೆ. "ಈ ಸಲ ಬರುವುದಿಲ್ಲ ಮತ್ತೆ ಎನ್‌ಡಿಎ ಬರುತ್ತದೆ" ಎಂದು ಹೋದ ಸಲ ಲೆಕ್ಕ ಹಾಕಿದರು. ಎಲೆಕ್ಟಾನಿಕ್ ಮೀಡಿಯಾದವರೂ ಹೇಳಿದರು. ಆದರೆ, ಇವೊತ್ತು ಏನಾಯಿತು? ಜನರು ಪಾಠ ಕಲಿಸಿದರು! ಅವರ ಪಕ್ಷದವರು ಪ್ರಧಾನಮಂತ್ರಿಯಾಗಲಿಲ್ಲ. "ವಿದೇಶಿ ಮೂಲ"ವೆಂದು ಪ್ರಸ್ತಾಪಿಸಿದಿರಿ. ಇಂತಹ ವಾದಗಳನ್ನೆಲ್ಲಾ ಎಲ್ಲಿಯವರೆಗೆ ತೆಗೆದುಕೊಂಡು ಹೋಗುತ್ತೀರಿ? ರಾಷ್ಟ್ರದಲ್ಲಿ ಮತ್ತು ರಾಜ್ಯಗಳಲ್ಲಿ ದಿನನಿತ್ಯ ಜೀವನಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸಮಸ್ಯೆಗಳಿವೆ. ಇವುಗಳ ಬಗ್ಗೆ ನೇರವಾಗಿ ಮಾತನಾಡಿ. ಈ ಹಿಂದೆ ಆರ್ .ಎಸ್.ಎಸ್.ನ ಸುದರ್ಶನ್‌ರವರು ಬಂದಿದ್ದಾಗ ಬೆಂಗಳೂರಿನ ಹೊರವಲಯದಲ್ಲಿ ಆರ್‌ಎಸ್‌ಎಸ್ ಸಮಾವೇಶ ನಡೆಸಲು ಅವಕಾಶ ಮಾಡಿಕೊಟ್ಟಿದ್ದೇವೆ. ಆರ್‌ಎಸ್‌ಎಸ್ ಕ್ಯಾಂಪ್‌ಗೆ ನಾವು, ನಮ್ಮ ಮೊದಲಿನ ಗೃಹಮಂತ್ರಿಗಳಾಗಿದ್ದ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು, ಜಾಫರ್ ಷರೀಫ್‌ರವರೂ ಕೂಡ ಅಲ್ಲಿಗೆ ಖುದ್ದಾಗಿ ಹೋಗಿ ನೋಡಿಕೊಂಡು ಬಂದಿದ್ದೇವೆ. ಎಲ್ಲಾ ಧರ್ಮದವರಿಗೂ ಅವರವರ ಧರ್ಮಾಚರಣೆ ಕೈಗೊಳ್ಳಲು ಅನುಕೂಲವಾಗುವಂತೆ ಸೂಕ್ತ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿರುವುದರಿಂದ, ಸರ್ಕಾರ ಆ ದಿಸೆಯಲ್ಲಿ ಕಾರ್ಯೋನ್ಮುಖವಾಗುತ್ತದೆ. ಪ್ರಾರ್ಥನಾ ಸಭೆ ಸಂಬಂಧ ಆಯೋಜಕರು ಸುಮಾರು ಹತ್ತು ಲಕ್ಷ ರೂಪಾಯಿಗಳಷ್ಟು ಹಣವನ್ನು ಡಿಪಾಸಿಟ್ ಮಾಡಿದ್ದಾರೆ. ಅವರಿಂದ ಫೀ ತೆಗೆದುಕೊಂಡಿದ್ದೇವೆ. ವಿಶಾಲ ಪ್ರದೇಶದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮಕ್ಕೆ ನಾನು ಹೋಗಿ ಬಂದಿದ್ದೇನೆ. They have invited. ನನಗೆ ಅದರಲ್ಲಿ ನಂಬಿಕೆಯಿಲ್ಲ. ಆದರೂ ಅವರ ಆಹ್ವಾನದ ಮೇರೆಗೆ ನಾವು ಆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೇವೆ. ಹಿಂದೂ ಧರ್ಮಕ್ಕೆ ಈ ರಾಷ್ಟ್ರದಲ್ಲಿ ಒಂದು ಬೃಹತ್ ಪರಂಪರೆ ಇದೆ. ನಾವು ವಿವೇಕನಂದರನ್ನೂ, ಬೆನ್ನಿ ಹಿನ್‌ರನ್ನೂ ಪರಸ್ಪರ ಹೋಲಿಸಲಿಲ್ಲ, ವಿವೇಕಾನಂದರು ಒಂದು ನೂರು ವರ್ಷಗಳ ಹಿಂದೆ ಚಿಕಾಗೋಗೆ ತೆರಳಿ ಅಲ್ಲಿ ಹಿಂದೂ ಧರ್ಮ, ಸಂಸ್ಕೃತಿ, ಪರಂಪರೆಗಳ ಕುರಿತು ಪ್ರಚಾರ ಮಾಡಿದ್ದಾರೆ. ಅದೇ ರೀತಿ ಆಚಾರ್ಯ ರಜನೀಶ್‌ರವರೂ ಲಾಸ್ ಏಂಜಲಿಸ್‌ಗೂ ತೆರಳಿ ಹಿಂದೂ ಧರ್ಮದ ಪ್ರಚಾರ ಕೈಗೊಂಡಿದ್ದಾರೆ. ವಿದೇಶಗಳಿಗೆ ಇಲ್ಲಿಂದ ಎಷ್ಟೋ ಸ್ವಾಮೀಜಿಗಳೂ ಕೂಡ ತೆರಳುತ್ತಾರೆ. ಚೆನ್ಮಯಾನಂದ ಸ್ವಾಮಿಗಳೂ ಹೋಗುತ್ತಾರೆ, ಹಿಂದೂ

ಧರ್ಮದ ಪ್ರಚಾರ ಮಾಡುತ್ತಾರೆ. ಅದಕ್ಕೆ ಅವಕಾಶವಿದೆ. "ಹರೇ ರಾಮ ಹರೇ ಕೃಷ್ಣ" ಪಂಥಕ್ಕೆ ಸೇರಿರುವ ಬಹಳಷ್ಟು ದೇವಾಲಯಗಳು ಎಲ್ಲಾ ಕಡೆಗಳಲ್ಲೂ ಇವೆ. ಇವೊತ್ತು ವಿಶ್ವ ಒಂದಾಗುತ್ತಿರುವ ಸಂದರ್ಭದಲ್ಲಿ ಅಲ್ಲಿನವರು ಇಲ್ಲಿಗೆ ಬರುತ್ತಾರೆ, ಹೋಗುತ್ತಾರೆ ಅದೇ ರೀತಿ ಇಲ್ಲಿನವರು ಅಲ್ಲಿಗೆ ಹೋಗುತ್ತಾರೆ, ಬರುತ್ತಾರೆ. ಇವೆಲ್ಲಾ ನಿಮಗೇಕೆ? ನೀವು ಪ್ರತಿಭಟಿಸಿದಿರಿ. ಮಲ್ಲೇಶ್ವರಂ ಮತ್ತು ಬಸವನಗುಡಿಗಳಲ್ಲಿ ಸಂಚರಿಸುತ್ತಿದ್ದ ಬಸ್ಸುಗಳಿಗೆ ಕಲ್ಲು ಹೊಡೆದಿರಿ. ಅಲ್ಲಿ ಕಲ್ಲು ಹೊಡೆದರೂ ಕೂಡ ನಮ್ಮ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಆರಿಸಿ ಬಂದಿದ್ದಾರೆ. ಬರೀ ಘೋಷಣೆಗಳ ಮೂಲಕ ಜನರನ್ನು, ಪಕ್ಷವನ್ನು ಕಟ್ಟುವುದಕ್ಕಾಗುವುದಿಲ್ಲ, ಇವೊತ್ತು ಅಲ್ಲಿ ಆಯೋಜಿಸಲಾಗಿದ್ದ ಪ್ರಾರ್ಥನಾ ಸಭೆಯ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಸುಮಾರು 1 ಲಕ್ಷ 45 ಸಾವಿರ ರೂಪಾಯಿಗಳಷ್ಟು ಪ್ರವೇಶ ತೆರಿಗೆ ಸಂಗ್ರಹಿಸಿದ್ದೇವೆ. ಇದಕ್ಕೆ ಸಾಕ್ಷಿಯಾಗಿ ನಮ್ಮ ಕಮೀಷನರ್ ಕೂಡ ಇಲ್ಲಿದ್ದಾರೆ. ನಾವು ಏನೂ ಕೂಡ ಕೊಟ್ಟಿಲ್ಲ. ಕಾರ್ಯಕ್ರಮಕ್ಕೆ ಬಂದೋಬಸ್ತ್ ಒದಗಿಸಿದ್ದರಿಂದ ಪೊಲೀಸ್ ಸಿಬ್ಬಂದಿಗೆ ಭತ್ಯೆ ನೀಡಿದ್ದರಿಂದ ಪೊಲೀಸ್ ಇಲಾಖೆಗೆ 46 ಸಾವಿರ ರೂಪಾಯಿಗಳು ಮಾತ್ರ ಖರ್ಚಾಗಿದೆ. ಅಲ್ಲಿ ಆಯೋಜಿಸಲಾಗಿದ್ದ ಧಾರ್ಮಿಕ ಕಾರ್ಯಕ್ರಮದ ಬಗ್ಗೆ ತಮ್ಮ ಆವೇಶಭರಿತ ಭಾಷಣ, ದಿನನಿತ್ಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ರೀತಿಯಲ್ಲಿ ಮಹಾತ್ಮಗಾಂಧಿ ಪ್ರತಿಮೆ ಎದುರು ನಡೆಸುತ್ತಿದ್ದ ಪ್ರತಿಭಟನೆಯಿಂದ ಜನಾಭಿಪ್ರಾಯ ಮೂಡಿಸುವ ರೀತಿಯಲ್ಲಿ ನೀವು ಕಾರ್ಯಕ್ರಮ ಹಮ್ಮಿಕೊಂಡರೂ ನಿಮಗೆ ಜನರ ಬೆಂಬಲ ಸಿಗಲಿಲ್ಲ ಎಲ್ಲರೂ ಬಹಳ ನಿರಾಶರಾಗಿ ಹೋಗಿದ್ದಾರೆ ನೋಡಿದ್ದಾರೆ. ಬಂದಿದ್ದಾರೆ. ಜನರನ್ನು ಮೋಡಿಗೊಳಿಸುವ ಸ್ವಾಮಿಗಳಿದ್ದಾರೆ. ನಾವೇನಾದರೂ ಅವರುಗಳ ಬಗ್ಗೆ ಪ್ರಸ್ತಾಪಿಸುತ್ತೇವೆಯೇ? ಧಾರ್ಮಿಕ ಕಾರ್ಯಕ್ರಮಗಳಿಗೆ ಇವೊತ್ತು ಬಹಳಷ್ಟು ಜನರು ಹೋಗುತ್ತಾರೆ. ಅದರಲ್ಲಿ ನಂಬಿಕೆ ಇಡುವುದು, ಬಿಡುವುದು ಅಲ್ಲಿಗೆ ಹೋದವರಿಗೆ ಸಂಬಂಧಿಸಿರುವಂಥಾದ್ದು ಅದಕ್ಕೂ ಸರ್ಕಾರಕ್ಕೂ ಏನು ಸಂಬಂಧವಿದೆ? ಸುಮಾರು ಮೂರು ದಿವಸಗಳ ಕಾಲ ರಾಜ್ಯದಲ್ಲಿ ಇಂತಹ ಒಂದು controversial ಕಾರ್ಯಕ್ರಮ ಜರುಗಿತು. ಈ ಕಾರ್ಯಕ್ರಮ ಬಹಳ ಸೌಹಾರ್ದಯುತವಾಗಿ, ಸಂಯಮದಿಂದ ಮತ್ತು ಶಾಂತಿಯುತವಾಗಿ ಯಶಸ್ವಿಯಾಗಿ ನೆರವೇರಲು ಕರ್ನಾಟಕ ಸರ್ಕಾರ ಕ್ರಮ ಕೈಗೊಂಡಿದೆ. This is your Government. You are the Leader of the Opposition. ಅಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮ ಅತ್ಯಂತ ಯಶಸ್ವಿಯಿಂದ ನೆರವೇರಲು ಸರ್ಕಾರದ ವತಿಯಿಂದ ನಾವು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದೇವೆ. ಇದರಿಂದ ಮತಾಂತರವಾಗುತ್ತದೆಂದರೆ..... ಮತಾಂತರ ಹೇಗಾಗುತ್ತದೆ? ಈ ದೇಶದಲ್ಲಿ ಹಿಂದೂ ಧರ್ಮಕ್ಕೆ ಬಹಳ ದೊಡ್ಡ ಪರಂಪರೆ ಇರುವುದರಿಂದ ಮತಾಂತರವಾಗುವುದಿಲ್ಲ. ಎಲ್ಲಿ ಮತಾಂತರವಾಯಿತು? ಮಾನ್ಯ ವಿರೋಧ ಪಕ್ಷದ ನಾಯಕರು ಯಾವಾಗಲೂ ವಿನಾಕಾರಣ ನಮ್ಮ ಭಾವನೆಗಳನ್ನು ಕೆರಳಿಸಬಾರದು. ಇವೊತ್ತು ನಮ್ಮ ಕಡೆಯ ಶಾಸಕರೆಲ್ಲರೂ ಸುಮ್ಮನೆ ಕುಳಿತಿದ್ದಾರೆ. ಆದರೆ, ನೀವು ಇಷ್ಟು ಆವೇಶಭರಿತವಾಗಿ ಹೇಳುತ್ತಿದ್ದೀರಿ. ಇದರಿಂದ ನಿಮಗೆ ಯಾರ ಸರ್ಟಿಫಿಕೇಟ್ ಬೇಕಾಗಿದೆಯೋ ಗೊತ್ತಿಲ್ಲ. ನಿಮ್ಮ ತೊಂದರೆ ಏನೆಂಬುದು ನನಗೆ ಗೊತ್ತಿದೆ. ನಮಗೆ ಏನೂ ಬೇಕಾಗಿಲ್ಲ. 'ಸೋನಿಯಾಗಾಂಧಿ ಆದೇಶದ ಮೇರೆಗೆ....', ಎಂದು ಏಕಿಷ್ಟು ಆವೇಶಭರಿತವಾಗಿ ಮಾತನಾಡುತ್ತೀರಿ? Sonia Gandhi is the last person. ಇಲ್ಲಿ ನೀವು ತಪ್ಪು ಮಾಡುತ್ತಿದ್ದೀರಿ. ಇವೊತ್ತು ರಾಷ್ಟ್ರ ರಾಜಕಾರಣದಲ್ಲಿ ಅವರನ್ನು ಯುಪಿಎ ಸರ್ಕಾರದ ಅಧ್ಯಕ್ಷಿಣಿಯೆಂದು ಪಾರ್ಲಿಮೆಂಟರಿ ಪಾರ್ಟಿ

ಚುನಾಯಿಸಿತು. ಅಲ್ಲದೆ, ಅವರು ಕಾಂಗ್ರೆಸ್ ಪಕ್ಷದ ನಾಯಕಿಯಾದರು. Because of this dispute, she refused to take the Prime Ministership. She is the lady. ನೀವು ಈ ತರಹ ಮಾತನಾಡಬಾರದು. ಇದೇ ರೀತಿ ನೀವು ಮಾತನಾಡಿ, ಮಾತನಾಡಿಯೇ ನೀವು ಅಲ್ಲಿಗೆ (ವಿರೋಧ ಪಕ್ಷ) ಹೋಗಿ ಕುಳಿತಿದ್ದೀರಿ. ಜನರು ನಿಮಗೆ ಪಾಠ ಕಲಿಸಿದ್ದಾರೆ. ಮುಂದೆಯೂ ಪಾಠ ಕಲಿಸುತ್ತಾರೆ. ನೀವು issues ಮೇಲೆ ಹೋರಾಡಿ, ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಡಿ. ನಿಮಗೆ ಏನಾಗಿದೆ? ಅಲ್ಲಿನ ಕಾರ್ಯಕ್ರಮದಿಂದ ಯಾವುದೇ ಮತಾಂತರವಾಗಲಿಲ್ಲ. 2006ರಲ್ಲಿ ಅವರು ಹೈದರಾಬಾದಿಗೂ ಕೂಡ ಬರುತ್ತಿದ್ದಾರೆ. ನಿಮ್ಮದೇ ಸರ್ಕಾರವಿದ್ದಾಗ, ನಿಮ್ಮದೇ ಪಕ್ಷದ ಪ್ರಧಾನಮಂತ್ರಿ ಮತ್ತು ಡೆಪ್ಯುಟಿ ಚೀಫ್ ಮಿನಿಸ್ಟರ್ ಇದ್ದಾಗ, ಬಾಳಾಕ್ರೆಯವರು ಇಂತಹ ಕಾರ್ಯಕ್ರಮಗಳಿಗೆ ಅಟೆಂಡ್ ಆಗುತ್ತಾರೆ. ಆಗ ನಿಮಗೇನೂ ನೋವಾಗುವುದಿಲ್ಲ? ಕುಡಿಯುವ ನೀರಿನ ಸಮಸ್ಯೆ ಕುರಿತು ಚರ್ಚಿಸಲು ಸದನದಲ್ಲಿ ನಿನ್ನೆ ನಿಲುವಳಿ ಸೂಚನೆ ಮಂಡಿಸಿದಿರಿ. ಇದರ ಬಗ್ಗೆ ಮಾತನಾಡಿ. ಆದರೆ, ಧಾರ್ಮಿಕ ಕಾರ್ಯಕ್ರಮಗಳಂತಹ ವಿಚಾರಗಳನ್ನು ಪ್ರಸ್ತಾಪಿಸುವುದನ್ನು ಇಲ್ಲಿಗೇ ಬಿಟ್ಟುಬಿಡಿ. ಇನ್ನು ರಾಜೀನಾಮೆ ಪ್ರಶ್ನೆ. ನನ್ನ ರಾಜೀನಾಮೆಗೂ ಅದಕ್ಕೂ ಏನೂ ಸಂಬಂಧವಿಲ್ಲ. ಈ ರಾಜ್ಯದ ಮುಖ್ಯಮಂತ್ರಿಯಾಗಿ ನಾನು ಹೇಳುವುದೇನೆಂದರೆ, ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಇದೆ. ಇಂತಹ ಒಂದು ಸಮಾವೇಶವನ್ನು ಬಹಳ ವ್ಯವಸ್ಥಿತವಾದ ರೀತಿಯಲ್ಲಿ ಕಾನೂನಿಗೆ ಯಾವುದೇ ರೀತಿಯಲ್ಲೂ ಧಕ್ಕೆಯಾಗದಂತೆ ಯಶಸ್ವಿಯಾಗಿ ನಾವು ನಡೆಸಿಕೊಂಡು ಹೋಗಿದ್ದೇವೆ. ಕಾರ್ಯಕ್ರಮ ಮೊಟ್ಟಮೊದಲಿಗೆ ರಾಷ್ಟ್ರಗೀತೆಯೊಂದಿಗೆ ಪ್ರಾರಂಭವಾದರೆ, ಸಮಾರೋಪ ಕಾರ್ಯಕ್ರಮದಲ್ಲಿ ತಿರಂಗ ಧ್ವಜವನ್ನು ಎತ್ತಿಹಿಡಿದಿದ್ದಾರೆ. ಆದರೆ, ಸಮಾರಂಭದ ಒಳಗೆ ಅವರು ಏನು ಮಾಡುತ್ತಾರೆಂಬುದು ನಮಗೇನು ಗೊತ್ತು? ಅದಕ್ಕೂ ನಮಗೂ ಸಂಬಂಧವಿಲ್ಲ ಕಾರ್ಯಕ್ರಮದಲ್ಲಿ ಭಾಗವಹಿಸಿದವರೊಬ್ಬರು ಸತ್ತುಹೋದ ಪ್ರಕರಣ ಕುರಿತು ಯಲಹಂಕ ಪೊಲೀಸ್ ಠಾಣೆಯಲ್ಲಿ ವರದಿ ಸಲ್ಲಿಸಿದ್ದೀರಿ. ಈ ಕುರಿತಂತೆ ಬಹಳಷ್ಟು ವಿವರವಾದ ಮಾಹಿತಿಗಳಿವೆ. ಅವೆಲ್ಲದರ ಬಗ್ಗೆ ತಮಗೆ ಮಾಹಿತಿ ಕೊಡುವುದೇನೂ ಇಲ್ಲ. ಆದರೆ, ಗಲಭೆ ಮಾಡುವ ಮುಖಾಂತರ ಸುಮಾರು ಮುನ್ನೂರು ಬಸ್ಸುಗಳಿಗೆ ಕಲ್ಲು ತೂರಿ ಹೊಡೆಯಲು ಹತ್ತು ಜನರು ಸಾಕು. ಪ್ರತಿಭಟನೆ ಎಲ್ಲಿ ನಡೆದಿದೆ? ಕರ್ನಾಟಕ ರಾಜ್ಯದಲ್ಲಿ ಬಹಳಷ್ಟು ಜನಸಂಖ್ಯೆ ಇರುವ ಬೆಂಗಳೂರು ನಗರದಲ್ಲೇ ಜನರಿಂದ ಯಾವುದೇ ಪ್ರತಿಭಟನೆಯಿಲ್ಲ. ನಿಮ್ಮ ಬಾಯಿಂದ ಮಾತ್ರ ಪ್ರತಿಭಟನೆ. ನಿಮ್ಮ ಹೇಳಿಕೆಗಳಿಂದ ಪ್ರತಿಭಟನೆ, ಪತ್ರಕರ್ತರ ಸಮ್ಮುಖದಲ್ಲಿ ಹೇಳಿಕೆಗಳನ್ನು ನೀಡುವ ಮೂಲಕ ಜನಾಭಿಪ್ರಾಯ ಮೂಡಿಸುವುದಕ್ಕಾಗುವುದಿಲ್ಲ. ಜನರು ನಿಮ್ಮ ಹಿಂದೆ ಬರುವುದಿಲ್ಲ. ಈ ವಿಷಯವನ್ನು politicalise ಮಾಡುವ ಕೆಲಸ ಮಾಡಬಾರದು. ಇವೊತ್ತು ಕರ್ನಾಟಕದಲ್ಲಿ ಬೆನ್ನಿಹಿನ್ ಕಾರ್ಯಕ್ರಮ ಯಶಸ್ವಿಯಾಗಿ ಜರುಗಲು ಸರ್ಕಾರ ವ್ಯವಸ್ಥಿತ ರೀತಿಯಲ್ಲಿ ಕ್ರಮ ಕೈಗೊಂಡಿದೆ. ಇವರ ಕಾರ್ಯಕ್ರಮದಿಂದಾಗಿ ಹಿಂದೂಗಳ ಮೇಲೆ ಯಾವುದೇ ತರಹದ ಪ್ರಭಾವವಾಗಲಿ, ಬೇರೆ ರೀತಿ ಮತಾಂತರವಾಗತಕ್ಕಂಥದ್ದು ನಡೆದಿಲ್ಲವೆಂದು ನಾನು ಘಂಟಾಘೋಷವಾಗಿ ಮಾನ್ಯ ಅಧ್ಯಕ್ಷರ ಮೂಖಾಂತರ ತಮಗೆ ಹೇಳಬಯಸುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ಮೌಢ್ಯತೆಗೆ.....

(ಈ ಹಂತದಲ್ಲಿ ಆಡಳಿತ ಪಕ್ಷದ ಕೆಲವು ಮಾನ್ಯ ಸದಸ್ಯರು ಎದ್ದು ನಿಂತರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾಗ ನಾವು ಮೌನವಾಗಿದ್ದೆವು. ಅವರು ಮಾತನಾಡುವಾಗ ನಾವ್ಯಾರೂ ಕೂಡ ಮಧ್ಯೆ ಎದ್ದು ನಿಂತುಕೊಳ್ಳಲಿಲ್ಲ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲು ಎದ್ದು ನಿಂತಾಗ ಕೇಳುವ ಮನೋಭಾವ ಬೆಳೆಸಿಕೊಳ್ಳಿರಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ತಮ್ಮ ನಿಲುವೇನು, ತಮ್ಮ ಸರ್ಕಾರದ ಉದ್ದೇಶವೇನೆಂದು ತಿಳಿಸಿದರು. ಭಾರತೀಯ ಜನತಾ ಪಕ್ಷದ ವತಿಯಿಂದ ಸುಮಾರು 79 ಶಾಸಕರುಗಳನ್ನು ಜನರು ವಿಧಾನಸಭೆಗೆ ಆಯ್ಕೆ ಮಾಡಿ ಕಳುಹಿಸಿದ್ದಾರೆ. ನಾವು ಏನು ಕಂಡೆವೆಂದರೆ, ಆ ಮೌಢ್ಯತೆಯ ಕಾರ್ಯಕ್ರಮದ ಮೂಲಕ ಬಡವರನ್ನು ಆಕರ್ಷಿಸುವ ಮೂಲಕ ಮತಾಂತರಕ್ಕೆ ಅವಕಾಶವಾಗಬಾರದು. "ನೀವು ಲಕ್ಷಾಧೀಶರಾಗುತ್ತೀರಿ" ಎಂಬ ಮೋಸದ ಜಾಲಕ್ಕೆ ನಮ್ಮ ಕಡು ಬಡವರು ಬಲಿಯಾಗಬಾರದು. ಆ ಕಾರ್ಯಕ್ರಮಕ್ಕೆ ಬಂದಂತಹ ಸಾವಿರಾರು ಜನರು ಕೈಕಾಲು ಇಲ್ಲದವರು ಶಾಪ ಹಾಕಿ ತೆರಳಿದ್ದಾರೆ. ಅಲ್ಲಿನ ಕಾರ್ಯಕ್ರಮದ ವೇದಿಕೆ ಮೇಲಿದ್ದವರ ಕೈ ಮುಟ್ಟಿ, ತಲೆ ಮುಟ್ಟುವ ಮುಖಾಂತರ 'ನಮಗೆ ಹುಷಾರಾಯಿತು. ನಮಗೆ ಕೈ ಬಂತು, ಕಾಲು ಬಂತು' ಎಂದು ಹೇಳಿದವರೆಲ್ಲರೂ ಪೂರ್ವಯೋಜಿತವಾಗಿ ತರಬೇತಿ ಕೈಗೊಂಡೇ ಇದನ್ನು ಮಾಡಿರುವುದು. ಅದಕ್ಕೆ ಸರ್ಕಾರ ಹೋಗಿ ಬಿದ್ದುಕೊಳ್ಳುವಂತಾದ್ದು. ಈ ರೀತಿಯ ಕಾರ್ಯಕ್ರಮದಿಂದ ಬಡವರಿಗೆ ಪ್ರಚೋದನೆ ಕೊಟ್ಟಂತಾಗುತ್ತದೆಂಬುದು ನಮ್ಮ ಉದ್ದೇಶವಾಗಿದೆ. ಇನ್ನು ಎರಡನೆಯದಾಗಿ, ಮುಖ್ಯಮಂತ್ರಿಗಳಾದ ತಾವು ಹೇಳಿದಂತೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾರು ವಿರೋಧ ಪಕ್ಷದಲ್ಲಿರುತ್ತಾರೆ, ಯಾರು ಆಡಳಿತ ಪಕ್ಷದಲ್ಲಿರುತ್ತಾರೆಂಬುದನ್ನು ಮಾಲೀಕರಾಗಿರುವ ಮತದಾರರು ತೀರ್ಮಾನ ಮಾಡುತ್ತಾರೆ. ತಾವು ಇದನ್ನು ನಿರೀಕ್ಷಿಸಿದ್ದಿರಾ? ಇವೊತ್ತು ತಾವು ದಯನೀಯ ಸ್ಥಿತಿಗೆ ಬಂದು ಜೆ.ಡಿ.(ಎಸ್)ನ ಬೆಂಬಲದೊಂದಿಗೆ ರಾಜ್ಯವನ್ನು ಎರಡು ಭಾಗ ಮಾಡಿಕೊಂಡಿದ್ದೀರಿ! 'ನಿಮ್ಮದು ಇದು, ನಮ್ಮದು ಅದು' ಎಂದು; ಈ ಕಚ್ಚಾಟ, ಬಡಿದಾಟಗಳಲ್ಲೇ ನೀವು ತಲ್ಲೀನರಾಗಿದ್ದೀರಿ. ಅಭಿವೃದ್ಧಿ ಕೆಲಸ ಕಾರ್ಯಗಳ ಬಗ್ಗೆ ನಾವು ಹೋರಾಟ ಮಾಡಿಲ್ಲವೇ? ಏನು ಸರಿ ಇದೆ, ಹೇಳಿ? ಈ ರಾಜ್ಯ ಇಬ್ಭಾಗವಾಗಿದೆ. ಮಂತ್ರಿಮಂಡಲದಲ್ಲಿ ಸಾಮರಸ್ಯ ಇಲ್ಲ, ಅಭಿವೃದ್ಧಿ ಕಾರ್ಯಗಳೆಡೆಗೆ ಗಮನಹರಿಸುವುದಕ್ಕಾಗಿಲ್ಲ. ಅತೃಪ್ತ ಶಾಸಕರುಗಳನ್ನು ತೃಪ್ತಿಪಡಿಸುವುದರಲ್ಲೇ ತಲ್ಲೀನರಾಗಿದ್ದೀರಿ. ಇಂತಹ ಪರಿಸ್ಥಿತಿಯಲ್ಲಿ ಜನರು ಮುಂದೆ ಏನು ಮಾಡುತ್ತಾರೆಂದು ಅವರೇ ತೀರ್ಮಾನ ಮಾಡುತ್ತಾರೆ. ಅದರೆ, 'ಜನರ ಸಮಸ್ಯೆಯನ್ನು ತೆಗೆದುಕೊಂಡು ಹೋರಾಟ ಮಾಡಿ' ಎಂದು ನೀವು ಹೇಳಿದಿರಲ್ಲಾ ಭಾರತೀಯ ಜನತಾ ಪಕ್ಷ ಜನರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟ ಮಾಡುತ್ತಿಲ್ಲವೇ? ರೈತರ, ಬಡವರ ಪರ ಹೋರಾಟ ಮಾಡುತ್ತಿಲ್ಲವೇ? ತಾವು ಇವೊತ್ತು ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಜನರಿಗೆ ಅಪಮಾನವೆಸಗಿದ್ದೀರಿ. ನೀವು ಮುಖ್ಯಮಂತ್ರಿಯಾಗಿ ನೀವು ಅಧಿಕಾರದಲ್ಲಿ ಮುಂದುವರೆಯುವಂತಹ ನೈತಿಕ ಹಕ್ಕು ಕಳೆದುಕೊಂಡಿದ್ದೀರಿ. ಇವು ನಮ್ಮ ಆಪಾದನೆಗಳು. "ಬಹುಮತ ಇದೆ, ನಾನು ಮುಖ್ಯಮಂತ್ರಿಯಾಗಿ ಮುಂದುವರೆಯುತ್ತೇನೆ" ಎಂದರೆ ನನ್ನದೇನೂ ಅಭ್ಯಂತರವಿಲ್ಲ 'ರಾಜೀನಾಮೆ ಕೊಡಿ' ಎಂದು ಬಲವಂತವಾಗಿ ಹೇಳುವುದಕ್ಕೆ ನಾನ್ಯಾರು? ಆದರೆ, ವ್ಯವಸ್ಥಿತವಾದ, ಮತಾಂತರದ ಈ ಕುತಂತ್ರಕ್ಕೆ ತಾವು ಬಲಿಯಾದಿರಿ. ಸರ್ಕಾರವೇ ಇದಕ್ಕೆ ಪ್ರೇರಣೆ ಕೊಟ್ಟಿತೆಂಬುದು ನನ್ನ ಆಪಾದನೆ. That's all.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇನು ಕೆಲವು ಪದಗಳನ್ನು ಬಳಕೆ ಮಾಡಿದ್ದಾರೆ. ಅವು not in good taste. ಶ್ರೀಮತಿ ಸೋನಿಯಾಗಾಂಧಿಯವರ ಬಗ್ಗೆ ಏನು ಪದ ಬಳಕೆ ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ. ತಾವೇನು ತೀರ್ಮಾನ ತೆಗೆದುಕೊಳ್ಳುತ್ತೀರಿ ಅದಕ್ಕೆ ನಾನು ಬದ್ಧನಾಗಿದ್ದೇನೆ, ನೀವು ಸುಪ್ರೀಮ್, ಅದರ ಬಗ್ಗೆ ಎರಡು ಮಾತಿಲ್ಲ. ನಿಮ್ಮ ಕೊಠಡಿಗೆ ಹೋಗಿ ಅದನ್ನು ನೋಡಿ ನಾವು ಯಾವ ಕಾಂಟೆಸ್ಟ್‌ನಲ್ಲಿ ಹೇಳಿದ್ದೇವೆ ನೋಡಿ, ಹಿಂದೆ ದಾಖಲೆಗಳು ಇದ್ದಾವೆ, ಅನಂತರ ತಾವು ಏನು ಹೇಳುತ್ತೀರೋ ಅದಕ್ಕೆ ನಾನು ತಲೆಬಾಗುತ್ತೇನೆ. That is all my request. ಅವಸರ ಬೇಡ, ನೀವು ನೋಡಿ ಆಮೇಲೆ ತೀರ್ಮಾನ ತೆಗೆದುಕೊಳ್ಳಿ.

ಅಧ್ಯಕ್ಷರು : good taste ನಲ್ಲಿ ಯಾವ್ಯಾವುದು ಇಲ್ಲ ಅವೆಲ್ಲವನ್ನೂ ಕಡತದಿಂದ ನಾನು ತೆಗೆದುಹಾಕುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಮೌಢ್ಯಗಳ ಬಗ್ಗೆ ಮಾತನಾಡಿದ್ದಾರಲ್ಲಾ, ಈ ರಾಜ್ಯದಲ್ಲಿ ಡಾ. ಹೆಚ್. ನರಸಿಂಹಯ್ಯನವರ ಮುಂದಾಳತ್ವದಲ್ಲಿ ಮೌಢ್ಯಗಳ ವಿರುದ್ಧ ಹೋರಾಟ ಮಾಡಿದಾಗ ಭಾರತೀಯ ಜನತಾ ಪಕ್ಷದವರು ಎಲ್ಲಿ ಹೊಗೀದ್ದರು? ಆವತ್ತು ಆ ಮೌಢ್ಯದ ವಿರುದ್ಧ ಹೋರಾಟ ಮಾಡಿದ್ದರು. ಆದರೆ ಇವತ್ತು ಇವರಿಗೆ ಇದು ಬರುತ್ತದೆ, ಅವತ್ತು ಮೌಢ್ಯಗಳು ಬರಲಿಲ್ಲವೆ? ಮಾತನಾಡುವುದಕ್ಕೂ ಒಂದು ಇತಿಮಿತಿ ಇರಬೇಕು.

(ಆ) ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವ ಬಗ್ಗೆ

ಶ್ರೀ ಜೆ.ಸಿ. ಮಾಧುಸ್ವಾಮಿ: (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಉಪಮುಖ್ಯಮಂತ್ರಿಯವರು ಹೊರಗಡೆ ಮಾತನಾಡುವ ಸಂದರ್ಭದಲ್ಲಿ ಸಹಕಾರಿ ಸಂಘಗಳ ಸಾಲದ ಮೇಲಿರುವ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ವಜಾ ಮಾಡುತ್ತೇವೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಅದನ್ನು ಬಜೆಟ್ ಅಧಿವೇಶನದಲ್ಲಿ ಮಾಡುತ್ತೇವೆಂದು ಮಾತನಾಡಿದ್ದಾರೆ, ಇದುವರೆಗೆ ಸರ್ಕಾರದ ಒಂದು ಸುತ್ತೋಲೆ ಇತ್ತು, ಯಾವುದೇ ಸಹಕಾರಿ ಸಂಘದ ಸಾಲ ಮತ್ತು ಭೂ ಅಭಿವೃದ್ಧಿ ಬ್ಯಾಂಕ್‌ನ ಸಾಲವನ್ನು ವಸೂಲಿ ಮಾಡಬೇಕಾದರೆ ಜಪ್ತಿ ಮಾಡುವುದಾಗಲಿ, ಹರಾಜು ಮಾಡುವುದಾಗಲಿ ನಿಷೇಧವಾಗಿತ್ತು. ಆದರೆ ಈಗ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಒಂದು ಕಾಗದವನ್ನು ಬರೆದು ಸಹಕಾರ ಸಂಘಗಳಿಗೆ ಆ ನಿಬಂದನೆಗಳೇನಿತ್ತು ಅದನ್ನು ವಿತ್‌ಡ್ರಾ ಮಾಡಿಕೊಂಡು ಎಲ್ಲಾ ಪಿಎಲ್‌ಡಿ ಬ್ಯಾಂಕ್‌ನವರು ಹರಾಜಿಗೆ ಇಸ್ತಿಯಾರ್‌ನ್ನು ಇಶ್ಯೂ ಮಾಡಿದ್ದಾರೆ. ಸೋಮವಾರದಿಂದ ಹರಾಜನ್ನು ನಿಗದಿ ಮಾಡಿಕೊಂಡು ಬಂದಿದ್ದಾರೆ. ಒಂದು ಕಡೆ ಬರಗಾಲ ಬಂದು ಜನರು ಬೇಗೆಯಲ್ಲಿದ್ದಾರೆ, ಇನ್ನೊಂದು ಕಡೆ ಮುಂದಿನ ಅಧಿವೇಶನದಲ್ಲಿ ಇದನ್ನು ಪರಿಶೀಲನೆ ಮಾಡುತ್ತೇನೆಂಬ ತಮ್ಮ ಹೇಳಿಕೆ ಇದೆ. ದಯಮಾಡಿ ಒಂದು ಆದೇಶ ಹೊರಡಿಸಬೇಕು, ನೀವು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವವರೆಗೆ ಹರಾಜು, ಜಪ್ತಿ ಮಾಡುವ ಕೃತ್ಯ ಮತ್ತು ಒತ್ತಾಯ ಮಾಡಿ ವಸೂಲಿ ಮಾಡುವ ಕೆಲಸವನ್ನು ತಾವು ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಮೊನ್ನೆ ಹಾಸನದಲ್ಲಿ ಮಾತನಾಡುವಾಗ ನಮ್ಮ ಸಮ್ಮಿಶ್ರ ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಬಡ್ಡಿ ಮತ್ತು ಸುಸ್ತಿಬಡ್ಡಿ ಮನ್ನಾ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಸೇರಿಸಿದ್ದೇವೆ. ಅದನ್ನು ಮುಂದಿನ ಬಜೆಟ್‌ನಲ್ಲಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಮಾನ್ಯ ಮಾಧುಸ್ವಾಮಿಯವರು ನೀವು ಒಂದು ಕಡೆ ಈ ರೀತಿ ಹೇಳುತ್ತಿದ್ದೀರಿ, ಇನ್ನೊಂದು ಕಡೆ ಜಪ್ತಿ ಮಾಡಲು ಮಾಡುತ್ತಿದ್ದಾರೆ ಎಂಬ ಪ್ರಶ್ನೆಯನ್ನು ಎತ್ತಿದ್ದಾರೆ. ಆ ರೀತಿ ಇದ್ದ ಆದೇಶವನ್ನು ವಾಪಸ್ ತೆಗೆದುಕೊಂಡಿರುವುದು ನಿಜ. ಆದರೆ ನಾವು ಅಧಿಕಾರಿಗಳಿಗೆ ಯಾರು ಸಾಲ ಮರುಪಾವತಿ ಮಾಡುತ್ತಾರೆ ಅವರ ಹತ್ತಿರ ವಸೂಲಿ ಮಾಡಬೇಕು, ಆದರೆ ಬಲಾತ್ಕಾರ ಮಾಡಿ ಯಾವುದನ್ನೂ ವಸೂಲಿ ಮಾಡಬಾರದು, ಅವರ ಚರ ಮತ್ತು ಸ್ಥಿರಾಸ್ತಿಗಳನ್ನು ಜಪ್ತಿ ಮಾಡಬಾರದು ಎಂದು ಸ್ಪಷ್ಟವಾದ ಸೂಚನೆ, ನಿರ್ದೇಶನವನ್ನು ಕೊಟ್ಟಿದ್ದೇವೆ. ಒಂದು ವೇಳೆ ವಸೂಲಿ ಮಾಡುವಾಗ ಬಲಾತ್ಕಾರ ಮಾಡಿದ್ದ ಉದಾಹರಣೆಗಳು ಇದ್ದರೆ ಅದನ್ನು ಕಳುಹಿಸಿಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲಾ. ಚಿಕ್ಕನಾಯಕನಹಳ್ಳಿಯಲ್ಲಿ ಸೋಮವಾರ ಹರಾಜು ಮಾಡಿದ್ದಾರೆ. ತಾವು ಅದನ್ನು ಗಮನಿಸಬೇಕು.

ಶ್ರೀ ಸಿದ್ಧರಾಮಯ್ಯ : ಅದರ ಬಗ್ಗೆ ಸ್ಪಷ್ಟವಾಗಿ ಆ ರೀತಿ ಮಾಡಬಾರದು ಎಂದು ಎಲ್ಲಾ ಅಧಿಕಾರಿಗಳಿಗೆ ಮತ್ತೊಮ್ಮೆ ಸೂಚನೆ ಕಳುಹಿಸುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಕಲಘಟಗಿ ತಾಲ್ಲೂಕಿನಲ್ಲೂ ಹರಾಜು ಹಾಕುತ್ತಿದ್ದಾರೆ. ತಮಗೆ ಹಲವಾರು ಉದಾಹರಣೆಗಳನ್ನು ಕಳಿಸಿಕೊಡುತ್ತೇವೆ. ಈ ರೀತಿ ಬಹಳ ಕಡೆ ಆಗುತ್ತಿದೆ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ : ಪಿಎಲ್‌ಡಿ ಬ್ಯಾಂಕುಗಳಲ್ಲಿ ಆಗುತ್ತಿದೆ, ಸೊಸೈಟಿಗಳಲ್ಲಿ ಆಗುತ್ತಿದೆ, ಎಲ್ಲರೂ ಹಾಕುತ್ತಿದ್ದರೆ, ಡಿಸಿಸಿ ಬಾ ಕಿನವರು ಹಾಕುತ್ತಿದ್ದಾರೆ, ಅದನ್ನು ದಯಮಾಡಿ ನಿಲ್ಲಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ : ನಮ್ಮ ಕಲಘಟಗಿ ತಾಲ್ಲೂಕಿನಲ್ಲಾಗಿದೆ, ಧಾರವಾಡ ತಾಲ್ಲೂಕಿನಲ್ಲಾಗಿದೆ, ಬೇಕಾದರೆ ತಮಗೆ ಅದರ ಪ್ರತಿಯನ್ನು ಕಳಿಸಿಕೊಡುತ್ತೇವೆ.

ಶ್ರೀ ಸಿದ್ಧರಾಮಯ್ಯ : ಅದನ್ನು ನಿಲ್ಲಿಸಲು ಕ್ರಮ ತೆಗೆದುಕೊಳ್ಳುತ್ತೇವೆ.

(ಇ) ಹಾನಗಲ್ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾಡಾನೆಗಳ ಹಾವಳಿಯಿಂದ ಆಗಿರುವ ಅನಾಹುತದ ಬಗ್ಗೆ

ಶ್ರೀ ಸಿ.ಎಂ. ಉದಾಸಿ (ಹಾನಗಲ್) : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಅರಣ್ಯ ಸಚಿವರ ಗಮನಕ್ಕೆ ತರಬಯಸುತ್ತಿದ್ದೇನೆ. ಹಾನಗಲ್ ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿಯಿಂದ ಹಿರೇಕವಚಿ ಗ್ರಾಮದಲ್ಲಿ ಒಬ್ಬ ಮೃತಪಟ್ಟಿದ್ದು ಮತ್ತೊಬ್ಬ ಗಾಯಗೊಂಡಿದ್ದಾನೆ. ಇದಲ್ಲದೆ ಪದೇ ಪದೆ ರೈತರ ಜಮೀನುಗಳಲ್ಲಿ 18 ಆನೆಗಳ ಹಾವಳಿಯಿಂದ ಅಲ್ಲಿ ಸಾಕಷ್ಟು ಆಸ್ತಿಪಾಸ್ತಿ ಹಾನಿಗೆ ಒಳಗಾಗಿದೆ, ಜೀವಭಯ ಉಂಟಾಗಿದೆ, ಬೆದರಿಕೆ ಇರುವುದರಿಂದ ಸರ್ಕಾರ ತಕ್ಷಣ ಅದಕ್ಕೆ ಕ್ರಮ ತೆಗೆದುಕೊಂಡು ಆನೆಗಳನ್ನು ಹಿಡಿಯುವಂಥ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೆ, ಆನೆ ಹಾವಳಿ ಬಗ್ಗೆ ನಿನ್ನೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶ ಕೇಳಿದ್ದೆ. ನಮ್ಮ ಜಿಲ್ಲೆಯಿಂದಲೆ ಆನೆ ಹಾವಳಿಗಳಿಗೆ ಹೋಗಿರುವುದು. ನಾನು ಅರಣ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ನಮ್ಮಲ್ಲಿ ದಾಂಡೇಲಿ ಅಭಯಾರಣ್ಯ ಇದೆ, ನನ್ನ ಹತ್ತಿರ ಆನೆಗಳು ಹೇಗೆ ರೈತರ ಬೆಲೆಗಳನ್ನು ಹಾಳು ಮಾಡುತ್ತಿದೆ ಎಂಬ ಬಗ್ಗೆ ಫೋಟೋಗಳು ಇವೆ. ಮನೆಯ ಹತ್ತಿರ ಹತ್ತಿರ ಬಂದು ತೊಂದರೆ ಕೊಡುತ್ತಿದೆ, ಅಡಿಕೆ ತೋಟ, ಭತ್ತದ ಗದ್ದೆ ಹಾಳಾಗುತ್ತಿದೆ, ಬಾಳೆ ಗಿಡಗಳನ್ನು ನಾಶ ಮಾಡುತ್ತಿದೆ. ಆನೆಗಳಿಗೆ ಇವತ್ತು ಕಾಡಿನಲ್ಲಿ ಅದಕ್ಕೆ ಬೇಕಾಗಿರುವಂಥ ಬಿದಿರು, ಆಹಾರಪದಾರ್ಥಗಳು, ಕುಡಿಯುವ ನೀರಿನ ವ್ಯವಸ್ಥೆ ಆಗುತ್ತಿಲ್ಲ. ಇದ್ದ ಕಾಡನ್ನೆಲ್ಲಾ ನಾಶ ಮಾಡುತ್ತಿದ್ದಾರೆ. ನಮ್ಮ ಜಿಲ್ಲೆ 90 ಭಾಗ ಅರಣ್ಯ ಜಿಲ್ಲೆ, ಆದರೆ ಇವತ್ತು ಅಷ್ಟು ಪ್ರಮಾಣದಲ್ಲಿ ಕಾಡು ಉಳಿದಿಲ್ಲ, ಅಕ್ರಮ ಗಣಿಗಾರಿಕೆ, ಕಳ್ಳತನದಿಂದ ವ್ಯಾಪಕವಾಗಿ ಅರಣ್ಯ ನಾಶವಾಗುತ್ತಿದೆ. ಅರಣ್ಯ ಇಲಾಖೆ ನಮ್ಮ ಜಿಲ್ಲೆಯಲ್ಲಿ ಅರಣ್ಯ ರಕ್ಷಣೆ ಮಾಡದೆ ಸಂಪೂರ್ಣವಾಗಿ ವಿಫಲವಾಗಿದೆ. ಅದರ ಜೊತೆಗೆ ನನ್ನ ಅಂಕೋಲ ತಾಲ್ಲೂಕಿನಲ್ಲಿ ಕಳೆದ ಎರಡು ವರ್ಷದಲ್ಲಿ ಹುಲಿ ಸುಮಾರು ನೂರು ಹಸುಗಳನ್ನು ತಿಂದಿದೆ, ಅದಕ್ಕೆ ಪರಿಹಾರ ಬಿಡುಗಡೆ ಮಾಡುವುದಿಲ್ಲ, ಕೊಡುವುದಿಲ್ಲ, ಹಳ್ಳಿಗೆ ಬಂದು ದೊಡ್ಡ ಅನಾಹುತ ಮಾಡುತ್ತಿದೆ, ಆನೆ ಒಂದು ಕಡೆ, ಹುಲಿ ಮತ್ತೊಂದು ಕಡೆ, ಹಳಿಯಾಳ, ತಾಲ್ಲೂಕು, ಜೋಯಿಡಾ ತಾಲ್ಲೂಕು ಮತ್ತು ಯಲ್ಲಾಪುರ, ಸಿರಸಿ, ಮುಂಡಗೋಡು, ನಮ್ಮ ತಾಲ್ಲೂಕಿನಿಂದ ಹಾವೇರಿ ಜಿಲ್ಲೆಯ ಹಾನಗಲ್‌ಗೆ ಹೋಗಿದೆ. ಆನೆಗಳು ಇಲ್ಲಿಂದಲೇ ಅಲ್ಲಿಗೆ ಹೋಗುವುದು. ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆ ನಾಶವಾಗುತ್ತದೆ, ಕೋಟ್ಯಾಂತರ ರೂಪಾಯಿ ಬೆಳೆ ನಾಶ ಮಾಡುತ್ತದೆ, ರಸ್ತೆ ಕೆಲಸಕ್ಕೆ ಬಂದವರು ಮೊನ್ನೆ ರಾತ್ರಿ ಟೆಂಟ್ ಹಾಕಿಕೊಂಡು ಮಲಗಿಕೊಂಡಿದ್ದರು, ಆನೆ ಬಂದು ಟೆಂಟ್‌ನ್ನು ಕಿತ್ತು ಹಾಕಿ ಅವರುಗಳ ಮೇಲೆ ಧಾಳಿ ಮಾಡಿ ಆ ಮೂರು ಜನರು ಆಸ್ಪತ್ರೆ ಸೇರಿದ್ದಾರೆ. ಈ ಇಲಾಖೆಯವರು ಐದು ರೂಪಾಯಿ ಪರಿಹಾರ ಕೊಡುವುದಿಲ್ಲ, ಅವರನ್ನು ಹೋಗಿ ಮಾತನಾಡಿಸುವುದಿಲ್ಲ, ಆನೆಯನ್ನು ಓಡಿಸಿ ಎಂದರೆ ಬೆಂಗಳೂರಿನಿಂದ ಅನುಮತಿ ಬೇಕೆಂದು ಹೇಳುತ್ತಾರೆ, ಮಾನ್ಯ ಅರಣ್ಯ ಸಚಿವರಲ್ಲಿ ನಾನು ವಿನಂತಿಸುತ್ತೇನೆ, ನಿಮ್ಮ ಪಿ.ಸಿ.ಸಿ.ಎಫ್ ನ ಮೂಲಕ ನಮ್ಮಲ್ಲಿರುವ ಕನ್‌ಸರ್ವೇಟರ್‌ಗಳಿಗೆ, ಡಿ.ಎಫ್.ಒ. ಮತ್ತು ಆರ್.ಎಫ್.ಒ.ಗಳಿಗೆ ಆನೆ ಓಡಿಸಿ ಎಂದರೆ ಬೆಂಗಳೂರಿನಿಂದ ಅನುಮತಿ ಬೇಕು ಎಂದು ಹೇಳುತ್ತಾರೆ, ಬೆಂಗಳೂರಿನಿಂದ ಏನೋ ಬಂದೂಕು ಬೇಕಂತೆ, ಬೆಂಗಳೂರಿನಿಂದ ಬಂದೂಕಿಗೆ ಹಾಕುವ ಸ್ಪೆಶಲ್ ಕಾಡುತೋಸು ಏನೋ ಬೇಕಂತೆ. ಕನ್‌ಸರ್ವೇಟರ್‌ರವರಿಂದ ಅನುಮತಿ ಬೇಕಂತೆ. ಅಲ್ಲಿ ಆನೆ ಬಂದು ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಾವಳಿ ಮಾಡುತ್ತಿದ್ದರೂ ಇಲ್ಲಿ ಸರ್ಕಾರಕ್ಕೂ ಯಾರಿಗೂ ಗೊತ್ತಾಗುವುದಿಲ್ಲ, ಎಲ್ಲರೂ ಅವರವರ ಲೋಕದಲ್ಲಿದ್ದಾರೆ. ಆದರೆ ನಮ್ಮ ಹಳ್ಳಿಯಲ್ಲಿ ಜನರು ಭಯಭೀತರಾಗಿದ್ದಾರೆ, ಯಾರೂ ರಕ್ಷಣೆಗೆ ಬರುತ್ತಿಲ್ಲ, ಆನೆಗಳನ್ನು ಅರಣ್ಯಕ್ಕೆ ಓಡಿಸುತ್ತಿಲ್ಲವೆಂದು ನಮ್ಮ ಜಿಲ್ಲೆಯಲ್ಲಿ ನಮ್ಮ ಕತೆ ಅರಣ್ಯ ರೋಧನವಾಗಿದೆ. ತಕ್ಷಣ ಆನೆಗಳನ್ನು ಕಾಡಿಗೆ ವಾಪಸ್ಸ್ ಕಳುಹಿಸಬೇಕು, ಹಳ್ಳಿಗಳಿಗೆ ಅದು ಬಾರದಂತೆ ಕ್ರಮ ತೆಗೆದುಕೊಳ್ಳಬೇಕು, ಅಲ್ಲಿ ಆಹಾರ, ನೀರು ಕೊಡುವ ಬೇರೆ ಬೇರೆ ಕ್ರಮ ತೆಗೆದುಕೊಳ್ಳಬೇಕು. ಎರಡನೆಯದಾಗಿ ತಕ್ಷಣ ಪರಿಹಾರ ಕೊಡಬೇಕು, ಇಡೀ ಭತ್ತದ ಗೊಣಬೆಯನ್ನೇ ಹಾಳು ಮಾಡಿಬಿಟ್ಟಿದೆ. ಒಬ್ಬ ರೈತರಿಗೆ ಒಂದೆರಡು ಗೊಣಬೆ ಇದ್ದರೆ ಅದು ಹಾಳಾದರೆ ಅವನು ಜೀವನ ಹೇಗೆ ಮಾಡಬೇಕು. ಈ ವರ್ಷ ಸರಿಯಾಗಿ ಮಳೆ ಆಗಲಿಲ್ಲ,

ಬರಗಾಲದ ಪರಿಸ್ಥಿತಿ ಇದೆ, ಇದ್ದ ಭತ್ತವನ್ನೂ ಪೂರ್ಣವಾಗಿ ಹಾಳುಮಾಡಿಬಿಟ್ಟಿದೆ, ಆದುದರಿಂದ ತಕ್ಷಣ ಅವರಿಗೆ ಪರಿಹಾರ ಕೊಡಬೇಕು. ಈ ಕ್ರಮಕ್ಕೆ ಸೂಕ್ತ ರಕ್ಷಣೆ ಕೊಡಲು ಬೇಕಾಗಿರುವಂಥ ತಕ್ಷಣದ ಕ್ರಮಗಳು ಅರಣ್ಯ ಇಲಾಖೆಯಿಂದ ಆಗಬೇಕು, ಇದು ಅರಣ್ಯ ರೋದನವಾಗಬಾರದು, ಮಾನ್ಯ ಅರಣ್ಯ ಮಂತ್ರಿಗಳು ಇದರ ಬಗ್ಗೆ ಗಂಭೀರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಿಸುತ್ತಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಹಾಗೂ ಪರಿಸರ ಖಾತೆ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ನಿಜ, ಸನ್ಮಾನ್ಯ ಶಾಸಕರು ಹೇಳಿದಂತೆ ಕೆಲವು ಕಡೆ ಆನೆಗಳು ಬಂದಿವೆ. 15 ಆನೆಗಳು ಬಂದು, ಅದರಲ್ಲಿ 5–6 ಆನೆಗಳು ತುಳಿದು ಹಾಳು ಮಾಡಿ, ಅಲ್ಲಿ ಸ್ವಲ್ಪ ಲುಕ್ಸಾನು ಆಗಿದೆ. ಇಲ್ಲವೆಂದು ನಾನು ಹೇಳುತ್ತಿಲ್ಲ. ಅದರ ಬಗ್ಗೆ ನಾನು ಸರ್ವೆ ಮಾಡಿಸಿದ್ದೇನೆ. ಅಂದಾಜು 5–6 ಲಕ್ಷ ರೂಪಾಯಿಗಳ ಲುಕ್ಸಾನು ಆಗಿದೆ ಎಂದು ತಿಳಿದು ಬಂದಿದೆ. ನಾವೊಂದು ಯೋಜನೆಯನ್ನು ಮಾಡುತ್ತಿದ್ದೇವೆ. ಅದರ ಪ್ರಕಾರ ಆನೆಗಳನ್ನು ದೊಡ್ಡ ಕಾಡು ಅಥವಾ ಅಭಯಾರಣ್ಯದಲ್ಲಿ ಬಿಡುವುದಕ್ಕೆ ಏನೆಲ್ಲಾ ಬೇಕೋ ಅದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಪಟಾಕಿ ಹಚ್ಚುವುದು ಅಥವಾ ಇನ್ನಿತರ ಮಾರ್ಗದ ಮೂಲಕ ಆನೆಗಳನ್ನು ಪಾಪಸ್ ಅರಣ್ಯಕ್ಕೆ ಓಡಿಸುವ ವ್ಯವಸ್ಥೆ ಮಾಡುತ್ತೇವೆ. ಒಂದೇ ಒಂದು ಹುಲಿ ಮಾತ್ರ ಬಂದಿತ್ತು ಎಂದು ತಿಳಿದು ಬಂದಿದೆ. ಅದರಿಂದ ಯಾರಿಗೇನೂ ಲುಕ್ಸಾನು ಆಗಿಲ್ಲ. ಯಾರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೋ ಅವರಿಗೆ ಚಿಕಿತ್ಸೆಗಾಗಿ ಸ್ವಲ್ಪ ಹಣವನ್ನು ಕೊಟ್ಟಿದ್ದೇವೆ. ಯಾರಿಗೆ ಲುಕ್ಸಾನು ಆಗಿದೆಯೋ ಅವರಿಗೆ ಸ್ವಲ್ಪ ಪರಿಹಾರವನ್ನೂ ಕೂಡ ಕೊಟ್ಟಿದ್ದೇವೆ. ಒಟ್ಟಾರೆಯಾಗಿ ಅಂತಾದ್ದೇನೂ ಲುಕ್ಸಾನು ಆಗಿಲ್ಲ. ಎಲ್ಲಾ ಕಡೆಗಳಿಂದಲೂ ಆನೆಗಳ ಹಾವಳಿ ಬಗ್ಗೆ ದೂರು ಬರುತ್ತಿವೆ. ಆದಷ್ಟು ಬೇಗನೆ ಅವುಗಳ ಹಾವಳಿಯನ್ನು ತಡೆಗಟ್ಟುವ ವ್ಯವಸ್ಥೆ ಸರಿಪಡಿಸುತ್ತೇನೆ. ಅವುಗಳು ಅರಣ್ಯದಿಂದ ನಾಡಿಗೆ ಏಕೆ ಬರುತ್ತಿವೆ ಎಂದರೆ, ಕಾಡಿನ ಅಂಚಿನಲ್ಲಿ ಕೆಲವರು ಒತ್ತುವರಿ ಮಾಡಿಕೊಂಡು sugarcane, ಬಾಳೆಹಣ್ಣು ಮತ್ತು ಭತ್ತವನ್ನು ಬೆಳೆಯುತ್ತಿದ್ದಾರೆ. ಇದು ಮಣಿ ಹಾಕಿ, ಇಲ್ಲಿ ಬಂದು ಕುಳಿತುಕೋ ಎಂದು ಅವುಗಳಿಗೆ ಹೇಳುವಂತಹ ಪರಿಸ್ಥಿತಿ ಉಂಟಾಗಿದೆ. ಕಾಡು ಒತ್ತುವರಿ ಮಾಡಿ ಬೆಳೆಗಳನ್ನು ಬೆಳೆಯುವಂತಾದ್ದು ಆಗಬಾರದು. ಆ ರೀತಿ ಆಗದಿರುವುದರಿಂದ, ಆನೆಗಳಿಗೆ 'ಮರಾಯಾ, ನೀನೇ ಮನೆಗೆ ಬಂದು ಕೂರಪ್ಪ' ಎಂದು ಆಹ್ವಾನ ನೀಡಿರುವಂತಹ ಪರಿಸ್ಥಿತಿ ಉಂಟಾಗಿದೆ. ಅದನ್ನು ನಾವು ತಡೆಗಟ್ಟಬೇಕಾಗಿದೆ. ಆದಷ್ಟು ಮಟ್ಟಿಗೆ ಆನೆಗಳಿಂದ ತೊಂದರೆಯಾಗದಂತೆ ನೋಡಿಕೊಳ್ಳುವಂತಹ ಜವಾಬ್ದಾರಿ ನಮ್ಮದಾಗಿದೆ. ನಾನು ಅದರ ಬಗ್ಗೆ ತಕ್ಕ ವ್ಯವಸ್ಥೆಯನ್ನು ಮಾಡಿಸುತ್ತೇನೆ ಎಂದು ಸನ್ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಸಚಿವರು ಮೃತರ ಕುಟುಂಬದವರಿಗೆ ಪರಹಾರ ಕೊಡುವುದರ ಬಗ್ಗೆ ವಿಸನ್ನೂ ಹೇಳಲೇ ಇಲ್ಲ. ನಮ್ಮಲ್ಲಿ ಒಬ್ಬರು ಸತ್ತಿದ್ದಾರೆ, ಮತ್ತೊಬ್ಬರು ಗಾಯಗೊಂಡಿದ್ದಾರೆ. 18 ಆನೆಗಳ ಜೊತೆಗೆ ಒಂದು ಹುಲಿ ಸಹಿತ ನಮ್ಮಲ್ಲಿ ಬಂದು ಹೋಗಿದೆ. ಇದರ ಬಗ್ಗೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಲಿಲ್ಲ. ಅದರ ಬಗ್ಗೆ ನಾನು ಮೊದಲೇ ಮಾನ್ಯ ಸಚಿವರನ್ನು ಕೇಳಿದ್ದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಒಬ್ಬರು ಸತ್ತಿರುವುದು ನಿಜ. ರಾತ್ರಿ ಹೊತ್ತು ನಾಲ್ಕು ಘಂಟೆಗೆ ಆನೆಯೊಂದು ವ್ಯಕ್ತಿಯೊಬ್ಬರನ್ನು ತುಳಿದಿದೆ, ಅದರಿಂದ ಆತ ಸತ್ತಿದ್ದಾನೆ. ಅದಕ್ಕೆ ಪರಿಹಾರವಾಗಿ ಅವರ ಕುಟುಂಭದವರಿಗೆ already 20 ಸಾವಿರ ರೂಪಾಯಿಗಳನ್ನು ಕೊಡಲಾಗಿದೆ. Saturday ಒಳಗಾಗಿ ಇನ್ನುಳಿದ 80 ಸಾವಿರ ರೂಪಾಯಿಗಳನ್ನು ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

ವಿಷಯ :(ಈ) ಕ್ಯಾಸನೂರು ಕಾಡಿನ ಖಾಯಿಲೆ ಅಥವಾ ಮಂಗನ ಖಾಯಿಲೆಗೆ ಔಷಧಿ ಒದಗಿಸುವ ಬಗ್ಗೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಕ್ಯಾಸನೂರು ಕಾಡಿನ ಖಾಯಿಲೆ ಅಥವಾ ಮಂಗನ ಖಾಯಿಲೆಯಿಂದ 6 ಜನ ಈಗಾಗಲೇ ತೀರಿಕೊಂಡಿದ್ದಾರೆ. ಅಲ್ಲದೆ ಸುಮಾರು 128ಕ್ಕೂ ಹೆಚ್ಚು ಜನ ಈ ಖಾಯಿಲೆಯ ವ್ಯಾಧಿಯಿಂದ ನರಳುತ್ತಿದ್ದಾರೆ ಎಂದು Taluk Medical Officer ನನಗೆ ವರದಿ ಕೊಟ್ಟಿದ್ದಾರೆ. ಆದರೆ ದುರ್ದೈವದಿಂದ ನಮ್ಮಲ್ಲಿ ಆರು ಜನ ಸತ್ತು ಹೋಗಿದ್ದರೂ ಕೂಡ, ಮಾನ್ಯ ಆರೋಗ್ಯ ಖಾತೆಯ ಸಚಿವರಾಗಲಿ, ಸರ್ಕಾರದ ಯಾವುದೇ ಸಚಿವರಾಗಲಿ ಅಲ್ಲಿಗೆ ಭೇಟಿ ಕೊಟ್ಟಿಲ್ಲ. ಮೃತಪಟ್ಟಿರತಕ್ಕಂಥ ಆರೂ ಜನ ತೋಟ ಕಾರ್ಮಿಕರಾಗಿದ್ದಾರೆ. ಅವರಿಗೆ ಗಂಜಿ ಕೇಂದ್ರದ ಪ್ರತ್ಯೇಕ ವ್ಯವಸ್ಥೆ ಮಾಡಿಲ್ಲ. ಅವರಿಗೆ ಪೂರ್ವಭಾವಿ ತಿಳುವಳಿಕೆ ಕೊಟ್ಟು ಮಂಗನಿಂದ ಬರತಕ್ಕಂಥ ಖಾಯಿಲೆ ಉಣ್ಣೆ ಮೈಗೆ ಹತ್ತದಂತೆ ಎಣ್ಣೆಯನ್ನು ಕೊಡಬೇಕಾಗಿತ್ತು. ಆ ಎಣ್ಣೆಯನ್ನು ಕೊಡಬೇಕಾದಂತಹ ಕೆಲಸವೂ ಸಹ ಆಗಿಲ್ಲ. ಗಂಭೀರವಾಗಿರುವಂತಹ ವಿಚಾರವೆಂದರೆ, ಏಡ್ಸ್ ಖಾಯಿಲೆಗೆ ಯಾವ ರೀತಿಯಾಗಿ ಒಮ್ಮೆ ಆ ಖಾಯಿಲೆ ಬಂತೆಂದರೆ, ಅದಕ್ಕೆ ಔಷಧಿ ಇಲ್ಲವೋ, ಈ ಮಂಗನ ಖಾಯಿಲೆಯಿಂದ ರೋಗಗ್ರಸ್ತನಾದಂತಹ ವ್ಯಕ್ತಿಗೆ ಯಾವುದೇ ಔಷಧಿ ಇಲ್ಲ. ಹಾಗಾಗಿ preventive measure ಆಗಿ ಏನೊಂದು ಯೋಚನೆಯನ್ನು ಮಾಡಬೇಕಾಗಿದೆಯೋ, ಆ ಯೋಚನೆಯನ್ನು ಸರ್ಕಾರ ಮಾಡುತ್ತಿಲ್ಲ. ಆ ಪ್ರದೇಶದಲ್ಲಿ 12 ಸಾವಿರಕ್ಕೂ ಹೆಚ್ಚು ಜನ ವಾಸಿಸುತ್ತಿದ್ದಾರೆ. ಇದು ಸಾಂಕ್ರಾಮಿಕವಾಗಿ ವ್ಯಾಪಕವಾಗಿ ಹರಡುವಂತಹ ಸಾಧ್ಯತೆ ಇರುವುದರಿಂದ, ಸರ್ಕಾರ ತನ್ನ ಅಸ್ತಿತ್ವದ ಪ್ರಕಟೀಕರಣ ಮಾಡಬೇಕು. ಆರೋಗ್ಯ ಖಾತೆಯ ಸಚಿವರು ತಕ್ಷಣ ಅಲ್ಲಿಗೆ ಭೇಟಿ ಕೊಡಬೇಕು. ಪೂರ್ವಭಾವಿಯಾಗಿ ಆ ರೋಗವನ್ನು ನಿಯಂತ್ರಿಸುವುದಕ್ಕೆ ಬೇಕಾದಂತಹ ಸಿದ್ಧತೆಯನ್ನು ಮತ್ತು ಕ್ರಮಗಳನ್ನು ಕೈಗೊಳ್ಳಬೇಕು. ಈ ಬಗ್ಗೆ ಸರ್ಕಾರಕ್ಕೆ ತಾವು ಒತ್ತಾಯವನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ) : ಮಾನ್ಯ ಸಭಾಧ್ಯಕ್ಷರೇ, ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ನಾನೂ ಕೂಡ ಹೇಳುವುದಿದೆ. ಕೊಪ್ಪದ ಎನ್.ಆರ್.ಪುರದಲ್ಲಿ ಮೂಲವಾಗಿ ಮಂಗನ ಖಾಯಿಲೆ ಇದೆ. ಈಗ ಮಂಗನ ಖಾಯಿಲೆ ಇರುವಂತಹ ಪ್ರದೇಶದಲ್ಲಿ 5 ಜನ ಡಾಕ್ಟರ್ ಇರಬೇಕಾದಂತಹ ತಾಲ್ಲೂಕು ಆಸ್ಪತ್ರೆಯಲ್ಲಿ Dentist ಬಿಟ್ಟರೆ, Physician ಆಗಲಿ, Surgeon ಆಗಲಿ, ಯಾವುದೇ ಡಾಕ್ಟರ್‌ಗಳು ಇಲ್ಲದೆ, ಐದೂ ಡಾಕ್ಟರ್‌ಗಳ ಹುದ್ದೆಗಳು ಖಾಲಿ ಇರುವಂತಹ ವ್ಯವಸ್ಥೆ ಆಗಿದೆ. ಸರ್ಕಾರ ಡಾಕ್ಟರ್‌ಗಳನ್ನು ಇಲ್ಲಿಗೆ ನೇಮಿಸುವ ವ್ಯವಸ್ಥೆ ಮಾಡಬೇಕು. ಬಾಳೆಹೊನ್ನೂರು ಆಸ್ಪತ್ರೆಯಲ್ಲಿಯೂ ಸಹ ಡಾಕ್ಟರ್ ಇಲ್ಲ. ಅಲ್ಲಿಗೂ ಕೂಡ ಡಾಕ್ಟರರನ್ನು ನೇಮಿಸಬೇಕು. ಕಟ್ಟಿದಮನೆಖಾಲಿ ಇದೆ. ಎಲ್ಲವೂ ಮಂಗನ ಖಾಯಿಲೆ ಬರುವಂತಹ ಪ್ರದೇಶಗಳಲ್ಲಿರುವ ಆಸ್ಪತ್ರೆಗಳಾಗಿರುವುದರಿಂದ, ದಯಮಾಡಿ ಸರ್ಕಾರ ಅಲ್ಲಿರುವ ವೈದ್ಯರ ಹುದ್ದೆಗಳನ್ನು ತುಂಬುವ ಕಡೆಗೆ ಆದ್ಯತೆ ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ ಸನ್ಮಾನ್ಯ ಶಾಸಕರಾದ ರವಿಯವರು ಮತ್ತು ಜೀವರಾಜ್‌ರವರು ಆರೋಗ್ಯ ಸಚಿವರಿಗೆ ಸಂಬಂಧಪಟ್ಟಿರತಕ್ಕಂಥ ಇಲಾಖೆಯ ಕೆಲವು ಸಮಸ್ಯೆಗಳನ್ನು ಪ್ರಸ್ತಾಪಿಸಿದ್ದಾರೆ. ಮಂಗನ ಖಾಯಿಲೆ

ಉಲ್ಬಣಗೊಂಡಿರತಕ್ಕಂಥದ್ದರ ಬಗ್ಗೆ ಅವರು ತಮ್ಮ ಆತಂಕವನ್ನು ವ್ಯಕ್ತ ಮಾಡಿದ್ದಾರೆ. ತಾವು ಕೊಟ್ಟಿರತಕ್ಕಂಥ ಮಾಹಿತಿ ನಿಜ. ಇದು ಈಗಾಗಲೇ ಇಲಾಖೆಯ ಮತ್ತು ಸರ್ಕಾರದ ಗಮನಕ್ಕೆ ಬಂದಿದೆ. ಆಗಲೇ ಸನ್ಮಾನ್ಯ ಆರೋಗ್ಯ ಸಚಿವರು ನನ್ನ ಜೊತೆಗೆ ಮಾತನಾಡುತ್ತಿದ್ದರು. ಮಾನ್ಯ ಅಧ್ಯಕ್ಷರ ಪರವಾನಿಗೆ ಪಡೆದುಕೊಂಡು ಅವರು ಸದನದಿಂದ ನಿರ್ಗಮಿಸಿದ್ದಾರೆ. 27ನೇ ತಾರೀಖಿಗೆ ಪೂರ್ತೀಯಾಗಿರತಕ್ಕಂಥ ಉತ್ತರವನ್ನು ಮತ್ತು ಈ ದಿಶೆಯಲ್ಲಿ ಸರ್ಕಾರ ತೆಗೆದುಕೊಂಡಿರತಕ್ಕಂಥ ಕ್ರಮಗಳ ಬಗೆಗಿನ ವಿವರಗಳನ್ನು ನಾವು ನಿಮಗೆ ಒದಗಿಸುತ್ತೇವೆ.

ಶ್ರೀ ಡಿ.ಎನ್. ಜೀವರಾಜ್ : ವೈದ್ಯರ ಹುದ್ದೆ ತುಂಬುವ ಬಗ್ಗೆ ಮಾನ್ಯ ಸಚಿವರು ಏನನ್ನೂ ಹೇಳಲೇ ಇಲ್ಲ.

ಶ್ರೀ ಸಿ.ಟಿ. ರವಿ : ಉತ್ತರದ ಅಪೇಕ್ಷೆಗಿಂತ ಮುಂಚೆ .....

ಅಧ್ಯಕ್ಷರು : ಸಂಬಂಧಪಟ್ಟ ಸಚಿವರು ಸದನದಲ್ಲಿಲ್ಲ. ಅವರ ಗಮನಕ್ಕೆ ತಾವು ಪ್ರಸ್ತಾಪಿಸಿದ ವಿಷಯವನ್ನು ತರುವುದಾಗಿ ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೇ, ಸರ್ಕಾರ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿರುವುದು ಏಕೆಂದರೆ, ಈ ರೋಗ ಬಂದಿದೆಯೋ ಇಲ್ಲವೋ ಎನ್ನುವುದನ್ನು ಪತ್ತೆ ಹಚ್ಚುವುದಕ್ಕೆ ಬೇಕಾಗಿರುವಂತಹ ಬಿಳಿ ಇಲಿ ಶಿವಮೊಗ್ಗದಲ್ಲಿ ಸಿಗುತ್ತಿಲ್ಲ ಎಂದು ವರದಿ ಕೊಟ್ಟಿದ್ದಾರೆ. ಬಿಳಿ ಇಲಿಯನ್ನು import ಮಾಡಿಕೊಳ್ಳುವುದಕ್ಕೆ ಆದೇಶ ಕೊಡಬೇಕು.

ಅಧ್ಯಕ್ಷರು : ತಾವು ದಯಮಾಡಿ ಇದರ ಬಗ್ಗೆ ಮಾನ್ಯ ಆರೋಗ್ಯ ಸಚಿವರ ಹತ್ತಿರ ಮಾತನಾಡಿ. ಈಗ ಅವರು ಸದನದಲ್ಲಿಲ್ಲ.

ಶ್ರೀ ಸಿ.ಟಿ. ರವಿ : ಸರ್ಕಾರ ಈ ಕಡೆಗೆ ತಕ್ಷಣವೇ ಗಮನ ಹರಿಸಬೇಕು. ವಿಳಂಬವಾದರೆ, ಅಷ್ಟೊತ್ತಿಗೆ ಅಲ್ಲಿ ಇನ್ನೊಂದು ಇಪ್ಪತ್ತೈದು ಜನ ಸತ್ತು ಹೋಗುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಆ ಮಂಗನ ಖಾಯಿಲೆಗೆ ಬೇಕಾದಂತಹ ಔಷಧಿಗಳು ಸಿಗುತ್ತಿಲ್ಲ. ತಕ್ಷಣ ಅದಕ್ಕೆ ವ್ಯವಸ್ಥೆ ಮಾಡಬೇಕು. ಈಗಾಗಲೇ 6 ಜನ ಅಲ್ಲಿ ಸತ್ತಿದ್ದಾರೆ. ಔಷಧಿಗಳು ಇಲ್ಲದೆ ಇನ್ನಷ್ಟು ಜನ ಅಲ್ಲಿ ಸಾಯುವಂತಹ ಸ್ಥಿತಿ ಉಂಟಾಗಬಾರದು. ತಕ್ಷಣ ಅಲ್ಲಿಗೆ ಧಾವಿಸಿ ಹೋಗಬೇಕು. ತಾವು ನಾಳಿದ್ದು ರಿಪ್ಲೈ ಕೊಡಿ ಪರವಾಗಿಲ್ಲ. ಆದರೆ immediate relief ಅವರಿಗೆ ಸಿಗುವಂತೆ ಅಲ್ಲಿಗೆ ಔಷಧಿಗಳನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡಿ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥ ಮಾಡಿಕೊಂಡಿದ್ದೇನೆ. ಅಲ್ಲಿ ಔಷಧಿಗಳು ಸಿಗುತ್ತಿಲ್ಲವೆಂದು ತಾವು ಪ್ರಸ್ತಾಪ ಮಾಡುತ್ತಿದ್ದೀರಿ. ಅಲ್ಲಿ ಔಷಧಿಗಳು ಸಿಗುವಂತೆ ಮಾಡಲು ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಅಲ್ಲಿ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದೆ ಅನ್ನುವುದರ ಬಗ್ಗೆ ವಿವರಗಳನ್ನೂ ಸಹಿತ ತಮಗೆ 27ನೇ ತಾರೀಖಿಗೆ ಒದಗಿಸುತ್ತೇವೆ. ತಾವು ಆರೋಗ್ಯ ಸಚಿವರು ಸ್ಥಳಕ್ಕೆ ಭೇಟಿ ಕೊಡಬೇಕೆಂಬುದರ ಬಗ್ಗೆ ಕೂಡ ಒತ್ತಾಯ ಮಾಡಿದ್ದೀರಿ. ಅದರ ಬಗ್ಗೆಯೂ ಸಹ ನಾನು ಮಾನ್ಯ ಆರೋಗ್ಯ ಸಚಿವರಿಗೆ ತಿಳಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಪ್ರಭಾಕರ ಬಂಗೇರಾರವರು ತಮ್ಮ ವಿಷಯ ಪ್ರಸ್ತಾಪಿಸಿ.

ಶ್ರೀ ಸಿ.ಟಿ. ರವಿ : ..... ಕ್ಷೇತ್ರದಿಂದ ಬಂದಿರತಕ್ಕಂಥ ಕಾರ್ಮಿಕರು ಇವರಾಗಿದ್ದಾರೆ. ಅಲ್ಲೂ ಕೂಡ ರೋಗ ಹರಡಿದೆ. ದಾವಣಗೆರೆ ಆಸ್ಪತ್ರೆಯಲ್ಲಿ ಇಬ್ಬರು ತೀರಿಕೊಂಡಿದ್ದಾರೆ. ...

ಅಧ್ಯಕ್ಷರು : ರವಿಯವರೇ, ದಯಮಾಡಿ ಕುಳಿತುಕೊಳ್ಳಿ. ಎಷ್ಟು ಸಾರಿ ಕೇಳುತ್ತೀರಿ? ಈಗ ಪ್ರಭಾಕರ ಬಂಗೇರಾರವರು ತಮ್ಮ ವಿಷಯ ಪ್ರಸ್ತಾಪಿಸಿ.

ಶ್ರೀ ಸಿ.ಟಿ. ರವಿ : ನಾನು ಮಾತಿಗೋಸ್ಕರ ಮಾತನಾಡುತ್ತಿಲ್ಲ.

ಅಧ್ಯಕ್ಷರು : ಆಯಿತು, ದಯಮಾಡಿ ಕುಳಿತುಕೊಳ್ಳಿ. ಮಾತಿಗೋಸ್ಕರವೇ ನೀವು ಮಾತನಾಡುತ್ತಿರುವುದು. ಎಷ್ಟು ಸಾರಿ ನೀವು ಮಾತನಾಡುತ್ತೀರಿ?

8. ವಿಷಯ (ಉ): ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರದಲ್ಲಿ ಸಹಕಾರಿ ಸಾಲದ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ

ಶ್ರೀ ಕೆ. ಪ್ರಭಾಕರ ಬಂಗೇರಾ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೇ, ನಮ್ಮ ಕ್ಷೇತ್ರದಲ್ಲಿ ತೋಟ ನಷ್ಟವಾಗಿ ಗೋಪಾಲಕೃಷ್ಣ ಭಟ್ ಎಂಬುವವರು ತುಂಬಾ ನಷ್ಟ ಅನುಭವಿಸುತ್ತಿದ್ದು ಅವರ ಕುಟುಂಬ ಸಹಕಾರಿ ಸಾಲವನ್ನು ಕಟ್ಟಲಿಕ್ಕೆ ಸಾಧ್ಯವಾಗದೇ ಇರುವಂತಹ ಸಂಗತಿಯನ್ನು ನಾನು ಈ ಸದನದ ಮೂಲಕ ಮಾನ್ಯ ಸಹಕಾರ ಮಂತ್ರಿಗಳಿಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ನಿವೇದನೆ ಮಾಡಿಕೊಳ್ಳುತ್ತಿದ್ದೇನೆ. ಅವರು ತುಂಬಾ ಕಷ್ಟದಲ್ಲಿದ್ದಾರೆ. ತೋಟ ನೀರಿಲ್ಲದೆ ಸುಟ್ಟು ಹೋಗಿರುವಂತಹ ಈ ಸಂದರ್ಭದಲ್ಲಿ ಸುಮಾರು 50 ಸಾವಿರದಷ್ಟು ಬಡ್ಡಿಯನ್ನು ಅವರು ಕಟ್ಟಿದ್ದಾರೆ. ಅವರಿಗೆ ಈಗ ಅದನ್ನು ನಿರ್ವಹಣೆ ಮಾಡಲಿಕ್ಕೆ ಸಾಧ್ಯವಾಗದಿರುವಂತಹ ಈ ಒಂದು ಸಂದರ್ಭದಲ್ಲಿ ಅವರಿಗೆ ಬಡ್ಡಿರಹಿತವಾದಂತಹ ಸಾಲವನ್ನು ಸರ್ಕಾರ ಕೊಡಬೇಕು. ಅದರ ಜೊತೆಗೆ ಪರಿಹಾರವಾಗಿ ಅವರಿಗೆ ಸುಮಾರು 1 ಲಕ್ಷ ರೂ.ಗಳನ್ನು ಅವರಿಗೆ ಕೊಡದಿದ್ದರೆ, ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ, ನನ್ನಿಂದ ಬದುಕಲಿಕ್ಕೆ ಸಾಧ್ಯವಿಲ್ಲ ಎಂಬ ವಿಚಾರವನ್ನು ಅವರು ತಿಳಿಸಿರುತ್ತಾರೆ. ಸಂಬಂಧಪಟ್ಟ ಸರ್ಕಾರಕ್ಕೂ ಕೂಡ ನಾನು ಈ ಬಗ್ಗೆ ಮನವಿಯನ್ನು ಮಾಡಿದ್ದೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಮನವಿಯನ್ನು ಮಾಡಿದಾಗ, ಸಹಕಾರಿ ಸಂಘದ ಕಾಯಿದೆ ಅನ್ವಯ ಅದಕ್ಕೆ ಕೊಡಲಿಕ್ಕೆ ಬರುವುದಿಲ್ಲ ಎಂಬ ವಿಚಾರವನ್ನು ತಿಳಿಸಿದ್ದಾರೆ, ಮಾನವೀಯ ದೃಷ್ಟಿಯಿಂದ ನಾನು ಈ ಸದನದ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಹಾಗೂ ಸಹಕಾರ ಮಂತ್ರಿಗಳಲ್ಲಿ ಅವರು ಕಟ್ಟಿರುವಂತಹ ಬಡ್ಡಿಯನ್ನು ಮನ್ನಾ ಮಾಡಬೇಕು. ಅದರೊಟ್ಟಿಗೆ ಅವರಿಗೆ ಸಾಧಾರಣ 1 ಲಕ್ಷದವರೆಗೆ ಬಡ್ಡಿರಹಿತವಾದಂತಹ ಸಾಲವನ್ನು ಕೊಟ್ಟು, ಅವರು ಜೀವನ ನಿರ್ವಹಣೆ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

ಅಧ್ಯಕ್ಷರು : ಸಹಕಾರ ಸಚಿವರು ಇಲ್ಲ. ಮಾನ್ಯ ಸಂಸದೀಯ ಸಚಿವರು ಈ ಬಗ್ಗೆ ಉತ್ತರ ಕೊಡಿ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತಹ ವಿಷಯಕ್ಕೆ ಸಂಬಂಧಪಟ್ಟಂತೆ ಸನ್ಮಾನ್ಯ ಅರ್ಥ ಸಚಿವರು ಹಾಗೂ ಉಪ ಮುಖ್ಯಮಂತ್ರಿಗಳು ಸಮಗ್ರವಾದ ರೀತಿಯಲ್ಲಿ ಉತ್ತರ

ಕೊಟ್ಟಿದ್ದಾರೆ. ಕೆಲವೇ ನಿಮಿಷಗಳ ಹಿಂದೆ ಮಾನ್ಯ ಸದಸ್ಯರೊಬ್ಬರು ಇದೇ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದರು. ಆಗ ಅವರು ಕೊಟ್ಟಿರತಕ್ಕಂಥ ಉತ್ತರ. ಈಗ ಮಾನ್ಯ ಸದಸ್ಯರು ಪ್ರಸ್ತಾಪಿಸಿರತಕ್ಕಂಥ ಆತಂಕವನ್ನು ಸಮಾಧಾನ ಪಡಿಸುತ್ತದೆಂಯ ನಾನು ತಿಳಿದುಕೊಳ್ಳುತ್ತೇನೆ.

ವಿಷಯ: (ಊ) ಜಿಲ್ಲಾ ನ್ಯಾಯಾಲಯಗಳಲ್ಲಿ ಹಾಗೂ ಗ್ರಾಹಕರ ವೇದಿಕೆಗಳಲ್ಲಿ "ಸಿ" ವರ್ಗದ ನೌಕರಿ ಸಂದರ್ಶನಕ್ಕಾಗಿ ಸಾವಿರಾರು ಅಭ್ಯರ್ಥಿಗಳನ್ನು ಕರೆಯುತ್ತಿರುವ ಬಗ್ಗೆ.

ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಅಧ್ಯಕ್ಷರೆ, ಜಿಲ್ಲಾ ನ್ಯಾಯಾಲಯಗಳಲ್ಲಿ ಹಾಗೂ ಗ್ರಾಹಕರ ವೇದಿಕೆಗಳಲ್ಲಿ 'ಸಿ' ವರ್ಗದ ನೌಕರಿ ಸಲುವಾಗಿ ಅಲ್ಲಿ ಇರುವ ಕೆಲವೇ ಸ್ಥಾನಗಳ ಸಲುವಾಗಿ ಸಾವಿರಾರು ಜನರನ್ನು ಇಂಟವ್ಯೂಗೆ ಕರೆದಿದ್ದಾರೆ. ಇದರಿಂದ ಬಹಳಷ್ಟು ಯುವಕರಿಗೆ ನಿರಾಶೆಯಾಗುತ್ತದೆ. ದಯವಿಟ್ಟು ನೌಕರಿ ರಿಕ್ರ್ಯೂಟ್‌ಮೆಂಟ್ ಸಲುವಾಗಿ ಏನಾದರೂ ರೂಲ್ಸ್ ಮಾಡಿ ಒಂದು ಹುದ್ದೆ ಇದ್ದರೆ ಐದು ಜನರಿಗೆ 10 ಜನರಿಗೆ ಸಂದರ್ಶನ ಕರೆದರೆ ಅಡ್ಡಿ ಇಲ್ಲ. ಒಂದು ಅವಕಾಶ ಇದ್ದರೆ 100 ಜನರಿಗೆ ಸಾವಿರ ಜನರಿಗೆ ಕರೆಯುತ್ತಾರೆ. ಈ ರೀತಿ ಜನರಿಗೆ ತೊಂದರೆಯಾಗುವ ಹಾಗೆ, ಜನರಿಗೆ ಶೋಷಣೆ ಆಗುವ ಹಾಗೆ, ಜನರಿಗೆ ನಿರಾಶೆ ಆಗುವ ಹಾಗೆ ಇರುವ ಈ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಮುಂದೆ ಇಂತಹ ತೊಂದರೆ ಯುವಕ ಯುವತಿಯರಿಗೆ ಆಗದ ಹಾಗೆ ಕಾನೂನು ಸಚಿವರು ಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಕೆಲವು ಕಡೆ ಅಭ್ಯರ್ಥಿಗಳನ್ನು ಏನು ಸಂದರ್ಶನಕ್ಕಾಗಿ ಕರೆಯುತ್ತಿದ್ದಾರೆ. ಒಂದಕ್ಕೆ 10 ಅಥವಾ ಒಂದಕ್ಕೆ 20 ರೇಷಿಯೋ ಮೇಲೆ ಕರೆಯುತ್ತಿದ್ದರು. ಆದರೆ ಇತ್ತೀಚೆಗೆ ನ್ಯಾಯಾಲಯದಲ್ಲಿ ನೇಮಕ ಮಾಡತಕ್ಕಂಥದ್ದರ ಬಗ್ಗೆ ಸಂದರ್ಶನ ಕರೆಯುವಾಗ ಬಹಳ ದೊಡ್ಡ ಸಂಖ್ಯೆಯಲ್ಲಿ ಅಭ್ಯರ್ಥಿಗಳನ್ನು ಕರೆಯುತ್ತಿದ್ದಾರೆ, ಎಷ್ಟು ಜನ ಅರ್ಜಿ ಹಾಕುತ್ತಾರೋ ಅಷ್ಟೂ ಜನರಿಗೆ ಸಂದರ್ಶನಕ್ಕೆ ಕರೆಯುತ್ತಿದ್ದಾರೆ. ಸ್ಟೇಟ್ ಕನ್‌ಸ್ಯೂಮರ್ ಫೋರಂನಲ್ಲಿ ಸಹಿತ ಅದೇ ರೀತಿಯಾಗಿ ಬಹಳ ದೊಡ್ಡ ಪ್ರಮಾಣದಲ್ಲಿ ಸಂದರ್ಶನಕ್ಕೆ ಅಭ್ಯರ್ಥಿಗಳನ್ನು ಕರೆದಿದ್ದಾರೆ ಎಂದು ಈಗಾಗಲೇ ಬಹಳಷ್ಟು ಮಿತ್ರರು ಬಂದು ಸುಮಾರು 400, 500 ಮತ್ತು 600 ಕಿ.ಮಿ. ದೂರದಿಂದ ಸಾವಿರಗಟ್ಟಲೆ ಅಭ್ಯರ್ಥಿಗಳು ಬರುತ್ತಾರೆ. ಬಹಳಷ್ಟು ಖರ್ಚು ಮಾಡುತ್ತಾರೆ. ಇರುವ 10 ಹುದ್ದೆಗಳಿಗೆ ಏಕೆ ಈ ರೀತಿಯಾಗಿ ಶೋಷಣೆಗೆ ಅವಕಾಶ ಮಾಡಿ ಕೊಡುತ್ತೀರಿ ಎಂಬ ಬಗ್ಗೆ ತಮ್ಮ ಆತಂಕ ಹೇಳಿದ್ದೀರಿ, ಸನ್ಮಾನ್ಯ ಶಾಸಕರು ಹೇಳತಕ್ಕಂತಹ ಮಾತನ್ನು ಗಮನಿಸುತ್ತೇನೆ. ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಯಾವ ರೀತಿ ನಮ್ಮ ನಿರ್ದೇಶನ ಕೊಡುವುದಕ್ಕೆ ಸಾಧ್ಯವೋ ಅದನ್ನು ಪರಿಶೀಲನೆ ಮಾಡುತ್ತೇನೆ.

4. ವರದಿಗಳನ್ನೊಪ್ಪಿಸುವುದು

ಶ್ರೀ ವಿವೇಕಾನಂದ ಪೈದ್ಯ (ಸಿರ್ಸಿ) (ಅಧ್ಯಕ್ಷರ ಪರವಾಗಿ) : ಮಾನ್ಯ ಅಧ್ಯಕ್ಷರೆ, ನಾನು 2004--2005ನೇ ಸಾಲಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿಯ ಮೊದಲನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

132-13 ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

5. ಶಾಸನ ರಚನೆ

ವಿಧೇಯಕಗಳ ಮಂಡನೆ

1. ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2004.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, "2004ರ ಕರ್ನಾಟಕ ನ್ಯಾಯ ವರದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ.

"2004ರ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, "2004ರ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ–2)

2. ಕರ್ನಾಟಕ ಭೂ ಸ್ವಾಧೀನ (ತಿದ್ದುಪಡಿ) ವಿಧೇಯಕ, 2004.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, "2004ರ ಕರ್ನಾಟಕ ಭೂ ಸ್ವಾಧೀನ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು, ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2004ರ ಕರ್ನಾಟಕ ಭೂ ಸ್ವಾಧೀನ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, "2004ರ ಕರ್ನಾಟಕ ಭೂ ಸ್ವಾಧೀನ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ–3)

3. ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2005.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕರ್ನಾಟಕ ನಗರ ಮೂಲ ಸೌಕರ್ಯ ಮತ್ತು ಹಣಕಾಸು ನಿಗಮ ಸಚಿವರು): ಮಾನ್ಯ ಅಧ್ಯಕ್ಷರೆ, "2005ರ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ,

"2005ರ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್.ಆರ್, ಮೋರೆ (ಪೌರಾಡಳಿತ ಮತ್ತು ಕರ್ನಾಟಕ ನಗರ ಮೂಲ ಸೌಕರ್ಯ ಮತ್ತು ಹಣಕಾಸು ನಿಗಮ ಸಚಿವರು) : ಮಾನ್ಯ ಅಧ್ಯಕ್ಷರೆ, "2005ರ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ–4)

ಅಧ್ಯಕ್ಷರ ಅನುಮತಿ ಮೇರೆಗೆ

(ಅ) ವಿಷಯ: ಗಣರಾಜ್ಯೋತ್ಸವ ಸಮಾರಂಭಗಳಲ್ಲಿ ತಾಲ್ಲೂಕಿನ ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಸಮಾರಂಭ ನಡೆಸುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯ ಮಂತ್ರಿಗಳಿದ್ದಾರೆ, ಮಾನ್ಯ ಎಂ.ಪಿ. ಪ್ರಕಾಶ್‌ರವರು ಹಿರಿಯರಿದ್ದಾರೆ, ಮಾನ್ಯ ಹೆಚ್.ಕೆ. ಪಾಟೀಲ್‌ರವರೂ ಇದ್ದಾರೆ, ನಾಳೆ ಗಣರಾಜ್ಯೋತ್ಸವ ನಡೆಯುತ್ತಿದೆ. ಬಹುತೇಕ ಎಲ್ಲಾ ಕಡೆ ಗಣರಾಜ್ಯೋತ್ಸವಕ್ಕೆ ಹಾಗೂ ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮಕ್ಕೆ ಜಿಲ್ಲಾ ಮಟ್ಟದಲ್ಲಿ ನಿಮ್ಮ ಉಸ್ತುವಾರಿ ಸಚಿವರು ಇರುತ್ತಾರೆ. ಅವರೇ ಧ್ವಜಾರೋಹಣ ಮಾಡುತ್ತಾರೆ. ಅದು ಸರಿ. ತಾಲ್ಲೂಕು ಮಟ್ಟದಲ್ಲಿ ಧ್ವಜಾರೋಹಣ ಮಾಡುವ ಬಗ್ಗೆ ನಾನು ಹೇಳುತ್ತಿಲ್ಲ. ಇದಕ್ಕೆ ತಿದ್ದುಪಡಿ ಆಗಬೇಕು. ಅದನ್ನು ನಾನು ಪ್ರಸ್ತಾಪ ಮಾಡುತ್ತೇನೆಂದು ತಿಳಿದುಕೊಳ್ಳಬೇಡಿ. ತಾಲ್ಲೂಕಿನ ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಬಹುತೇಕ ಎಲ್ಲಾ ಕಡೆಗಳಲ್ಲೂ ನಡೆಯುತ್ತದೆ. ಪದ್ಧತಿ ಇರುವುದೇ ಹಾಗೆ. ಆದರೆ ಕೆಲವು ತಾಲ್ಲೂಕುಗಳಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮಗಳು ನಡೆಯುತ್ತಿಲ್ಲ. ಆಹ್ವಾನ ಪತ್ರಿಕೆಯಲ್ಲಿ ಆಕಸ್ಮಾತ್ತಾಗಿ ತಪ್ಪಾಗಿದ್ದರೆ ನಾನು ಅದನ್ನು ಆಕ್ಷೇಪಣೆ ಮಾಡುವುದಿಲ್ಲ. ಡೆಪ್ಯುಟಿ ಕಮಿಷನರ್ ಮೂಲಕ ಸೂಚನೆ ಕಳುಹಿಸಿ ತಾಲ್ಲೂಕು ಮಟ್ಟದಲ್ಲಿ ಎಲ್ಲಾ ಕಡೆ ತಹಶೀಲ್ದಾರ್‌ರವರು ಧ್ವಜಾರೋಹಣ ಮಾಡುತ್ತಾರೆ. ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಬೇಕು. ಬಹುತೇಕ

ಕಡೆ ಹಾಗೆ ಇರಬಹುದು, ಕೆಲವು ಕಡೆ ಹಾಗೆ ಇಲ್ಲ. ಉದಾಹರಣೆಗೆ ನಮ್ಮ ನರಗುಂದ, ಉತ್ತರ ಕರ್ನಾಟಕದಲ್ಲಿ ಕೆಲವು ಕಡೆಗಳಲ್ಲಿ ತೊಂದರೆಯಾಗಿದೆ. ಅದಕ್ಕೋಸ್ಕರ ಈಗಲೇ ಸೂಚನೆ ಕಳುಹಿಸದೆ ಇದ್ದರೆ ತಪ್ಪಾಗುತ್ತದೆ. ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ತಿಳಿಸಿ. ಇದು ಬೆಳೆದುಕೊಂಡು ಬಂದಿರತಕ್ಕಂತಹ ಸಂಪ್ರದಾಯ. ಯಾವುದೇ ಕಾರ್ಯಕ್ರಮ ಇದ್ದರೂ ತಾಲ್ಲೂಕಿನ ಶಾಸಕರ ಅಧ್ಯಕ್ಷತೆಯಲ್ಲಿ ಸಮಾರಂಭ ನಡೆಯಬೇಕು. ಕೆಲವು ಕಡೆ ಆ ಲೋಪವಾಗಿದೆ. ನಮ್ಮ ಉಪ ಮುಖ್ಯಮಂತ್ರಿಗಳಿದ್ದಾರೆ ಅವರು ಸೂಚನೆ ಕೊಟ್ಟು ನಾಳೆ ಅದು ಕಾರ್ಯ ರೂಪಕ್ಕೆ ಬರುವ ಹಾಗೆ ನೋಡಿಕೊಳ್ಳಬೇಕು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಸಾಮಾನ್ಯವಾಗಿ ಶಾಸಕರು ಧ್ವಜಾರೋಹಣ ಮಾಡುವುದಿಲ್ಲ. ಹೊದಲಿನಿಂದಲೂ ಹಾಗೆಯೇ ಇದೆ. ಅದನ್ನು ಮಾಡಬೇಕೆಂದರೆ ಕಾನೂನು ತಿದ್ದುಪಡಿ ಮಾಡಬೇಕಾಗಿದೆ. ಅಧ್ಯಕ್ಷತೆ ವಹಿಸುವ ಬಗ್ಗೆ ವ್ಯವಸ್ಥೆ ಮಾಡೋಣ. ಈಗಲೇ ಮುಖ್ಯ ಕಾರ್ಯದರ್ಶಿಗಳಿಗೆ ತಿಳಿಸಿ ಸೂಚನೆ ಕಳುಹಿಸುತ್ತೇನೆ.

(ಆ) ವಿಷಯ: ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರ ಒದಗಿಸುವ ಬಗ್ಗೆ

ಶ್ರೀ ಅರಗ ಜ್ಞಾನೇಂದ್ರ : ಅನ್ ಸ್ಟಾರ್ಡ್ ಪ್ರಶ್ನೆಗೆ ಉತ್ತರ ಬಂದಿಲ್ಲ. ಇದರಲ್ಲಿ ಪ್ರಿಂಟ್ ಆಗಿದೆ ಒಂದು ಉತ್ತರವೂ ಬಂದಿಲ್ಲ. ಇವತ್ತಿನ ಪ್ರಶ್ನೆಗಳಿಗೂ ಉತ್ತರ ಬಂದಿಲ್ಲ, ನಿನ್ನೆಯ ಪ್ರಶ್ನೆಗಳಿಗೂ ಉತ್ತರ ಬಂದಿಲ್ಲ. ಹೋದ ಅಧಿವೇಶನದಲ್ಲಿ ಹಾಕಿದ್ದು ಈ ಸಾರಿ ಅಧಿವೇಶನ ಪ್ರಾರಂಭವಾದಾಗ ಬರುತ್ತವೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಹಾಗು ಸಂಸದೀಯ ವ್ಯವಹಾರಗಳ ಸಚಿವರು): 135 ಉತ್ತರಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೇವೆ. ಸ್ಟಾರ್ಡ್ ಪ್ರಶ್ನೆಗಳ ಬಗ್ಗೆ ಉತ್ತರ ಹೇಳುವಾಗ ಒಟ್ಟು 185 ಪ್ರಶ್ನೆಗಳ ಪೈಕಿ 135 ಪ್ರಶ್ನೆಗಳಿಗೆ ಉತ್ತರ ಒದಗಿಸಿದ್ದೇವೆಂದು ಹೇಳಿದ್ದೇವೆ. ಆದ್ದರಿಂದ 50 ಪ್ರಶ್ನೆಗಳಿಗೆ ಯಾವುದು ಉತ್ತರ ಬಂದಿಲ್ಲ ಅದನ್ನು ತಕ್ಷಣ ತಮಗೆ ಮುಟ್ಟಿಸುವ ಹಾಗೆ ವ್ಯವಸ್ಥೆ ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಸಂಸದೀಯ ಸಚಿವರೇ, ಯಾವುದೇ ಕಾರಣಕ್ಕೆ ಯಾವುದೇ ಪ್ರಶ್ನೆಗೆ ಉತ್ತರ ಈ ಸದನದಲ್ಲಿಯೇ ಸಿಗಬೇಕು. ಆ ರೀತಿ ಮಾಡುವುದು, ಎಲ್ಲಾ ಸಚಿವರಿಗೂ ತಿಳಿಸಬೇಕು. ಇದು ನಿಮ್ಮ ಜವಾಬ್ದಾರಿ. ಕೆಲವು ಅನುಚಿತ ಪದಗಳನ್ನು ಬಳಸಿದ್ದಾರೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದೀರಿ, ಅದನ್ನು ನಾನು ನನ್ನ ಛೇಂಬರ್‌ನಲ್ಲಿ ನೋಡಿ ಅದನ್ನು ಯಾವುದನ್ನು ಕಡತದಿಂದ ತೆಗೆದು ಹಾಕಬೇಕು, ಅದನ್ನು ತೆಗೆದು ಹಾಕಿ ಪತ್ರಿಕೆಗಳವರಿಗೆ ಆ ನಂತರ ತಿಳಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ತಮ್ಮಲ್ಲಿ ವಿನಂತಿ ಮಾಡುವುದು, ಇನ್ನೊಂದು ಸಶ್ ಸಂಪ್ರದಾಯ ಇದೆ, ಹಿಂದಿನ ಕಡತಗಳನ್ನು ತೆಗೆದು ನೋಡಿ, ಅನೇಕ ಚರ್ಚೆಗಳು ಆಗಿವೆ, ಅದು ನಿಮ್ಮ ವಿವೇಚನೆಗೆ ಬಿಟ್ಟಿದ್ದು.

ಅಧ್ಯಕ್ಷರು : ಇರಲಿ ಅದು ನಮ್ಮ ವಿವೇಚನೆಗೆ ಬಿಟ್ಟಿದ್ದು.

ಅಧ್ಯಕ್ಷರು : ಈಗ ಸದನವನ್ನು ದಿನಾಂಕ 27.1.05ರ ಗುರುವಾರ ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2.00 ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿ: 27.1.05 ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ 1

199 (424) : ಶ್ರೀ ಅಕ್ಕಿ ಮಲ್ಲಿಕಾರ್ಜುನ್ ಸಹದೇವಪ್ಪ (ಕುಂದಗೋಳ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಪೊಲೀಸ್ ಠಾಣೆಗಳಿವೆ? ಜಿಲ್ಲೆಯಲ್ಲಿರುವ ಪೊಲೀಸ್ ಕಾನ್ಸ್‌ಟೇಬಲ್ ಸಂಖ್ಯೆ ಎಷ್ಟು?

ಆ) ಕಾನ್ಸ್‌ಟೇಬಲ್ ಕೊರತೆ ಎಷ್ಟು?

ಇ) ಕೊರತೆಯನ್ನು ತುಂಬಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಈ) ಧಾರವಾಡ ಜಿಲ್ಲೆಯಲ್ಲಿ 2001 ರಿಂದ 2004 ರವರೆಗೆ ಒಟ್ಟು ಎಷ್ಟು ದೌರ್ಜನ್ಯ ಪ್ರಕರಣಗಳು ನೊಂದಾಯಿಸಿವೆ?

ಉ) ಕುಂದುಗೋಳ ತಾಲ್ಲೂಕಿನಲ್ಲಿ 2001-04 ರಲ್ಲಿ ಒಟ್ಟು ಎಷ್ಟು ದೌರ್ಜನ್ಯ ಪ್ರಕರಣಗಳು ನೊಂದಾಯಿಸಿದೆ ಹಾಗೂ ಅವುಗಳಲ್ಲಿ ಸಜಾ ಆದ ಪ್ರಕರಣಗಳೆಷ್ಟು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಧಾರವಾಡ ಜಿಲ್ಲೆಯಲ್ಲಿ ಒಟ್ಟು 8 ಪೊಲೀಸ್ ಠಾಣೆಗಳಿಯತ್ತವೆ.

ಜಿಲ್ಲೆಯಲ್ಲಿ ಒಟ್ಟು ಪೊಲೀಸ್

ಕಾನ್ಸ್‌ಟೇಬಲ್‌ಗಳ ಸಂಖ್ಯೆ: 232

ಆ) ಮಂಜೂರಾತಿ ಬಲಕ್ಕಿಂತ 44 ಸಿಬ್ಬಂದಿ ಕೊರತೆ ಇರುತ್ತದೆ.

ಇ) ನೇಮಕಾತಿ ಪ್ರಕ್ರಿಯೆಯಲ್ಲಿ ಭರ್ತಿ ಮಾಡಲು ಪರಿಶೀಲಿಸಲಾಗುತ್ತಿದೆ.

ಈ) ಧಾರವಾಡ ಜಿಲ್ಲೆಯಲ್ಲಿ 2001 ರಿಂದ 2004 ರವರೆಗೆ ಒಟ್ಟು 91 ದೌರ್ಜನ್ಯ ಪ್ರಕರಣಗಳ ನೊಂದಾಯಿಸಿದೆ.

ಉ) ಕುಂದುಗೋಳ ತಾಲ್ಲೂಕಿನಲ್ಲಿ 2001–2004 ರವರಿಗೆ ಒಟ್ಟು 23 ಪ್ರಕರಣಗಳು ನೊಂದಾಯಿಸಿದೆ.

ಇವುಗಳಲ್ಲಿ ಸಜಾ ಆದ ಪ್ರಕರಣಗಳು ಇರುವುದಿಲ್ಲ.

200 (425) : ಶ್ರೀ ಅಕ್ಕಿ ಮಲ್ಲಿಕಾರ್ಜುನ್ ಸಹದೇವಪ್ಪ (ಕುಂದಗೋಳ) ಮಾನ್ಯ ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ನಡೆಸುತ್ತಿರುವ ಲಾಟರಿಗಳು ಯಾವ ಯಾವುವು?

ಆ) 2001 ರಿಂದ 2004 ಸಾಲಿನ ವರೆಗೆ ಬಂದ ವರಮಾನವೆಷ್ಟು?

ಇ) ಕರ್ನಾಟಕದಲ್ಲಿ ಬೇರೆ ರಾಜ್ಯದ ಲಾಟರಿಗಳನ್ನು ಮಾರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೆ ಸರ್ಕಾರ ಪರವಾನಿಗೆ ನೀಡಿದೆಯೇ?

ಈ) ಈ ಲಾಟಿಗಳನ್ನು ನಿಲ್ಲಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ರಾಜ್ಯ ಸರ್ಕಾರವು ನಡೆಸುತ್ತಿರುವ ಲಾಟರಿ ವಿಷಯಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) 2001 ರಿಂದ 2004ರ ಸಾಲಿನವರೆಗೆ ಬಂದ ವರಮಾನ ಈ ಕೆಳಕಂಡಂತಿದೆ.

2001–02	–	ರೂ. 10.46 ಕೋಟಿ
2002–03	–	ರೂ. 12.25 ಕೋಟಿ
2003–04	–	ರೂ. 50.00 ಕೋಟಿ

ಇ) ಕರ್ನಾಟಕದಲ್ಲಿ ಬೇರೆ ರಾಜ್ಯದ ಲಾಟಿಗಳನ್ನು ಮಾರುವುದು ಸರ್ಕಾರದ ಗಮನಕ್ಕೆ ಬಂದಿದೆ. ಹೊರ ರಾಜ್ಯದ ಲಾಟರಿ ಟಿಕೇಟುಗಳನ್ನು ಕರ್ನಾಟಕದಲ್ಲಿ ಮಾರಾಟ ಮಾಡಲು ಪರವಾನಗಿ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಯಾವುದೇ ರಾಜ್ಯಕ್ಕೆ ತನ್ನ ರಾಜ್ಯದ ಲಾಟರಿ ಟಿಕೇಟುಗಳನ್ನು ಮಾರಾಟಮಾಡಲು ಪರವಾನಗಿ ನೀಡಿರುವುದಿಲ್ಲ.

ಈ) ಲಾಟರಿ (ರೆಗ್ಯುಲೇಷನ್) ಆಕ್ಟ್ 98ರನ್ವಯ ಕರ್ನಾಟಕ ತನ್ನ ರಾಜ್ಯದ ಲಾಟರಿ ನಡೆಸುತ್ತಾ ಹೊರ ರಾಜ್ಯದ ಲಾಟರಿ ಮಾರಾಟವನ್ನು ನಿಷೇಧಿಸಲು ಅವಕಾಶವಿರುವುದಿಲ್ಲ. ಆದರೆ ಲಾಟರಿ (ರೆಗ್ಯುಲೇಷನ್) ಆಕ್ಟ್ 98ಕ್ಕೆ ವಿರುದ್ಧವಾಗಿ ಯಾವುದೇ ರಾಜ್ಯ ತನ್ನ ಲಾಟರಿ ಟಿಕೇಟ್ ಮಾರಾಟ ಮಾಡಿದಲ್ಲಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬಹುದಾಗಿದೆ. ಹೊರರಾಜ್ಯದ ಲಾಟರಿಯನ್ನು ನಿಷೇಧಿಸಬೇಕಾದಲ್ಲಿ ಕರ್ನಾಟಕವನ್ನು ಲಾಟರಿ ಮುಕ್ತವಲಯವನ್ನಾಗಿ ಘೋಷಿಸಬೇಕಾಗುತ್ತದೆ.

ಅನುಬಂಧ

ಕರ್ನಾಟಕ ರಾಜ್ಯ ಸಾಂಪ್ರದಾಯಿಕ ಲಾಟರಿ

	ಪೂರ್ವಾಹ್ನ 11.00 ಗಂಟೆಗೆ	12.00 ಗಂಟೆಗೆ	1.00 ಗಂಟೆಗೆ	2.00 ಗಂಟೆಗೆ	3.00 ಗಂಟೆಗೆ	4.00 ಗಂಟೆಗೆ	5.00 ಗಂಟೆಗೆ
ಪ್ರತಿ	ಭಾಗ್ಯಲಕ್ಷ್ಮಿ	ಯೋಗಲಕ್ಷ್ಮಿ	ಐಶ್ವರ್ಯಲಕ್ಷ್ಮಿ	ಶ್ರೀಲಕ್ಷ್ಮಿ	ಧನಲಕ್ಷ್ಮಿ	ಕನಕಲಕ್ಷ್ಮಿ	ರಾಜಲಕ್ಷ್ಮಿ
ಸೋಮವಾರ	ಡೈಮೆಂಡ್	ಡೈಮೆಂಡ್	ಡೈಮೆಂಡ್	ಡೈಮೆಂಡ್	ಡೈಮೆಂಡ್	ಡೈಮೆಂಡ್	ಡೈಮೆಂಡ್
ಪ್ರತಿ	ಭಾಗ್ಯಲಕ್ಷ್ಮಿ	ಯೋಗಲಕ್ಷ್ಮಿ	ಐಶ್ವರ್ಯಲಕ್ಷ್ಮಿ	ಶ್ರೀಲಕ್ಷ್ಮಿ	ಧನಲಕ್ಷ್ಮಿ	ಕನಕಲಕ್ಷ್ಮಿ	ರಾಜಲಕ್ಷ್ಮಿ
ಮಂಗಳವಾರ	ಗೋಲ್ಡ್	ಗೋಲ್ಡ್	ಗೋಲ್ಡ್	ಗೋಲ್ಡ್	ಗೋಲ್ಡ್	ಗೋಲ್ಡ್	ಗೋಲ್ಡ್
ಪ್ರತಿ	ಭಾಗ್ಯಲಕ್ಷ್ಮಿ	ಯೋಗಲಕ್ಷ್ಮಿ	ಐಶ್ವರ್ಯಲಕ್ಷ್ಮಿ	ಶ್ರೀಲಕ್ಷ್ಮಿ	ಧನಲಕ್ಷ್ಮಿ	ಕನಕಲಕ್ಷ್ಮಿ	ರಾಜಲಕ್ಷ್ಮಿ
ಬುಧವಾರ	ಸಿಲ್ವರ್	ಸಿಲ್ವರ್	ಸಿಲ್ವರ್	ಸಿಲ್ವರ್	ಸಿಲ್ವರ್	ಸಿಲ್ವರ್	ಸಿಲ್ವರ್
ಪ್ರತಿ	ಭಾಗ್ಯಲಕ್ಷ್ಮಿ	ಯೋಗಲಕ್ಷ್ಮಿ	ಐಶ್ವರ್ಯಲಕ್ಷ್ಮಿ	ಶ್ರೀಲಕ್ಷ್ಮಿ	ಧನಲಕ್ಷ್ಮಿ	ಕನಕಲಕ್ಷ್ಮಿ	ರಾಜಲಕ್ಷ್ಮಿ
ಗುರುವಾರ	ಪ್ಲಾಟಿನಂ	ಪ್ಲಾಟಿನಂ	ಪ್ಲಾಟಿನಂ	ಪ್ಲಾಟಿನಂ	ಪ್ಲಾಟಿನಂ	ಪ್ಲಾಟಿನಂ	ಪ್ಲಾಟಿನಂ
ಪ್ರತಿ	ಭಾಗ್ಯಲಕ್ಷ್ಮಿ	ಯೋಗಲಕ್ಷ್ಮಿ	ಐಶ್ವರ್ಯಲಕ್ಷ್ಮಿ	ಶ್ರೀಲಕ್ಷ್ಮಿ	ಧನಲಕ್ಷ್ಮಿ	ಕನಕಲಕ್ಷ್ಮಿ	ರಾಜಲಕ್ಷ್ಮಿ
ಶುಕ್ರವಾರ	ಪರ್ಲ್	ಪರ್ಲ್	ಪರ್ಲ್	ಪರ್ಲ್	ಪರ್ಲ್	ಪರ್ಲ್	ಪರ್ಲ್
ಪ್ರತಿ	ಭಾಗ್ಯಲಕ್ಷ್ಮಿ	ಯೋಗಲಕ್ಷ್ಮಿ	ಐಶ್ವರ್ಯಲಕ್ಷ್ಮಿ	ಶ್ರೀಲಕ್ಷ್ಮಿ	ಧನಲಕ್ಷ್ಮಿ	ಕನಕಲಕ್ಷ್ಮಿ	ರಾಜಲಕ್ಷ್ಮಿ
ಶನಿವಾರ	ಸೂಪರ್	ಸೂಪರ್	ಸೂಪರ್	ಸೂಪರ್	ಸೂಪರ್	ಸೂಪರ್	ಸೂಪರ್
ಪ್ರತಿ	ಭಾಗ್ಯಲಕ್ಷ್ಮಿ	ಯೋಗಲಕ್ಷ್ಮಿ	ಐಶ್ವರ್ಯಲಕ್ಷ್ಮಿ	ಶ್ರೀಲಕ್ಷ್ಮಿ	ಧನಲಕ್ಷ್ಮಿ	ಕನಕಲಕ್ಷ್ಮಿ	ರಾಜಲಕ್ಷ್ಮಿ
ಭಾನುವಾರ	ಸ್ಟಾರ್	ಸ್ಟಾರ್	ಸ್ಟಾರ್	ಸ್ಟಾರ್	ಸ್ಟಾರ್	ಸ್ಟಾರ್	ಸ್ಟಾರ್

ಟಿಪ್ಪಣಿ:

1. ಸದ್ಯ ಪ್ರತಿ ಡ್ರಾನಲ್ಲಿ ಮುದ್ರಿಸುವ ಟಿಕೇಟ್‌ಗಳ ಸಂಖ್ಯೆಯನ್ನು ದಿನಾಂಕ: 13.12.2004 ರಿಂದ 10 ಲಕ್ಷಕ್ಕೆ ಹೆಚ್ಚಿಸಲಾಗಿದೆ.
2. ಪ್ರತಿ ಟಿಕೇಟಿನ ಬೆಲೆ ರೂ. 10/–
3. ಮೊದಲ ಬಹುಮಾನ ರೂ. 50,000/–ಗಳ ಒಂದು ಬಹುಮಾನ.
4. ಎರಡನೇ ಬಹುಮಾನ ರೂ. 5,000/–ಗಳ 10 ಬಹುಮಾನ.
5. ಮೂರನೇ ಬಹುಮಾನ ರೂ. 500/– ರಿಂದ ಪ್ರತಿ ಡ್ರಾಗೆ ರೂ. 25/– ಹೆಚ್ಚಳದಂತೆ ರೂ. 1700/–ರ ಒಟ್ಟು 10 ಬಹುಮಾನಗಳು.
6. ನಾಲ್ಕನೇ ಬಹುಮಾನ ರೂ. 80/–ರ ದಿನಾಂಕ: 1.12.2004 ರಿಂದ ರೂ. 80/–ರ 1,00,000 ಬಹುಮಾನಗಳು.

ಸಾಪ್ತಾಹಿಕ ಡ್ರಾಗಳ ವಿವರ

ಕ್ರ.ಸಂ.	ಡ್ರಾ ವಿವರ	ಡ್ರಾ ದಿನ	ವೇಳೆ	ಟಿಕೇಟಿನ ಬೆಲೆ	ಮುದ್ರಿಸಿದ ಟಿಕೇಟುಗಳ ಸಂಖ್ಯೆ
1.	ನಂದಿ ಸಾಪ್ತಾಹಿಕ ಡ್ರಾ	ಪ್ರತಿ ಸೋಮವಾರ	ಸಂಜೆ 4.15 ಕ್ಕೆ	ರೂ. 5/–	4.5 ಲಕ್ಷ
2.	ಚೇತನ ಸಾಪ್ತಾಹಿಕ ಡ್ರಾ	ಪ್ರತಿ ಮಂಗಳವಾರ	ಸಂಜೆ 4.15ಕ್ಕೆ	ರೂ. 2/–	5 ಲಕ್ಷ
3.	ಕಪಿಲಾ ಸಾಪ್ತಾಹಿಕ ಡ್ರಾ	ಪ್ರತಿ ಶನಿವಾರ	ಸಂಜೆ 4.15ಕ್ಕೆ	ರೂ. 2/–	5 ಲಕ್ಷ
4.	ಮಾನಸ ಸಾಪ್ತಾಹಿಕ ಡ್ರಾ	ಪ್ರತಿ ಬುಧವಾರ	ಸಂಜೆ 4.15 ಕ್ಕೆ	ರೂ. 5/–	4.5 ಲಕ್ಷ

ಪಾಕ್ಷಿಕ ಡ್ರಾಗಳ ವಿವರ

ಕ್ರ.ಸಂ.	ಡ್ರಾ ವಿವರ	ಡ್ರಾ ದಿನ	ವೇಳೆ	ಟಿಕೇಟಿನ ಬೆಲೆ	ಮುದ್ರಿಸಿದ ಟಿಕೇಟುಗಳ ಸಂಖ್ಯೆ
1.	ಅದೃಷ್ಟ ನಿಧಿ ಪಾಕ್ಷಿಕ	ಶುಕ್ರವಾರ	ಸಂಜೆ 4.15 ಕ್ಕೆ	ರೂ. 10/–	4 ಲಕ್ಷ
2.	ಆಶಾನಿಧಿ ಮಾಸಿಕ ಡ್ರಾ	ಶುಕ್ರವಾರ	ಸಂಜೆ 4.15ಕ್ಕೆ	ರೂ. 20/–	4.5 ಲಕ್ಷ

201 (427) : ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜ್ಯದಲ್ಲಿರುವ ಒಟ್ಟು ಪಟ್ಟಣ ಪಂಚಾಯತ್‌ಗಳ ಸಂಖ್ಯೆ ಎಷ್ಟು; ಈ ಪಟ್ಟಣ ಪಂಚಾಯತ್‌ಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ ನಿಗದಿಪಡಿಸಿದ ಹಣವೆಷ್ಟು?

2) ಕುಂದಗೋಳ ತಾಲ್ಲೂಕು ಪಟ್ಟಣ ಪಂಚಾಯತಿಗೆ 2001 ರಿಂದ 2004 ರವರೆಗೆ ಎಷ್ಟು ಹಣವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

1) 98(2 ಅಧಿಸೂಚಿತ ಪ್ರದೇಶಗಳನ್ನು ಸೇರಿದಂತೆ); ಈ ಪಟ್ಟಣ ಪಂಚಾಯತ್‌ಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ ರೂ. 21,38,55,917 ಗಳನ್ನು ನಿಗದಿಪಡಿಸಲಾಗಿದೆ.

2) ಕುಂದಗೋಳ ತಾಲ್ಲೂಕು ಪಟ್ಟಣ ಪಂಚಾಯತಿಗೆ 2001 ರಿಂದ 2004 ರವರೆಗೆ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿದ ಮೊತ್ತ ರೂ. 64,86,897.

ಧಾರವಾಡ ಜಿಲ್ಲೆಯಲ್ಲಿಯ ಮುನ್ಸಿಫ್ ಕೋರ್ಟ್‌ಗಳು

202 (430) : ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಮುನ್ಸಿಫ್ ನ್ಯಾಯಾಲಯಗಳು ಇವೆ. ಎಷ್ಟು ನ್ಯಾಯಾಲಯಗಳು ಸ್ವಂತ ಕಟ್ಟಡಗಳು ಹೊಂದಿರುವುದಿಲ್ಲ. ಅಂತಹ ನ್ಯಾಯಾಲಯಗಳಿಗೆ ಕಟ್ಟಡ ನಿರ್ಮಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆ.

ಆ) ಕುಂದಗೋಳ ಮುನ್ಸಿಫ್ ಕೋರ್ಟ್ ಕಟ್ಟಡ ದುರಸ್ಥಿಯಲ್ಲಿದ್ದು. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಅವುಗಳನ್ನು ದುರಸ್ಥಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?

